ಮಂಗಳೂರು
ಶುಕ್ರವಾರ, 8 ಮೇ 2026
ಸಂಪುಟ 48, ಸಂಚಿಕೆ 50, ಪುಟಗಳು 16+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

13 ಯುದ್ಧ ವಿಮಾನ ಧ್ವಂಸ
ಆಪರೇಷನ್ ಸಿಂದೂರ್‌ನಲ್ಲಿ ಪಾಕ್‌ಗೆ ಭಾರೀ ಹೊಡೆತ: ಐಎಎಫ್
• ಪುಟ 9







ಕೃಷಿ ಬಜೆಟ್‌ನಲ್ಲಿ ಭರಪೂರ ಅನುದಾನ

ಕಾರ್ಯಕರ್ತರಿಂದ ಅಭಿಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಇತಿಹಾಸದಲ್ಲೇ ಕೃಷಿ ಬಜೆಟ್ ಮಂಡಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನರಗುಂದ ಮತಕ್ಷೇತ್ರದ ಅಭಿವೃದ್ಧಿಗಾಗಿ ಅಂದಾಜು ಒಟ್ಟು ರೂ.523.75 ಕೋಟಿ ಅನುದಾನ ನೀಡಿದ್ದಾರೆ.

ಅನೇಕ ಅಭಿವೃದ್ಧಿ ಪರ ಕೆಲಸ ಕಾರ್ಯಗಳ ಯಶಸ್ಸಿಗೆ ಶಾಸಕ ಸಿ.ಸಿ.ಪಾಟೀಲ ಅವರು ಬಿ.ಎಸ್. ಯಡಿಯೂರಪ್ಪ ಅವರಿಗೆ ಸಾರಥಿಯಾಗಿ ಬೆನ್ನಿಗೆ ನಿಂತಿದ್ದ ಅನೇಕ ಪ್ರಸಂಗಗಳಿವೆ. ಯಡಿಯೂರಪ್ಪ ಅವರು ಕೊಟ್ಟ ಮಾತಿಗೆ ತಪ್ಪುವವರಲ್ಲ. ಮಾಡಬೇಕಾದ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿಯೇ ಬಿಟ್ಟಿದ್ದಾರೆ. ಯಡಿಯೂರಪ್ಪ ಅವರು ನಂಬಿದವರನ್ನು ಯಾರನ್ನು ಕೈ ಬಿಟ್ಟಿಲ್ಲ. ಎಲ್ಲರನ್ನೂ ಬೆಳೆಸಿದ್ದಾರೆ. ಅವರ ಸಂಪುಟದಲ್ಲಿ ಚೆನ್ನಾಗಿ ಕೆಲಸ ಮಾಡಿದ ಮಾಜಿ ಮುಖ್ಯಮಂತ್ರಿಗಳಾದ ಸದಾನಂದಗೌಡ, ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ ಇವರೆಲ್ಲರನ್ನೂ ಮುಖ್ಯಮಂತ್ರಿ ಮಾಡಿದ್ದೇ ಬಿ.ಎಸ್.ಯಡಿಯೂರಪ್ಪ.



'ಯಡಿಯೂರಪ್ಪ ಅಭಿಮಾನೋತ್ಸವ' | ರಾಜಕೀಯ ಪಯಣಕ್ಕೆ 50ರ ಸಂಭ್ರಮ

ಮುಳುಗಡೆ ಪ್ರದೇಶದ ನಿರಾಶ್ರಿತರ ಬದುಕಿಗೆ

ಪುನರುಜ್ಜೀವನ ಕಟ್ಟಿಕೊಟ್ಟ ಯಡಿಯೂರಪ್ಪ

• **ನರಗುಂದ:** 2019–20ನೇ ಸಾಲಿನಲ್ಲಿ ಭಾರೀ ಮಳೆಯ ಪರಿಣಾಮ ಕರ್ನಾಟಕ ಉತ್ತರ ಭಾಗದಲ್ಲಿ ನದಿ ತೀರದ ಅನೇಕ ಗ್ರಾಮಗಳು ಸೇರಿದಂತೆ ಹೊಲದಲ್ಲಿ ರೈತರು ಬೆಳೆದ ಬೆಳೆಗಳು ಸಹ ಸಂಪೂರ್ಣ ಪ್ರವಾಹಕ್ಕೆ ಕೊಚ್ಚಿಕೊಂಡು ಹೋದವು. ಅದೇ ಸಂದರ್ಭದಲ್ಲಿ ತಾಲೂಕಿನ ಕೊಣ್ಣೂರ ಗ್ರಾಮದ ಎಡಬಲ ಗ್ರಾಮಗಳೆಲ್ಲವೂ ಮಲಪ್ರಭಾ ನದಿಯಿಂದ ಹೊರ ಬಿಟ್ಟ 19 ಸಾವಿರ ಕ್ಯೂಸೆಕ್ ನೀರಿನಿಂದ ಸಂಪೂರ್ಣ ಮುಳುಗಡೆಯಾದವು.

ಹೊಲಗಳಲ್ಲಿ ಬೆಳೆದ ಬೆಳೆಗಳಂತೂ ಪ್ರವಾಹದ ರಭಸಕ್ಕೆ ಕೊಚ್ಚಿಕೊಂಡು ಹೋದಾಗ ಜನರ ಬದುಕು ಮೂರಾಬಟ್ಟೆಯಾಯಿತು. ಮುಳುಗಡೆಗೊಳಗಾದ ಜನರು ಬೀದಿಗೆ ಬಂದು ನಿರಾಶ್ರಿತರಾದರು. ಸಂತ್ರಸ್ತರ ಹಸಿವು ತಣಿಸಲು ಆಗಿನ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಚಿವರಾಗಿದ್ದ ಸಿ.ಸಿ.ಪಾಟೀಲ ಅವರ ಮನವಿ ಮೇರೆಗೆ ಗಂಜಿ ಕೇಂದ್ರ ಹಾಗೂ ಆರೋಗ್ಯ ಕೇಂದ್ರಗಳನ್ನು ತೆರೆಯಲಾಯಿತು. ಪ್ರವಾಹದಲ್ಲಿ ಸಿಲುಕಿಕೊಂಡವರ ರಕ್ಷಣೆಗಾಗಿ ಎನ್‌ಡಿಆರ್‌ಎಫ್ ತಂಡಗಳನ್ನು ಕರೆಸಲಾಯಿತು.

ಕರ್ನಾಟಕ ಉತ್ತರ ಭಾಗವು ಪ್ರವಾಹಕ್ಕೆ ಸಿಲುಕಿದ್ದ ಸಂದರ್ಭದಲ್ಲಿ ನೀರಿನ ಹರಿವು ಮತ್ತು ಪ್ರವಾಹದ ಸ್ಥಿತಿಗತಿಯ ಜೊತೆಗೆ ತೊಂದರೆಗೊಳಗಾದ ನಿರಾಶ್ರಿತರ ಸಂಕಷ್ಟ ಅರಿಯಲು ಸ್ವತಃ ಮುಖ್ಯಮಂತ್ರಿ ಬಿ. ಎಸ್.ಯಡಿಯೂರಪ್ಪನವರೇ ಕರ್ನಾಟಕದಾದ್ಯಂತ ಪ್ರವಾಸ ಕೈಗೊಂಡರು. ಆಗ ನರಗುಂದ ಮತಕ್ಷೇತ್ರದ ಶಾಸಕರು, ಸಚಿವರು ಆಗಿದ್ದ ಸಿ.ಸಿ.ಪಾಟೀಲ ಅವರು ಮುಖ್ಯಮಂತ್ರಿಗಳನ್ನೇ ಕೊಣ್ಣೂರ ಗ್ರಾಮದ ಪ್ರವಾಹ ಪರಿಸ್ಥಿತಿಯನ್ನು ವೀಕ್ಷಿಸಲು ಬರುವಂತೆ ಆಗ್ರಹ ಮಾಡಿದಾಗ ಯಡಿಯೂರಪ್ಪನವರು ಕೊಣ್ಣೂರ ಗ್ರಾಮದ ಪ್ರವಾಹದ ನದಿ ತೀರದಲ್ಲಿ ನಿಂತುಕೊಂಡು ಪ್ರವಾಹ ವೀಕ್ಷಿಸಿದರು. ಸಂಕಷ್ಟದಲ್ಲಿದ್ದ ಜನರ ಅಹವಾಲನ್ನು ಸ್ವೀಕರಿಸಿ, ಯೋಗ್ಯ ಪರಿಹಾರ ನೀಡುವ ಭರವಸೆ ನೀಡಿದರು.

ಪ್ರವಾಹದಲ್ಲಿ ಬಿದ್ದ ಮನೆಗಳಿಗೆ, ಪುನಃ ಮನೆ ಕಟ್ಟಿಸಿಕೊಳ್ಳಲು ರೂ.5 ಲಕ್ಷ ಮತ್ತು ಅಲ್ಪ ಸ್ವಲ್ಪ ಬಿದ್ದ ಮನೆಗಳಿಗೆ ರೂ.50 ಸಾವಿರ ರೂ. ಯಡಿಯೂರಪ್ಪನವರ ಬಿಜೆಪಿ ಸರ್ಕಾರ ನೀಡಿತು. ಯಡಿಯೂರಪ್ಪನವರು ಕೊಟ್ಟ ಪರಿಹಾರಕ್ಕೆ ಸಾಕಷ್ಟು ಜನರು ಖುಷಿ ಪಟ್ಟು ಮನೆ ನಿರ್ಮಿಸಿಕೊಂಡರು. ಮನೆ ಕಟ್ಟಿಕೊಳ್ಳೋವರೆಗೂ ಬಾಡಿಗೆ ಮನೆಯಲ್ಲಿದ್ದವರಿಗೆ ಬಾಡಿಗೆ ಹಣವನ್ನು ನೀಡಿದರು. ಬಿ.ಎಸ್.ಯಡಿಯೂರಪ್ಪನವರು ರೈತಾಪಿ ವರ್ಗದ ಜನತೆಯ ಮೇಲೆ ಎಷ್ಟೊಂದು ಕಾಳಜಿ, ಪ್ರೀತಿಯನ್ನು ಹೊಂದಿದ್ದರು ಎನ್ನುವುದು ತಿಳಿಯುತ್ತದೆ.



ಸಂತ್ರಸ್ತ ಬಗ್ಗೆ ವಿಶೇಷ ಮುತುವರ್ಜಿ ವಹಿಸಿದ್ದ ಬಿಎಸ್‌ವೈ

2008–09–10ರಲ್ಲಿ ಸತತ ಎರಡು ವರ್ಷ ಮಲಪ್ರಭಾ ಹಾಗೂ ಬೆಣ್ಣೆಹಳ್ಳದ ಪ್ರವಾಹ ಬಂದಾಗ ಮಲಪ್ರಭಾ ನದಿಯ ಕೆಳ ಭಾಗದ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿನ ಅನೇಕ ಹಳ್ಳಿಗಳು ವಿಶೇಷವಾಗಿ ನರಗುಂದ ಮತಕ್ಷೇತ್ರದ 13 ಗ್ರಾಮಗಳು ನಿರಂತರ ಮುಳುಗಡೆಗೆ ಒಳಗಾಗುತ್ತಿದ್ದವು. ಪ್ರವಾಹಕ್ಕೆ ಸಿಲುಕಿದ ಕುರ್ಲಗೇರಿ, ಸುರಕೋಡ, ಬೂದಿಹಾಳ ಗ್ರಾಮದ ಸಂತ್ರಸ್ತರು ಪಟ್ಟಣದ ಬಸವೇಶ್ವರ ಸಮುದಾಯ ಭವನದಲ್ಲಿ ಆಶ್ರಯ ಪಡೆದಿದ್ದರು.

ನಿರಾಶ್ರಿತರ ಕೇಂದ್ರಕ್ಕೆ ಯಡಿಯೂರಪ್ಪನವರು ಭೇಟಿಯಾಗಿ ನಾವು ನಿಮ್ಮ ಜೊತೆಗೆ ಸದಾ ಇದ್ದೇವೆ ಭಯ ಬೇಡ ಎಂಬ ಭರವಸೆಯೊಂದಿಗೆ ಧೈರ್ಯವನ್ನು ನೀಡಿದ್ದರು. ಇಂತಹ ಕಷ್ಟಗಳನ್ನೆಲ್ಲ ಅರಿತ ಮತಕ್ಷೇತ್ರದ ಶಾಸಕ ಸಿ.ಸಿ.ಪಾಟೀಲ ಅವರು ವಿಶೇಷ ಮುತುವರ್ಜಿ ವಹಿಸಿ ಆಗಿನ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪನವರನ್ನು ವ್ಯಯಕ್ತಿವಾಗಿ ಭೇಟಿಯಾಗಿ, ಮುಳುಗಡೆ ಗ್ರಾಮಗಳನ್ನು ಅಲ್ಲಿನ ಜನರ ಬದುಕಿನ ಸುರಕ್ಷತೆಗಾಗಿ ಸ್ಥಳಾಂತರಗೊಳಿಸಬೇಕು. ಮತ್ತು ಇದೊಂದು ಶಾಶ್ವತ ಪರಿಹಾರವು ಆಗಿದೆ ಎಂದುಯಡಿಯೂರಪ್ಪ ಅವರಿಗೆ ಮನವರಿಕೆ ಮಾಡಿದಾಗ ನರಗುಂದ ಮತಕ್ಷೇತ್ರದ 13 ಗ್ರಾಮಗಳನ್ನು ಸಂಪೂರ್ಣ ಸ್ಥಳಾಂತರಿಸಲಾಯಿತು. ಇದೇ ಮಾದರಿಯಲ್ಲಿ ರಾಜ್ಯ ಅನೇಕ ಕಡೆಗಳಲ್ಲಿ ಮುಳುಗಡೆ ಗ್ರಾಮಗಳನ್ನು ಸ್ಥಳಾಂತರ ಮಾಡಲಾಯಿತು.

ನರಗುಂದ ಮತಕ್ಷೇತ್ರದಲ್ಲಿ ರೋಣ ಹಾಗೂ ಗದಗ ತಾಲೂಕಿನ 13 ನೆರೆ ಪೀಡಿತ ಗ್ರಾಮಗಳನ್ನು ಸ್ಥಳಾಂತರಿಸಲು ಒಟ್ಟು 648 ಎಕರೆ ಜಮೀನು ಖರೀದಿಸಿ, 6238 ಆಶ್ರಯ ಮನೆಗಳನ್ನು ರೂ.126.54 ಕೋಟಿ ವೆಚ್ಚದಲ್ಲಿ ಕುರ್ಲಗೇರಿ, ಸುರಕೋಡ, ಬೂದಿಹಾಳ, ಮೆಣಸಗಿ, ಅಮರಗೋಳ, ಬೋಪಳಾಪೂರ, ಹೊಳೆಹಡಗಲಿ, ಯಾಸ ಹಡಗಲಿ, ಮಾಳವಾಡ, ಬಿ.ಎಸ್. ಬೇಲೇರಿ, ಹೊಳೆಮಣ್ಣೂರ, ಕುರುವಿನಕೊಪ್ಪ ಮತ್ತು ಹುನಗುಂಡಿ ಗ್ರಾಮಗಳನ್ನು ನಿರ್ಮಾಣ ಮಾಡಿ, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ, ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಅವತ್ತಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಶಾಸಕ ಸಿ.ಸಿ.ಪಾಟೀಲ ಜನರ ಕಷ್ಟಗಳಿಗೆ ಶಾಶ್ವತ ಪರಿಹಾರ ನೀಡಿದ ಜನನಾಯಕರಾಗಿದ್ದಾರೆ.



ನನ್ನ ರಾಜಕೀಯ ಗುರು ಯಡಿಯೂರಪ್ಪ

ರಾಜ್ಯದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕೃಪಾಶೀರ್ವಾದ ಹಾಗೂ ಮಾರ್ಗದರ್ಶನದಲ್ಲಿ ನರಗುಂದ ವಿಧಾನಸಭೆ–68 ಮತಕ್ಷೇತ್ರಕ್ಕೆ 4 ಬಾರಿ ಕರ್ನಾಟಕ ವಿಧಾನಸಭೆಗೆ ಶಾಸಕನಾಗಿ ಆಯ್ಕೆಯಾಗಿದ್ದೇನೆ. 2004ರಲ್ಲಿ ಮೊದಲ ಬಾರಿ ಶಾಸಕನಾಗಿ ಆಯ್ಕೆ ಆದಾಗಿನಿಂದ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿರೋವರೆಗೂ ನಾನು ಸದಾ ಒಂದಿಲ್ಲೊಂದು ಅಧಿಕಾರದಲ್ಲಿ ಅವರ ಜೊತೆಯಲ್ಲಿಯೇ ಇದ್ದೇನೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಣೆ. ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹುದ್ದೆ ನಿರ್ವಹಣೆ. ಹಾಗೂ ಯಡಿಯೂರಪ್ಪ ಅವರ ಬೆಂಬಲದಿಂದ ಸಂಪುಟದರ್ಜೆ ಸಚಿವನಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆಯ ನಿರ್ವಹಣೆ. ಗದಗ ಜಿಲ್ಲಾ ಭಾರತೀಯ ಜನತಾಪಾರ್ಟಿಯ ಜಿಲ್ಲಾ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ನನ್ನ ರಾಜಕೀಯ ಬೆಳವಣಿಗೆಯ ಗುರು ಬಿ.ಎಸ್.ಯಡಿಯೂರಪ್ಪನವರೇ ಆಗಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾಗಿದ್ದ ಸಿ.ಸಿ.ಪಾಟೀಲ ಅವರು ಬಾಲ ಸಂಜೀವಿನಿ ಯೋಜನೆ ಜಾರಿಗೆ ತರುವುದರ ಜೊತೆಗೆ ಭಾಗ್ಯಲಕ್ಷ್ಮೀ ಯೋಜನೆಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಹುಟ್ಟಿದ ಮೊದಲೆರಡು ಪ್ರತಿ ಹೆಣ್ಣು ಮಗುವಿಗೆ ತಲಾ ಒಂದು ಲಕ್ಷ ರೂಗಳ ಭಾಗ್ಯಲಕ್ಷ್ಮೀ ಬಾಂಡ್ ಅಥವಾ ಸುಕನ್ಯಾ ಸಮೃದ್ಧಿ ಯೋಜನೆ ಪಾಸ್‌ಬುಕ್ ವಿತರಣಾ ಯೋಜನೆ ಜಾರಿಗೆ ತರಲಾಯಿತು.18 ವರ್ಷ ದಾಟಿದ ಹೆಣ್ಣು ಮಗುವಿನ ಮುಂದಿನ ಭವಿಷ್ಯಕ್ಕೆ ಅನುಕೂಲ ಆಗಲೆಂದು ಈ ಯೋಜನೆಗೆ ಒತ್ತು ನೀಡಲಾಗಿದೆ.

ನೆರೆ ಹಾವಳಿ ಹಾಗೂ ಕೋವಿಡ್ ಸಾಂಕ್ರಾಮಿಕಕ್ಕೆ ತುತ್ತಾದ ಸಂದರ್ಭದಲ್ಲಿ ಕೈಗೊಂಡ ಜನಪರ ಕಾರ್ಯಕ್ರಮಗಳಾದ ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಕಾಲುವೆಗಳ ವಿಸ್ತರಣೆ ಹಾಗೂ ಮರುನಿರ್ಮಾಣ ಕಾಮಗಾರಿಗಳನ್ನು ಇ.ಆರ್. ಎಂ–02 ದಲ್ಲಿ ಸುಮಾರು 1000 ಕೋಟಿ ರೂ.ಗಳ ಪ್ಯಾಕೇಜ್ ಅನುದಾನದಲ್ಲಿ ನರಗುಂದ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಾಲುವೆಗಳ ಕಾಮಗಾರಿಗಳಿಗಾಗಿ ಸುಮಾರು 100 ಕೋಟಿ ರೂಗಳ ಅನುದಾನವನ್ನು ಮೀಸಲಿರಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ನರಗುಂದ ಮತಕ್ಷೇತ್ರದ ಅಭಿವೃದ್ಧಿಗಾಗಿ ಬಿ.ಎಸ್.ಯಡಿಯೂರಪ್ಪನವರು ತಮ್ಮ ಆಡಳಿತ ಅವಧಿಯಲ್ಲಿ ಅಂದಾಜು ಒಟ್ಟು ರೂ.523.75 ಕೋಟಿ ಅನುದಾನ ನೀಡಿದ್ದಾರೆ ಎಂದು ಶಾಸಕ ಸಿ.ಸಿ.ಪಾಟೀಲ ಹೇಳಿದ್ದಾರೆ.

ಜಗನ್ನಾಥರಾವ ಜೋಶಿ ಸ್ಮಾರಕ ನಿರ್ಮಾಣಕ್ಕೆ

ರೂ.1 ಕೋಟಿ ಅನುದಾನ ನೀಡಿದ್ದ ಬಿಎಸ್‌ವೈ

• **ನರಗುಂದ:** ಪಟ್ಟಣದ ದಂಡಾಪೂರ ಬಡಾವಣೆಯ 1ನೇ ಗಲ್ಲಿಯಲ್ಲಿನ ಶ್ರೀ ಜಗನ್ನಾಥರಾವ ಜೋಶಿ ಅವರ ಸ್ವಂತ ಮನೆಯು ಮೂಲ ಸಂಬಂಧಿಕರು ಪುಣೆ ನಗರದ ಕಡೆ ನೌಕರಿ ನಿಮಿತ್ತ ಹೋದ ನಂತರ ಆ ಮಣ್ಣಿನ ಹಳೆಯದಾದ ಮನೆ ಕುಸಿದು ಬಿದ್ದು ಅನಾಥವಾಗಿತ್ತು.

ಸಂಘದ ಹಿರಿಯರ ಮಾರ್ಗದರ್ಶನದಂತೆ ನರಗುಂದ ದಂಡಾಪೂರ 1ನೇ ಗಲ್ಲಿಯಲ್ಲಿನ ಶ್ರೀ ಜಗನ್ನಾಥರಾವ ಜೋಶಿ ಅವರ ಸ್ವಂತಃ ಮನೆಯ ಜಾಗೆಯಲ್ಲಿ ಸಂಘ ಕಾರ್ಯಕ್ಕಾಗಿ ಸ್ಮಾರಕ ಭವನ ನಿರ್ಮಿಸುವಂತೆ ಸಂಘದ ಕಾರ್ಯಕರ್ತರ ಮನಸ್ಸಿಚ್ಛೆ ಮೇರೆಗೆ ಸಿ.ಸಿ.ಪಾಟೀಲ ಅವರು ಸ್ಮಾರಕ ಭವನ ನಿರ್ಮಾಣಕ್ಕೆ ನಿರ್ಧಾರ ಮಾಡಿದರು. ನಂತರ ಮುಖ್ಯಮಂತ್ರಿ ಆಗಿದ್ದ ಬಿ.ಎಸ್. ಯಡಿಯೂರಪ್ಪ ಅವರ ಮನವೊಲಿಸಿ 2011–12ರ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ 1 ಕೋಟಿ ರೂ.ಅನುದಾನವನ್ನು ಸ್ಮಾರಕ ಭವನ ನಿರ್ಮಾಣಕ್ಕೆ ಮೀಸಲಿಟ್ಟರು. 2014–15ರ ಅವಧಿಯಲ್ಲಿ ಭವ್ಯವಾದ ನೂತನ ಸ್ಮಾರಕ ಭವನ ನಿರ್ಮಾಣ ಆಯಿತು. ಇಂದು ಸಂಘದ ಕಾರ್ಯ ಚಟುವಟಿಕೆಗಳಿಗೆ ಜಗನ್ನಾಥ ಸ್ಮಾರಕ ಭವನವು ಎಲ್ಲ ಕಾರ್ಯಕರ್ತರಿಗೆ

ಕೇಂದ್ರ ಬಿಂದುವಾಗಿದೆ. ಜಗನ್ನಾಥರಾಯರು ತಮ್ಮ ತಾಯಿ ಜೊತೆ ಇದೇ ಮನೆಯಲ್ಲಿ ಹೆಚ್ಚು ವಾಸವಾಗಿದ್ದರು ಎನ್ನುವುದು ಗಮನಾರ್ಹ.

ಯಡಿಯೂರಪ್ಪ ಅವರು ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಬೆಳೆಯಲು ನಿರಂತರ ಹಗಲಿರುಳು ಸೈಕಲ್ ಮೇಲೆ ಪ್ರವಾಸ ಮಾಡುತ್ತಾ ಕೆಲಸ ಕಾರ್ಯ ಮಾಡಿದ್ದಾರೆ. ಇವರಿಗೆ ಪಕ್ಷ ಕಟ್ಟಿ ಬೆಳೆಸಲು ಹೆಚ್ಚು ಪ್ರೇರಣೆ ಅಂದರೆ ಸಂಸ್ಥಾಪಕರಾದ ಡಾ.ಶ್ಯಾಮಪ್ರಕಾಶ ಮುಖರ್ಜಿ, ಪಂಡಿತ ದೀನದಯಾಳ ಉಪಾಧ್ಯಾಯರು ಮತ್ತು ಜಗನ್ನಾಥರಾವ ಜೋಶಿ ಅವರು ಆಗಿದ್ದಾರೆ. ಆಗಿನ ಸಂದರ್ಭದಲ್ಲಿ ಯಡಿಯೂರಪ್ಪ ಅವರು ಮೂವರು ವ್ಯಕ್ತಿಗಳ ಆದರ್ಶ

- ಊರೂರು ಸಂಚರಿಸಿ ಪಕ್ಷ ಕಟ್ಟಿ ಬೆಳೆಸಿದ ನಾಯಕ
- ನಿರಾಶ್ರಿತರ ಕಷ್ಟ ಅರಿಯಲು ರಾಜ್ಯಾದ್ಯಂತ ಪ್ರವಾಸ
- ರೈತಾಪಿ ವರ್ಗದ ಮೇಲೆ ಕಾಳಜಿ ಅಪಾರ
- ನರಗುಂದ ಮತಕ್ಷೇತ್ರದ ಅಭಿವೃದ್ಧಿಗೆ 523.75 ಕೋಟಿ ರೂ. ಅನುದಾನ

ಮತ್ತು ದೇಶಾಭಿಮಾನವನ್ನು ಗೌರವಿಸುತ್ತಾ ಭಾರತ ಮಾತೆಯ ಫೋಟೋಗಳನ್ನು ಇಟ್ಟುಕೊಂಡು ಊರೂರು ಸಂಚರಿಸುತ್ತಾ ಪಕ್ಷವನ್ನು ಕಟ್ಟಿ ಬೆಳೆಸಿದ್ದಾರೆ.

ಆ ಭವ್ಯವಾದ ಸ್ಮಾರಕ ಭವನ ನಿರ್ಮಾಣಕ್ಕೆ ನನಗೆ ಹಲವಾರು ಸಂಘದ ಹಿರಿಯರು, ಪಕ್ಷದ ಪ್ರಮುಖರು, ಕಾರ್ಯಕರ್ತರು ಬೆಂಬಲ ನೀಡಿದ್ದನ್ನು ಸ್ಮರಿಸುತ್ತಿದ್ದೇನೆ. ಇದರ ಪರಿಣಾಮವಾಗಿ ಭವ್ಯವಾಗಿ ನಿರ್ಮಾಣಗೊಂಡ ಶ್ರೀ ಜಗನ್ನಾಥರಾವ ಜೋಶಿ ಸ್ಮಾರಕ ಭವನ 2015 ಜೂನ್ 23ರಂದು ಉದ್ಘಾಟನೆಗೊಂಡಿದೆ. ಬಹಳ ಸುಂದರವಾಗಿ ವ್ಯವಸ್ಥಿತ ರೂಪದಲ್ಲಿ ಶ್ರೀ ಜಗನ್ನಾಥರಾವ ಜೋಶಿ ಭವನ ನಿರ್ಮಿಸಲಾಗಿದೆ. ಕಟ್ಟಡದ ಉದ್ಘಾಟನಾ ಸಮಾರಂಭವು ತಾಲೂಕು ಕ್ರೀಡಾಂಗಣದ ಮೈದಾನದಲ್ಲಿ ಜರುಗಿತು. ಆ ಸಂದರ್ಭದಲ್ಲಿ ಗಣ್ಯ ವ್ಯಕ್ತಿಗಳಾದ ಗೌರವಾನ್ವಿತ ರಾಜ್ಯಪಾಲ ವಜುಬಾಯಿ ವಾಲಾ, ಭಾಜಪ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಅಮಿತ್ ಶಾ, ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾಗಿದ್ದ ಮಂಗೇಶ್ ಬೇಂಡೆ, ಪ್ರಚಾರಕರಾದ ಶಂಕರಾನಂದಜಿ, ಆಗಿನ ಸಿಎಂ ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ, ಸಂಸದರಾಗಿದ್ದ ವಿ.ಅನಂತಕುಮಾರ, ಸಂಸದ ಪ್ರಹ್ಲಾದ ಜೋಶಿ, ಸ್ಥಳೀಯ ಗಣ್ಯವ್ಯಕ್ತಿ ಜಿ.ಬಿ. ಕುಲಕರ್ಣಿ ಸೇರಿದಂತೆ ಅನೇಕರು ಆಗಮಿಸಿದ್ದರು.

ಸಂಘದ ಕಾರ್ಯಕರ್ತರು ಮತ್ತು ನೂರಾರು ಸ್ವಯಂಸೇವಕರು ಭಾಗವಹಿಸಿದ್ದರು. ಉದ್ಘಾಟನಾ ಕಾರ್ಯಕ್ರಮವು ಇತಿಹಾಸದಲ್ಲಿ ನೆನಪು ಉಳಿಯುವಂತೆ ದಾಖಲಾಯಿತು. ಸಂಘ ಕಾರ್ಯಕ್ಕೆ ಕೇಂದ್ರ ಬಿಂದು ಆಗಲೆಂದು ಸ್ಮಾರಕ ಭವನ ನಿರ್ಮಾಣ ಆಗಿದೆ. ಇದು ಯಡಿಯೂರಪ್ಪ ಅವರ ಕಾಳಜಿ ಎತ್ತಿ ತೋರಿಸುತ್ತದೆ.

ಕಳಸಾ ಬಂಡೂರಿ ಯೋಜನೆಗೆ ಬೆನ್ನೆಲುಬಾಗಿದ್ದ ಯಡಿಯೂರಪ್ಪ

ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಾಗ ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರಾಗಿದ್ದ ಬಿ.ಎಸ್.ಯಡಿಯೂರಪ್ಪನವರು ಈ ಯೋಜನೆ ಕುರಿತು ತಮಗಿರುವ ಬದ್ಧತೆಯನ್ನು ಪ್ರದರ್ಶಿಸಿ, ರೂ.100 ಕೋಟಿಗಳ ಅನುದಾನ ಘೋಷಿಸಿದ್ದಾರೆ.

ನಗರದ ಪಂಚಗೃಹ ಗುಡ್ಡದ ಹಿರೇಮಠದಲ್ಲಿ 2000ನೇ ಇಸ್ವಿಯಲ್ಲಿ ಕಳಸಾ ಬಂಡೂರಿ ಯೋಜನೆ ಹೋರಾಟವು ಪೂಜ್ಯಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಮತ್ತು ವಿಜಯ ಕುಲಕರ್ಣಿ ನೇತೃತ್ವದಲ್ಲಿ ಹೋರಾಟ ಪ್ರಾರಂಭಗೊಂಡಿತು. ಈ ರೈತರ ಹೋರಾಟಕ್ಕೆ ಭಾರತೀಯ ಜನತಾ ಪಕ್ಷದ ಪ್ರಮುಖರಾದ ಸ್ಥಳೀಯ ಶಾಸಕ ಸಿ.ಸಿ.ಪಾಟೀಲ, ಬಸವರಾಜ ಬೊಮ್ಮಾಯಿ ಸೇರಿದಂತೆ ಅನೇಕ ಬಿಜೆಪಿ ನಾಯಕರು ಸಾಥ್ ನೀಡಿದರು.

ಈಗಿನ ಚೆನ್ನಮ್ಮಾಜಿ ವೃತ್ತದಲ್ಲಿ 69 ದಿನಗಳ ಕಾಲ ನಡೆದ ಉಪವಾಸ ಸತ್ಯಾಗ್ರಹದಲ್ಲಿ ಶಾಸಕ ಸಿ.ಸಿ.ಪಾಟೀಲ ಪಾಲ್ಗೊಂಡಿದ್ದರು. ಪಕ್ಷಾತೀತವಾಗಿ, ಎಲ್ಲ ವರ್ಗದ ಜನರಿಂದ, ವಿವಿಧ ಸಂಘಟನೆಗಳಿಂದ ಅಭೂತಪೂರ್ವವಾದ ಜನ ಬೆಂಬಲ ಹೋರಾಟಕ್ಕೆ ಸಿಕ್ಕಿತು. ಬಿಜೆಪಿ ನಾಯಕರು ರೈತರನ್ನು ಕರೆದುಕೊಂಡು ಕಳಸಾ ಬಂಡೂರಿ ಯೋಜನೆ ಜಾರಿಗಾಗಿ ಸರ್ಕಾರವನ್ನು ಎಚ್ಚರಿಸಲು ಹಳೇ ಧಾರವಾಡ ಜಿಲ್ಲೆಯಾದ್ಯಂತ ಪಾದಯಾತ್ರೆಯನ್ನು ಮಾಡಿದರು. ಇದಕ್ಕೆ ಜಾತಿಭೇದ ಎನ್ನದೇ ಎಲ್ಲ ವರ್ಗದ ಜನರ ಬೆಂಬಲವು ಸಾಕಷ್ಟು ಸಂಖ್ಯೆಯಲ್ಲಿ ಸಿಕ್ಕಿತು.

ಕಳಸಾ–ಬಂಡೂರಿ ಯೋಜನೆ ಇತಿಹಾಸದಲ್ಲಿ 2006ರ ನವೆಂಬರ್ 22 ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನವಾಗಿದ್ದು, ಅಂದಿನ ಉಪಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಮತ್ತು ಜಲಸಂಪನ್ಮೂಲ ಸಚಿವರಾದ ಕೆ.ಎಸ್.ಈಶ್ವರಪ್ಪನವರು ಬೆಳಗಾವಿ ಜಿಲ್ಲೆಯ ಕಣಕುಂಬಿಯಲ್ಲಿ ಕಾಮಗಾರಿಯ ಭೂಮಿಪೂಜೆ ನೆರವೇರಿಸಿ ಯೋಜನೆಗೆ ಅಡಿಗಲ್ಲು ಹಾಕಿದರು. ತದ ನಂತರದಲ್ಲಿ ರಾಜ್ಯದಲ್ಲಿ ಸರ್ಕಾರ ಬದಲಾದ ಮೇಲೆ ಈ ಯೋಜನೆ ವಿವಾದದ ಸುಳಿಯಲ್ಲಿ ಸಿಲುಕಿ ನ್ಯಾಯಾಧೀಕರಣ ರಚನೆಯಾಯಿತು.

ಈ ನಡುವೆ ನಡೆದ ಮಹತ್ವದ ಬೆಳವಣಿಗೆಯಲ್ಲಿ, 2018ರ ಆಗಸ್ಟ್ 14ರಂದು ಮಹದಾಯಿ ನ್ಯಾಯಮಂಡಳಿಯ ನೀರು ಹಂಚಿಕೆ ತೀರ್ಪನ್ನು ಆಧರಿಸಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿತು. ಆ ಮೂಲಕ ಈ ಯೋಜನೆಗೆ ಕಾನೂನಾತ್ಮಕ ಸ್ಪಂದನೆ ದೊರೆತ ಹಿನ್ನೆಲೆಯಲ್ಲಿ ಬಿ.ಎಸ್.ಯಡಿಯೂರಪ್ಪನವರು ರೂ.500 ಕೋಟಿಗಳನ್ನು ಮತ್ತು ನಂತರದ ದಿನಗಳಲ್ಲಿ ಬಿಜೆಪಿ ಸರ್ಕಾರ ಕಳಸಾ ಬಂಡೂರಿ ನಾಲಾ ಯೋಜನೆಯ ಅನುಷ್ಠಾನಕ್ಕಾಗಿ ರೂ.1,000 ಕೋಟಿಗಳ ಅನುದಾನ ಘೋಷಿಸಿ, ರೈತರಲ್ಲಿ ಆಶಾಭಾವನೆ ಇಮ್ಮಡಿಗೊಳಿಸಿದ್ದಾರೆ.

ಕೇಂದ್ರ ಜಲ ಆಯೋಗದ ಡಿಪಿಆರ್ ಸಿಕ್ಕಿದೆ. ಕಾಮಗಾರಿ ಕೈಗೊಳ್ಳಲು ಬಜೆಟ್‌ನಲ್ಲಿ ಅನುದಾನವು ಇದೆ. ಇನ್ನೇನು ಕಾಮಗಾರಿ ಪ್ರಾರಂಭ ಮಾಡುವುದೊಂದೇ ಬಾಕಿಯಿದೆ. ಈ ಯೋಜನೆಗೆ ಇಷ್ಟೊಂದು ಯಶಸ್ಸಿನ ಹಂತಕ್ಕೆ ಬಂದು ತಲುಪಲು ಯಡಿಯೂರಪ್ಪನವರು ಹಾಗೂ ಶಾಸಕ ಸಿ.ಸಿ. ಪಾಟೀಲರ ಪ್ರಯತ್ನ ಸಾಕಷ್ಟಿದೆ.



ಸಿ.ಸಿ.ಪಾಟೀಲ್
ಶಾಸಕರು, ನರಗುಂದ ಮತಕ್ಷೇತ್ರ,
ಮಾಜಿ ಸಚಿವರು, ಕರ್ನಾಟಕ ಸರ್ಕಾರ

"ರಾಷ್ಟ್ರೀಯ ವಿಚಾರದಡಿ ಪಕ್ಷವನ್ನು ತಳಮಟ್ಟದಿಂದ ಕಟ್ಟಿ ಬೆಳೆಸಿದ್ದಾರೆ. ದಕ್ಷಿಣ ಭಾರತದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದ ಕೆಚ್ಚೆದೆಯ ನಾಯಕ. ಯುವಕರ ಕಣ್ಮಣಿ. ಸರ್ವವ್ಯಾಪಿ ಸರ್ವರನ್ನು ಸ್ಪರ್ಶಿಸಿ ಎನ್ನುವಂತೆ ಸಮಾಜದ ಸರ್ವಜನಾಂಗದ ಅಭಿವೃದ್ಧಿಯನ್ನು ಬಯಸಿದ ಜನನಾಯಕ. ಅಧಿಕಾರದಲ್ಲಿದ್ದಾಗ ಅವರೆಲ್ಲರ ಏಳ್ಗೆಗಾಗಿ ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತಂದ ಧೀಮಂತ ನಾಯಕ ಯಡಿಯೂರಪ್ಪ.

■ ಉಮೇಶಗೌಡ ಪಾಟೀಲ,
ಭಾಜಪ ಮುಖಂಡರು, ನರಗುಂದ ಮತಕ್ಷೇತ್ರ



ಮಂಗಳೂರು
ಶುಕ್ರವಾರ, 8 ಮೇ 2026
ಸಂಪುಟ 48, ಸಂಚಿಕೆ 50, ಪುಟಗಳು 16+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅಭಿಮತ

ಸರ್ವಾಂಗೀಣ ಪ್ರಗತಿಗೆ ಧರ್ಮ ಅಡಿಪಾಯ

ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸ

ಮೈಸೂರು: ಧರ್ಮವು ಮಾನವನ ಸರ್ವಾಂಗೀಣ ಪ್ರಗತಿಯ ಅಡಿಪಾಯವಾಗಿದೆ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ತಿಳಿಸಿದರು.

ಗುರುವಾರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದಲ್ಲಿ ಆಯೋಜಿಸಲಾಗಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸದಲ್ಲಿ ಪಾಲ್ಗೊಂಡು ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ ವಿಷಯ ಕುರಿತು ಮಾತನಾಡಿದ ಅವರು, ದಯೆ ಇದ್ದಲ್ಲಿ ಧರ್ಮವಿರುತ್ತದೆ. ಆಶ್ರಯ ಅರಸಿ ಬಂದ ಹಕ್ಕಿಯನ್ನು ರಕ್ಷಿಸಲು ತನ್ನನ್ನೇ ಅರ್ಪಿಸಿಕೊಂಡ ಶಿಬಿ ಚಕ್ರವರ್ತಿಯ ತ್ಯಾಗ, ದಯೆ ನಮಗೆ ಬರಬೇಕು. ತ್ಯಾಗ, ಕರುಣೆ, ದಯೆಯಲ್ಲಿಯೇ ಸೌಹಾರ್ದವಿದೆ ಎಂದರು. ಮೋಕ್ಷ, ಅರ್ಥ, ಕಾಮ ಪುರುಷಾರ್ಥದಲ್ಲಿ ಧರ್ಮವೂ ಸೇರಿದೆ. ➡ಪುಟ ೭



ಸೋಮನಾಥ ಭಾರತದ ಅಜೇಯ ಚೈತನ್ಯ

▸ ನರೇಂದ್ರ ಮೋದಿ, ಪ್ರಧಾನ ಮಂತ್ರಿ



2026ರ ಆರಂಭದಲ್ಲಿ, ಸೋಮನಾಥ ದೇವಾಲಯದ ಮೇಲಿನ ಮೊದಲ ದಾಳಿಗೆ ಸಾವಿರ ವರ್ಷಗಳು ತುಂಬಿದ ನೆನಪಿಗಾಗಿ ನಡೆದ ಸೋಮನಾಥ ಸ್ವಾಭಿಮಾನ ಪರ್ವದಲ್ಲಿ ನಾನು ಭಾಗವಹಿಸಿದ್ದೆ. ಈಗ, ಭಾರತದ ಅಂದಿನ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್ ಅವರು ಪುನರ್‌ನಿರ್ಮಿತ ದೇವಾಲಯವನ್ನು ಉದ್ಘಾಟಿಸಿ 75 ವರ್ಷಗಳಾದ ಸಂದರ್ಭದಲ್ಲಿ, ಮೇ 11ರಂದು ನಾನು ಮತ್ತೆ ಸೋಮನಾಥಕ್ಕೆ ಭೇಟಿ ನೀಡಲಿದ್ದೇನೆ. ಅರ್ಧ ವರ್ಷದೊಳಗೆ, ಸೋಮನಾಥಕ್ಕೆ ಸಂಬಂಧಿಸಿದ ಎರಡು ಪ್ರಮುಖ ಮೈಲಿಗಲ್ಲುಗಳಿಗೆ ಮತ್ತು ಆದರ ವಿನಾಶದಿಂದ ಪುನರುತ್ಥಾನದವರೆಗೆ ಅಥವಾ ನಾವು ವಿಧ್ವಂಸದಿಂದ ಸೃಜನೆಯತ್ತ ಎಂದು ಕರೆಯುವ ಪಯಣಕ್ಕೆ ಸಾಕ್ಷಿಯಾಗುತ್ತಿರುವುದು ನನ್ನ ಸೌಭಾಗ್ಯವಾಗಿದೆ.

ಸೋಮನಾಥವು ನಮಗೆ ನಾಗರಿಕತೆಯ ಸಂದೇಶ ನೀಡುತ್ತದೆ. ಅದರ ಮುಂದಿರುವ ವಿಶಾಲ ಸಮುದ್ರವು ಕಾಲಾತೀತತೆಯ ಭಾವವನ್ನು ಮೂಡಿಸುತ್ತದೆ. ಎಂತಹ ಭೀಕರ ಬಿರುಗಾಳಿಯೇ ಇರಲಿ ಅಥವಾ ಸಮುದ್ರದ ಅಲೆಗಳು ಎಷ್ಟೇ ಪ್ರಕ್ಷುಬ್ಧವಾಗಿರಲಿ, ಮನುಷ್ಯ ಯಾವಾಗಲೂ ಘನತೆ ಮತ್ತು ಶಕ್ತಿಯೊಂದಿಗೆ ಮರಳಿ ಮೇಲೆದ್ದು ಬರಬಹುದು ಎಂದು ಆ ಅಲೆಗಳು ನಮಗೆ ಸಾರುತ್ತಿವೆ. ಕಡಲ ಅಲೆಗಳು ಮತ್ತೆ ತೀರಕ್ಕೆ ಮರಳುವ ರೀತಿ, ಜನರ ಚೈತನ್ಯವನ್ನು ದೀರ್ಘಕಾಲದವರೆಗೆ ಹತ್ತಿಕ್ಕಲು ಸಾಧ್ಯವಿಲ್ಲ ಎಂಬುದನ್ನು ಪ್ರತಿ ಪೀಳಿಗೆಗೂ ನೆನಪಿಸುವಂತಿದೆ. ➡ಪುಟ ೧೫



ಶುಭ ದಿನ

➡ಪುಟ ೭

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ದುರಾಸೆಯು ನಮ್ಮ ಒಳ್ಳೆಯ ಗುಣಗಳನ್ನು ಅಳಿಸಿಬಿಡುತ್ತದೆ.
▲ಮಹಾವೀರ

ಕಿರುಸುದ್ದಿ

ಪ.ಬಂಗಾಳ ವಿಧಾನಸಭೆ ವಿಸರ್ಜಿಸಿದ ರಾಜ್ಯಪಾಲ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಬೆಳವಣಿಗೆಗಳು ತೀವ್ರಗೊಂಡಿರುವ ನಡುವೆಯೇ ರಾಜ್ಯಪಾಲ ಆರ್.ಎನ್. ರವಿ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸಚಿವ ಸಂಪುಟವನ್ನು ವಜಾಗೊಳಿಸಿ, ರಾಜ್ಯ ವಿಧಾನಸಭೆಯನ್ನು ವಿಸರ್ಜಿಸಿರುವುದಾಗಿ ಘೋಷಿಸಿದ್ದಾರೆ. ➡ಪುಟ ೭


ಆಪರೇಷನ್ ಸಿಂದೂರ್‌ನಲ್ಲಿ ಪಾಕ್‌ಗೆ ಭಾರೀ ಹೊಡೆತ: ಐಎಎಫ್

13 ಯುದ್ಧವಿಮಾನ ಧ್ವಂಸ

- ಪಹಲ್ಗಾಮ್ ಉಗ್ರ ದಾಳಿಗೆ ಪ್ರತೀಕಾರ
- ಮೊದಲ ಬಾರಿಗೆ ಬಹಿರಂಗಪಡಿಸಿದ ಭಾರತೀಯ ವಾಯುಪಡೆ
- 11 ಏರ್‌ಫೀಲ್ಡ್‌ಗಳ ಮೇಲೆ ನಿಖರ ದಾಳಿ; 9 ಉಗ್ರ ಶಿಬಿರಗಳೂ ನೆಲಸಮ

ಆಪರೇಷನ್ ಸಿಂದೂರಕ್ಕೆ ಒಂದು ವರ್ಷ

ಹೊಸದಿಲ್ಲಿ: ಆಪರೇಷನ್ ಸಿಂದೂರ ವೇಳೆ ಭಾರತ ನಡೆಸಿದ ಕಾರ್ಯಾಚರಣೆಯಿಂದಾಗಿ ಪಾಕಿಸ್ತಾನಕ್ಕೆ ಭಾರೀ ನಷ್ಟವಾಗಿದ್ದು, ಪಾಕಿಸ್ತಾನದ 13 ಯುದ್ಧವಿಮಾನಗಳನ್ನು ಧ್ವಂಸಗೊಳಿಸಿ, 11 ಏರ್‌ಫೀಲ್ಡ್‌ಗಳ ಮೇಲೆ ಯಶಸ್ವಿ ದಾಳಿ ನಡೆಸಲಾಗಿದೆ ಎಂದು ಭಾರತೀಯ ವಾಯುಪಡೆಯ ಉಪ ಮುಖ್ಯಸ್ಥ ಏರ್ ಮಾರ್ಷಲ್ ಅವಧೇಶ್ ಕುಮಾರ್ ಭಾರ್ತಿ ತಿಳಿಸಿದ್ದಾರೆ. ಕಾರ್ಯಾಚರಣೆಯ ಮೊದಲ ವಾರ್ಷಿಕೋತ್ಸವದ ಅಂಗ ವಾಗಿ ಗುರುವಾರ ನಡೆದ ವಿಶೇಷ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಕಾಶ್ಮೀರದಲ್ಲಿದ್ದ ಒಟ್ಟು 9 ಉಗ್ರ ಶಿಬಿರಗಳನ್ನು ನಿಖರ ದಾಳಿಗಳ ಮೂಲಕ ಸಂಪೂರ್ಣವಾಗಿ ನಾಶಪಡಿಸಲಾಗಿದೆ. ➡ಪುಟ ೭



- ಪಹಲ್ಗಾಮ್ ಉಗ್ರ ದಾಳಿಯ ಬಳಿಕ ಭಾರತ ಆರಂಭಿಸಿದ ಕಾರ್ಯಾಚರಣೆ
- ಪಾಕ್ ಹಾಗೂ ಪಾಕ್ ಆಕ್ರಮಿತ ಕಾಶ್ಮೀರದ 9 ಉಗ್ರ ಶಿಬಿರಗಳ ನಾಶ
- 11 ಪಾಕಿಸ್ತಾನಿ ಏರ್‌ಫೀಲ್ಡ್‌ಗಳ ಮೇಲೆ ನಿಖರ ದಾಳಿ
- ನೆಲ ಹಾಗೂ ಗಗನದಲ್ಲಿ ಸೇರಿ 13 ಯುದ್ಧವಿಮಾನ ಧ್ವಂಸ
- 300 ಕಿ.ಮೀ. ದೂರದಿಂದ ಹೈ ವ್ಯಾಲ್ಯೂ ಏರ್‌ಬೋರ್ನ್ ಅಸೆಟ್ ಹೊಡೆತ
- ಭಾರತೀಯ ಮೂಲಸೌಕರ್ಯಗಳಿಗೆ ದೊಡ್ಡ ಮಟ್ಟದ ಹಾನಿ ಇಲ್ಲ
- ಸೇನೆ, ವಾಯುಪಡೆ, ನೌಕಾಪಡೆಗಳ ಜಂಟಿ ಕಾರ್ಯಾಚರಣೆ

ಪಾಕ್‌ಗೆ ತಕ್ಕ ಪ್ರತ್ಯುತ್ತರ: ಪ್ರಧಾನಿ ಮೋದಿ •ಪುಟ ೭

ಬಂಗಾಳದಲ್ಲಿ ಹಿಂಸಾಚಾರ, ಬಿಜೆಪಿಗರೇ ಗುರಿ

ಸುವೇಂದು ಅಧಿಕಾರಿ ಆಪ್ತನ ಗುಂಡಿಕ್ಕಿ ಹತ್ಯೆ

ಕೋಲ್ಕತ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣಾ ಫಲಿತಾಂಶ ಹೊರಬಂದ 48 ಗಂಟೆಗಳ ಬಳಿಕವೂ ಹಿಂಸಾಚಾರ ಮುಂದುವರಿದಿದ್ದು, ಬುಧವಾರ ರಾತ್ರಿ ಬಿಜೆಪಿ ನಾಯಕ ಸುವೇಂದು ಅಧಿಕಾರಿಯ ಆಪ್ತ ಸಹಾಯಕ ಚಂದ್ರನಾಥ್ ರಾಥ್‌ರನ್ನು ಗುಂಡಿಟ್ಟು ಹತ್ಯೆ ಮಾಡಲಾಗಿದೆ. ಸಂಭಾವ್ಯ ಸಿಎಂ ಸುವೇಂದು ಆಪ್ತನ ಹತ್ಯೆ, ಬಂಗಾಳ ರಾಜಕೀಯದಲ್ಲಿ ಆತಂಕ ಸೃಷ್ಟಿಸಿದೆ. ಭವಾನಿಪುರ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯ ಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಗೆದ್ದ ಬಿಜೆಪಿ ಅಭ್ಯರ್ಥಿ ಸುವೇಂದು ಆಪ್ತನ ಹತ್ಯೆ ಖಂಡಿಸಿದ ಬಿಜೆಪಿ, ಗುರಿಯಾಗಿಸಿ ನಡೆಸಿದ ಹತ್ಯೆಯೆಂದು ಆರೋಪಿಸಿದೆ. ಉತ್ತರ 24 ಪರಗಣ ಜಿಲ್ಲೆಯ ಮಧ್ಯಮ್ ಗ್ರಾಮ ನಗರದಲ್ಲಿ ಚಂದ್ರನಾಥ್ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದು, ಚಂದ್ರನಾಥ್ ಎದೆಗೆ 4 ಸುತ್ತು ಗುಂಡು ಹಾರಿಸಿ ಹತ್ಯೆಗೈದಿದ್ದಾರೆಂದು ಬಿಜೆಪಿ ಹೇಳಿದೆ. ➡ಪುಟ ೭





ಇನ್ನೂ ಇಬ್ಬರ ಮೇಲೆ ದಾಳಿ, ಚಾಕು ಇರಿತ!

ಫಲಿತಾಂಶದ ನಂತರ ಹಲವು ಜಿಲ್ಲೆಗಳಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ದಾಳಿಗಳು ಮುಂದುವರಿದಿವೆ. ಪಕ್ಷದ ಕಾರ್ಯಕರ್ತರು ಕಾನೂನನ್ನು ಕೈಗೆತ್ತಿಕೊಳ್ಳಬಾರದು. ➡ಪುಟ ೭




ಜನ ಸೇವೆಯಲ್ಲಿ ಸಾರ್ಥಕ 50 ವರುಷ

BSY

ಅಭಿಮಾನೋತ್ಸವ

9 ಮೇ 2026 | ಚಿತ್ರದುರ್ಗ



ಬಿ.ಎಸ್.ಯಡಿಯೂರಪ್ಪ ಎಂಬ ಹೆಸರು ಕೇಳಿದಾಗ ಮೊದಲು ನೆನಪಾಗುವುದು ಒಬ್ಬ ನಿಜ ಅರ್ಥದ ಕಾರ್ಯಕರ್ತರ ನಾಯಕ, ಜನಸಾಮಾನ್ಯ ಸಂಘದ ಸ್ವಯಂಸೇವಕನಾಗಿ ತನ್ನ ಸಂಸ್ಕಾರ. ಮತ್ತು ಬಿಜೆಪಿ ತನಗೆ ಕೊಟ್ಟ ವೇದಿಕೆ ಈ ಎರಡನ್ನೂ ಸರಿಯಾದ ದಿಕ್ಕಿನಲ್ಲಿ, ಸರಿಯಾದ ಪ್ರಮಾಣದಲ್ಲಿ ಬಳಸಿ ರಾಜ್ಯದಲ್ಲಿ ಬಿಜೆಪಿಯನ್ನು ಗಟ್ಟಿಯಾಗಿ ಕಟ್ಟಿದರು. ಅಧಿಕಾರ ಇಲ್ಲದ ಕಾಲದಲ್ಲಿ ಕಾಂಗ್ರೆಸ್ ಎಂಬ ದೈತ್ಯ ರಾಜಕೀಯ ಪಕ್ಷವನ್ನು ಎದುರು ಹಾಕಿಕೊಂಡು, ಬೀದಿಯಲ್ಲಿ ನಿಂತು ಹೋರಾಡಿ, ಕರ್ನಾಟಕದ ಬಿಜೆಪಿಯನ್ನು ಇವತ್ತಿನ ಈ ಹಂತಕ್ಕೆ ತರುವಲ್ಲಿ ಯಡಿಯೂರಪ್ಪನವರ ಕೊಡುಗೆ ಬಲು ದೊಡ್ಡದು. ಸಿದ್ಧಾಂತದಲ್ಲಿ ಅಚಲ, ರಾಜಕೀಯ ಚಾಕಚಕ್ಯತೆಯಲ್ಲಿ ನಿಪುಣ, ಎಲ್ಲ ರೀತಿಯಲ್ಲೂ ಪಕ್ಷಕ್ಕೆ ಬೆನ್ನೆಲುಬಾದರು ಬಲ ಕೊಟ್ಟರು.

ರಾಷ್ಟ್ರ ರಾಜಕಾರಣದ ಇತಿಹಾಸದಲ್ಲಿ ಬಿ.ಎಸ್. ಯಡಿಯೂರಪ್ಪ ಎಂಬ ಹೆಸರು ಕೇವಲ ಅಧಿಕಾರದ ಸಂಕೇತವಲ್ಲ ದಕ್ಷಿಣ ಭಾರತದ ಮಣ್ಣಿನಲ್ಲಿ ಹಿಂದುತ್ವದ ಸೈದ್ಧಾಂತಿಕ–ರಾಜಕೀಯ ಆಂದೋಲನವನ್ನು ಕರುನಾಡಿನ ಜನಮಾನಸದ ಶಿಖರಕ್ಕೆ ಕೊಂಡೊಯ್ದ ಸಾಹಸಗಾಥೆ. ಕಳೆದ ಐದು ದಶಕಗಳ ಸುದೀರ್ಘ ರಾಜಕೀಯ ಪಯಣದಲ್ಲಿ ಸಂಘರ್ಷ ಪೂರ್ಣ ಬದುಕಿನಲ್ಲಿ ಸವಾಲುಗಳನ್ನು ಮೆಟ್ಟಿ ಅವುಗಳನ್ನೇ ತಮ್ಮ ಯಶಸ್ಸಿನ ಮೆಟ್ಟಿಲನ್ನಾಗಿಸಿ ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲನ್ನು ತೆರೆದ ರೋಚಕ ಇತಿಹಾಸದ ದಿಗ್ದರ್ಶನ, ಶಿಕಾರಿಪುರದ ಆರ್.ಎಸ್ಎಸ್ ಸ್ವಯಂಸೇವಕನಿಂದ ದಕ್ಷಿಣದ ಕೇಸರಿ ಪಥದ ಅಪ್ರತಿಮ ಸಾರಥಿಯಾಗಿ ಬೆಳೆದ ಈ ನಾಯಕನ ಜೀವನ, ಮುಂದಿನ ತಲೆಮಾರಿನ ಪ್ರತಿಯೊಬ್ಬ ಹಿಂದೂ ಕಾರ್ಯಕರ್ತನಿಗೆ ಸ್ಫೂರ್ತಿಯ ಕಥೆ. ರಾಮಶಿಲಾ ಪೂಜೆಯಿಂದ ರಾಮಮಂದಿರದವರೆಗೆ ಐದು ದಶಕಗಳ ಹಿಂದುತ್ವ ಪಯಣ, 50 ವರ್ಷಗಳನ್ನು ಪೂರೈಸಿರುವುದು ಇದು ಕೇವಲ ಒಬ್ಬ ವ್ಯಕ್ತಿಯ ಯಶಸ್ಸಲ್ಲ, ಇದು ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ ಎಂಬ ಒಬ್ಬ ಕಾರ್ಯಕರ್ತನ ಯಶಸ್ಸು ಆ ಸಂಭ್ರಮ.

ಮೇ 9, 2026ರಂದು ಚಿತ್ರದುರ್ಗದಲ್ಲಿ ಅವರ ಸಾಧನೆಗಳ ಬಗ್ಗೆ ನಾಡಿನ ಜನತೆಗೆ ಸಂದೇಶ ನೀಡಲು ಆಯೋಜಿಸಿರುವ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ನಾವೆಲ್ಲ ಭಾಗವಹಿಸೋಣ. ಅವರ ಅಭಿಮಾನಿಗಳಾದ ತಾವೆಲ್ಲರೂ ಈ ಶುಭಾವಸರದಲ್ಲಿ ಭಾಗಿಗಳಾಗಿ ಅವರಿಗೆ ಇನ್ನಷ್ಟು ಶಕ್ತಿ ತುಂಬೋಣ.

ಬನ್ನಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ...

ಸರ್ವರಿಗೂ ಆತ್ಮೀಯ ಸ್ವಾಗತ ಬಯಸುವ


ಮಲ್ಲಿಕಾ ಪ್ರಸಾದ್
ಮಾಜಿ ಶಾಸಕರು,
ಪುತ್ತೂರು ವಿಧಾನಸಭಾ ಕ್ಷೇತ್ರ


ಸಂಜೀವ ಮಠಂದೂರು
ಮಾಜಿ ಶಾಸಕರು
ಪುತ್ತೂರು ವಿಧಾನಸಭಾ ಕ್ಷೇತ್ರ


ದಯಾನಂದ ಶೆಟ್ಟಿ ಉಜಿರೆಮಾರು
ಅಧ್ಯಕ್ಷರು, ಬಿಜೆಪಿ ಗ್ರಾಮಾಂತರ ಮಂಡಲ, ಪುತ್ತೂರು


ಶಿವಕುಮಾರ್ ಕಲ್ಲಿಮಾರ್
ಅಧ್ಯಕ್ಷರು, ಬಿಜೆಪಿ ನಗರ ಮಂಡಲ,
ಪುತ್ತೂರು


ಪ್ರಸನ್ನ ಮಾರ್ತಾ
ಉಪಾಧ್ಯಕ್ಷರು
ಬಿಜೆಪಿ ದ.ಕ ಜಿಲ್ಲೆ


ಶಶಿಕುಮಾರ್ ರೈ ಬಾಲ್ಯೊಟ್ಟು
ಅಧ್ಯಕ್ಷರು, ದ.ಕ ಜಿಲ್ಲಾ ಸಹಕಾರಿ ಯೂನಿಯನ್, ಮಂಗಳೂರು
ನಿರ್ದೇಶಕರು, ದ.ಕ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಮಂಗಳೂರು


ಚನಿಲ ತಿಮ್ಮಪ್ಪ ಶೆಟ್ಟಿ
ನಿಕಟಪೂರ್ವ ಅಧ್ಯಕ್ಷರು
ಕರಾವಳಿ ಅಭಿವೃದ್ಧಿ ಪ್ರಾಧಿಕಾರ


ಸಾಜ ರಾಧಾಕೃಷ್ಣ ಆಳ್ವ
ನಿಕಟಪೂರ್ವ ಅಧ್ಯಕ್ಷರು
ಬಿಜೆಪಿ ಗ್ರಾಮಾಂತರ ಮಂಡಲ
ಪುತ್ತೂರು


ರಾಧಾಕೃಷ್ಣ ರೈ ಬೂಡಿಯಾರು
ನಿಕಟಪೂರ್ವ ಉಪಾಧ್ಯಕ್ಷರು,
ಬಿಜೆಪಿ ದ.ಕ ಜಿಲ್ಲೆ


ಜೀವಂಧರ್ ಜೈನ್
ಮಾಜಿ ಅಧ್ಯಕ್ಷರು,
ನಗರಸಭೆ, ಪುತ್ತೂರು


ವಿದ್ಯಾ ಆರ್. ಗೌರಿ
ಕಾರ್ಯದರ್ಶಿ
ಬಿಜೆಪಿ ದ.ಕ ಜಿಲ್ಲೆ


ಲೋಕೇಶ್ ಚಾಕೋಟೆ
ಪ್ರಧಾನ ಕಾರ್ಯದರ್ಶಿ
ಬಿಜೆಪಿ ಗ್ರಾಮಾಂತರ ಮಂಡಲ,
ಪುತ್ತೂರು


ಸುನಿಲ್ ಕುಮಾರ್ ದಡ್ಡು
ಪ್ರಧಾನ ಕಾರ್ಯದರ್ಶಿ
ಬಿಜೆಪಿ ಗ್ರಾಮಾಂತರ ಮಂಡಲ,
ಪುತ್ತೂರು


ಕೆದಂಬಾಡಿಗುತ್ತು ಸೀತಾರಾಮ ರೈ
ಉದ್ಯಮಿಗಳು
ಪದ್ಮಶ್ರೀ ಸೋಲಾರ್ ಸಿಸ್ಟಮ್,
ಪುತ್ತೂರು


ಹರಿಪ್ರಸಾದ್ ಯಾದವ್
ಉಪಾಧ್ಯಕ್ಷರು
ಬಿಜೆಪಿ ಗ್ರಾಮಾಂತರ ಮಂಡಲ,
ಪುತ್ತೂರು


ರಾಜೇಶ್ ಬಾಳೇಕಲ್ಲು
ಅಧ್ಯಕ್ಷರು, ಬಿಜೆಪಿ ಮಹಾಶಕ್ತಿ
ಕೇಂದ್ರ, ಪುಣಚ


ಸತೀಶ್ ನಾಯ್ಕ್ ಪರ್ಲಡ್ಕ
ಉಪಾಧ್ಯಕ್ಷರು
ಬಿಜೆಪಿ ನಗರ ಮಂಡಲ
ಪುತ್ತೂರು


ವಿದ್ಯಾಧರ್ ಜೈನ್
ಉಪಾಧ್ಯಕ್ಷರು, ಬಿಜೆಪಿ ಗ್ರಾಮಾಂತರ
ಮಂಡಲ, ಪುತ್ತೂರು


ಯತೀಂದ್ರ ಕೊಚ್ಚಿ
ಉಪಾಧ್ಯಕ್ಷರು
ಬಿಜೆಪಿ ಗ್ರಾಮಾಂತರ ಮಂಡಲ,
ಪುತ್ತೂರು


ಪುರುಷೋತ್ತಮ ಮುಂಗ್ಲಿಮನೆ
ಬಿಜೆಪಿ ಜಿಲ್ಲಾ ಪ್ರಶಿಕ್ಷಣ
ಪ್ರಕೋಷ್ಠದ ಸಹ ಸಂಚಾಲಕರು


ಶ್ರೀಮತಿ ದಿವ್ಯ ಪುರುಷೋತ್ತಮ್ ಮುಂಗ್ಲಿಮನೆ
ಉಪಾಧ್ಯಕ್ಷರು, ಬಿಜೆಪಿ ಗ್ರಾಮಾಂತರ
ಮಂಡಲ ಪುತ್ತೂರು


ನಹುಷಾ ಭಟ್
ಕೋಶಾಧಿಕಾರಿ
ಬಿಜೆಪಿ ಗ್ರಾಮಾಂತರ ಮಂಡಲ,
ಪುತ್ತೂರು


ಹರೀಶ್ ಸಿ. ಎಚ್.
ಪ್ರಧಾನ ಕಾರ್ಯದರ್ಶಿ
ಬಿಜೆಪಿ ಮಹಾಶಕ್ತಿ ಕೇಂದ್ರ, ವಿಟ್ಲ


ಕಿರಣ್ ಕುಮಾರ್ ಪೆರ್ನೆ
ಪ್ರಧಾನ ಕಾರ್ಯದರ್ಶಿ
ಬಿಜೆಪಿ ಮಹಾಶಕ್ತಿ ಕೇಂದ್ರ,
ಪುಣಚ


ವಿರೂಪಾಕ್ಷ ಭಟ್ ಮಜ್ಜಿಮಲೆ
ಉಪಾಧ್ಯಕ್ಷರು
ಬಿಜೆಪಿ ಗ್ರಾಮಾಂತರ ಮಂಡಲ,
ಪುತ್ತೂರು


ಪುನೀತ್ ಮಾಡತ್ತಾರು
ಕಾರ್ಯದರ್ಶಿ
ಬಿಜೆಪಿ ಗ್ರಾಮಾಂತರ ಮಂಡಲ,
ಪುತ್ತೂರು


ವಿಜಯ್ ಬಿ.ಎಸ್.
ಅಧ್ಯಕ್ಷರು
ಬಿಜೆಪಿ ಮಹಾಶಕ್ತಿ ಕೇಂದ್ರ,
ಆರ್ಯಾಪು


ಪ್ರೀತಂ ಪೂಂಜ
ಕಾರ್ಯದರ್ಶಿ, ಬಿಜೆಪಿ ಗ್ರಾಮಾಂತರ
ಮಂಡಲ, ಪುತ್ತೂರು


ರತನ್ ರೈ ಕುಂಬ್ರ
ಕಾರ್ಯದರ್ಶಿ
ಬಿಜೆಪಿ ಗ್ರಾಮಾಂತರ ಮಂಡಲ,
ಪುತ್ತೂರು


ಯಶಸ್ವಿನಿ ಶಾಸ್ತ್ರೀ, ನೆಕ್ಕರೆ
ಕಾರ್ಯದರ್ಶಿ
ಮಹಿಳಾ ಮೋರ್ಚಾ, ದ.ಕ ಜಿಲ್ಲೆ


ಶಿಶಿರ್ ಪೆರ್ವೋಡಿ
ಅಧ್ಯಕ್ಷರು
ಬಿಜೆಪಿ ಯುವಮೋರ್ಚಾ
ಪುತ್ತೂರು ಗ್ರಾಮಾಂತರ

ಮಂಗಳೂರು
ಶುಕ್ರವಾರ, 8 ಮೇ 2026
ಸಂಪುಟ 48, ಸಂಚಿಕೆ 50, ಪುಟಗಳು 16+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ











ಮಹಿಳೆಯರಿಗೆ ವಿಶೇಷ ಯೋಜನೆ ನೀಡಿದ ನಾಯಕ

ಹೆಣ್ಣು ಮಕ್ಕಳು, ಮಹಿಳೆಯರಿಗಾಗಿ ವಿಶೇಷ ಯೋಜನೆಗಳನ್ನು ಜಾರಿಗೊಳಿಸಿ ಅವರ ಬದುಕಿನಲ್ಲಿ ಭರವಸೆ ಮೂಡಿಸಿದ ಧೀಮಂತ ನಾಯಕ ಬಿ ಎಸ್ ಯಡಿಯೂರಪ್ಪಜೀ. ಯಡಿಯೂರಪ್ಪ ಜಾರಿಗೊಳಿಸಿದ ಯೋಜನೆಗಳಲ್ಲಿ ಮಹಿಳೆಯರಿಗಾಗಿ ನೀಡಿದ ಕೊಡುಗೆಗಳು ಚರಿತ್ರಾರ್ಹವಾದವು. ಬಂಗಾರ ಕೊಂಡುಕೊಳ್ಳಲಾಗದೆ ಪರಿತಪಿಸುತ್ತಿದ್ದ ಬಡ ಹೆಣ್ಣು ಮಕ್ಕಳಿಗಾಗಿ ತಾಳಿಭಾಗ್ಯ ಯೋಜನೆ, ಗರ್ಭಿಣಿಯರಿಗೆ ತವರಿನ ನೆನಪು ಮಾಡುವ ಮಡಿಲು ಯೋಜನೆ, ಹೆಣ್ಣು ಮಗುವನ್ನು ಗೌರವಯುತವಾಗಿ ಕಾಣಲು ಭಾಗ್ಯಲಕ್ಷ್ಮಿ, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ನೆರವಾದರು. ಮಹಿಳೆಯರಿಗೆ ಮಾಸಾಶನ, ವಿದ್ಯಾಸಿರಿ, ಸ್ಥಳೀಯ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲು, ಬಡ ಮಹಿಳೆಯರಿಗಾಗಿ ಮನೆ ನಿರ್ಮಾಣಕ್ಕಾಗಿ ಬಸವ ವಸತಿ ಯೋಜನೆ, ಮಾತೃಪೂರ್ಣ ಯೋಜನೆ.....ಇಂತಹ ಯೋಜನೆಗಳ ಮೂಲಕ ಮಹಿಳೆಯರಲ್ಲಿ ಭದ್ರತೆ, ಸುರಕ್ಷತೆ ಭಾವನೆ ಮೂಡಿಸಿದವರು ಬಿ ಎಸ್ ಯಡಿಯೂರಪ್ಪಜೀ.

ಹಿಡಿದ ಕೆಲಸವನ್ನು ಪಟ್ಟು ಬಿಡದೆ ಸಾಧಿಸುವ

ಛಲದಂಕಮಲ್ಲ ಶ್ರೀ ಬಿ.ಎಸ್. ಯಡಿಯೂರಪ್ಪಜೀ

ಅದು 2018ರ ವಿಧಾನಸಭೆ ಚುನಾವಣೆ ಸಂದರ್ಭ ನಾನೂ ಸೇರಿದಂತೆ ಎಲ್ಲರೂ ತಮಗೆ ಟಿಕೆಟ್ ಸಿಕ್ಕೀತೆ ಎಂದು ಕಾತರದಿಂದ ಕಾಯುತ್ತಿದ್ದರು. ಬಿಜೆಪಿಯ ಮೊದಲ ಪಟ್ಟಿ ಬಿಡುಗಡೆಯಾಗಿದ್ದೇ ನನಗೆ ಅಚ್ಚರಿ, ಸಂಭ್ರಮ ಕಾದಿತ್ತು. ಆ ಪಟ್ಟಿಯಲ್ಲೇ ಜಿಲ್ಲೆಯ ಏಕೈಕ ಮಹಿಳಾ ಅಭ್ಯರ್ಥಿಯಾಗಿ ನನ್ನ ಹೆಸರನ್ನು ಪ್ರಕಟಿಸಲಾಗಿತ್ತು. ನಾನು ಗೆದ್ದುಬಂದ ಮೇಲೆ ಶ್ರೀ ಯಡಿಯೂರಪ್ಪಜೀ ಅವರನ್ನು ಭೇಟಿಯಾಗಿ ಧನ್ಯವಾದ ಸಲ್ಲಿಸಿದಾಗ ಅವರು ಆಶೀರ್ವದಿಸುತ್ತಿದ್ದಂತೆ ಸಂತಸದಿಂದ ನನ್ನ ಕಣ್ಣಾಲಿಗಳು ತೇವವಾದವು. ನನ್ನಂತಹ ಅದೆಷ್ಟೋ ಜನರಿಗೆ ರಾಜಕೀಯ ಅಸ್ತಿತ್ವ ಕಲ್ಪಿಸಿದ ಮಹಾನ್ ನಾಯಕರು ಸನ್ಮಾನ್ಯ ಶ್ರೀ ಬಿ .ಎಸ್ .ಯಡಿಯೂರಪ್ಪಜೀ ಅವರು.

ರಾಜ್ಯದ ಅಭಿವೃದ್ಧಿ, ಜನತೆಯ ಒಳಿತಿಗಾಗಿ ಹಿಡಿದ ಕೆಲಸವನ್ನು ಪಟ್ಟು ಹಿಡಿದು ಸಾಧಿಸುವ ಛಲದಂಕಮಲ್ಲ .ರಾಜ್ಯಕ್ಕಾಗಿ, ಈ ನಾಡಿನ ಜನತೆಯ ಅಭ್ಯುದಯಕ್ಕಾಗಿ, ನಮ್ಮ ನೆಲ, ಜಲದ ರಕ್ಷಣೆಗಾಗಿ ಅರೆಕ್ಷಣವೂ ವಿರಮಿಸದೆ ಹೋರಾಟ ನಡೆಸುವ ಜಾಯಮಾನ ಅವರದ್ದು.

ಯಡಿಯೂರಪ್ಪಜೀ ಅಂದರೆ ಬಿಜೆಪಿ, ಬಿಜೆಪಿ ಅಂದರೆ ಯಡಿಯೂರಪ್ಪ. ಅಷ್ಟರ ಮಟ್ಟಿಗೆ ಅವರ ಹಾಗೂ ಪಕ್ಷದ ನಡುವೆ ಅವಿನಾಭಾವ ಸಂಬಂಧ ಇತ್ತು. ಶಿಕಾರಿಪುರದ ಪುರಸಭೆ ಸದಸ್ಯರಾಗಿ ರಾಜಕೀಯ ಪ್ರವೇಶಿಸಿದ ಅವರು ಮುಖ್ಯಮಂತ್ರಿಯಾದಾಗಲೂ ಅದೇ ವಿನಯ, ಅದೇ ನಡವಳಿಕೆ, ಕಾರ್ಯಕರ್ತರೊಂದಿಗೆ ಆತ್ಮೀಯತೆ, ಜನರ ಕಲ್ಯಾಣಕ್ಕಾಗಿ ತುಡಿತ ಕಿಂಚಿತ್ತೂ ಬದಲಾಗಲಿಲ್ಲ. ಹೌದು. ಯಡಿಯೂರಪ್ಪ ಜೀ ಅವರ ಇಂತಹ ಸ್ವಭಾವಗಳೇ ಅವರನ್ನು ಈ ನಾಡಿನ ಮಹೋನ್ನತ ಜನನಾಯಕನನ್ನಾಗಿಸಿದೆ.

ಬೆರಳೆಣಿಕೆಯಷ್ಟು ಜನರೊಂದಿಗೆ ಸೇರಿ ರಾಜ್ಯಾದ್ಯಂತ ಓಡಾಡಿ, ಸೈಕಲ್ ತುಳಿಯುತ್ತ ಭಾರತೀಯ ಜನತಾ ಪಕ್ಷ ಸಂಘಟನೆ ಮಾಡುವಾಗ ಅವರು ಮುಖ್ಯಮಂತ್ರಿಯ ಕನಸು ಕಂಡವರಲ್ಲ, ಅಧಿಕಾರ ಬಂದೀತು ಎಂದು ಭಾವಿಸಿದವರೂ ಅಲ್ಲ. ದೇಶಸೇವೆ, ಈಶಸೇವೆ ಎಂದು ಭಾವಿಸಿ ಸರ್ವಜನಾಂಗದ ಅಭಿವೃದ್ಧಿಗಾಗಿ ದೀನ ದಲಿತರ ಕಷ್ಟ ನಿವಾರಣೆಗಾಗಿ, ಮಹಿಳೆಯರು, ಈ ನಾಡಿನ ಅನ್ನದಾತರು, ಮೀನುಗಾರರು ಅಭಿವೃದ್ಧಿಗಾಗಿ ಹಗಲಿರುಳು ದುಡಿದವರು. ಅವರು ಮುಖ್ಯಮಂತ್ರಿಯಾದ ಮೇಲೆಯೂ ಈ ಎಲ್ಲ ವರ್ಗದ ಜನರಿಗಾಗಿ ಯೋಜನೆಗಳನ್ನು ರೂಪಿಸಿ ಸಾಮಾಜಿಕ ಅಭಿವೃದ್ಧಿಯ ತಮ್ಮ ಕನಸು, ತುಡಿತವನ್ನು ಸಾಕಾರಗೊಳಿಸಿದರು.

ಬಿ ಎಸ್ ಯಡಿಯೂರಪ್ಪಜೀ ಅವರು ಪಕ್ಷಕ್ಕೆ ಒಬ್ಬ ವ್ಯಕ್ತಿಯಾಗಿ ಏನೆಲ್ಲ ಕೊಡಬಹುದೋ ಅದೆಲ್ಲವನ್ನೂ ಧಾರೆ ಎರೆದಿದ್ದಾರೆ. ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ ಅಧಿಕಾರಕ್ಕೆ ತಂದಿದ್ದಾರೆ. ಅದೆಷ್ಟೋ ಮುಖಂಡರನ್ನು ಬೆಳೆಸಿದ್ದಾರೆ. ಲಕ್ಷಾಂತರ ಕಾರ್ಯಕರ್ತರಲ್ಲಿ ಭರವಸೆ ತುಂಬಿದ್ದಾರೆ. ವಿಶೇಷವಾಗಿ ಈ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ನಿರಂತರವಾಗಿ ಅರ್ಧ ಶತಮಾನದ ಕಾಲ ದುಡಿದಿದ್ದಾರೆ. ಅವರ ತತ್ವ, ಸಿದ್ಧಾಂತ, ಬದ್ಧತೆಯನ್ನು ನಾವು ಅಳವಡಿಸಿಕೊಳ್ಳುವ ಮೂಲಕ ನಾವು ಅವರಿಗೆ ಗೌರವ ಸಲ್ಲಿಸಬೇಕಾಗಿದೆ.

ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಅವರು ಕೊಡುಗೈ ದಾನಿಗಳು. ನಮ್ಮ ಕ್ಷೇತ್ರದಲ್ಲಿ ಯಾವುದೆ ಅಭಿವೃದ್ಧಿ ಕೆಲಸದ ಬಗ್ಗೆ ಬೇಡಿಕೆ ಇಟ್ಟಾಗಿ ಕೈಚೆಲ್ಲಿರುಗಿಸಿದ್ದೇ ಇಲ್ಲ. ನನ್ನ ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕೆ ಅನುದಾನ ಬೇಕು ಎಂದಾಗ ತಕ್ಷಣ ಹಣ ಬಿಡುಗಡೆ ಮಾಡಿದರು. ಮೀನುಗಾರಿಕೆ ಹಾಗೂ ಮೀನುಗಾರರಿಗಾಗಿ 62 ಕೋಟಿ ರೂ. ಒದಗಿಸಿದರು. ಸಾಲಮನ್ನಾ ಮೂಲಕ ನೆರವಾದ ದೇವತಾ ಮನುಷ್ಯ ಯಡಿಯೂರಪ್ಪಜೀ.

ವಿಧಾನಸಭೆ ಅಧಿವೇಶನ ನಡೆಯುತ್ತಿದ್ದಾಗ ಮೊದಲ ಬಾರಿಗೆ ಆಯ್ಕೆಯಾದ ಶಾಸಕರಲ್ಲಿ ಬಂದು ಬೆಳಗ್ಗೆಯಿಂದ ಸಂಜೆ ತನಕ ಅಧಿವೇಶನದಲ್ಲಿ ಭಾಗವಹಿಸಿ. ಕೇವಲ ನಿಮ್ಮ ಪ್ರಶ್ನೆಗೆ ಉತ್ತರ ಸಿಕ್ಕಿದ ಮೇಲೆ ಎದ್ದುಹೋಗಬಾರದು. ಕಲಾಪದಲ್ಲಿ ದಿನವಿಡಿ ಪಾಲ್ಗೊಂಡು ರಾಜ್ಯದ ಸಮಗ್ರ ವಿಷಯದ ಬಗ್ಗೆ ಮಾಹಿತಿ ಪಡೆಯಬೇಕು. ಹಾಗಿದ್ದರೆ ಮಾತ್ರ ಎಂಎಲ್ ಎ ಆಗಿದ್ದು ಸಾರ್ಥಕ. ಜೊತೆಗೆ ನಾಯಕರಾಗಿ ಬೆಳೆಯಲು ಸಾಧ್ಯ ಎಂದು ಪಾಠ ಮಾಡುತ್ತಿದ್ದರು. ತಾವೂ ಬೆಳೆಯುತ್ತ ನಮ್ಮನ್ನೆಲ್ಲ ಬೆಳೆಸುವ ಅವರ ಅಸಾಧಾರಣ ವ್ಯಕ್ತಿತ್ವ, ನಾಯಕತ್ವದ ಗುಣ ನಮ್ಮನ್ನು ಇಂದಿಗೂ ಬೆರಗುಗೊಳಿಸುತ್ತಿದೆ.

ಬಿಜೆಪಿ ಕಾರ್ಯಕರ್ತರು, ಪದಾಧಿಕಾರಿಗಳಿಗೆ ಕೇವಲ ಬಿಜೆಪಿ ಕಚೇರಿಯಷ್ಟೇ ಅಲ್ಲ, ಯಡಿಯೂರಪ್ಪ ಜೀ ಅವರ ಮನೆಯ ಬಾಗಿಲೂ ಸದಾ ತೆರೆದೇ ಇರುತ್ತಿತ್ತು. ನಾವು ಅವರ ಮನೆಗೆ ಹೋದರೆ ಊಟ, ತಿಂಡಿ, ಟೀ ಇಲ್ಲದೆ ಕಳುಹಿಸುತ್ತಿರಲಿಲ್ಲ.

ಯಡಿಯೂರಪ್ಪಜೀ ಅವರದ್ದು ಮಕ್ಕಳ ಮನಸ್ಸು, ಪ್ರತಿಯೊಬ್ಬ ಕಾರ್ಯಕರ್ತರನ್ನೂ ಆತ್ಮೀಯತೆಯಿಂದ ಮಾತನಾಡಿಸಿ ಪಕ್ಷದ ಒಳ ಹೊರಗನ್ನು ಅಳೆಯುವ ಅಗಾಧ ವ್ಯಕ್ತಿತ್ವ. ಅವರು ಪಕ್ಷ ಸಂಘಟನೆ ಹಾಗೂ ಅಭಿವೃದ್ಧಿಯಲ್ಲಿ ಸಮನ್ವಯ ಸಾಧಿಸಿದ ನೇತಾರರು. ಯಡಿಯೂರಪ್ಪಜೀ ಅವರ ಮಾರ್ಗದರ್ಶನ ನಮಗೆ ನಿರಂತರವಾಗಿರಲಿ ಎಂದು ಆಶಿಸುತ್ತೇನೆ.

ಅಧಿಕಾರದಲ್ಲಿದ್ದಾಗ ರಾಜ್ಯದಲ್ಲಿ ರೈತರು, ಜನಸಾಮಾನ್ಯರು, ಕಾರ್ಮಿಕರು, ಮಹಿಳೆಯರು, ದನಿ ಇಲ್ಲದವರ ಬಾಳಲ್ಲಿ ಬೆಳಕು ಮೂಡಿಸುವಂತಹ ದಿಟ್ಟ ನಿರ್ಧಾರ ಕೈಗೊಂಡು ಸ್ವರ್ಣೀಯ ಆಡಳಿತ ನೀಡಿರುವ ಸನ್ಮಾನ್ಯ ಶ್ರೀ ಬಿ.ಎಸ್ .ಯಡಿಯೂರಪ್ಪ ಅವರ ಸಾರ್ಥಕ 50 ವರ್ಷಗಳ ರಾಜಕೀಯ ಜೀವನಕ್ಕೆ ಗೌರವ ಸಲ್ಲಿಸುತ್ತಿರುವ ಈ ಸುಸಂದರ್ಭದಲ್ಲಿ ಶ್ರೀಯುತರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಶ್ರೀಯುತರ ಮಾರ್ಗದರ್ಶನ ರಾಜ್ಯಕ್ಕೆ ಮತ್ತು ಪಕ್ಷಕ್ಕೆ ಇನ್ನಷ್ಟು ಸಿಗುವಂತಾಗಲಿ ಎಂದು ಹಾರೈಸುತ್ತೇನೆ.



ಶ್ರೀಮತಿ ರೂಪಾಲಿ ನಾಯ್ಕ ಅವರ ಪುತ್ರ ಪರ್ಬತ್ ನಾಯ್ಕರಿಂದ ಶ್ರೀ ಯಡಿಯೂರಪ್ಪ ಜೀ ಅವರಿಗೆ ಅಭಿನಂದನೆ



ಮಾನ್ಯ ಯಡಿಯೂರಪ್ಪಜೀ ಜೊತೆ ಶ್ರೀಮತಿ ರೂಪಾಲಿ ನಾಯ್ಕ, ಪುತ್ರ ಮತ್ತು ಸೊಸೆ

ರೈತಪರ ಆಡಳಿತ ನೀಡಿದ ರೈತನಾಯಕರು

ಕೇಂದ್ರದ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ ರೈತರಿಗೆ ವಾರ್ಷಿಕವಾಗಿ ನೀಡುವ 6 ಸಾವಿರ ರೂ.ಗಳಿಗೆ ರಾಜ್ಯ ಸರ್ಕಾರದ 4 ಸಾವಿರ ರೂ. ಸೇರಿಸಿ 10 ಸಾವಿರ ನೀಡುವ ದಿಟ್ಟ ನಿರ್ಧಾರ ಕೈಗೊಂಡವರು ಯಡಿಯೂರಪ್ಪಜೀ. ಆರೋಗ್ಯ ಕರ್ನಾಟಕ, ಆರೋಗ್ಯ ಕವಚ, ಸಂಧ್ಯಾ ಸುರಕ್ಷಾ, ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ, ಆವಾಸ್ ಯೋಜನೆಗಳು ಸೇರಿದಂತೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಕೈಗೊಂಡ ಹಲವು ಯೋಜನೆಗಳನ್ನು ಜನತೆ ಈಗಲೂ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಅವರು ಜಾರಿಗೊಳಿಸಿದ ಯೋಜನೆಗಳು ಸಾರ್ವಕಾಲಿಕವಾಗಿ ಇರಬಲ್ಲಂತವು.



ಶ್ರೀಮತಿ ರೂಪಾಲಿ ಎಸ್.ನಾಯ್ಕ
ರಾಜ್ಯ ಉಪಾಧ್ಯಕ್ಷರು, ಬಿಜೆಪಿ ಹಾಗೂ ಮಾಜಿ ಶಾಸಕರು,
ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರ.

ಸಿಎಂ ಬದಲಾವಣೆ ವರಿಷ್ಠರ ತೀರ್ಮಾನ: ಸಚಿವ ಎಂಬಿಪಾ

• **ವಿಜಯಪುರ:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಷಯದ ಬಗ್ಗೆ ಕಾಂಗ್ರೆಸ್ ಪಕ್ಷದ ವರಿಷ್ಠ ಮಂಡಳಿ ತೀರ್ಮಾನ ಮಾಡುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.




ನಗರದಲ್ಲಿ ಈ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ನಲ್ಲಿ ಹೈ ಕಮಾಂಡ್ ಸುಪ್ರೀಂ ಆಗಿದ್ದು, ವರಿಷ್ಠ ಮಂಡಳಿಯಾದ ಸೋನಿಯಾ ಗಾಂಧಿ, ರಾಹುಲ್‌ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿರ್ಧಾರ ಮಾಡುತ್ತಾರೆ ಎಂದರು. ವೇಣುಗೋಪಾಲ ಹೈಕಮಾಂಡ್‌ನ ಒಂದು ಭಾಗ. ಎಲ್ಲ ನಿರ್ಣಯಪಕ್ಷದ ವರಿಷ್ಠರು ಕೈಗೊಳ್ಳುತ್ತಾರೆ ಎಂದರು. ತ.ನಾಡು ಚುನಾವಣಾ ಫಲಿತಾಂಶ ವಿಚಾರಕ್ಕೆ, ಡಿಎಂಕೆ ಜೊತೆ ನಮ್ಮ ಮೈತ್ರಿ ಇದ್ದದ್ದು ಬಿಜೆಪಿಯನ್ನು ದೂರ ಇಡಲು. ಈಗ ತ.ನಾಡಿನಲ್ಲಿ ವಿಜಯ ಅವರು ಜಾತ್ಯತೀತ ತತ್ವದ ಮೇಲೆ ಬಂದಿದ್ದಾರೆ. ಜನ ಒಂದು ಮನ್ನಣೆ, ತೀರ್ಪು ಕೊಟ್ಟಿದ್ದಾರೆ ಎಂದರು.

ಜನರ ತೀರ್ಪಿಗೆ ಬದ್ಧ

ಮತದಾರರ ತೀರ್ಪು ಹುಸಿಯಾಗಬಾರದು, ಜನರ ತೀರ್ಪಿಗೆ ನಾವು ತಲೆಬಾಗಬೇಕು. ವಿಶೇಷವಾಗಿ ಕೋಮುವಾದಿ ಶಕ್ತಿ ನಾವು ವಿರೋಧಿಸುವ ಕಾರಣ, ಇದೆಲ್ಲವನ್ನು ವಿಚಾರ ಮಾಡಿ. ಜನರ ತೀರ್ಪಿಗೆ, ಜಾತ್ಯತೀತ ನಿಲುವು ಹೊಂದಿದ ವಿಜಯ ಅವರ ಪಕ್ಷಕ್ಕೆ ನಾವು ಬೆಂಬಲ ಕೊಡುತ್ತಿದ್ದೇವೆ. ನಾವು ಯಾರಿಗೂ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಲ್ಲ. ಒಬ್ಬ ಯುವಕನಿಗೆ ಜನ ಇಷ್ಟೊಂದು ಬೆಂಬಲ ನೀಡಿದ್ದಾರೆ. ನಾವು ಇಂತಹ ಸಂದರ್ಭದಲ್ಲಿ ಅವರಿಗೆ ಬೆಂಬಲ ನೀಡದಿದ್ದರೆ ಜನ ನಮ್ಮನ್ನು ತಪ್ಪಿತಸ್ಥರನ್ನಾಗಿ ಮಾಡುತ್ತಾರೆ. ಜಾತ್ಯತೀತ ಶಕ್ತಿ ದೂರ ಇಡಲು, ಹಾಗೂ ಜನರ ತೀರ್ಪಿಗೆ ಬೆಂಬಲಿಸಲು ನಾವು ವಿಜಯ ಅವರಿಗೆ ಬೆಂಬಲ ಕೊಡುತ್ತೇವೆ ಎಂದರು.

ಸುವರ್ಣ ಮಹೋತ್ಸವ



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದಲ್ಲಿ ಗುರುವಾರ ಆಯೋಜಿಸಲಾಗಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಭಾಗವಹಿಸಿದ್ದರು. ಸುತ್ತೂರು ಶ್ರೀಗಳು ಇದ್ದರು.

ಪರಾಜಿತ ಕೈ ಅಭ್ಯರ್ಥಿ ಟಿ.ಡಿ. ರಾಜೇಗೌಡ ಆಗ್ರಹ

ಅಂಚೆ ಮತ ಮತ್ತೆ ಎಣಿಕೆಯಾಗಲಿ

• **ಬೆಂಗಳೂರು:** ಅಂಚೆ ಮತಗಳನ್ನು ತಿದ್ದಿರುವ ಅನುಮಾನ ಇರುವುದರಿಂದ ಅದರ ನ್ಯಾಯಯುತ ತನಿಖೆಯಾಗಬೇಕು, ಅಂಚೆ ಮತಗಳನ್ನು ಮರುಎಣಿಕೆ ಮಾಡಬೇಕು ಎಂದು ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆಮತ ಮರು ಎಣಿಕೆಯಲ್ಲಿ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಆಗ್ರಹಿಸಿದ್ದಾರೆ.



ಗುರುವಾರ ರಾಜ್ಯ ಮುಖ್ಯ ಚುನಾವಣಾಧಿಕಾರಿಯನ್ನು ಭೇಟಿಯಾಗಿ ಈ ಕುರಿತು ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಅವರು, 2023ರ ಚುನಾವಣೆ ಮತ ಎಣಿಕೆಯ ವೇಳೆ ಜೆಡಿಎಸ್ ಕಾಂಗ್ರೆಸ್, ಬಿಜೆಪಿ, ಪಕ್ಷೇತರರ ಅಭ್ಯರ್ಥಿಗಳ ಕೌಂಟಿಂಗ್ ಏಜೆಂಟ್ ಇದ್ದರು. ಪಾರದರ್ಶಕವಾಗಿ ಮತ ಎಣಿಕೆ ಆಗಿತ್ತು. ಮತ ಎಣಿಕೆ ಬಳಿಕ ರಾಜೇಗೌಡ ಗೆದ್ದರು ಎಂದು ಘೋಷಣೆ ಮಾಡಿದ್ದರು. ಅಂಚೆ ಮತಗಳಲ್ಲಿ ಸಿಂಧು ಯಾವುದು, ಅಸಿಂಧು ಯಾವುದು ಎಂದು ಎಲ್ಲರಿಗೂ ತೋರಿಸಿದ್ದರು. ಆಗ ಯಾವುದೇ ಏಜೆಂಟರು ಆಕ್ಷೇಪ ವ್ಯಕ್ತಪಡಿಸದೇ ಸಹಿ ಮಾಡಿದ್ದರು ಎಂದರು.

ಬಳಿಕ ನನ್ನ ವಿರುದ್ಧ ಎಲೆಕ್ಷನ್ ಪಿಟಿಶನ್ ಹಾಕಿ, ಅನೇಕ ಆರೋಪ ಮಾಡಿದರು. ಈ ಹಿನ್ನೆಲೆ ಮರು ಎಣಿಕೆಗೆ ಉಚ್ಚ ನ್ಯಾಯಾಲಯ ಆದೇಶ ಮಾಡಿತ್ತು. ನ್ಯಾಯಾಲಯ ಅಂಚೆಮತಗಳನ್ನು ಮರು ಎಣಿಕೆ ಮಾಡಲು ಹೇಳಿತು. ಮರು ಎಣಿಕೆ ವೇಳೆ ಬಂಡಲ್ ಅಸಿಂಧು ಆಗಿದೆ. ಮತಗಳನ್ನು ತಿದ್ದಲಾಗಿದೆ ಎನ್ನುವುದು ನಮ್ಮ ಅನುಮಾನ. ನ್ಯಾಯಯುತ ತನಿಖೆ ಆಗಲಿ ಎಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದೇವೆ. ಕೇಂದ್ರ ಚುನಾವಣಾ ಆಯೋಗಕ್ಕೆ ಮನವಿ ಕಳುಹಿಸುತ್ತೇವೆ ಎಂದು ಹೇಳಿದ್ದಾರೆ. ಯಾವ ಪಕ್ಷದವರಿಗೂ ಈ ರೀತಿಯ ಅನ್ಯಾಯ ಆಗಬಾರದು. ಚುನಾವಣಾ ಆಯೋಗದ ಮೇಲೆ ನಂಬಿಕೆ ಇದೆ ಎಂದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ, ವಿಧಾನ ಪರಿಷತ್ ಸದಸ್ಯೆ ಆರತಿ ಕೃಷ್ಣ ರಾಜೇಗೌಡ ಅವರ ಏಜೆಂಟ್ ಆಗಿದ್ದ ಸುಧೀರ್ ಕುಮಾರ್ ಮುರೊಳಿ ಇದ್ದರು.

ಕಿರುಸುದ್ದಿ

ಸಚಿವರಿಂದ ತುರ್ತು ಕಾರ್ಯಾಚರಣೆ ಕೇಂದ್ರ

• **ಬೆಂಗಳೂರು:** ಹೆಲ್ತ್ ಎಮರ್ಜೆನ್ಸಿ ಆಪರೇಷನ್ ಸೆಂಟರ್ (ಎಚ್‌ಇಓಸಿ) ತುರ್ತು ಸಮಯದಲ್ಲಿ ಸಮಯೋಚಿತ ನಿರ್ಧಾರ, ಸಂಪನ್ಮೂಲಗಳ ಸರಿಯಾದ ಬಳಕೆಗೆ ಮತ್ತು ಜನರಿಗೆ ಸರಿಯಾದ ಮಾಹಿತಿಯನ್ನು ತಲುಪಿಸಿ, ಆತಂಕಕ್ಕೆ ಒಳಗಾಗದಂತೆ ಎಚ್ಚರಿಸಲು ಕೇಂದ್ರೀಯ ನಿಯಂತ್ರಣ ಘಟಕವಾಗಿ ಕೆಲಸ ನಿರ್ವಹಿಸಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿ ದರು.



ಗುರುವಾರ ನಗರದ ಆರೋಗ್ಯಸೌಧದಲ್ಲಿ ಆರೋಗ್ಯ ತುರ್ತು ಕಾರ್ಯಾಚರಣೆ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ, ಕೋವಿಡ್ ಸಂದರ್ಭದಲ್ಲಿ ಉಂಟಾದ ಸಮನ್ವಯದ ಕೊರತೆ ನೀಗಿಸಲು ಈ ವ್ಯವಸ್ಥೆ ಅತ್ಯವಶ್ಯಕ ವಾಗಿದ್ದು ಸಾಂಕ್ರಾಮಿಕ ರೋಗಗಳು, ಬೆಂಕಿ ಅವಘಡಗಳು, ಪ್ರಕೃತಿ ವಿಕೋಪ ಮುಂತಾದವುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಡಬ್ಲ್ಯುಎಚ್‌ಒ ಮಾರ್ಗದರ್ಶನದಂತೆ, ಪ್ರಧಾನಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲ ಸೌಕರ್ಯ ಮಿಷನ್ ಅಡಿಯಲ್ಲಿ ಪ್ರತಿ ರಾಜ್ಯದಲ್ಲೂ ಕಮಾಂಡ್ ಕಂಟ್ರೋಲ್ ರೂಂ ಮಾಡಲಾಗುತ್ತಿದೆ ಎಂದರು. ಕೇವಲ ಆರೋಗ್ಯ ಇಲಾಖೆ ಮಾತ್ರವಲ್ಲ, ತುರ್ತು ಸಂದರ್ಭಗಳಲ್ಲಿ ಕಂದಾಯ, ವಿಪತ್ತು ನಿರ್ವಹಣಾ ಪ್ರಾಧಿಕಾರ, ಪೊಲೀಸ್, ಅಗ್ನಿಶಾಮಕ ಸೇವೆ ಮುಂತಾದವು ಗಳ ಸಮನ್ವಯದಿಂದ ಪರಿಸ್ಥಿತಿ ನಿರ್ವಹಿಸಲು ಇದು ಸಹಕಾರಿ ಆಗಲಿದೆ. ದಿನದ 24/7 ಕಾರ್ಯನಿರ್ವಹಿಸುವ ಈ ಕೇಂದ್ರ ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಸೇವೆಗಳು ಇವುಗಳೊಂದಿಗೆ ತಕ್ಷಣ ಸಂಪರ್ಕ ಸಾಧಿಸಿ ಮಾಹಿತಿ ವಿನಿಮಯ ಮತ್ತು ಸೂಕ್ತ ನಿರ್ದೇಶನ ನೀಡಲು ನೆರವಾಗಲಿದೆ. ಒಟ್ಟಾರೆ ಇದೊಂದು ಅತ್ಯಾಧುನಿಕ ಆರೋಗ್ಯ ತುರ್ತು ಪರಿಸ್ಥಿತಿ ನಿರ್ವಹಣಾ ಘಟಕವಾಗಿ ಕಾರ್ಯ ನಿರ್ವಹಿಸಲಿದೆ ಎಂದು ತಿಳಿಸಿದರು. ಈ ವೇಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ, ಆಯುಕ್ತ ಗುರುದತ್ ಹೆಗಡೆ, ಅವಿನಾಶ್ ಮೆನನ್ ಇದ್ದರು.

ಆದಿದ್ವಾರ ಅಪ್ಲಿಕೇಶನ್ ಬಿಡುಗಡೆ

• **ಬೆಂಗಳೂರು:** ಅಸಿಸ್ಟೆಕ್ ಫೌಂಡೇಶನ್ (ಎಟಿಎಫ್) ಸಹಯೋಗದಲ್ಲಿ ವಿಶೇಷಚೇತನರಿಗೆ ಉದ್ಯೋಗ ಅವಕಾಶ ಮತ್ತು ಕೌಶಲಾಭಿವೃದ್ಧಿಗೆ ಆದ್ಯತೆ ನೀಡಲು ಅವಕಾಶ ಒದಗಿಸುವ ಆದಿದ್ವಾರ ಅಪ್ಲಿಕೇಶನ್ ಅನ್ನು ಗುರುವಾರ ವಿಕಾಸಸೌಧದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ್ ಅವರು ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಸಚಿವರು, ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ವಿಶೇಷ ಚೇತನರಿಗೆ (ಪಿಡಬ್ಲ್ಯುಡಿಗಳು) ವಿಶೇಷ ಉದ್ಯೋಗ ಮೇಳವನ್ನು ಆಗಸ್ಟ್‌ನಲ್ಲಿ ನಡೆಸಲಾಗುವುದು ಎಂದು ಘೋಷಿಸಿದರು. ವಿಕಲಚೇತನರು ಯಾರಿಗೂ ಕಡಿಮೆ ಇಲ್ಲ. ಅವರಿಗೆ ವಿಶೇಷ ಪ್ರತಿಭೆ ಇರುತ್ತದೆ. ಕಾರ್ಪೊರೇಟ್ ಸಂಸ್ಥೆಗಳು ನೇಮಕಾತಿಯ ಸಮಯದಲ್ಲಿ ಅವರಿಗೆ ಸಮಾನ ಅವಕಾಶ ಮತ್ತು ಚಿಕಿತ್ಸೆಯನ್ನು ನೀಡಬೇಕು ಎಂದು ಹೇಳಿದರು.

ಆದಿದ್ವಾರ ವೇದಿಕೆಯು ಉದ್ಯೋಗಾವಕಾಶಗಳು, ಇಂಟರ್ನ್‌ಶಿಪ್‌ಗಳು, ಕೌಶಲ ಮತ್ತು ಕೌಶಲಾಭಿವೃದ್ಧಿ ಕಾರ್ಯಕ್ರಮಗಳಿಗೆ ವೇದಿಕೆ ಕಲ್ಪಿಸುತ್ತದೆ. ಉದ್ಯೋಗದಾತರು ಸಮಗ್ರ ಉದ್ಯೋಗ ಪಾತ್ರಗಳನ್ನು ಪೋಸ್ಟ್ ಮಾಡಲು ಮತ್ತು ವೈವಿಧ್ಯಮಯ ಪ್ರತಿಭಾ ಪೂಲ್ ನಿರ್ಮಿಸಲು ನೆರವಾಗಲಿದೆ. ಎಐ ಚಾಲಿತ ಉದ್ಯೋಗ ಚಾಲಿತ ಹೊಂದಾಣಿಕೆ, ಇಂಜಿನ್ ಕೌಶಲಗಳು, ಆಸಕ್ತಿಗಳು ಮತ್ತು ಅವಶ್ಯಕತೆಗಳನ್ನು ಸೂಕ್ತವಾಗಿ ಕಲ್ಪಿಸಲಿದೆ ಎಂದರು. ಇದೇ ವೇಳೆ ಸಚಿವ ಡಾ. ಪಾಟೀಲ್ ಅವರು ಮುಂಬರುವ ಉದ್ಯೋಗ ಮೇಳದ ಅಧಿಕೃತ ಲೋಗೋವನ್ನು ಸಹ ಅನಾವರಣಗೊಳಿಸಿದರು.

ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಸಲಹೆ

ಬಂಧುತ್ವ ನೆಲೆಗೊಳ್ಳಬೇಕು

• **ಮೈಸೂರು:** ಭಾಷೆ, ಜಾತಿ, ಪಂಗಡಗಳನ್ನು ಮೀರಿ ಬಂಧುತ್ವ ನೆಲೆಗೊಳ್ಳಬೇಕು ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಹೇಳಿದರು.

ಗುರುವಾರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಸುತ್ತೂರು ಮಠದಲ್ಲಿ ನಡೆದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸದಲ್ಲಿ ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ ಕುರಿತು ವಿಷಯ ಮಂಡಿಸಿ ಬಳಿಕ ನಡೆದ ಪ್ರಶ್ನೋತ್ತರದಲ್ಲಿ ಮಾತನಾಡಿ, ಅಸ್ಪೃಶ್ಯತೆ ಮತ್ತು ಇದರ ವಿರುದ್ಧ ಹೋರಾಟ ನಡೆಸುವುದು ಪಾಶ್ಚಾತ್ಯ ಪರಿಕಲ್ಪನೆಯಾಗಿದೆ. ಆದರೆ, ಭಾರತೀಯರು ಭ್ರಾತೃತ್ವ ಮತ್ತು ಪರಸ್ಪರ ಸಹಾಯದೊಂದಿಗೆ ನಾಗರಿಕತೆ ಕಟ್ಟಿದ್ದಾರೆ. ನಮ್ಮ ಸಮಾಜವು, ಪರೋಪಕಾರವೇ ಸೇವೆ, ಕರ್ತವ್ಯವೇ ಜೀವನದ ಪರಮ ಗುರಿಯೆಂದು ತಿಳಿದಿದೆ ಎಂದು ವಿವರಿಸಿದರು.

ಪಾಶ್ಚಾತ್ಯ ದೇಶಗಳಲ್ಲಿ ಸೋಷ್ಯಟಿ ಎಂಬ ಪರಿಕಲ್ಪನೆ ಸಾಮಾಜಿಕ ಒಪ್ಪಂದದ ಸಿದ್ಧಾಂತದ ಮೇಲೆ ನಿರ್ಮಾಣವಾಗಿದೆ. ಅಲ್ಲಿ ಜನರು ಪರಸ್ಪರ ಸಹಕಾರ ಮತ್ತು ಲಾಭದ ಉದ್ದೇಶದಿಂದ ಒಟ್ಟಿಗೆ ಬದುಕುತ್ತಾರೆ. ಆದರೆ, ಭಾರತೀಯ ಸಮಾಜದ ಪರಿಕಲ್ಪನೆ ಅದಕ್ಕಿಂತ ಭಿನ್ನವಾಗಿದೆ. ಭಾರತದಲ್ಲಿ ಸಮಾಜವೆಂದರೆ ಕೇವಲ ಜನರ ಗುಂಪು ಅಥವಾ ಒಪ್ಪಂದದ ಆಧಾರದ ಮೇಲೆ ನಿರ್ಮಾಣವಾದ ವ್ಯವಸ್ಥೆಯಲ್ಲ, ದೀರ್ಘಕಾಲ ಒಟ್ಟಿಗೆ ಬದುಕಿ, ಪರಸ್ಪರ ಆತ್ಮೀಯತೆ, ಒಂದೇತನದ ಭಾವನೆ ಹಾಗೂ ಸಾಮೂಹಿಕ ಗುರಿಯನ್ನು ಹೊಂದಿರುವ ಜನರ ಸಮೂಹವೇ ಸಮಾಜ. ಕುಟುಂಬದಿಂದ ಆರಂಭವಾಗುವ ಈ ಒಗ್ಗಟ್ಟು ಪರಿಸರ, ಸಂಸ್ಕೃತಿ ಮತ್ತು ಜೀವನ ಮೌಲ್ಯಗಳ ಮೂಲಕ ವಿಸ್ತಾರಗೊಳ್ಳುತ್ತದೆ ಎಂದರು.



ನೀವು ನನಗೆ ಉಪಕಾರ ಮಾಡಿದರೂ ಮಾಡದಿದ್ದರೂ ನೀವು ನನ್ನವರೇ. ಆದ್ದರಿಂದ ನಾನು ಮಾಡುವ ಪ್ರತಿಯೊಂದು ಕಾರ್ಯವೂ ಇತರರ ಹಿತಕ್ಕಾಗಿ ಇರಬೇಕು ಎಂಬುದು ಭಾರತೀಯ ಸಮಾಜದ ಮೂಲ ಭಾವನೆ. ಪರೋಪಕಾರ ಮತ್ತು ಸೇವೆಯ ಮೌಲ್ಯಗಳೊಂದಿಗೆ ಉನ್ನತ ಜೀವನ ಸಾಧಿಸುವುದೇ ಭಾರತೀಯ ಸಮಾಜದ ಗುರಿಯಾಗಿದೆ ಎಂದು ತಿಳಿಸಿದರು.

ದೇಶದಲ್ಲಿ ಜನಸಂಖ್ಯೆ ಮಿತಿ ಮೀರಿ ಬೆಳೆಯುತ್ತಿದೆ. ಜನಸಂದಣಿ, ವಾಹನಗಳ ಸಂದಣಿ ಹೆಚ್ಚಾಗುತ್ತಿದ್ದು, ಅನೇಕ ದುಷ್ಪರಿಣಾಮಗಳನ್ನು ಬೀರುತ್ತಿದೆ. ಹಾಗಾಗಿ ಜನಸಂಖ್ಯೆ ನಿಯಂತ್ರಣವೇ ನಮ್ಮ ಮೊದಲ ಆದ್ಯತೆಯಾಗಬೇಕು. ಕುಟುಂಬ ಕಲ್ಯಾಣ ಯೋಜನೆಯನ್ನು ಬಹಳ ಕಟ್ಟು ನಿಟ್ಟಾಗಿ ಜಾರಿಗೆ ತರಬೇಕು. ಜನರು ಕೂಡ ಜಾಗೃತರಾಗಿ ಸಹಕರಿಸಬೇಕು. ಪಾಲಿಸಿಯನ್ನು ಎಲ್ಲರೂ ಪಾಲಿಸಬೇಕು, ಯಾರಿಗೂ ಕೂಡ ವಿನಾಯಿತಿಯನ್ನು ನೀಡಬಾರದು. ಯುವ ಸಮೂಹ ಜನಸಂಖ್ಯೆ ಸ್ಫೋಟದ ದುಷ್ಪರಿಣಾಮ ಬಗ್ಗೆ ಚಿಂತಿಸಬೇಕು. ಏರುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸದಿದ್ದರೆ ಭವಿಷ್ಯದಲ್ಲಿ ಅನೇಕ ಸಮಸ್ಯೆಗಳು, ಕೊರತೆಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಷ್ಟ್ರವೆಂದರೆ ಕೇವಲ ರಾಜಕೀಯ ವ್ಯವಸ್ಥೆ ಅಥವಾ ಭೌಗೋಳಿಕ ಗಡಿಯಲ್ಲ. ಭೂಮಿ, ಜನರು, ಸಂಸ್ಕೃತಿ ಮತ್ತು ಸಾಮೂಹಿಕ ಚೇತನವೇ ರಾಷ್ಟ್ರದ ಮೂಲ ಅಂಶಗಳಾಗಿವೆ. ಭಾರತದಲ್ಲಿ ವಿವಿಧ ಆಡಳಿತ ವ್ಯವಸ್ಥೆಗಳು ಮತ್ತು ರಾಜ್ಯಗಳು ಇದ್ದರೂ ದೇಶದ ಏಕತೆಯ ಭಾವನೆ ಭೂಮಿಯೊಂದಿಗೆ ಹೊಂದಿರುವ ಆತ್ಮೀಯ ಸಂಬಂಧದಿಂದಲೇ ರೂಪುಗೊಂಡಿದೆ ಎಂದು ಹೇಳಿದರು. ಭಾರತೀಯ ಸಮಾಜದ ಮೂಲಭೂತ ತತ್ವ ಅಂತರಂಗದಲ್ಲಿ ಏಕತೆ ಸಾಧಿಸುವುದೇ ಆಗಿದೆ. ಮಾನವ, ಸಮಾಜ, ಸೃಷ್ಟಿ ಪರಸ್ಪರ ಸಂಬಂಧ ಹೊಂದಿವೆ. ಮನುಷ್ಯ ಕೇವಲ ದೇಹ ಅಥವಾ ಮನಸ್ಸಲ್ಲ. ಆತ್ಮ ಎಂಬ ಶಕ್ತಿಯು ಇವೆಲ್ಲವನ್ನೂ ಒಂದಾಗಿ ಕಟ್ಟುತ್ತದೆ ಎಂದರು.

ಏನಾಸಂ ಜಾರಿಯಾಗಲಿ

ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕಾಗಿದೆ. ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕಾಗಿದೆ. ಇದನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೊಳಿಸಬೇಕು. ಈಗಾಗಲೇ ಹಲವು ರಾಜ್ಯಗಳಲ್ಲಿ ಜಾರಿಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಉಳಿದ ರಾಜ್ಯಗಳಲ್ಲೂ ಜಾರಿ ಬರುವ ವಿಶ್ವಾಸವಿದೆ ಎಂದರು. ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಯವರು ಮಾತನಾಡಿದರು.

ತ.ನಾಡು ರಾಜ್ಯಪಾಲರ ನಡೆಗೆ ಡಿಕೆಶಿ ಖಂಡನೆ

• **ಬೆಂಗಳೂರು:** ಟಿವಿಕೆ ಪಕ್ಷದಿಂದ ಅತಿ ಹೆಚ್ಚು ಶಾಸಕರು ಆಯ್ಕೆಯಾಗಿರುವುದರಿಂದ ವಿಜಯ್ ಅವರಿಗೆ ಸರ್ಕಾರ ರಚನೆ ಮಾಡಿ ಬಹುಮತ ಸಾಬೀತುಪಡಿಸುವುದನ್ನು ತಡೆಯಲು ತಮಿಳುನಾಡಿನ ರಾಜ್ಯಪಾಲರಿಗೆ ಯಾವುದೇ ರೀತಿಯ ಅಧಿಕಾರವಿಲ್ಲ. ರಾಜ್ಯಪಾಲರ ನಡೆ ಸರಿಯಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.



ಗುರುವಾರ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿವಿಕೆ ಪಕ್ಷಕ್ಕೆ ತ.ನಾಡು ರಾಜ್ಯಪಾಲರು ಬಹುಮತ ಸಾಬೀತಿಗೆ ಅವಕಾಶ ನೀಡದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ರಾಜ್ಯ ಪಾಲರು ಸರ್ಕಾರ ರಚನೆಗೆ ಅವಕಾಶ ನೀಡಬೇಕು. ಕರ್ನಾಟಕದಲ್ಲಿ ಯಡಿಯೂರಪ್ಪ ಅವರಿಗೆ ರಾಜ್ಯಪಾಲರು ಅನುಮತಿ ನೀಡಿದ್ದರು.

ಹೆಚ್ಚು ಸ್ಥಾನ ಗಳಿಸಿದ ಪಕ್ಷಗಳಿಗೆ ಸರ್ಕಾರ ರಚಿಸಲು ಈ ಹಿಂದೆಯೂ ಅನುಮತಿ ನೀಡಲಾಗಿತ್ತು. ರಾಷ್ಟ್ರಪತಿಗಳಾಗಿದ್ದ ನಾರಾಯಣನ್, ಅಬ್ದುಲ್ ಕಲಾಂ ಅವರೂ ಈ ರೀತಿ ಮಾಡಿದ್ದರು. ವಾಜಪೇಯಿ ಅವರಿಗೂ ಸಹ ಇದೇ ರೀತಿ ಸರ್ಕಾರ ರಚಿಸಲು ಅನುಮತಿ ನೀಡಿ ಸದನದಲ್ಲಿ ಬಹುಮತ ಸಾಬೀತಿಗೆ ಅವಕಾಶ ನೀಡ ಲಾಗಿತ್ತು. ಆದರೆ ಈಗ ಟಿವಿಕೆಗೆ ಅವಕಾಶ ನೀಡದಿರುವುದು ತಪ್ಪು ಎಂದರು.

ಜನರ ಭಾವನೆಗಳಿಗೆ ಬೆಲೆ ಕೊಡಿ: ಮೊದಲು ಬಹುಮತ ಸಾಬೀತಿಗೆ ಅವಕಾಶ ನೀಡಬೇಕು. ಒಂದು ರಾಜ್ಯದ ಜನರ ಭಾವನೆಗಳಿಗೆ ಬೆಲೆ ಕೊಡಬೇಕು. ಇದು ಪ್ರಜಾಪ್ರಭುತ್ವ. ಒಂದು ಮತದಿಂದ ಬಹುಮತ ಬರಬಹುದು, ಕಳೆದುಕೊಳ್ಳಬಹುದು. ವಾಜಪೇಯಿ ಅವರಿಗೆ ಇದೇ ರೀತಿ ಆಗಲಿಲ್ಲವೇ? ಒಂದೊಮ್ಮೆ ಬಹುಮತ ಸಾಬೀತು ಆಗದೇ ಹೋದರೆ ಮುಂದಿನ ಆಯ್ಕೆ ನೋಡಬಹುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಹೊಸ ಪಾಲಿಕೆ ಕಚೇರಿ ಸ್ಥಳ ಪರಿಶೀಲನೆ

ಬೆಂಗಳೂರು ಉತ್ತರ ಪಾಲಿಕೆಯ ಹೊಸ ಕಚೇರಿ ನಿರ್ಮಾಣ ಮಾಡಬೇಕು ಎಂದು ಮೂರು- ನಾಲ್ಕು ಸ್ಥಳಗಳ ಪ್ರಸ್ತಾವನೆಯಿದೆ. ಸ್ಥಳ ಪರಿಶೀಲನೆ ಮಾಡಿ ನಿರ್ಧಾರ ಮಾಡಬೇಕಿದೆ. ಇದರ ಬಗ್ಗೆ ಮಂತ್ರಿಗಳು, ಶಾಸಕರು ತಮ್ಮದೇ ಆದ ಅಭಿಪ್ರಾಯ ನೀಡಿದ್ದಾರೆ. ಸ್ಥಳ ಪರಿಶೀಲನೆ ನಂತರ ತೀರ್ಮಾನ ಮಾಡಲಾಗುವುದು. ಜಿಕೆವಿಕೆಯಲ್ಲಿ ನಿರ್ಮಾಣ ಮಾಡಲಾಗುವುದೇ ಎಂದಾಗ, ಇಲ್ಲ, ಸದ್ಯಕ್ಕೆ ಆ ಆಲೋಚನೆ ಇಲ್ಲ. ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಉತ್ತರಿಸಿದರು.

ಬಿಜೆಪಿಗೆ ಅಭೂತಪೂರ್ವ ಜಯ

• **ಬೆಂಗಳೂರು:** ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವವಾದ ಜಯ ಸಿಕ್ಕಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ದೊಡ್ಡ ಮಟ್ಟದಲ್ಲಿ ಜನರು ಆಶೀರ್ವಾದ ಮಾಡಿ ದ್ದಾರೆ. ಆ ರಾಜ್ಯದಲ್ಲಿ ಟಿಎಂಸಿ ಆಡಳಿತ ದಲ್ಲಿ ಜನರು ನರಕಯಾತನೆ ಅನುಭವಿ ಸುತ್ತಿದ್ದರು. ಆ ನರಕದಿಂದ ಜನರನ್ನು ಮೋದಿ ಹೊರ ತಂದಿದ್ದಾರೆ. ಈ ಬಾರಿಯೂ ಬಿಜೆಪಿ ಗೆಲ್ಲದೇ ಇದ್ದಿದ್ದರೆ ಅಲ್ಲಿನ ಜನರ ಸ್ಥಿತಿ ಏನಾಗುತ್ತಿತ್ತು ಎಂದು ಊಹಿಸಿ ಎಂದು ಎಂದು ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.



ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ನಮ್ಮ ಪಕ್ಷಕ್ಕೆ ಜನ ಬೆಂಬಲ ನೀಡಿದ್ದಾರೆ. ತಮಿಳುನಾಡು ಮತ್ತು ಕೇರಳದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರ ಬೆಂಬಲದಿಂದ ಮತಬ್ಯಾಂಕ್ ಹೆಚ್ಚಿಸಿಕೊಂಡಿದ್ದೇವೆ. ಅಲ್ಲಿ ಮುಂದಿನ ಚುನಾವಣೆಯಲ್ಲಿ ಎಲ್ಲಾ ಪಕ್ಷಗಳಂತೆ ಬಿಜೆಪಿ ಶಕ್ತಿ ಹೆಚ್ಚಲಿದೆ. ಸ್ವತಂತ್ರ ಸರ್ಕಾರ ಮಾಡುವ ಶಕ್ತಿ ಯನ್ನು ಜನರು ಕೊಡುತ್ತಾರೆ. ಕೇರಳದಲ್ಲಿ ಕಾಂಗ್ರೆಸ್, ಯುಡಿಎಫ್ 7 ಪಕ್ಷಗಳ ಜೊತೆಗೂಡಿದೆ. ತುಂಡು ತುಂಡು ಪಕ್ಷ ಸೇರಿ ಖಿಚಡಿ ಪಕ್ಷ ಆಗಿದೆ ಎಂದು ಗೇಲಿ ಮಾಡಿದರು.

ಪಂಚರಾಜ್ಯ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ವರ್ಗದ ಜನ ಹೆಚ್ಚಿನ ಪ್ರಮಾಣದಲ್ಲಿ ಬಿಜೆಪಿಗೆ ಬೆಂಬಲ ನೀಡಿದ್ದಾರೆ. ಆದರೆ, ಕಾಂಗ್ರೆಸ್‌ಗೆ ಮುಸ್ಲಿಮರು ಸಾಕಷ್ಟು ಬೆಂಬಲ ಕೊಟ್ಟಿದ್ದಾರೆ. ಕಾಂಗ್ರೆಸ್ ಮುಸ್ಲಿಮರನ್ನು ದಾರಿ ತಪ್ಪಿಸಿ ಬಿಜೆಪಿ ಗುಮ್ಮ ತೋರಿಸುತ್ತಾ ಬಂದಿದೆ. ಮುಸ್ಲಿಮರು ಇಲ್ಲದಿದ್ದರೆ ಕಾಂಗ್ರೆಸ್ ಇಲ್ಲ. ಪಶ್ಚಿಮ ಬಂಗಾಳದಲ್ಲೂ ಬಿಜೆಪಿ ಪರಿಶಿಷ್ಟ ಜಾತಿ, ವರ್ಗಗಳಿಗೆ ಅವಕಾಶ ನೀಡಿದೆ ಎಂದರು.

ಸಂವಿಧಾನಕ್ಕೆ ಮಮತಾ ಬ್ಯಾನರ್ಜಿ ಅಗೌರವ

ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ರಾಜೀನಾಮೆ ನೀಡುವುದಿಲ್ಲ ಎನ್ನುವ ಮೂಲಕ ಸಂವಿಧಾನಕ್ಕೆ ಅಗೌರವ ತೋರಿದ್ದಾರೆ. ಅವರಿಗೆ ಸಮಸ್ಯೆ ಇದ್ದರೆ ನ್ಯಾಯಾಲಯದ ಮೊರೆ ಹೋಗಬೇಕೇ ಹೊರತು ಕೊಲೆ ಮಾಡಿಸಬಾರದು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗುರುವಾರ ಸುದ್ದಿಗಾರ ರೊಂದಿಗೆ ಮಾತ ನಾಡಿ, ಮಮತಾ ಬ್ಯಾನರ್ಜಿ ಸಂವಿಧಾನಕ್ಕೆ ಅಗೌರವ ತೋರಿದ್ದಾರೆ. ತಮ್ಮನ್ನು ವಜಾ ಮಾಡಿ ಕಳುಹಿಸಲಿ, ಆದರಿಂದ ಹೊಸ ನಾಟಕ ನಡೆಯಲಿ ಎಂದೇ ಅವರು ಬಯಸುತ್ತಿದ್ದಾರೆ. ಅವರಿಗೆ ಕಾನೂನು, ಸಂವಿಧಾನ ಎಂಬುದು ಗೊತ್ತಿಲ್ಲ. ಮುಖ್ಯಮಂತ್ರಿ ಕುರ್ಚಿಗೆ ಅವರು ಫೆವಿಕಾಲ್ ಹಾಕಿಕೊಂಡು ಕೂತಿದ್ದಾರೆ. ಮಾನ ಮರ್ಯಾದೆ ಇರುವ ಯಾವುದೇ ಮುಖ್ಯಮಂತ್ರಿ ರಾಜೀನಾಮೆ ಕೊಟ್ಟು ನಿರ್ಗಮಿಸುತ್ತಾರೆ ಎಂದು ಹೇಳಿದರು.

ಸಾಹಿತ್ಯ ಹಬ್ಬ


• **ಶಿವಮೊಗ್ಗ:** ಅಭಿವ್ಯಕ್ತಿ ಟ್ರಸ್ಟ್‌ನಿಂದ ಮೇ 9 ಮತ್ತು 10ರಂದು ಕರ್ನಾಟಕ ಸಂಘದಲ್ಲಿ ಶಿವಮೊಗ್ಗ ಸಾಹಿತ್ಯ ಹಬ್ಬ – 2026 (ಶಿವಮೊಗ್ಗ ಲಿಟ್ ಫೆಸ್ಟ್) ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಡಾ.ಸುಧೀಂದ್ರ ಪಿ.ಆರ್. ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಇದೊಂದು ವಿಶಿಷ್ಟ ರೀತಿಯ ಸಾಹಿತ್ಯ ಕಾರ್ಯಕ್ರಮವಾಗಿದೆ. ಈ ಸಾಹಿತ್ಯಹಬ್ಬದಲ್ಲಿ ಚರ್ಚಾಗೋಷ್ಠಿಗಳು, ಸಾಹಿತ್ಯ ಸಂವಾದ, ಕವಿಗೋಷ್ಠಿ, ಲೇಖಕರೊಂದಿಗೆ ಸಂವಾದ, ಪುಸ್ತಕ ಮಾರಾಟ, ಕೇಳುಗರೊಂದಿಗೆ ಮಾತು. ಈ ರೀತಿಯ ಕಾರ್ಯಕ್ರಮಗಳು ಆಯೋಜನೆಯಾಗಿವೆ ಎಂದರು. ಮೇ 9ರಂದು ಸಂಜೆ ಉದ್ಘಾಟನಾ ಗೋಷ್ಠಿ–1ರಲ್ಲಿ ಭಾರತೀಯ ಸಾಹಿತ್ಯದಲ್ಲಿ ರಸಧ್ವನಿ ಔಚಿತ್ಯ ಕಾರ್ಯಕ್ರಮವಿರುತ್ತದೆ. ಸಂವಾದನಾಕಾರರಾಗಿ ಡಾ.ಎಸ್. ಆರ್. ಲೀಲಾ, ಪತ್ರಕರ್ತ ಸೂರ್ಯ ಪ್ರಕಾಶ್ ಪಂಡಿತ್ ಭಾಗವಹಿಸುತ್ತಾರೆ. ಸಂಜೆ 7 ಗಂಟೆಗೆ ನಾದೋಲ್ಲಾಸ ವಿಶೇಷ ವಯಲಿನ್ ಕಾರ್ಯಕ್ರಮವಿರುತ್ತದೆ. ಭಾನುವಾರ ಬೆಳಗ್ಗೆ 10 ಗಂಟೆಗೆ ಗೋಷ್ಠಿ–2ರಲ್ಲಿ ಕುವೆಂಪು ಸಾಹಿತ್ಯದಲ್ಲಿ ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆಯ ಸಮನ್ವಯತೆ ಕುರಿತು ಸಂವಾದ ಇದೆ ಎಂದರು.

ರಾಜಕೀಯಕ್ಕೆ ವಿದಾಯ ಹೇಳಿದ ವಿಶ್ವನಾಥ್

• **ಮೈಸೂರು:** ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಚುನಾವಣಾ ರಾಜಕೀಯಕ್ಕೆ ಗುಡ್ ಬೈ ಹೇಳಿದ್ದಾರೆ.

ಗುರುವಾರ ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, 50 ಕೋಟಿ ಖರ್ಚು ಮಾಡಿ ಚುನಾವಣೆ ಎದುರಿಸುವಷ್ಟು ಶಕ್ತಿ ನನ್ನಲ್ಲಿ ಇಲ್ಲ. ಹಾಗಾಗಿ ಮುಂದೆ ಯಾವ ಚುನಾವಣೆಗೂ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದರು. ನಾನು ಹಲವು ಬಾರಿ ಚುನಾವಣೆ ಎದುರಿಸಿದಾಗ ಜನರೇ ಹಣ ನೀಡಿ ಆಶೀರ್ವಾದ ಮಾಡಿದ್ದರು. ಈಗ ಹಣ ನೀಡಿ ಚುನಾವಣೆ ಎದುರಿಸುವ ಪರಿಸ್ಥಿತಿ ಇದೆ. ಹೀಗಾಗಿ ಚುನಾವಣಾ ರಾಜಕಾರಣಕ್ಕೆ ವಿದಾಯ ಹೇಳುತ್ತಿದ್ದೇನೆ. ಆದರೆ ರಾಜಕೀಯದಲ್ಲಿ ಇರುತ್ತೇನೆ ಎಂದು ಸ್ಪಷ್ಟಪಡಿಸಿದರು.



ರಾಮಚಂದ್ರರಾವ್ ಮೇಲಿನ ಅಮಾನತು ಆದೇಶ ರದ್ದು ಮಾಡಿದ್ದು ಸರಿಯಲ್ಲ; ಹಿರಿಯ ಪೊಲೀಸ್ ಅಧಿಕಾರಿ ರಾಮಚಂದ್ರರಾವ್ ಅವರ ಮೇಲಿನ ಅಮಾನತು ಆದೇಶ ರದ್ದುಗೊಳಿಸಿರುವ ರಾಜ್ಯ ಸರ್ಕಾರಕ್ಕೆ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ರಾಮಚಂದ್ರ ರಾವ್ ಈ ಹಿಂದೆ ಕೇರಳ ಬಸ್‌ನಲ್ಲಿ ಸಿಕ್ಕಿದ್ದ 2 ಕೋಟಿ ಹಣವನ್ನು ಕೊಂಡೊಯ್ದು ಇನ್ಸ್‌ಪೆಕ್ಟರ್ ವಿರುದ್ಧ ಪ್ರಕರಣ ದಾಖಲಿಸಿದ್ದರು. ಅವರ ಸಾಕು ಮಗಳು ರನ್ಯಾರಾವ್ ಚಿನ್ನಸಾಗಣೆ ಪ್ರಕರಣದಲ್ಲಿ ಸಿಕ್ಕಿಬಿದ್ದ ಪರಿಣಾಮ, ರಾಮಚಂದ್ರ ರಾವ್ ಅವರನ್ನು ಅಮಾನತು ಮಾಡಲಾಗಿತ್ತು. ಅಲ್ಲದೇ ಅವರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಸಹ ಕೇಳಿಬಂದಿತ್ತು. ನ್ಯಾಯ ಕೇಳಲು ಬಂದಿದ್ದ ಮಹಿಳೆಯ ಮೇಲೆ ರಾಮಚಂದ್ರ ರಾವ್ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ.

ಈ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ವೀಡಿಯೋ ನನ್ನದಲ್ಲ ಎಂದು ವಾದಿಸಿದ್ದರು. ಆ ನಂತರ ವಿಧಿ ವಿಜ್ಞಾನ ಪ್ರಯೋಗಾಲಯದ ನೀಡಿದ ವರದಿಯಲ್ಲಿ ಆ ವೀಡಿಯೋ ರಾಮಚಂದ್ರ ರಾವ್ ಅವರದ್ದೇ ಎಂಬುದು ಸಾಬಿತಾದ ಕಾರಣ ಅವರನ್ನು ಸರ್ಕಾರ ಅಮಾನತು ಮಾಡಿತ್ತು. ಇದೀಗ ಏಕಾಏಕಿ ಅವರ ಮೇಲಿನ ಅಮಾನತು ಆದೇಶ ಹಿಂಪಡೆದು ಮತ್ತೆ ಕರ್ತವ್ಯಕ್ಕೆ ನಿಯೋಜಿಸಿರುವುದು ಸರಿಯಲ್ಲ. ಈ ಸರ್ಕಾರದಲ್ಲಿ ನ್ಯಾಯಕ್ಕೆ ಬೆಲೆ ಇಲ್ಲದಂತಾಗಿದೆ. ಗೃಹ ಇಲಾಖೆಯನ್ನು ಪರಮೇಶ್ವರ್ ನಡೆಸುತ್ತಿದ್ದಾರೋ ಅಥವಾ ಸಿಎಂ ಸಿದ್ದರಾಮಯ್ಯ ಪುತ್ರ ಯತೀಂದ್ರ ನಡೆಸುತ್ತಿದ್ದಾರಾ ಎಂಬ ಅನುಮಾನವಿದೆ.

ರಾಮಚಂದ್ರ ರಾವ್ ಮೇಲಿನ ಅಮಾನತು ಆದೇಶ ಹಿಂಪಡೆಯಲು ದೊಡ್ಡ ಮಟ್ಟದ ಕಿಕ್ ಬ್ಯಾಕ್ ಪಡೆದಿರಬಹುದು. ರಾಜ್ಯದಲ್ಲಿ ಯಾವ ಸೀಮೆಯ ಅಧಿಕಾರ ನಡೆಯುತ್ತಿದೆ ಎಂದರು.

ಬನ್ನೇರುಘಟ್ಟದಲ್ಲಿ ಜಿರಾಫೆ ಸಾವು

• **ಆನೇಕಲ್:** ಇಲ್ಲಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಮೂರು ವರ್ಷ ಹತ್ತು ತಿಂಗಳ ವಯಸ್ಸಿನ ಶಿವಾನಿ ಎಂಬ ಹೆಣ್ಣು ಜಿರಾಫೆ ಮೃತಪಟ್ಟಿದೆ.



ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದಿಂದ 2024ನೇ ಫೆ.27ರಂದು ಕರೆತರಲಾಗಿತ್ತು. ಮೂರು ದಿನದಿಂದ ಏಕಾಏಕಿ ಆಹಾರ ಸೇವನೆ ನಿಲ್ಲಿಸಿತ್ತು. ಮೃಗಾಲಯದ ಪಶುವೈದ್ಯರ ತಂಡ ತಕ್ಷಣವೇ ತೀವ್ರ ನಿಗಾದಲ್ಲಿ ಇರಿಸಿ ಸಾಧ್ಯವಾದ ಎಲ್ಲಾ ಪಶುವೈದ್ಯಕೀಯ ಆರೈಕೆ ನೀಡಿದರೂ ಸಹಾ ಚಿಕಿತ್ಸೆ ಫಲಕಾರಿಯಾಗದೆ ಶಿವಾನಿ ಕೊನೆಯುಸಿರೆಳೆದಿದೆ.

ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯಾಧಿಕಾರಿಗಳ ವರದಿ ಪ್ರಕಾರ ಸೀಕಲ್ ಟಾರ್ಷನ್ ಎಂಬ ದೊಡ್ಡ ಕರುಳು ಸುತ್ತಿಕೊಂಡು ರಕ್ತ ಸಂಚಾರ ನಿಂತುಹೋಗುವ ಗಂಭೀರ ಸಮಸ್ಯೆಯಿಂದ ಸಾವು ಸಂಭವಿಸಿದೆ. ಇದು ಜಿರಾಫೆಯಲ್ಲಿ ಅಪರೂಪದ ಮಾರಣಾಂತಿಕ ಕಾಯಿಲೆ ಎಂದು ಜೈವಿಕ ಉದ್ಯಾನದ ವೈದ್ಯಾಧಿಕಾರಿ ತಿಳಿಸಿದ್ದಾರೆ. ಸಾವಿನ ಬಗ್ಗೆ ಹೆಚ್ಚಿನ ಅಧ್ಯಯನಕ್ಕಾಗಿ ಜಿರಾಫೆಯ ಒಳಾಂಗಗಳ ಮಾದರಿಯನ್ನು ಇನ್ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಮತ್ತು ಪಶುವೈದ್ಯಕೀಯ ಜೈವಿಕ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ವಿಸ್ತೃತ ವರದಿ ಬಂದ ನಂತರವೇ ಅಂತಿಮ ಕಾರಣ ಖಚಿತವಾಗಲಿದೆ ಎಂದು ತಿಳಿಸಿದರು.

> ಶಿವಾನಿಯ ಸಾವು ನಮಗೆ ತೀವ್ರ ನೋವು ತಂದಿದೆ. ಪ್ರಾಣಿಗಳ ಆರೋಗ್ಯಕ್ಕೆ ನಾವು ಅತ್ಯುತ್ತಮ ಆದ್ಯತೆ ನೀಡುತ್ತೇವೆ. ಎಲ್ಲಾ ರೀತಿಯ ಮುನ್ನೆಚ್ಚರಿಕೆ ವಹಿಸಿದ್ದರೂ ಉಳಿಸಿಕೊಳ್ಳಲಾಗಲಿಲ್ಲ.
> ■ **ವಿಶಾಲ್ ಸೂರ್ಯ ಸೇನ್,** ಕಾರ್ಯನಿರ್ವಾಹಕ ನಿರ್ದೇಶಕ

ಸರ್ಕಾರಿ ಶಾಲೆಗಳ ಶಿಕ್ಷಣ ಗುಣಮಟ್ಟ ಹೆಚ್ಚಿಸಲು ದಿಟ್ಟ ಹೆಜ್ಜೆ | ಜಾಗತಿಕ ಮಟ್ಟದ ಸ್ಪರ್ಧೆ

ಪ್ರೌಢಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಆರಂಭ

▶ **ನಂದಿನಿ ಎನ್.**

ದಿಗಂತ ವಿಶೇಷ

• **ಬೆಂಗಳೂರು:** 2026–27ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿ ಬೇಡಿಕೆಯಿರುವೆಡೆ ಹಿರಿಯ ಪ್ರಾಥಮಿಕ /ಪ್ರೌಢ ಶಾಲೆಗಳಲ್ಲಿ 8ನೇ ತರಗತಿಗೆ ಆಂಗ್ಲ ಮಾಧ್ಯಮ ವಿಭಾಗವನ್ನು ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದೆ. ಈ ಕ್ರಮವು ಸರ್ಕಾರಿ ಶಾಲೆಗಳ ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸುವ ಜತೆಗೆ ವಿದ್ಯಾರ್ಥಿಗಳನ್ನು ಜಾಗತಿಕ ಮಟ್ಟದ ಸ್ಪರ್ಧೆಗೆ ತಯಾರು ಮಾಡುವ ಉದ್ದೇಶ ಹೊಂದಿದೆ.

ಇತ್ತೀಚಿನ ವರ್ಷಗಳಲ್ಲಿ ಆಂಗ್ಲ ಭಾಷೆಯ ಅಗತ್ಯತೆ ಹೆಚ್ಚುತ್ತಿರುವ ಹಿನ್ನೆಲೆ, ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸಮಾನ ಶಿಕ್ಷಣಾವಕಾಶ ಒದಗಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ರೂಪಿಸಲಾಗಿದೆ. ಈಗಾಗಲೇ ಅನೇಕ ಪೋಷಕರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮಕ್ಕಾಗಿ ಖಾಸಗಿ ಶಾಲೆಗಳತ್ತ ಕೊಂಡೊಯ್ಯುತ್ತಿರುವ ಪರಿಸ್ಥಿತಿಯನ್ನು ಗಮನಸಲ್ಲಿಟ್ಟುಕೊಂಡು, ಸರ್ಕಾರಿ ಶಾಲೆಗಳಲ್ಲೇ ಆ ಸೌಲಭ್ಯ ಕಲ್ಪಿಸಲು ಇಲಾಖೆ ಮುಂದಾಗಿದೆ. ಜತೆಗೆ ಈ ನಿರ್ಧಾರದಿಂದ ಸರ್ಕಾರಿ ಶಾಲೆಗಳ ದಾಖಲಾತಿ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇದೆ. ಅಲ್ಲದೇ, ಖಾಸಗಿ ಶಾಲೆಗಳ ಮೇಲಿನ ಅವಲಂಬನೆ ಕಡಿಮೆಯಾಗುವ ನಿರೀಕ್ಷೆಯೂ ವ್ಯಕ್ತವಾಗಿದೆ. ಆಂಗ್ಲ ಮಾಧ್ಯಮ ಬೋಧನೆಗೆ ಅಗತ್ಯವಿರುವ ಕೌಶಲಗಳನ್ನು ಅಭಿವೃದ್ಧಿಪಡಿಸಲು ಶಿಕ್ಷಕರಿಗೆ ವಿಶೇಷ ತರಬೇತಿ ನೀಡಲಾಗುತ್ತದೆ. ಜತೆಗೆ ಪಠ್ಯಪುಸ್ತಕಗಳು, ಡಿಜಿಟಲ್ ಸಂಪನ್ಮೂಲಗಳು ಹಾಗೂ ತರಗತಿ ಕೊಠಡಿಗಳ ಮೂಲಸೌಕರ್ಯವನ್ನು ಸುಧಾರಿಸುವ ಕಾರ್ಯವೂ ಕೈಗೊಳ್ಳಲಾಗಿದೆ.



> 15 ಜಿಲ್ಲೆಗಳಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ತೆರೆಯಲು 24 ಕೋಟಿ ರೂ. ಖರ್ಚು ಮಾಡಿ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಆಂಗ್ಲ ಮಾಧ್ಯಮ ವಿಭಾಗವನ್ನು ಇತರೆ ಜಿಲ್ಲೆಗಳಿಗೆ ಹಂತ–ಹಂತವಾಗಿ ಜಾರಿಗೆ ತರಲಾಗುವುದು.
> ■ **ಮಧು ಬಂಗಾರಪ್ಪ,** ಶಿಕ್ಷಣ ಸಚಿವ

ವಿದ್ಯಾರ್ಥಿಗಳ ಹಾಗೂ ಪೋಷಕರ ಬೇಡಿಕೆಯನ್ನು ಆಧರಿಸಿ, ಅಗತ್ಯವಿರುವ ಶಾಲೆಗಳಲ್ಲಿ ಈ ಯೋಜನೆಯನ್ನು ಹಂತ–ಹಂತವಾಗಿ ಜಾರಿಗೆ ತರಲಾಗುತ್ತದೆ. ಕನ್ನಡ ಮಾಧ್ಯಮವನ್ನು ಮುಂದುವರೆಸುವುದರ ಜತೆಗೆ ಆಂಗ್ಲ ಮಾಧ್ಯಮವನ್ನು ಆಯ್ಕೆಯಾಗಿ ನೀಡಲಾಗುತ್ತದೆ. ದ್ವಿಭಾಷಾ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳು ಕನ್ನಡ ಹಾಗೂ ಆಂಗ್ಲ ಎರಡೂ ಭಾಷೆಗಳಲ್ಲೂ ಸಮರ್ಪಕ ಹಿಡಿತ ಸಾಧಿಸಿರುವುದಾಗಿ ಶಿಕ್ಷಕರು ತಿಳಿಸಿದ್ದಾರೆ. ಇದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜತೆಗೆ ಮುಂದಿನ ಶಿಕ್ಷಣ ಹಂತಗಳಿಗೆ ಭದ್ರ ನೆಲೆ ಒದಗಿಸಿದೆ.

ಈಗ 7ನೇ ತರಗತಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು, 8ನೇ ತರಗತಿಗೆ ಪ್ರವೇಶಿಸುತ್ತಿರುವ ಹಿನ್ನೆಲೆ, 2026–27ನೇ ಸಾಲಿನಲ್ಲಿ 8ನೇ ತರಗತಿಗೆ ಆಂಗ್ಲ ಮಾಧ್ಯಮ ವಿಭಾಗವನ್ನು ಪ್ರಾರಂಭಿಸುವ ಸರ್ಕಾರದ ನಿರ್ಧಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬಂದಿದೆ. ಇದರಿಂದ ವಿದ್ಯಾರ್ಥಿಗಳಿಗೆ ನಿರಂತರವಾಗಿ ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅವಕಾಶ ಸಿಗಲಿದೆ.

2019-20ನೇ ಸಾಲಿನಲ್ಲಿ ಆಂಗ್ಲ ಮಾಧ್ಯಮ ವಿಭಾಗ

2019–20ನೇ ಸಾಲಿನಲ್ಲಿ ರಾಜ್ಯದ ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜತೆಗೆ ಆಂಗ್ಲ ಮಾಧ್ಯಮ (ದ್ವಿಭಾಷಾ ಮಾಧ್ಯಮ) ವಿಭಾಗವನ್ನು ಆರಂಭಿಸಲಾಗಿತ್ತು. ಈ ಯೋಜನೆ ಅಡಿಯಲ್ಲಿ 1ನೇ ತರಗತಿಗೆ ದಾಖಲಾದ ವಿದ್ಯಾರ್ಥಿಗಳು ಇದೀಗ 2025–26ನೇ ಸಾಲಿನಲ್ಲಿ 7ನೇ ತರಗತಿಗಳನ್ನು ಪೂರ್ಣಗೊಳಿಸಿದ್ದಾರೆ. ಆಂಗ್ಲ ಭಾಷೆ ದಕ್ಷತೆಯನ್ನು ಆರಂಭಿಕ ಹಂತದಲ್ಲೇ ಬೆಳೆಸುವ ಉದ್ದೇಶದಿಂದ ಜಾರಿಗೆ ತರಲಾದ ಈ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಗುಣಮಟ್ಟದ ಆಂಗ್ಲ ಶಿಕ್ಷಣ ಒದಗಿಸಲು ಸರ್ಕಾರ ಕೈಗೊಂಡ ಈ ಕ್ರಮ ಫಲ ನೀಡುತ್ತಿದೆ ಎಂದು ಶಿಕ್ಷಣ ಇಲಾಖೆ ಅಭಿಪ್ರಾಯಪಟ್ಟಿದೆ.

ಸಂಪಾದಕೀಯ

ಮಮತಾ ಮೊಂಡಾಟಕ್ಕೆ ತಕ್ಕ ಶಾಸ್ತಿ

ಫಲಿತಾಂಶ ಬಂದು ಮೂರು ದಿನಗಳಾದರೂ, 'ಇನ್ನೂ ಮುಖ್ಯಮಂತ್ರಿ ನಾನೇ' ಎಂದು ರಾಜೀನಾಮೆ ನೀಡದೆ ಮೊಂಡಾಟ ಆಡುತ್ತಿದ್ದ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿಗೆ ರಾಜ್ಯಪಾಲ ಡಿ.ಎನ್.ರವಿ ಅವರು ತಕ್ಕ ಪಾಠವನ್ನೇ ಕಲಿಸಿದ್ದಾರೆ. ಗುರುವಾರ ಸಂಜೆ ರಾಜಭವನದಿಂದ ಅಧಿಕೃತ ಪ್ರಕಟಣೆ ಹೊರಬಿದ್ದು, ಮಮತಾ ಬ್ಯಾನರ್ಜಿ ಸರ್ಕಾರವನ್ನು ವಿಸರ್ಜಿಸಲಾಗಿದೆ. ಈ ಮೂಲಕ ರಾಜ್ಯಪಾಲರೇ ಅಧಿಕೃತವಾಗಿ ಮಮತಾ ಬ್ಯಾನರ್ಜಿಯವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿದ್ದಾರೆ.



ಮೇ 4, ಸೋಮವಾರ ಪಶ್ಚಿಮ ಬಂಗಾಳ ಸೇರಿದಂತೆ ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟವಾಗಿದ್ದು, ಮಮತಾ ಬ್ಯಾನರ್ಜಿ ಅವರ ಟಿಎಂಸಿ ಹೀನಾಯವಾಗಿ ಸೋತಿತ್ತು. ಆದರೆ, ಅಂದಿನಿಂದಲೂ ಮೊಂಡಾಟ ಆಡಿಕೊಂಡು, ತಾವು ಸೋತಿಲ್ಲ, ಚುನಾವಣಾ ಆಯೋಗ ಮತ್ತು ಕೇಂದ್ರ ಸರ್ಕಾರ ಮತ ಕಳ್ಳತನ ಮಾಡಿವೆ. ಹೀಗಾಗಿ, ರಾಜೀನಾಮೆ ಕೊಡುವುದಿಲ್ಲ ಎಂದು ಹೇಳಿದ್ದರು. ಆದರೆ, ಕಾನೂನು ತಜ್ಞರು, ಸಂವಿಧಾನ ತಜ್ಞರು ಮಮತಾ ಅವರ ಈ ಹೇಳಿಕೆಗೆ ಆಕ್ಷೇಪ ಎತ್ತಿ, ಚುನಾವಣೆಯಲ್ಲಿ ಸೋತ ಮೇಲೆ ಸಿಎಂ ಸ್ಥಾನದಲ್ಲಿ ಮುಂದುವರಿಯುವುದು ತರವಲ್ಲ, ರಾಜೀನಾಮೆ ಕೊಡಬೇಕು. ಇಲ್ಲದಿದ್ದರೆ ರಾಜ್ಯಪಾಲರೇ ಕ್ರಮ ತೆಗೆದುಕೊಳ್ಳಬಹುದು ಎಂದಿದ್ದರು.

ಆದರೂ, ಈ ಮಾತುಗಳನ್ನೂ ಧಿಕ್ಕರಿಸಿದ್ದ ಮಮತಾ ಬ್ಯಾನರ್ಜಿ ತಾವು ಕೋರ್ಟ್‌ಗೆ ಹೋಗುತ್ತೇವೆ. ಅಲ್ಲಿ ಹೋರಾಟ ಮಾಡಿ ಈ ಫಲಿತಾಂಶವೇ ಅನಧಿಕೃತ ಎಂಬುದನ್ನು ಸಾಬೀತು ಮಾಡುತ್ತೇವೆ. ಅಲ್ಲಿವರೆಗೆ ರಾಜೀನಾಮೆ ಕೊಡಲ್ಲ ಎಂದೇ ಹೇಳುತ್ತಿದ್ದರು. ಈ ಎಲ್ಲ ಬೆಳವಣಿಗೆ ಗಮನಿಸುತ್ತಿದ್ದ ರಾಜಭವನ, ಗುರುವಾರ ಸಂಜೆ, ಪಶ್ಚಿಮ ಬಂಗಾಳ ವಿಧಾನಸಭೆಯನ್ನೇ ವಿಸರ್ಜನೆ ಮಾಡಿದೆ. ಇದಕ್ಕಾಗಿ ಭಾರತ ಸಂವಿಧಾನದ ಆರ್ಟಿಕಲ್ 174, ಕ್ಲಾಸ್ 2 ಮತ್ತು ಸಬ್ ಕ್ಲಾಸ್ ಬಿನಲ್ಲಿನ ಅಧಿಕಾರವನ್ನು ಬಳಸಿ ವಿಸರ್ಜಿಸಲಾಗಿದೆ ಎಂದಿದೆ. ಈಗ ಸಂವಿಧಾನದ ಪ್ರಕಾರವೇ ಮಮತಾ ಬ್ಯಾನರ್ಜಿ ಅವರನ್ನು ಹುದ್ದೆಯಿಂದ ಕೆಳಗಿಳಿಸಲಾಗಿದೆ. ಒಂದು ವೇಳೆ ಅವರೇ ಸೋತ ಮೇಲೆ ರಾಜೀನಾಮೆ ನೀಡಿದ್ದಿದ್ದರೆ, ಈ ಸರ್ಕಾರವನ್ನು ಮುಂದಿನ ಸರ್ಕಾರ ರಚನೆಯಾಗುವ ವರೆಗೆ ಹಂಗಾಮಿಯಾಗಿ ಕಾರ್ಯನಿರ್ವಹಿಸಿ ಎಂದು ರಾಜ್ಯಪಾಲರೇ ಹೇಳುತ್ತಿದ್ದರು. ಆದರೆ, ಈ ಪ್ರಕರಣದಲ್ಲಿ ವಿಸರ್ಜನೆ ಮಾಡುವುದರಿಂದ ಕೇರ್‌ಟೇಕರ್ ಆಗಿಯೂ ಮಮತಾ ಕಾರ್ಯನಿರ್ವಹಿಸುವಂತಿಲ್ಲ ಎಂಬ ಪ್ರಶ್ನೆಗಳು ಉದ್ಭವವಾಗಿವೆ.

ವಿಚಿತ್ರವೆಂದರೆ, ಭಾರತದ ಇತಿಹಾಸದಲ್ಲೇ ಇಂಥ ಘಟನೆಗಳು ನಡೆದಿರುವುದು ಅತೀ ವಿರಳ. ಒಂದು ವೇಳೆ ಇದುವರೆಗೆ ಆಗಿಯೇ ಇಲ್ಲ ಎನ್ನಬಹುದು. ಆದರೆ, ಮಮತಾ ಬ್ಯಾನರ್ಜಿ ನಡೆ, ಸಂವಿಧಾನ ತಜ್ಞರ ಕಡೆಯಿಂದಲೇ ಖಂಡನೆಗೊಳಗಾಗಿತ್ತು. ಇನ್ನು ಕಾಂಗ್ರೆಸ್, ಎಸ್‌ಪಿ ಸೇರಿದಂತೆ ಕೆಲವು ಪಕ್ಷಗಳು ಸಾಂವಿಧಾನಿಕ ವಿಷಯದಲ್ಲೇ ತಮಗೆ ಬೇಕಾದಂತೆ ಬಳಸಿಕೊಳ್ಳಲು ಪ್ರಯತ್ನಿಸಿದ್ದೂ ವಿಚಿತ್ರ. ತಮಿಳುನಾಡಿನಲ್ಲಿ ವಿಜಯ್‌ಗೆ ಸರಳ ಬಹುಮತದ ಸಂಖ್ಯೆಯನ್ನಾದರೂ ತೆಗೆದುಕೊಂಡು ಬನ್ನಿ ಎಂಬ ರಾಜ್ಯಪಾಲರ ಸಲಹೆಯನ್ನೇ ಸಾಂವಿಧಾನಿಕ ವಿರೋಧಿ ಎನ್ನುವ ಇವರು, ಪಶ್ಚಿಮ ಬಂಗಾಳದ ವಿಚಾರದಲ್ಲಿ ಸೋತರೂ ಸಿಎಂ ಸ್ಥಾನದಲ್ಲಿ ಮುಂದುವರಿಯುವುದಾಗಿದ್ದ ಮಮತಾ ನಡೆಯನ್ನು ಸಮರ್ಥಿಸಿದ್ದಾರೆ. ಆದರೆ, ಸಂವಿಧಾನ ಇವರಿಗೆ ಬೇಕಾದಂತೆ ಬದಲಾಗುತ್ತದೆಯೇ ಎಂಬ ಪ್ರಶ್ನೆ ಜನರಿಂದ ಎದ್ದಿದೆ.

ಹೋನ್ನಾ-ಇಂಧನ್-ಬದ್ಲಾ ಮತ್ತು ಬಂಗಾಳ!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ

santoshthammaiah@gmail.com



ಬಹುತೇಕ ರಾಜಕೀಯ ವಿಶ್ಲೇಷಣೆಗಳು ಅಸಹಜವಾಗಿರುತ್ತವೆ, ವಿಚಿತ್ರವಾಗಿ ಮಂಡನೆಯಾಗಿರುತ್ತವೆ. ಏಕೆಂದರೆ ವಾಸ್ತವಕ್ಕೆ ದೂರವಾದ, ತರ್ಕರಹಿತವಾದ, ಪೂರ್ವಗ್ರಹಪೀಡಿತ ವಿಶ್ಲೇಷಣೆಗಳಿಗೆ ಹೆಚ್ಚಿನ ಮಾರುಕಟ್ಟೆ ಮೌಲ್ಯವಿರುತ್ತದೆ! ಪಂಚರಾಜ್ಯ ಚುನಾವಣೆಯ ಎಕ್ಸಿಟ್‌ಪೋಲ್‌ಗಳು ಹೇಗಿದ್ದವೋ ಹಾಗೆ. ಚುನಾವಣಾ ಫಲಿತಾಂಶಗಳನ್ನು ಒಂದು ಅಂದಾಜಿನ ಮೇಲಿರಿಸಿ ಊಹಿಸಬಹುದು. ಇತ್ತೀಚಿನ ಸಂಗತಿಗಳನ್ನು ನಿರ್ಧರಿಸಲು ಆಯಾ ಪಕ್ಷಗಳ ಆಧಾರಗಳೇ ಆದ ರೀತಿನೀತಿಗಳು, ಮಾರ್ಗಗಳಿರುತ್ತವೆ. ದೂರದಲ್ಲಿ ನಿಂತು ಟ್ರೆಂಡ್‌ಗಳನ್ನು ಗೋಚರಿಸಿದ್ದಷ್ಟು, ಅಂದಾಜಿಸಿದಷ್ಟು ಮಾತ್ರ ಹೇಳಬಹುದು. ಅದಕ್ಕಿಂತ ಹೊರತಾಗಿ ರಾಜಕೀಯದಲ್ಲಿ ಭವಿಷ್ಯವನ್ನು ನಿರ್ಧರಿಸುವ ಜ್ಯೋತಿಷ್ಯಶಾಸ್ತ್ರ ಸಾಧ್ಯವಿಲ್ಲ. ಆದರೆ ವಿಶ್ಲೇಷಣೆಗಳ ಹೆಸರಲ್ಲಿ ಅದು ಕೂಡ ನಡೆಯುತ್ತಿದೆ! ಪಶ್ಚಿಮ ಬಂಗಾಳದ ಅಭೂತಪೂರ್ವ ಗೆಲುವನ್ನು ಕೆಲವರು ವಿಶ್ಲೇಷಿಸುವ ಬಗೆ ಹಾಗಿದೆ. ಬಂಗಾಳದಲ್ಲಿನ್ನು ಬಿಜೆಪಿ ತೃಣಮೂಲ ಕಾರ್ಯಕರ್ತರು ಗುರಿಯಾಗಲಿದ್ದಾರೆ, ಹಿಂಸಾಚಾರ ಹೆಚ್ಚಲಿದೆ, ಬಂಗಾಳಿಗರಿಗೆ ಗಲಾಟೆ-ಗಲಭೆಗಳಿಲ್ಲದೆ ಬದುಕಲಾರದವರು ಮುಂತಾದ ಮಾತುಗಳು ಶುರುವಾಗಿವೆ. ಇಂಥ ಅಭಿಪ್ರಾಯ ಅನೇಕರಲ್ಲಿ ಎಷ್ಟು ಅಂಟಿಹೋಗಿದೆಯೆಂದರೆ 'ಇನ್ನು ಹೊಡೆಯುವ ಪಾಳಿ ಬಿಜೆಪಿಯದ್ದು' ಎನ್ನುತ್ತಾರೆ! ಆದರೆ ಬಿಜೆಪಿ ಗೆದ್ದಿದ್ದು ಅದಕ್ಕೆಯೇ? ಅಸಲಿಗೆ ಬಂಗಾಳಿಗರು ಈ ಪರಿಯಲ್ಲಿ ಬಿಜೆಪಿಗೆ ವೋಟು ಹಾಕಿದ್ದೇ ಭಯಾನಕ ವಾತಾವರಣದಿಂದ ಹೊರಬರಬೇಕೆಂದು. ಅಂಥಲ್ಲಿ ಮತ್ತೆ ಹಿಂಸಾಚಾರದ ನಿರೀಕ್ಷೆ...? ಅಷ್ಟಕ್ಕೂ ಯಾವ ಆಧಾರದಲ್ಲಿ ಇಂಥ ವಿಶ್ಲೇಷಣೆಗಳು ಹೊರಬರುತ್ತಿವೆ?

ಸರ್ಕಾರವಿನ್ನೂ ರಚನೆಯಾಗಿಲ್ಲ. ಅಷ್ಟರಲ್ಲೇ ತೃಣಮೂಲ ಕಾಂಗ್ರೆಸಿನ ಅಸಹನೆ ಆರಂಭವಾಗಿದೆ. ಕೆಲವೆಡೆ ಬಿಜೆಪಿ ಕಾರ್ಯಕರ್ತರು ತಿರುಗಿಬಿದ್ದಿದ್ದೂ ನಿಜವೇ. ಅರಿಕಸಮಾನದ ಗೂಂಡಾಗಿರಿಯ ಆಡಳಿತವಿದ್ದ ರಾಜ್ಯದಲ್ಲಿ ಇವು ಸಾಮಾನ್ಯ. ಸುವೇಂದು ಅಧಿಕಾರಿಯ ಆಪ್ತ ಕಾರ್ಯದರ್ಶಿಯ ಹತ್ಯೆ, ರಾಜ್‌ಗಂಜ್, ಸಿಲಿಗುರಿ, ಪರಗಣ ಜಿಲ್ಲೆಗಳಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಹತ್ತಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಅದು ಸೋತರೂ ನಾವು ಹೀಗೆಯೇ ಇರುತ್ತೇವೆ ಎಂಬ ತೃಣಮೂಲದ ಜಾಯಮಾನವೇ ಹೊರತು, 'ಇದಕ್ಕೆಲ್ಲಾ ಅವರದ್ದೇ ಭಾಷೆಯಲ್ಲಿ ಉತ್ತರ ನೀಡುತ್ತೇವೆ ಎನ್ನಲು ಗೆದ್ದವರೇನೂ ಕಮ್ಯುನಿಸ್ಟರಲ್ಲ! ಚುನಾವಣೆಯ ನಂತರ ನಡೆದ ಇಂಥ ಪ್ರಕರಣಗಳು ಬಿಜೆಪಿ ಕಾರ್ಯಕರ್ತನ ತ್ಯಾಗ-ಬಲಿದಾನಕ್ಕೆ ಮತ್ತೊಂದು ಸೇರ್ಪಡೆ ಎಂದು ಪಕ್ಷ ಹೇಳಿಕೊಂಡಿದೆ. ಮುಂದೆ ನಾಲ್ಕು ಎನ್‌ಕೌಂಟರ್‌ಗಳ ನಂತರ 'ಇವು ಸಹಜವಾಗಿ ಕಡಿಮೆಯಾಗುತ್ತವೆ. ಆದರೆ ಬಿಜೆಪಿಯ ವಿಜಯದ ನಂತರ ಪ.ಬಂಗಾಳ ಹಿಂಸಾಚಾರಕ್ಕೆ ಸಜ್ಜಾಗಿದೆ ಎನ್ನುವ ವಾದ ಬಿಜೆಪಿಯ ವಿರುದ್ಧ ಹಿಂದಿನಿಂದಲೂ ಝಳಪಿಸುತ್ತಿರುವ ತುಕ್ಕುಹಿಡಿದ ಒಂದು ಕತ್ತಿ ಎನ್ನುವುದನ್ನು ಮರೆಯಬಾರದು. ವಿಚಿತ್ರವೆಂದರೆ ಅಂದು 2021ರ ಚುನಾವಣೆಯಲ್ಲಿ ನಡೆದ ಘಟನೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಯಾವ ರಾಷ್ಟ್ರೀಯ ಮಾಧ್ಯಮಗಳೂ ಅದರ ಬಗ್ಗೆ ವಿಶೇಷ ಕಾರ್ಯಕ್ರಮ ಮಾಡಲಿಲ್ಲ. ಅಷ್ಟೇ ಏಕೆ? ಮೊನ್ನೆಯವರೆಗೆ ಪಶ್ಚಿಮ ಬಂಗಾಳದಲ್ಲಿ ಕಾನೂನು ವ್ಯವಸ್ಥೆ ಹೇಗಿತ್ತು ಎನ್ನುವುದರ ಬಗ್ಗೆ ಚರ್ಚಿಸಿಲ್ಲ. 2021ರ ಚುನಾವಣೆಯ ನಂತರ ಬಂಗಾಳದ ಅದೆಷ್ಟೋ ಹಳ್ಳಿಗಳ ಜನರು ಪ್ರಾಣರಕ್ಷಣೆಗಾಗಿ ಅಸ್ಸಾಮಿಗೆ ಪಲಾಯನ ಮಾಡಿದ ಸಂಗತಿ ಪ್ರಜಾಪ್ರಭುತ್ವಕ್ಕೆ ಅಣಕವೆನಿಸಲಿಲ್ಲವೇ? ಯಾವ ಚಿಂತಕರೂ ಅದರ ಬಗ್ಗೆ ಚಕಾರವೆತ್ತಲಿಲ್ಲ. ನಡೆದ ಅದೆಷ್ಟೋ ಅತ್ಯಾಚಾರ ಪ್ರಕರಣಗಳಿಗೆ ಇಂದಿಗೂ ನ್ಯಾಯ ಸಿಕ್ಕಿಲ್ಲ. ಎಷ್ಟೋ ಊರುಗಳಲ್ಲಿ ಬಿಜೆಪಿ ಕಾರ್ಯಕರ್ತ ಎಂಬ ಒಂದೇ ಕಾರಣಕ್ಕೆ ಬೆಳೆದುನಿಂತ ಬೆಳೆಗಳಿಗೆ ಪೆಟ್ರೋಲ್ ಹಾಕಿ ಸುಡಲಾಯಿತು. 2ಸಾವಿರ ಮನೆಗಳಿಗೆ ಬೆಂಕಿಯಿಡಲಾಯಿತು. ಈ ಸುದ್ದಿ ಜಿಲ್ಲಾ ಕೇಂದ್ರಕ್ಕೂ ಮುಟ್ಟಲಿಲ್ಲ. ಆ ಚುನಾವಣೆಯ ನಂತರ ಸಿಬಿಐ ದಾಖಲಿಸಿಕೊಂಡ ಕ್ರಿಮಿನಲ್ ಪ್ರಕರಣಗಳ ಸಂಖ್ಯೆಯೇ 650. ಬಂಧಿತ ತೃಣಮೂಲ ಕಾಂಗ್ರೆಸಿಗರ ಸಂಖ್ಯೆ 6000ಕ್ಕೂ ಹೆಚ್ಚು! ಕೇವಲ ಬಿಜೆಪಿಯ ಧ್ವಜ ಹಿಡಿದ ಒಂದೇ ಕಾರಣಕ್ಕೆ ಅಂದು ಕೊಲೆಗಳಾದವು ಎಂದರೆ ಅಲ್ಲಿ ಪ್ರಜಾಪ್ರಭುತ್ವ ಎನ್ನುವುದು ಇತ್ತು ಎನ್ನಲಾಗುವುದಿಲ್ಲ. ಸೋತು ಸುಣ್ಣವಾದ ಮೇಲೂ ತಾನು ರಾಜೀನಾಮೆ ನೀಡಲಾರೆ ಎಂದು ಅಬ್ಬರಿಸುವ ಮುಖ್ಯಮಂತ್ರಿಯ ರಾಜ್ಯದಲ್ಲಿ ಇಂಥವು ನಡೆಯುತ್ತಿತ್ತೆಂದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಇವೆಲ್ಲವೂ ಯಾವ ಪರಿಯಲ್ಲಿ ಸುದ್ದಿಯಾಗಬೇಕಿತ್ತು? ಮಾಧ್ಯಮಗಳು ಮಾತ್ರ ಅಲ್ಲ, National Crime Records Bureau (NCRB)ವರದಿಗಳೂ ಕೂಡ ತಮಾಷೆ ಮಾಡುತ್ತವೆ. ಅದರ ಪ್ರಕಾರ 2018ರಲ್ಲಿ ದೇಶದಲ್ಲಿ ನಡೆದ ರಾಜಕೀಯ ಹತ್ಯೆಗಳು ಕೇವಲ 18. ಅದರಲ್ಲಿ 12 ಪಶ್ಚಿಮ ಬಂಗಾಳದಲ್ಲಿ ನಡೆದವು. 2019ರಲ್ಲಿ ದೇಶದಲ್ಲಿ 72 ರಾಜಕೀಯ ಹತ್ಯೆಗಳಾಗಿದ್ದರೆ ಅದರಲ್ಲಿ 13 ಪಶ್ಚಿಮ ಬಂಗಾಳದಲ್ಲಿ ನಡೆದವು. 2020ರಲ್ಲಿ ಪಶ್ಚಿಮ ಬಂಗಾಳದಲ್ಲಿ 663 ರಾಜಕೀಯ ಗಲಭೆಗಳು ನಡೆದಿವೆ ಮತ್ತು ಅದರಲ್ಲಿ 57 ಸಾವುಗಳಾಗಿವೆ. 2019ರ ಚುನಾವಣೆಯಲ್ಲಿ ರಾಜ್ಯದಲ್ಲಿ 693 ಗಲಭೆಗಳು ಮತ್ತು 11 ಸಾವುಗಳಾಗಿವೆ ಎಂದು ವರದಿ ಹೇಳುತ್ತದೆ. ಅಂದರೆ ಅಂಕೆಸಂಖ್ಯೆಗಳೂ ಕೂಡ ಮಮತಾ ಬ್ಯಾನರ್ಜಿ ಎಂಬ ಭಯಾನಕ ಹೆಣ್ಣಿಗೆ ಹೆದರಿ ಸತ್ಯವನ್ನು ಮುಚ್ಚಿಟ್ಟುಕೊಂಡಿದೆ. ಸರ್ಕಾರಿ ಪ್ರಾಯೋಜಿತ ಗಲಭೆ ಮತ್ತು ಕೊಲೆಗಳು ರೆಕಾರ್ಡ್ ರೂಮಿನೊಳಗೆ ಹೋಗುವುದಾದರೂ ಹೇಗೆ?

ಬಿಜೆಪಿಯ ಗೆಲುವನ್ನು ಹೆದ್ದರೆ, ಸುನಾಮಿ ಎಂದು ಬಣ್ಣಿಸುವ ಭರದಲ್ಲಿ ಬಿಜೆಪಿಯು ಸೇಡಿನ ದಾರಿಯಲ್ಲಿ ಸಾಗುತ್ತದೆ, ಪ್ರತಿಕಾರ ಆರಂಭವಾಗುತ್ತದೆ ಎಂದು ಧುರಂಧರ ಸಿನಮಾದಂತೆ ಮಾಡುವ ವಿಶ್ಲೇಷಣೆಯನ್ನು ಪ್ರಪಗಾಂಡಾ ಎನ್ನದೆ ಬೇರೇನೂ ಹೇಳಲಾಗುವುದಿಲ್ಲ. ದಶಕಗಳ ಕಾಲ ಹೊಡೆತ ತಿಂದವರೆಲ್ಲರೂ ಧುರಂಧರರೇ ಆಗಬೇಕಿಲ್ಲ. ಎಲ್ಲಾ ರಾಜಕೀಯ ಹಿಂಸಾಚಾರಗಳನ್ನು ಒಂದೇ ಕೋನದಿಂದ ವಿಮರ್ಶಿಸುವುದು ಕೂಡ ಸರಿಯಾದ ಕ್ರಮವಲ್ಲ. ಪಕ್ಷಗಳ ಸಿದ್ಧಾಂತಗಳ ಬೇರುಗಳನ್ನೂ ಪರಿಗಣಿಸಬೇಕಾಗುತ್ತದೆ. ಉದಾಹರಣೆಗೆ ಬಿಜೆಪಿ ಹಿಂಸೆಯಲ್ಲಿ ನಂಬಿಕೆಯಿಟ್ಟ ಪಕ್ಷವಲ್ಲ. ಯಾವ ಚುನಾವಣೆಯನ್ನೂ ಅದು ಹಿಂಸೆಯಿಂದ ನಡೆಸಿದ ಉದಾಹರಣೆಗಳಿಲ್ಲ. ಬಿಜೆಪಿಯ ಸಿದ್ಧಾಂತದಲ್ಲಿ ಅದಕ್ಕೆ ಅವಕಾಶವಿಲ್ಲ. ಕಾಂಗ್ರೆಸ್ ಸಿದ್ಧಾಂತ ಕೂಡ ಗಾಂಧಿ ತತ್ತ್ವದ ಮಾತಾಡುತ್ತದೆಯಾದರೂ ನೈತಿಕ ರಾಜಕಾರಣ ಮಾಡುತ್ತಿಲ್ಲ. ಆದರೆ ರಾಜಕೀಯ ಹತ್ಯೆಗಳ ವಿಷಯದಲ್ಲಿ ಅದಿನ್ನೂ ಕಮ್ಯುನಿಸ್ಟರ ಹಾದಿಯನ್ನು ಹಿಡಿದಿಲ್ಲ. ಆದರೆ ಕಮ್ಯುನಿಸ್ಟ್ ಸಿದ್ಧಾಂತದ ಪ್ರಣಾಳಿಕೆಯಲ್ಲೇ ಹೊಡಿಬಡಿತನವಿದೆ. ಹಿಂಸೆಯನ್ನು ಅದು ಕ್ರಾಂತಿಯ ಹೆಸರಿನಲ್ಲಿ ಪ್ರಚೋದಿಸುತ್ತದೆ. ಗಲಭೆಗಳು ಯಾವತ್ತೂ ಕಮ್ಯುನಿಸ್ಟರಿಗೆ ಮಡಿ ಎನಿಸಿಲ್ಲ. ಕೊಲೆಗಾರರನ್ನು ಪದಾಧಿಕಾರಿಗಳನ್ನಾಗಿ ಮಾಡುವುದು ಕಮ್ಯುನಿಸ್ಟರಿಗೇನೂ ಮುಜುಗರ ತರುವ ಸಂಗತಿಯಲ್ಲ. ಇವೆಲ್ಲವನ್ನೂ ತೃಣಮೂಲ ಕಾಂಗ್ರೆಸ್ ಕಮ್ಯುನಿಸ್ಟರಿಂದ ಆನಾಮತ್ತಾಗಿ ಬಳುವಳಿ ಪಡೆದುಕೊಂಡಿದೆ ಮತ್ತು ಕಮ್ಯುನಿಸ್ಟರಿಗಿಂತ ತೀವ್ರವಾಗಿ ಪ್ರಯೋಗಕ್ಕೂ ತಂದಿದೆ. ಮುಂದಿನ ದಿನಗಳಲ್ಲಿ ಬಂಗಾಳ ಕೂಡ ಹಳೆಯ ಕೇರಳವಾಗಬಹುದು ಎನ್ನುವವರು ಇದನ್ನು ಗಮನಿಸಬೇಕು.

ಬಿಜೆಪಿ ಅಧಿಕಾರಕ್ಕೆ ಬಂದ ರಾಜ್ಯಗಳಲ್ಲಿ ಕ್ರೈಂ ದರಗಳು ಗಣನೀಯವಾಗಿ ಕಡಿಮೆಯಾಗುತ್ತವೆ. ಒಂದು ಕಾಲದಲ್ಲಿ ಗೂಂಡಾ ರಾಜ್ಯವಾಗಿದ್ದ ಬಿಹಾರ ಈಗ ಹಾಗಿಲ್ಲ. ಹಾಗೆಯೇ ಬಂಗಾಳದ ಭವಿಷ್ಯವನ್ನು ಹೇಳುವವರು ಉತ್ತರ ಪ್ರದೇಶವನ್ನು ಉಲ್ಲೇಖಿಸುತ್ತಾರೆ. ಇನ್ನು ಪ.ಬಂಗಾಳದಲ್ಲೂ ಬುಲ್ಡೋಜರ್‌ಗಳು ಸದ್ದು ಮಾಡಬಹುದು ಎನ್ನುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಗೂಂಡಾಗರ್ದಿ, ಗ್ಯಾಂಗ್ ವಾರ್ ಮತ್ತು ಮತೀಯ ಶಕ್ತಿಗಳ ಅಟ್ಟಹಾಸವನ್ನು ನಿಲ್ಲಿಸಿದ್ದು ಕಾನೂನು. ಅಲ್ಲಿ ಬುಲ್ಡೋಜರ್‌ಗಳು ಮಾಡಿದ್ದು ಕಾನೂನಿನ ಕೆಲಸವನ್ನು. ಒಂದು ವೇಳೆ ಬುಲ್ಡೋಜರುಗಳಿಗಿಂತ ಸುಲಭವಾಗಿ, ವೇಗವಾಗಿ ಆಳುಗಳು ಕಟ್ಟಡ ಒಡೆಯುವ ಕೆಲಸ ಮಾಡುವಂತಿದ್ದರೆ ಸರ್ಕಾರಿ ನೌಕರರೇ ಆ ಕೆಲಸ ಮಾಡುತ್ತಿದ್ದರು. ಮುಂದೆ ಬಂಗಾಳದಲ್ಲೂ ಕಾನೂನಿನ ಕೆಲಸವನ್ನು ಬುಲ್ಡೋಜರ್‌ಗಳು ಮಾಡಿದರೆ ತಪ್ಪೇನು? ಒಟ್ಟಾರೆ ಬಿಜೆಪಿ ಸರ್ಕಾರಗಳಿದ್ದಲ್ಲಿ ತಪ್ಪು ಹುಡುಕುವ ಕೆಲಸವನ್ನು ದೊಡ್ಡದೊಂದು ವರ್ಗ ಮಾಡುತ್ತಿದೆ. ವಿಜಯದ ನಂತರ ಸುವೇಂಧು ಅಧಿಕಾರಿ, 'ಇದು ಹಿಂದುಗಳ ವಿಜಯ' ಎಂದು ವ್ಯಾಖ್ಯಾನಿಸಿದ್ದರು. ಆದರೆ ಹಿಂದುತ್ವ ಎಲ್ಲಿ ತಾನೇ ಹಿಂಸೆಗೆ ಪ್ರಚೋದನೆ ಕೊಡುತ್ತದೆ? ಹಿಂದುತ್ವದ ವಿಜಯ ಎನ್ನುವುದರಲ್ಲೇ ಮುಂದಿನ ಬಂಗಾಳದ ಚಿತ್ರಣವೂ ಕಟ್ಟುತ್ತದೆ. ಸೌಹಾರ್ದತೆ, ಸಹಬಾಳ್ವೆ, ಒಗ್ಗೂಡಿ ಬದುಕಲು ನಿಯಮಗಳು, ಓಲೈಕೆಗೆ ಕಡಿವಾಣ, ಮುಕ್ತ ವಾತಾವರಣ ಬಂಗಾಳದಲ್ಲಿ ನಿರ್ಮಾಣವಾಗಬಹುದು. ಇವೆಲ್ಲವನ್ನೂ ಬಯಸುವವರಿಗೆ ಅಲ್ಲಿ ಒಳ್ಳೆಯ ದಿನಗಳಿದ್ದೇ ಇರುತ್ತವೆ. ಹೇಗೆ ಉತ್ತರ ಪ್ರದೇಶದಲ್ಲಿ ಗೂಂಡಾಗಿರಿ ವಿರೋಧಿಸುವ ಮತ್ತು ಸೌಹಾರ್ದವನ್ನು ಬಯಸುವ ಮುಸಲ್ಮಾನರಿಗೆ ಅಪಾಯವಿಲ್ಲವೋ ಹಾಗೆ ಬಂಗಾಳವೂ ಬದಲಾಗಬಹುದು. ಆದರೆ ಹಿಂದುಗಳ ವಿಜಯ ಎಂದಾಗ ಯಾಕೆ ಬೆಚ್ಚಿ ಬೀಳಬೇಕು? ಮುಂದೆ ಬಾಂಗ್ಲಾ ವಲಸಿಗರಿಗೆ ಬಂಗಾಳಕ್ಕೆ ನುಗ್ಗಲು ಕಷ್ಟವಾಗಬಹುದು. ಅದು ಭಾರತೀಯರಿಗೇನೂ ಬೇಸರ ತರುವ ಸಂಗತಿಯೇನಲ್ಲ. ತೃಣಮೂಲದ ರೌಡಿಗಳನ್ನು ಜನ ರಸ್ತೆಯಲ್ಲಿ ಅಟ್ಟಾಡಿಸಿ ಹೊಡೆದು ಪೊಲೀಸರಿಗೊಪ್ಪಿಸಬಹುದು. ಅದು ಹಿಂಸೆ ಹೇಗಾಗುತ್ತದೆ? ದಕ್ಷ ಕಾನೂನು ವ್ಯವಸ್ಥೆ ರೂಪುಗೊಂಡು ಪೊಲೀಸರೇ ಮೂಳೆ ಮುರಿಯಬಹುದು. ಮೂಳೆ ಮುರಿಸಿಕೊಂಡವ ತೃಣಮೂಲ ಕಾರ್ಯಕರ್ತನೇ ಆಗಿರಬಹುದು. ಅದು ಕಾನೂನಿನ ತಪ್ಪೇ? ಹಿಂಸೆಯೇ? ಚುನಾವಣಾ ಪ್ರಚಾರದಲ್ಲಿ ತೃಣಮೂಲ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಬಹಿರಂಗ ಸಮಾವೇಶದಲ್ಲೇ ಬಿಜೆಪಿ ಕಾರ್ಯಕರ್ತರಿಗೆ "ಮೇ ನಾಲ್ಕರ ನಂತರ ನಿಮ್ಮನ್ನು ಕಾಪಾಡಲು ದೆಹಲಿಯಿಂದ ಯಾವ ನಿಮ್ಮ ಅಪ್ಪ ಬರ್ತಾನೆ ನೋಡೋಣ" ಎಂದು ನೇರವಾಗಿ ಬೆದರಿಕೆ ಹಾಕಿದ್ದ. ಆದರೆ ಮೇ ನಾಲ್ಕರ ನಂತರ ಯಾವ ಬಿಜೆಪಿ ನಾಯಕನೂ ಅದಕ್ಕೆ ಪ್ರತಿಕ್ರಯಿಸಲಿಲ್ಲ. ಮನಸು ಮಾಡಿದ್ದರೆ ಅಂದು ಎಂತೆಂಥಾ ಶೈಲಿಯ ಉತ್ತರಗಳನ್ನು ಬಿಜೆಪಿ ನೀಡಬಹುದಿತ್ತು? ಇದೇ ಬಿಜೆಪಿ ಮತ್ತು ತೃಣಮೂಲ ರಾಜಕಾರಣಕ್ಕಿರುವ ವ್ಯತ್ಯಾಸ. ಅಂದ ಹಾಗೆ ಅಭಿಷೇಕ್ ಬ್ಯಾನರ್ಜಿಗೆ ಅರ್ಥವಾಗುವಂತೆ ವೋಟು ಹಾಕಿದವರು ಉತ್ತರ ಕೊಟ್ಟರೆ ತಪ್ಪೇನಿದೆ? ಅವರು ವೋಟು ಹಾಕಿದ್ದೇ ಅದಕ್ಕೆ. ಹಿಂಸೆಯ ಬಂಗಾಳ ಇನ್ನು ಸಾಕು ಎಂದು ವೋಟು ಹಾಕಿದವರಿಗೆ ಉತ್ತರ ಕೊಡುವ ರೀತಿಯೂ ತಿಳಿದಿರುತ್ತದೆ, ಕೊಡಲಿ.

ಕಾರಂತರ ಮಕ್ಕಳ ನೆನಪಿನ ಕೋಶ 'ಕಾರಂತರ ಸುಳಿಯಲ್ಲಿ'

▸ ಕೋಟ ಶ್ರೀನಿವಾಸ ಪೂಜಾರಿ
ಸಂಸದರು, ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ




ಕಡಲತಡಿಯ ಭಾರ್ಗವ, ನನ್ನೂರ ಶಿವರಾಮ ಕಾರಂತರ ಬಗ್ಗೆ ಅವರ ಮೂವರು ಮಕ್ಕಳು ಬರೆದ 'ಕಾರಂತರ ಸುಳಿಯಲ್ಲಿ' ಪುಸ್ತಕ ಕೈ ಸೇರುತ್ತಲೇ ಹೆಚ್ಚು ಕಡಿಮೆ ಒಂದೇ ಉಸಿರಿಗೆಂಬಂತೆ ಓದಿ ಮುಗಿಸಿದ್ದೆ. ಕಾರಂತರೆಂಬ ನಡೆದಾಡುವ ವಿಶ್ವಕೋಶ ಗತಿಸಿ 30 ವರ್ಷಗಳ ನಂತರ ಕಾರಂತರ ಮಕ್ಕಳು ತಮ್ಮ ಒಡಲ ನುಡಿಗೆ ಅಕ್ಷರದ ರೂಪ ನೀಡುತ್ತಿರುವುದೇ ಅಚ್ಚರಿ. ಅಗತ್ಯ-ಅನಗತ್ಯಗಳ ಚರ್ಚೆ ಏನೇ ಇದ್ದರೂ ಕಾರಂತರ ಮಕ್ಕಳಾದ ಉಲ್ಲಾಸ ಕಾರಂತರಾಗಲಿ, ಕ್ಷಮಾ, ಮಾಳವಿಕರಾಗಲಿ ಸಮಾಜದಲ್ಲಿ ಅವರವರದೇ ಸ್ಥಾನಮಾನ ಪಡೆದವರು ಮತ್ತು ತಾತನ ಹೆಸರನ್ನು ಎಂದೂ ಸ್ವಾರ್ಥಕ್ಕಾಗಲಿ, ಸಾಮಾಜಿಕ ಗೌರವಕ್ಕಾಗಲಿ ಬಳಸಿಕೊಂಡವರಲ್ಲ. ತಂದೆಯ ಹೆಸರನ್ನು ಶಾಶ್ವತವಾಗಿ ಇರಿಸಬೇಕೆಂಬ ಕಾರಣಕ್ಕೆ ಯಾವ ಸರಕಾರದ ಎದುರೂ ಕೈಚಾಚಿ ಸಹಾಯ ಕೋರಿದವರಲ್ಲ. ಇದೀಗ ಸರಿಸುಮಾರು ಮೂರು ದಶಕದ ನಂತರ ತಂದೆ ಕಾರಂತ, ತಾಯಿ ಲೀಲಮ್ಮನವರು ಬದುಕಿದ್ದ ಕ್ಷಣಗಳನ್ನು ದಾಖಲಿಸಿದ್ದೇ ಅಕ್ಷರ ಲೋಕಕ್ಕೊಂದು ವಿಸ್ಮಯ. ಕಾರಂತರೆಂಬ ಅಲೆಮಾರಿಯನ್ನು ಮದುವೆಯಾಗಿ ಆ ಏಕಾಂಗಿಯ ಬದುಕಿಗೆ ಸಂತೋಷ ಮತ್ತು ಸೌಂದರ್ಯ ತುಂಬಿದವರು ಲೀಲಮ್ಮ ಎಂದು ಗಿರಿಜಾ ಕುಲಾಲ್ ಎಂಬ ಟೀಚರ್‌ರವರ ನೆನಪು ಬೆಚ್ಚನೆಯ ಅನುಭವ ಕೊಟ್ಟರೆ, "ನಾನು ಕಾರಂತರನ್ನು ಮದುವೆಯಾದ ಮೇಲೂ ಒಂದು ವರ್ಷ ಮಂಗಳೂರಿನ ಬೆಸೆಂಟ್ ಸ್ಕೂಲ್‌ನ ಹಾಸ್ಟೆಲಲ್ಲಿ ಉಳಿದುಕೊಂಡಿದ್ದೆ. ವಾರಾಂತ್ಯದಲ್ಲಿ ಕಾರಂತರು ಬಂದು ನನ್ನನ್ನು ಭೇಟಿ ಮಾಡುತ್ತಿದ್ದರು. ಆ ಕೆಲ ಕ್ಷಣದ ಭೇಟಿಗಾಗಿ ನಾನು ವಾರವಿಡಿ ಕಾಯುತ್ತಿದ್ದೆ. ಹೊರಡುವ ಮುನ್ನ ನಿನಗೆ ಹಣ ಬೇಕಾ.. ಎಂದು ಕೇಳುವುದು ಕಾರಂತರ ರೂಢಿ. ಬೇಕು, ಬೇಡ ಅನ್ನುವ ಮುನ್ನ ಉದ್ದ ಜುಬ್ಬದ ಆಳವಾದ ಕಿಸೆಯೊಳಗೆ ಬಲಗೈ ತೂರಿ ತಡಕಾಡಿ ಒಂದಷ್ಟು ನಾಣ್ಯಗಳನ್ನು ನನ್ನ ಬೊಗಸೆಗೆ ಸುರಿಯುತ್ತಿದ್ದರು. ನನ್ನ ಬೊಗಸೆಗೆ ಹಾಕಿದ ನಾಣ್ಯ ಕೆಳಗೆ ಬೀಳದಂತೆ ಹುಷಾರಾಗಿ ಹಿಡಿದುಕೊಳ್ಳುತ್ತಿದ್ದೆ. ನನ್ನ ಗಂಡ ಕೊಟ್ಟ ಹಣ ಹೇಗೆ ಲೆಕ್ಕ ಹಾಕಿದರೂ ಒಟ್ಟು ಎಂಟಾಣೆ ಮೀರಿದ ನೆನಪಿಲ್ಲ. ಆದರೆ ಇಷ್ಟು ಹಣ ಹೊರ ತೆಗೆಯಲು ಅವರು ಜುಬ್ಬಾದ ಆಳವಾದ ಕಿಸೆಯೊಳಗೆ ನಡೆಸುತ್ತಿದ್ದ ಗಣಗಾರಿಕೆ ನನಗೆ ತಮಾಷೆ ಎನಿಸುತ್ತಿತ್ತು. ಆದರೊಂದಿಗೆ ಅವರ ಆರ್ಥಿಕ ಪರಿಸ್ಥಿತಿ ನನಗೆ ನೋವುಂಟು ಮಾಡಿತ್ತು" ಎಂಬ ಲೀಲಮ್ಮನ ಮಾತುಗಳ ಕುರಿತು ಮಕ್ಕಳು ಬರೆದ ವಿವರಣೆ ಮನ ತುಂಬುತ್ತದೆ. ಕಾರಂತರ ಮಗಳು ಮಾಳವಿಕಾ ಹೇಳುತ್ತಾರೆ, "ಜ್ಞಾನಪೀಠ ಪ್ರಶಸ್ತಿ ಬಂದ ನಂತರದ ಸಂಭ್ರಮದ ದಿನಗಳಲ್ಲಿ ನಿನಗೇನು ಬೇಕು ಮಾಲು.. ಎಂದು ತಾತಾ ಕೇಳಿದ್ದರು. ನಿಮ್ಮ ಹಳೆಯ ತಂಬೂರಿ ಕೊಡಿ ಎಂದಿದ್ದೆ. ಕೆಲ ವರ್ಷಗಳ ನಂತರ ನನ್ನ ತಾತ ಜ್ಞಾನಪೀಠ ಪ್ರಶಸ್ತಿಯ ಮುಖ್ಯ ಭಾಗವನ್ನು ನನಗೆ ಉಡುಗೊರೆಯಾಗಿ ಕೊಟ್ಟಿದ್ದರು. ಅದೇ ವಾಗ್ದೇವಿಯ ಸುಂದರ ಕಂಚಿನ ಪ್ರತಿಮೆ. ಪ್ರಶಸ್ತಿಯ ಸ್ಮರಣ ಪತ್ರವನ್ನು ಉಲ್ಲಾಸನಿಗೆ ನೀಡಿದ್ದರು. ನಂತರದ ದಿನಗಳಲ್ಲಿ ಕರ್ನಾಟಕ ಸರಕಾರ ಬಾಲ ಭವನವನ್ನು ಕಾರಂತರ ನೆನಪಿನ ಮ್ಯೂಸಿಯಂ ಮಾಡಲು ಹೊರಟಾಗ ದಕ್ಷಿಣ ಕನ್ನಡದ ಜಿಲ್ಲಾಧಿಕಾರಿ ಕಾರಂತರ ನೆನಪಿನಲ್ಲಿ ಅಮೂಲ್ಯ ವಸ್ತುಗಳಿದ್ದರೆ ಕೊಡಿ ಎಂದಿದ್ದರು. ನಾವಿಬ್ಬರು ಮರು ಯೋಚಿಸದೆ ತಾತನ ನಂತರದ ನಮ್ಮ ಕುಟುಂಬದ ಅಮೂಲ್ಯ ಆಸ್ತಿ ಆದ ವಾಗ್ದೇವಿಯ ಪ್ರತಿಮೆ ಮತ್ತು ಜ್ಞಾನಪೀಠದ ಮೂಲ ಸ್ಮರಣ ಪತ್ರವನ್ನು ಸರಕಾರಕ್ಕೆ ಹಸ್ತಾಂತರಿಸಿದೆವು" ಆ ಮೂಲಕ ತನ್ನ ಬದುಕಿನ ಬೆಚ್ಚನೆಯ ಘಟನೆಯನ್ನು ಕಟ್ಟಿಕೊಡುತ್ತಾರೆ. ಮಕ್ಕಳ ಶಿಕ್ಷಣದ ಬಗ್ಗೆ ಕಾರಂತರ ಸ್ಪಷ್ಟ ನಿಲುವನ್ನು ಬಿತ್ತರಿಸುತ್ತಾ ಹೋಗುವಾಗ ಅಂದು ಕಾರಂತರು ಖಾರವಾಗಿ ಹೇಳಿದ "ಮಕ್ಕಳಲ್ಲಿ ಹುಟ್ಟಿನಿಂದ ಇರುವ ಕುತೂಹಲಗಳನ್ನು ಕೊಲ್ಲುವ ಕಸಾಯಿಖಾನೆಗಳೆಂದರೆ ಶಾಲೆಗಳು" ಎಂಬ ಕಾರಂತರ ಮಾತುಗಳನ್ನು ಪುಸ್ತಕದಲ್ಲಿ ಮಾಳವಿಕಾ ನವಿರಾಗಿ ನೆನಪಿಸಿದ್ದಾರೆ.

ಕಾರಂತರ ಬಗ್ಗೆ ಬಂದಿರುವ ಇನ್ನಿತರ ಪುಸ್ತಕಗಳಿಗಿಂತ 'ಕಾರಂತರ ಸುಳಿಯಲ್ಲಿ' ಭಿನ್ನವಾಗಿದೆ. ಒಮ್ಮೆ ಕಾರಂತರು ಬರೆದ 6ನೇ ತರಗತಿಯ ಪಾಠವೊಂದರ ಬಗ್ಗೆ ಒಂದು ತಂಡ ಪ್ರತಿಭಟನೆ ನಡೆಸಿತ್ತು. ನಾನಾಗ ಉಡುಪಿ ತಾಲೂಕು ಪಂಚಾಯತ್ ಸದಸ್ಯನಾಗಿದ್ದೆ. ಸಾಮಾನ್ಯ ಸಭೆಯಲ್ಲಿ ಕಾರಂತರು ಬರೆದ ಪಠ್ಯಪುಸ್ತಕ ರದ್ದು ಮಾಡುವ ನಿರ್ಣಯ ಮಂಡನೆಯಾಗಿತ್ತು. ಅದಕ್ಕೆ ಕಾರಣ ಕಾರಂತರು ಜಾತಿ ನಿಂದಿಸಿ ಬರೆದಿದ್ದರು ಎಂಬುದಾಗಿತ್ತು. ಸಭೆಯಲ್ಲಿ ಅದು ಸರ್ವಾನುಮತದ ನಿರ್ಣಯವೂ ಆಗುವುದರಲ್ಲಿತ್ತು. ಅಂದಿನ ತಾಲ್ಲೂಕು ಪಂಚಾಯತ್‌ನ ಸಭಾಧ್ಯಕ್ಷರಲ್ಲಿ ನನಗೊಂದು ನಿಮಿಷ ಮಾತನಾಡಲು ಅವಕಾಶ ಕೊಡಿ ಎಂದು ವಿನಂತಿಸಿ, ಕಾರಂತರು ನಾವೆಲ್ಲ ಹುಟ್ಟುವ ಮುಂಚೆ ಅನ್ಯ ಜಾತಿಯ ಹುಡುಗಿಯನ್ನು ಮದುವೆಯಾದವರು. ಬದುಕಿನ ಕೊನೆಯ ಹಂತದಲ್ಲಿ ಜಾತಿವಾದಿಯಾಗಲು ಸಾಧ್ಯವೇ..? ಸುತ್ತಲ ಸಮಾಜ ಈ ನಿರ್ಣಯವನ್ನು ವಿರೋಧಿಸುತ್ತದೆ. ಜ್ಞಾನಪೀಠ ಪ್ರಶಸ್ತಿ ಪಡೆದು ಈ ನಾಡಿಗೆ ಕೀರ್ತಿ ತಂದವರ ವಿರುದ್ಧ ಮಾಡುವ ನಿರ್ಣಯಕ್ಕೆ ನನ್ನ ವಿರೋಧವಿದೆ ಎಂದಿದ್ದೆ. ಬಳಿಕ ನಿರ್ಣಯ ಚರ್ಚೆಯಾಗದೇ ಮರಳಿ ಬಿಟ್ಟಿತು. ಇದೆಲ್ಲ ಯಾಕೆ ನೆನಪಾಯ್ತು ಎಂದರೆ ಕಾರಂತರ ಮಗ ಉಲ್ಲಾಸ ಬರೆಯುತ್ತಾರೆ. 1936ರಲ್ಲಿ ಲೀಲಾ ಆಳ್ವ ಎಂಬ ಬಂಟರ ಹುಡುಗಿಯನ್ನು ಕಾರಂತರೆಂಬ ಸಂಪ್ರದಾಯವಾದಿ ಯುವ ಬ್ರಾಹ್ಮಣ ಮದುವೆ ಆದಾಗ ಆಗಿರುವ ಸಾಮಾಜಿಕ ಬಿರುಗಾಳಿ ಊಹಿಸಲಸಾಧ್ಯ. ಇದು ಬಂಟ ಕುಲಕ್ಕೆ ಅಸಹ್ಯ ಎಂದು ಬಂಟ ಜಾತಿ ಭಾವಿಸಿದರೆ, ಕೆಳ ಜಾತಿಯ ಹೆಣ್ಣನ್ನು ಮದುವೆಯಾಗಿದ್ದು ಬ್ರಾಹ್ಮಣ್ಯಕ್ಕೆ ಅಪಮಾನ ಎಂದು ಕಾರಂತರ ಕುಟುಂಬ ಮತ್ತು ಅವರ ಜಾತಿ ಭಾವಿಸಿತ್ತಂತೆ. ಅಮ್ಮನ ಸೋದರಮಾವ ನನ್ನ ಕುಟುಂಬಕ್ಕಿದು ಕಳಂಕ ಎಂದು ಆಕ್ರೋಶಭರಿತ ಸಂಕಟ ಪಟ್ಟರೆ, ಉಡುಪಿಯ ಬ್ರಾಹ್ಮಣ ಪತ್ರಕರ್ತರೊಬ್ಬರು ತನ್ನ ಪತ್ರಿಕೆಯಲ್ಲಿ ಅಂದಿನ ಆಧುನಿಕ ಅಂತರ್ಜಾತಿ ಮದುವೆ ಬಗ್ಗೆ ಮಾನಹಾನಿಕಾರಕ ಲೇಖನವನ್ನೇ ಬರೆದಿದ್ದಾರಂತೆ. ರೊಚ್ಚಿಗೆದ್ದ ಕಾರಂತರು ಪತ್ರಕರ್ತರ ಮೇಲೆ ಮಾನ ನಷ್ಟದಾವೆ ಹಾಕಿದ್ದರಾದರೂ ಆ ಪುಣ್ಯಾತ್ಮ ದಂಡ ಕಟ್ಟಿ ಕ್ಷಮೆ ಕೇಳುವ ಬದಲು ತನ್ನ ಜಾತಿವಾದದ ಸಿದ್ಧಾಂತಕ್ಕೆ ಅಂಟಿಕೊಂಡು ಹಟಕ್ಕೆ ಬಿದ್ದು ನ್ಯಾಯಾಲಯ ವಿಧಿಸಿದ ಶಿಕ್ಷೆಯಂತೆ ಜೈಲು ಸೇರಿದನಂತೆ.

ಪುಸ್ತಕದ ಉದ್ದಕ್ಕೂ ಕಾರಂತರ ಮಕ್ಕಳು ತಮ್ಮದೇ ಶೈಲಿಯ ಮೂಲಕ ಗತಿಸಿದ ಘಟನೆಗಳಿಗೆ ಜೀವಂತಿಕೆಯ ಸ್ಪರ್ಶ ಕೊಟ್ಟಿದ್ದಾರೆ.

ಅಪ್ಪನ ಬಗ್ಗೆ ಬರೆಯುವ ಉಲ್ಲಾಸ್ ಕಾರಂತರ ನೆನಪಿನ ಪುಟಗಳು ಬಿಚ್ಚಿಕೊಳ್ಳುತ್ತಾ, ದಲಿತರು ಮತ್ತು ದಮನಿತರ ಪರವಾಗಿ ನಿಲ್ಲುವ ತಾತ ಸಮಾಜವಾದಿಗಳು ಮತ್ತು ಆರ್‌ಎಸ್‌ಎಸ್ ನಂತಹ ಸಂಘಟನೆಗಳಲ್ಲಿ ಸಮಾನ ಸ್ನೇಹ ಹೊಂದಿದ್ದರು ಎನ್ನುವಾಗ ನೆನಪಾಯಿತು. ಒಂದು ಸಾರಿ ಸಾಲಿಗ್ರಾಮದ ಶಿವರಾಮ ಉಡುಪರ ತಂಡ ಕಾರಂತರ ಮನೆಗೆ ಬಂದು ಅಯೋಧ್ಯೆಯ ರಾಮಜನ್ಮ ಸ್ಥಳದಲ್ಲಿ ರಾಮಮಂದಿರ ನಿರ್ಮಾಣವಾಗಬೇಕು, ಅದಕ್ಕಾಗಿ ಸಹಿ ಸಂಗ್ರಹಕ್ಕೆ ಬಂದಿದ್ದೇವೆ. ತಾವು ಸಹಿ ಹಾಕಲು ವಿನಂತಿ ಎನ್ನುತ್ತಾರೆ. ಸಹಿ ಸಂಗ್ರಹಣ ಪತ್ರಕ್ಕೆ ಸಹಿ ಹಾಕಲು ಅಣಿಯಾಗುತ್ತಿದ್ದ ಕಾರಂತರಿಗೆ ಉಡುಪರು ಅದೇನೋ ಹೇಳಲು ಹೊರಟಿದ್ದರು. ತಕ್ಷಣ ಗದರಿಸುವ ಧ್ವನಿಯಲ್ಲಿ ಕಾರಂತರು, ಮಂದಿರವಲ್ಲೇ ಕಟ್ಟಬೇಕೆಂದು ಹೇಳಿ. ಮಸೀದಿ ಕಟ್ಟುವುದು ಸರಕಾರಕ್ಕೆ ಬಿಟ್ಟಿದ್ದು ಎನ್ನುತ್ತಲೇ ಸಹಿ ಹಾಕಿದ್ದರು. ಮರುದಿನ ಪ್ರಮುಖ ಮಾಧ್ಯಮದಲ್ಲಿ ರಾಮ ಮಂದಿರಕ್ಕೆ ಕಾರಂತರ ಸಹಿ ಎಂಬ ಸುದ್ದಿ ಪ್ರಕಟವಾಗಿತ್ತು. ಪರವಿರುದ್ಧ ಚರ್ಚೆಗಳು ಬಂದಾಗ ಸ್ಪಷ್ಟನೆ ಕೊಟ್ಟ ಕಾರಂತರು, ನನ್ನ ಸ್ನೇಹಿತರು ಬಂದು ಸಹಿ ಕೇಳಿದ್ದರು. ಅದರಿಂದ ವಿವಾದಗಳೇಳುತ್ತದೆ ಎಂದು ನನಗೆ ಅನಿಸಿರಲಿಲ್ಲ. ಇತಿಹಾಸದಲ್ಲಿ ಅಪಚಾರವಾಗಬಾರದೆಂಬ ನಿಲುವಿಗೆ ನನ್ನ ಸಹಮತವಿದೆ ಎಂದು ತನ್ನ ಸಹಿ ಸಮರ್ಥಿಸಿದ್ದರು.



ಕಾರಂತರ ಪರಿಸರದ ಹುಚ್ಚಿನ ಬಗ್ಗೆ ಮಗಳು ಕ್ಷಮಾ ಬರೆಯುತ್ತಾ ಹೇಳುತ್ತಾರೆ. ಪ್ರಕೃತಿಯ ಅಂತರ್ಯ ಅರಿಯುವ ಭರದಲ್ಲಿ ಅಪ್ಪ ಕೊಡಚಾದ್ರಿಯ ಬೆಟ್ಟ ಇಳಿಯುವಾಗ ಹುಲಿಯೊಂದು ಅವರೆದುರೇ ಬಂದು ನಿಂತು ಬಿಟ್ಟಿತಂತೆ. ಹಸಿದ ಹುಲಿಯಾಗಿದ್ದರೆ ಎದುರು ನಿಂತ ಮನುಷ್ಯನನ್ನು ಹಾಗೆ ಬಿಡುತ್ತಿತ್ತೇ..? ಕೆಲ ಸೆಕೆಂಡುಗಳ ನಂತರ ಕಾರಂತರನ್ನೇ ನೋಡುತ್ತಿದ್ದ ಹುಲಿ ಸರಿದು ಹೋಯಿತಂತೆ. ಆದರೆ, ಕಾರಂತರೆಂಬ ಪ್ರಕೃತಿಪ್ರಿಯ ಹುಲಿಯ ರೌದ್ರ ಸೌಂದರ್ಯವನ್ನು ನೋಡುತ್ತಾ ಹಾಗೆ ಮೈಮರೆತು ನಿಂತು ಬಿಟ್ಟಿದ್ದರಂತೆ.

ಕಾರಂತರ ಮೂವರು ಮಕ್ಕಳು ಆರಂಭದಲ್ಲಿ ಹಾಗೂ ಅಂತ್ಯದಲ್ಲಿ ಒಟ್ಟಾಗಿ ಪೋಣಿಸಿ ಬರೆದ ಕೆಲವೆಡೆ ವೈಯಕ್ತಿಕವಾಗಿ ಬರೆದ ನೆನಪಿನ ಬುತ್ತಿಯಿಂದ ಹೆಕ್ಕಿ ತೆಗೆದ ಬರಹಗಳು ಅಲ್ಲಲ್ಲಿ ಖುಷಿ ಕೊಟ್ಟರೆ, ಕೆಲವೆಡೆ ಎಂದೂ ಕೇಳದ ಕಾರಂತರೆಂಬ ದೈತ್ಯ ಪ್ರತಿಭೆಯ ವಿವಿಧ ಮುಖಗಳ ಪರಿಚಯ ಮಾಡಿಸುತ್ತದೆ.

ಉತ್ತರ ಕರ್ನಾಟಕದಲ್ಲಿ ಕೆನರಾ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಇಚ್ಛೆ ಕಾರಂತರಿಗೇಕೆ ಬಂತು ಎಂಬುದು ಹೊರ ಪ್ರಪಂಚಕ್ಕೆ ಇನ್ನೂ ಅರ್ಥವಾಗಿಲ್ಲ. ಆದರೆ ಕಾರಂತರೆಂಬ ಜ್ಞಾನದ ಗಣಿ ಲೋಕಸಭೆಗೆ ಹೋದರೆ ಪಾರ್ಲಿಮೆಂಟಿಗೆ ಭೂಷಣ ಎಂದು ಖ್ಯಾತ ಬರಹಗಾರ ಸಂತೋಷ ಕುಮಾರ್ ಗುಲ್ವಾಡಿ ಹೇಳಿದ್ದರು. ಚುನಾವಣೆಗೆ ನಾಮಪತ್ರ ಸಲ್ಲಿಸಿದ ಕಾರಂತರು, ಪೂರ್ವ ನಿರ್ಧರಿತ ಕಾರ್ಯಕ್ರಮವಿದೆ ಎಂದು ಅಮೆರಿಕಕ್ಕೆ ಹೋಗಿದ್ದರು. ಅವರು ಮರಳಿದಾಗ ಚುನಾವಣೆ ಮುಗಿದು ಕಾರಂತರು ಸೋತಿದ್ದರು. ಸೋತ ಕಾರಂತರ ಮನೆಗೆ ಕೆಲವರು ಹೋಗಿ ಸಮಾಧಾನದ ಮಾತುಗಳನ್ನು ಆಡಿದ್ದರು. ನನಗೆ ದೇಶ ವಿದೇಶಗಳಲ್ಲಿ ಸಾವಿರಾರು ಮಂದಿ ಓದುವ ಅಭಿಮಾನಿಗಳಿದ್ದಾರೆ. ಅವರೆಲ್ಲ ಒಂದೇ ಗ್ರಾಮದಲ್ಲಿದ್ದರೆ ಬರುವ ಪಂಚಾಯತ್ ಚುನಾವಣೆಯಲ್ಲಿ ನಾನು ಗೆಲ್ಲಬಹುದು ಎನ್ನುತ್ತಾ ಬಂದವರನ್ನೇ ಕಾರಂತರು ಸಮಾಧಾನಿಸಿ ಕಳುಹಿಸಿದ್ದರು. ಬಹುಮುಖಿ ಪ್ರತಿಭಾವಂತರು ಎಂದು ಹೆಮ್ಮೆಯಿಂದ ಹೇಳಲು ಹೋದಾಗ ಕಾರಂತರ ಮೂವರು ಮುದ್ದಿನ ಮಕ್ಕಳು, ಕಾರಂತರ ಅಂತಿಮ ದಿನಗಳಲ್ಲಿ ಜೊತೆಗಿದ್ದ 'ಮಾ' ಬಗ್ಗೆ ಅದೇಕೇ ಬರೆದರೋ ಅರ್ಥವಾಗುತ್ತಿಲ್ಲ. ಅದು ಅವರ ಅಂತರಾಳದ ನೋವು ಇರಬಹುದು.

ಒಟ್ಟಾರೆ, ಚಿರಂಜೀವಿ ಸಿಂಗ್ ಉಲ್ಲೇಖಿಸಿದಂತೆ ಕಾರಂತರು ಅಸಾಮಾನ್ಯ ಪ್ರತಿಭೆ ಎಂಬುದು ಒಂದು ಶೇಕಡಾ ಮತ್ತು ತೊಂಬತ್ತೊಂಬತ್ತು ಶೇಕಡಾ ಪರಿಶ್ರಮದಿಂದ. ಶತಮಾನದ ಸಾಹಿತಿ ಕಾರಂತರೆಂದರೆ ಸಾಮಾನ್ಯರಲ್ಲ, ಅಸಾಮಾನ್ಯರು. 'ಗ್ರೋಯಿಂಗ್ ಅಪ್ ಕಾರಂತ್' ಎಂಬ ಆಂಗ್ಲ ಭಾಷೆಯ ಪುಸ್ತಕವನ್ನು ವಿಶ್ವೇಶ್ವರ ಭಟ್ "ಕಾರಂತರ ಸುಳಿಯಲ್ಲಿ" ಕುಸುರಿ ಕೆಲಸದಂತೆ ಕನ್ನಡಕ್ಕೆ ಅನುವಾದಿಸಿದ್ದಾರೆ.

ಕಾರಂತರಿಗೆ ಕಾರಂತರೆ ಸಾಟಿ.

ವಿಜಯ್ ದ್ರಾವಿಡ ಪಕ್ಷಗಳ ಹಾದಿ ತುಳಿಯದಿರಲಿ!

ದ್ರಾವಿಡ ಸಿದ್ಧಾಂತಿಗಳು ಪ್ರತಿಪಾದಿಸುತ್ತಿರುವ ಹಿಂದು ವಿರೋಧಿ, ಹಿಂದಿ ವಿರೋಧಿ, ಉತ್ತರ ಭಾರತ ವಿರೋಧಿ, ಸಂಸ್ಕೃತ ವಿರೋಧಿ ಧೋರಣೆಗಳಿಂದ ವಿಜಯ ದೂರವಿರಬೇಕಾಗಿದೆ.

▸ ಮುರಲೀಧರ್

ಭಾರತದ ರಾಜಕಾರಣವು ಸಿನಿಮಾದೊಂದಿಗೆ ಕುತೂಹಲಕಾರಿ ನಂಟು ಹೊಂದಿದೆ. ದಕ್ಷಿಣ ಭಾರತದಲ್ಲಿ ಸಿನಿಮಾ ತಾರೆಯರು ರಾಜಕೀಯ ಪ್ರವೇಶಿ, ತಮ್ಮದೇ ಪಕ್ಷ ಸ್ಥಾಪಿಸಿ ನಾಟಕೀಯ ಫಲಿತಾಂಶಗಳನ್ನು ಸೃಷ್ಟಿಸಿದ್ದಾರೆ. ಆದರೆ ಸಿನಿಮಾ ನಟರ ರಾಜಕೀಯ ಯಶಸ್ಸು ದೀರ್ಘಾವಧಿಗೆ ಉಳಿದುದು ಕಡಿಮೆ. ರಾಜಕೀಯ ಪ್ರವೇಶಿಸಿದ ಬಹಳಷ್ಟು ಮಂದಿ ಸಿನಿಮಾ ನಟರು ಬದಿಗೆ ಬಿದ್ದು ಹೋಗಿದ್ದಾರೆ. ಕೆಲವರು ಮಾತ್ರ ದೊಡ್ಡ ಯಶಸ್ಸು ಸಾಧಿಸಿದ್ದಾರೆ.

ಅತ್ಯಂತ ಯಶಸ್ಸು ಕಂಡವರಲ್ಲಿ ಎದ್ದು ಕಾಣುವ ಹೆಸರೆಂದರೆ ಎಂ.ಜಿ. ರಾಮಚಂದ್ರನ್ ಮತ್ತು ಎನ್‌ಟಿ ರಾಮರಾವ್. ಎಂ.ಜಿ. ರಾಮಚಂದ್ರನ್ ತಮಿಳ್ನಾಡು ರಾಜಕೀಯಕ್ಕೆ ಹೊಸದೊಂದು ಸ್ವರೂಪ ನೀಡಿದವರು. ಅದೇರೀತಿ ಆಂಧ್ರಪ್ರದೇಶದಲ್ಲಿ ಎನ್‌ಟಿ ರಾಮರಾವ್ ಕೂಡಾ ರಾಜಕೀಯ ಪ್ರವೇಶಿಸಿದ ತಕ್ಷಣವೇ ಅಭೂತಪೂರ್ವ ಯಶಸ್ಸು ಕಂಡವರು.

ಇದೇವೇಳೆ, ರಾಜಕೀಯದಲ್ಲಿ ವಿಫಲರಾದ ಸಿನಿಮಾ ನಟರ ಪಟ್ಟಿಯೂ ದೊಡ್ಡದಿದೆ. ಚಿರಂಜೀವಿ ತಮ್ಮ ವರ್ಚಸ್ಸನ್ನು ರಾಜಕೀಯದಲ್ಲಿ ಮತಗಳನ್ನಾಗಿ ಪರಿವರ್ತಿಸಲು ವಿಫಲರಾದರು. ಕಮಲಹಾಸನ್ ಕೂಡಾ ತಮ್ಮ ರಾಜಕೀಯದಲ್ಲಿ ಯಶಸ್ಸು ಕಾಣಲಿಲ್ಲ. ರಜನೀಕಾಂತ್ ಕೂಡಾ ರಾಜಕೀಯ ಯಶಸ್ಸು ಕಾಣುವುದು ಸಾಧ್ಯವಾಗಲಿಲ್ಲ. ಪವನ್ ಕಲ್ಯಾಣ್ ಅಲ್ಪಸ್ವಲ್ಪ ಯಶಸ್ಸು ಕಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ನೋಡುವಾಗ ತಮಿಳು ಚಿತ್ರನಟ ವಿಜಯ್ ಅವರ ಯಶಸ್ಸು ಗಮನಾರ್ಹವಾದುದು. ಕೇವಲ ಚಿತ್ರನಟನೆಂಬ ಜನಪ್ರಿಯತೆಗೆ ಒಲಿದ ಗೆಲುವಲ್ಲ ಇದು. ಅವರ ಯಶಸ್ಸಿನ ಹಿಂದೆ ಇನ್ನೂ ಹಲವಾರು ಅಂಶಗಳಿವೆ. ಮುಖ್ಯವಾಗಿ ಡಿಎಂಕೆ ಮುಖಂಡ ಸ್ಟಾಲಿನ್ ಸರಕಾರದ ವಿರುದ್ಧ ಜನರಲ್ಲಿ 'ಆಡಳಿತ ವಿರೋಧಿ ಭಾವನೆ' ಹೆಪ್ಪುಗಟ್ಟಿತ್ತು. ಡಿಎಂಕೆಗೆ ಪರ್ಯಾಯ ಸರಕಾರವೊಂದನ್ನು ಜನರು ಬಯಸಿದ್ದರು. ಅವರು ವಿಜಯ್‌ರನ್ನು ಆಯ್ಕೆ ಮಾಡಿಕೊಂಡರು.



ಈ ಫಲಿತಾಂಶದ ಇನ್ನೊಂದು ಮಹತ್ವದ ಅಂಶವೆಂದರೆ, ತಮಿಳ್ನಾಡು ರಾಜಕೀಯವನ್ನು ನಿಯಂತ್ರಿಸುತ್ತಿದ್ದ ದ್ರಾವಿಡ ರಾಜಕೀಯದಿಂದಲೂ ಜನರು ದೂರ ಸರಿಯಲು ಬಯಸುತ್ತಿರುವುದು. ಕಳೆದ ಕೆಲವು ದಶಕಗಳಿಂದ ದ್ರಾವಿಡ ರಾಜಕೀಯವೇ ತಮಿಳ್ನಾಡಿನ ಆಗುಹೋಗುಗಳನ್ನು ನಿಯಂತ್ರಿಸುತ್ತಿತ್ತು. ಇದು ಜನರ ಭಾವನೆ ಕೆರಳಿಸುತ್ತಿತ್ತೇ ಹೊರತು ರಾಜ್ಯದ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟಿರಲಿಲ್ಲ. ದ್ರಾವಿಡ ಅಸ್ಮಿತೆಯ ಹೆಸರಿನಲ್ಲಿ ಸನಾತನ ಧರ್ಮ ವಿರೋಧಿ, ಹಿಂದಿ ವಿರೋಧಿ ಭಾವನೆ ಕೆರಳಿಸಲಾಗುತ್ತಿತ್ತು. ಉತ್ತರ ಭಾರತದ ಕುರಿತಂತೆಯೂ ದ್ವೇಷ ಭಾವನೆ ಬಿತ್ತಲಾಗುತ್ತಿತ್ತು. ಸಾಮಾಜಿಕ ನ್ಯಾಯದ ಕುರಿತಾಗಿ ಆರಂಭಗೊಂಡ ಆಂದೋಲನವೊಂದು ಬಳಿಕ ರಾಜಕೀಯ ಸಿದ್ಧಾಂತವಾಗಿ ಮಾರ್ಪಟ್ಟಿತ್ತು. ಸಮಯ ಕಳೆದಂತೆ ಈ ಸಿದ್ಧಾಂತವೊಂದು ಕರ್ಮಠ ಹವ್ಯಾಸವಾಗಿ ಬದಲಾಗಿತ್ತು.

ರಾಜಕೀಯದಲ್ಲಿ ಇಂತಹ ಹವ್ಯಾಸಗಳು ಜನರು ರೋಸಿ ಹೋಗುವಂತೆ ಮಾಡುತ್ತದೆ. ಈಗ ದ್ರಾವಿಡ ಸಿದ್ಧಾಂತವು ಪತನಗೊಳ್ಳುತ್ತಿರುವುದಷ್ಟೇ ಅಲ್ಲ, ಅದು ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಈಗಿನ ನಾಯಕರು ವರ್ಚಸ್ಸನ್ನು ಕಳಕೊಂಡಿದ್ದಾರೆ. ಸೈದ್ಧಾಂತಿಕ ಮೇಲ್ಪೈಯು ದುರ್ಬಲವಾಗಿದೆ. ಮುಖಂಡರ ಮಾತುಗಳು ಕ್ಲೀಷೆಯಾಗುತ್ತಿವೆ.

ಇಂತಹ ಸಂದರ್ಭದಲ್ಲಿ ಹೊಸ ಮುಖವಾಗಿ ವಿಜಯ್ ರಾಜಕೀಯ ಪ್ರವೇಶಿಸಿದ್ದಾರೆ. ಅವರು ಈ ಪರಿಸ್ಥಿತಿಯನ್ನು ಬದಲಿಸಬಲ್ಲರೇ? ಅಥವಾ ಅದರೊಳಗೆ ತಾವೂ ಒಂದಾಗುತ್ತಾರೆಯೇ? ಈ ನಿಟ್ಟಿನಲ್ಲಿ ಇತಿಹಾಸ ನೀಡುವ ಎಚ್ಚರಿಕೆಯನ್ನು ಅವರು ಗಮನಿಸಬೇಕಾಗಿದೆ.

ಮಮತಾ ಬ್ಯಾನರ್ಜಿಯ ಉದಾಹರಣೆ ನೋಡಿ. ಪಶ್ಚಿಮ ಬಂಗಾಳದಲ್ಲಿ ಬದಲಾವಣೆ ತರುವ ಆಶ್ವಾಸನೆಯೊಂದಿಗೆ ಅವರು ಎಡಪಕ್ಷಗಳಿಗೆ ಸವಾಲೊಡ್ಡಿದರು. ಆದರೆ ಅಧಿಕಾರಕ್ಕೆ ಬಂದ ಬಳಿಕ ಅವರು ಹಳೆಯ ವ್ಯವಸ್ಥೆಯನ್ನು ಬದಲಿಸಲಿಲ್ಲ, ಅದನ್ನೇ ಮತ್ತೆ ಜಾರಿಗೊಳಿಸಿದರು. ರಾಜಕೀಯ ಹಿಂಸಾಚಾರ ಹಿಂದಿನಂತೆಯೇ ಮುಂದುವರಿಯಿತು. ಕೈಗಾರಿಕಾ ವಿರೋಧಿ ಭಾವನೆ ಕೂಡಾ ಮುಂದುವರಿಯಿತು. ವ್ಯವಸ್ಥೆಯು ತನ್ನ ಮುಖ ಬದಲಿತಷ್ಟೇ ಹೊರತು ತನ್ನ ಗುಣಲಕ್ಷಣಗಳನ್ನು ಬದಲಿಸಲಿಲ್ಲ.

ವಿಜಯ್ ಅವರ ಪಕ್ಷಕ್ಕೆ ಬಹುಮತ ದೊರಕದಿದ್ದರೂ ಬೆರಳೆಣಿಕೆಯ ಸಂಖ್ಯೆಯ ಶಾಸಕರ ಕೊರತೆಯಷ್ಟೇ ಇರುವುದರಿಂದ ಹೊರಗಿನ ಬೆಂಬಲ ಪಡೆದು ಸರಕಾರ ರಚಿಸುವುದು ಕಷ್ಟವಾಗಲಾರದು.

ಆದರೆ ವಿಜಯ್ ತಮ್ಮ ರಾಜಕೀಯ ದಾರಿಯಲ್ಲಿ ಮುನ್ನಡೆಯುವಾಗ ಎಚ್ಚರ ವಹಿಸಬೇಕಾಗಿರುವುದು ಅಗತ್ಯವಾಗಿದೆ.

ಏಕೆಂದರೆ ತಮಿಳ್ನಾಡಿನಲ್ಲಿ ಅತ್ಯಂತ ಸುಲಭದ ರಾಜಕೀಯ ದಾರಿಯೆಂದರೆ ದ್ರಾವಿಡ ರಾಜಕೀಯವನ್ನೇ ಮುಂದುವರಿಸುವುದು. ಅದೇ ದ್ರಾವಿಡ ಅಸ್ಮಿತೆ ಕುರಿತಂತೆ ಮಾತನಾಡುವುದು, ಹಿಂದಿ ವಿರೋಧಿ ಭಾವನೆ ಕೆರಳಿಸುವುದು. ಅಂದರೆ ಹಳೆಯ ರಾಜಕಾರಣದ ಹೊಸ ವರಸೆಯನ್ನೇ ತೋರಿಸುವುದು. ಒಂದು ರೀತಿಯಲ್ಲಿ ಅದು ಸುರಕ್ಷಿತ. ಎಲ್ಲರೂ ಮಾಡುವಂತಹುದು. ಅಲ್ಪ ಕಾಲಾವಧಿಯಲ್ಲಿ ಅದು ಉತ್ತಮವಾಗಿ ಕಾರ್ಯಾಚರಿಸುತ್ತದೆ ಕೂಡಾ.

ಆದರೆ ಅದು ಸುಧಾರಣೆ ತರಲಾರದು. ರಾಜ್ಯದ ಪರಿಸ್ಥಿತಿ ಬದಲಿಸಲು ನೆರವಾಗಲಾರದು. ವಿಜಯ್ ಕೂಡಾ ಅದೇ ಪಥವನ್ನು ಹಿಡಿದರೆ ಅವರ ಪ್ರಗತಿ ಮಹತ್ವದ್ದೆನಿಸಬಹುದು. ಆದರೆ ಐತಿಹಾಸಿಕವಾಗಲಾರದು.

ವಿಜಯ್ ಐತಿಹಾಸಿಕ ಸಾಧನೆ ಮಾಡಬೇಕಾದರೆ ಕಠಿಣ ಹಾದಿ ತುಳಿಯಬೇಕು. ಈವರೆಗೆ ಅನುಸರಿಸುತ್ತಿದ್ದ ರಾಜಕಾರಣಕ್ಕಿಂತ ಭಿನ್ನ ಪಥ ತುಳಿಯಬೇಕು. ಇದ್ದುದನ್ನೇ ಮುಂದುವರಿಸುವುದಲ್ಲ.

ಅದರರ್ಥವೆಂದರೆ ಅವರು ದ್ರಾವಿಡ ರಾಜಕೀಯವನ್ನು ಮೀರಿ ಸಾಗಬೇಕು. ಪ್ರತ್ಯೇಕತಾವಾದಿ ಮನೋಭಾವವನ್ನು ನಿವಾರಿಸಬೇಕು. ಭಾಷಾ ದ್ವೇಷ, ಪ್ರಾದೇಶಿಕ ದ್ವೇಷವನ್ನು ತ್ಯಜಿಸಬೇಕು. ಭಾರತದ ಅಸ್ಮಿತೆಗಿಂತ ತಮಿಳು ಅಸ್ಮಿತೆ ಮಿಗಿಲಾದುದು ಎಂಬಂತಹ ವರಸೆಗಳನ್ನು ನಿವಾರಿಸಬೇಕು. ಇಂತಹ ಮಾತುಗಳೆಲ್ಲ ಈಗ ಬದಲಾಗುತ್ತಿರುವ ಭಾರತದಲ್ಲಿ ಪ್ರಯೋಜನಕ್ಕೆ ಬರುವುದಿಲ್ಲ.

ತಮಿಳ್ನಾಡಿನ ಹೊಸ ಮತದಾರರು ತಮ್ಮ ಅಸ್ಮಿತೆಯನ್ನು ಕಳಚಿಕೊಳ್ಳುತ್ತಿಲ್ಲ. ಬದಲಾಗಿ ಎಲ್ಲರೊಂದಿಗೆ ಜತೆಯಾಗಿ ಬಾಳುವ ಮತ್ತು ಭಾರತದೊಂದಿಗೆ ಗುರುತಿಸಿಕೊಳ್ಳುವ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಅವರಿಗೆ ಕೆಲಸ ಬೇಕು. ಕೈಗಾರಿಕೆ ಬೇಕು. ಪ್ರಗತಿ ಬೇಕು. ಜಾಗತಿಕ ಸಮನ್ವಯ ಬೇಕು.

ಇಲ್ಲೇ ವಿಜಯ್‌ಗೆ ಒಳ್ಳೆಯ ಅವಕಾಶವಿರುವುದು. ಅವರು ತಮಿಳು ರಾಜಕೀಯವನ್ನು ಪುನರ್ ವ್ಯಾಖ್ಯಾನಿಸಬಹುದು. ಕೇಂದ್ರ ಸರಕಾರದ ವಿರೋಧ ಕಟ್ಟಿಕೊಳ್ಳುವುದಕ್ಕಿಂತ ಅದರೊಂದಿಗೆ ಜತೆಗೂಡಿ ಕಾರ್ಯ ನಿರ್ವಹಿಸುವ ಮೂಲಕ ತಮ್ಮ ರಾಜ್ಯದ ಅಭಿವೃದ್ಧಿಗೆ ಕಾರಣರಾಗಬಹುದು.

ಭಾರತದ ರಾಜಕಾರಣದಲ್ಲಿ ವಿರೋಧಪಕ್ಷವೆಂದರೆ ಅಡ್ಡಗಾಲು ಹಾಕುವುದೆಂದರ್ಥವಲ್ಲ. ಹೊಂದಾಣಿಕೆಯ ನೀತಿ ಅನುಸರಿಸಿದರೆ ಎಲ್ಲವನ್ನೂ ಸಾಧಿಸಬಹುದು. ನವೀನ್ ಪಟ್ನಾಯಕ್ ತಮ್ಮ ರಾಜಕೀಯ ಸ್ವಾತಂತ್ರ್ಯ ಬಿಟ್ಟುಕೊಡದೆ, ಕೇಂದ್ರದೊಂದಿಗೆ ವಿರೋಧ ಕಟ್ಟಿಕೊಳ್ಳದೆ ರಾಜ್ಯದ ಅಭಿವೃದ್ಧಿಗೆ ಕೇಂದ್ರದಿಂದ ಕೊಡುಗೆ ಪಡೆಯುತ್ತಿದ್ದರು.

ವಿಜಯ್ ರಾಷ್ಟ್ರ ಮಟ್ಟದಲ್ಲಿ ಯಾವುದೇ ಪಕ್ಷದ ಜತೆಗೂಡಬೇಕಾಗಿಲ್ಲ. ಯಾವುದೇ ಮೈತ್ರಿಕೂಟದಲ್ಲಿ ಸೇರಬೇಕೆಂದಿಲ್ಲ. ಅದೇರೀತಿ ನಿರಂತರ ವೈರವನ್ನೂ ಕಟ್ಟಿಕೊಳ್ಳಬೇಕಾಗಿಲ್ಲ. ತಮಿಳ್ನಾಡಿನ ಪ್ರಗತಿಯು ದೇಶದ ಪ್ರಗತಿಯೊಂದಿಗೂ ತಳುಕು ಹೊಂದಿದೆ. ಮೂಲಭೂತ ಸೌಕರ್ಯ, ಹೂಡಿಕೆ, ಉತ್ಪಾದನೆ, ಜಾಗತಿಕ ಪೂರೈಕೆ ಮುಂತಾದ ವಿಚಾರಗಳಲ್ಲಿ ಕೇಂದ್ರದೊಂದಿಗೆ ಸಮನ್ವಯದಿಂದ ಸಾಗುವುದರಲ್ಲಿ ಹಿತವಿದೆ.

ತಮ್ಮ ರಾಜಕೀಯ ಸ್ವಾಯತ್ತೆಯನ್ನು ಕಳೆಕೊಳ್ಳದೆ ಕೇಂದ್ರ ಸರಕಾರದ ಜತೆಗೂಡಿ ಕಾರ್ಯ ನಿರ್ವಹಿಸುವುದೆಂದರೆ ಅದು ರಾಜಕೀಯದಲ್ಲಿ ರಾಜಿ ಮಾಡಿಕೊಂಡಂತಲ್ಲ. ಅದು ಆಡಳಿತದ ಚಾತುರ್ಯ.

ಇದೇವೇಳೆ ಅವರು ಈಗಿನ ದ್ರಾವಿಡ ಸಿದ್ಧಾಂತಿಗಳು ಪ್ರತಿಪಾದಿಸುತ್ತಿರುವ ಹಿಂದು ವಿರೋಧಿ, ಹಿಂದಿ ವಿರೋಧಿ, ಉತ್ತರ ಭಾರತ ವಿರೋಧಿ, ಸಂಸ್ಕೃತ ವಿರೋಧಿ ಧೋರಣೆಗಳಿಂದ ದೂರವಿರಬೇಕಾಗಿದೆ.

ವಿಜಯ್ ಕೂಡಾ ದ್ರಾವಿಡ ರಾಜಕೀಯದ ಚೌಕಟ್ಟಿನೊಳಗೇ ಕಾರ್ಯಾಚರಿಸಿದರೆ ಅವರು ಜನಪ್ರಿಯತೆ ಪಡೆಯಬಹುದೇನೋ, ಆದರೆ ಅದು ಸೀಮಿತ. ಆದರೆ ಅವರು ಅದನ್ನು ಮೀರಿ ಸಾಗಿದರೆ, ದ್ರಾವಿಡ ಎಂಬುದಕ್ಕಿಂತಲೂ ತಮಿಳು ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯವೆಸಗಿದರೆ, ಎಲ್ಲರ ಜತೆಗೂಡಿ ಸಾಗುವ ಮನೋಭಾವ ಪ್ರದರ್ಶಿಸಿದರೆ, ಕೇಂದ್ರ ಸರಕಾರದ ಜತೆ ಸಹಕಾರದ ವರ್ತನೆ ತೋರಿದರೆ ಅದು ತಮಿಳು ರಾಜಕೀಯದ ಭಾಷೆಯನ್ನೇ ಬದಲಿಸಬಲ್ಲುದು. ವಿಜಯ್ ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ? ಕಾದು ನೋಡಬೇಕು.

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಬೃಹತ್ ವೇದಿಕೆ

▸ ಎಂ.ಜೆ. ತಿಪ್ಪೇಸ್ವಾಮಿ

• **ಚಿತ್ರದುರ್ಗ:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಸಮಾರಂಭ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಭರದ ಸಿದ್ಧತೆಗಳು ನಡೆಯುತ್ತಿವೆ. ಅಭಿಮಾನಿಗಳು ಅತ್ಯಂತ ಉತ್ಸಾಹದಿಂದ ವಿವಿಧ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಸಂಸದ ಗೋವಿಂದ ಕಾರಜೋಳ ಕಾರ್ಯಕ್ರಮದ ನೇತೃತ್ವ ವಹಿಸಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮ ಸ್ಥಳಕ್ಕೆ ಪ್ರತಿದಿನ ಭೇಟಿ ನೀಡಿ ಕಾರ್ಯಕ್ರಮದ ಸಿದ್ಧತೆ ಕುರಿತು ಪರಿಶೀಲಿಸುತ್ತಿದ್ದಾರೆ. ನಗರದ ಹೊರವಲಯದ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಪಕ್ಕದ ಮೈದಾನ ಬಿ.ಎಸ್. ಯಡಿಯೂರಪ್ಪನವರ ಅಭಿಮಾನೋತ್ಸವ ಆಚರಣೆಗೆ ಜರ್ಮನ್ ತಂತ್ರಜ್ಞಾನದಲ್ಲಿ 60 ಅಡಿ ಎತ್ತರ, 200 ಅಡಿ ಉದ್ದ, 140 ಅಡಿ ಅಗಲದ ವಿನೂತನ ಶೈಲಿಯ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ. ಮುಖ್ಯವಾಗಿ ಮೂರು ವೇದಿಕೆಗಳನ್ನು ನಿರ್ಮಿಸಲಾಗುತ್ತಿದೆ. ಒಂದರಲ್ಲಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ



ಗೃಹ ಸಚಿವ ಅಮಿತ್ ಶಾ ಸೇರಿದಂತೆ ವಿವಿಧ ಮುಖಂಡರು ಆಸೀನರಾಗುವರು. ಈ ವೇದಿಕೆ ಒಂದು ಬದಿಯಲ್ಲಿ ಸುಮಾರು 1000 ವಿವಿಧ ಮಠಾಧೀಶರಿಗೆ ವೇದಿಕೆ ನಿರ್ಮಾಣ ಮಾಡಲಾಗಿದೆ. ಮತ್ತೊಂದು ಬದಿಯಲ್ಲಿ ಭಾಗ್ಯಲಕ್ಷ್ಮಿ ಸೇರಿದಂತೆ ವಿವಿಧ ಫಲಾನುಭವಿಗಳಿಗೆ ವೇದಿಕೆ ನಿರ್ಮಿಸಲಾಗುತ್ತಿದೆ.

ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು 10 ಲಕ್ಷ ಸಂಖ್ಯೆಯ ಅಭಿಮಾನಿಗಳು ಆಗಮಿಸುವ ನಿರೀಕ್ಷೆ ಇದೆ. ಹಾಗಾಗಿ 2 ಲಕ್ಷ ಜನರಿಗೆ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಇಡೀ ಮೈದಾನಕ್ಕೆ ಧ್ವನಿ ಬೆಳಕಿನ ವ್ಯವಸ್ಥೆ ಮಾಡಲಾಗುತ್ತಿದೆ. ಇದಕ್ಕಾಗಿ ನೂರಾರು ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ.

ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶ್‌ಗೌಡ ವೇದಿಕೆ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ಬೆಂಗಳೂರಿನ ರಾಜಾ ಎಂಟರ್‌ಪ್ರೈಸಸ್ ಎಂಬ ಕಂಪನಿಗೆ ವೇದಿಕೆ ನಿರ್ಮಾಣ ಕಾಮಗಾರಿ ವಹಿಸಲಾಗಿದೆ. ಬೆಂಗಳೂರಿನ ಅರಮನೆ ಮೈದಾನ ಸೇರಿದಂತೆ ಬೆಂಗಳೂರಿನ ವಿವಿಧೆಡೆಗಳಲ್ಲಿ ನಡೆಯುವ ಬಹುತೇಕ ಕಾರ್ಯಕ್ರಮಗಳಿಗೆ ಕೆಲಸ ಮಾಡಿದ ಅನುಭವ ಈ ಕಂಪನಿಯದ್ದು. ಹಾಗಾಗಿ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆಗಾಗಿ ನೂರಾರು ಸಂಖ್ಯೆಯ ಕಾರ್ಮಿಕರು ಹಗಲಿರುಳು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ.

ಸುಮಾರು 8–10 ಕ್ರೇನ್‌ಗಳು, ಜೆಸಿಬಿ ಯಂತ್ರಗಳು, ಲಾರಿಗಳು ಸೇರಿದಂತೆ ನೂರಾರು ಸಂಖ್ಯೆಯ ವಾಹನಗಳು ವೇದಿಕೆ ನಿರ್ಮಾಣಕ್ಕೆ ಬೇಕಾದ ಪರಿಕರಗಳನ್ನು ಒದಗಿಸುವ ಕೆಲಸ ಮಾಡುತ್ತಿವೆ. ಒಂದಷ್ಟು ಟ್ರಾಕ್ಟರ್, ಲಾರಿ ಸೇರಿದಂತೆ ನೀರಿನ ಟ್ಯಾಂಕರ್‌ಗಳು ಮೈದಾನವನ್ನು ಸಮತಟ್ಟು ಮಾಡುತ್ತಿವೆ. ಮತ್ತೆ ಕೆಲವು ನೀರು ಹಾಕಿ ಸ್ವಚ್ಛಗೊಳಿಸುತ್ತಿವೆ. ಸಮಯದ ಅಭಾವ ಇರುವ ಕಾರಣ ಕಾರ್ಮಿಕರು ರಾತ್ರಿ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಿಕೊಂಡು ತ್ವರಿತವಾಗಿ ಕೆಲಸ ಮುಗಿಸುತ್ತಿದ್ದಾರೆ.

ಝಳದಿಂದ ರಕ್ಷಣೆಗೆ ಹೈದರಾಬಾದ್ ಫ್ಯಾನ್..!

ಬಿಸಿಲಿನ ಝಳದಿಂದ ಜನರಿಗೆ ರಕ್ಷಣೆ ನೀಡುವ ಉದ್ದೇಶದಿಂದ ಹೈದರಾಬಾದ್‌ನಿಂದ ನೂತನ ತಂತ್ರಜ್ಞಾನದ ಫ್ಯಾನ್ ತರಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಜನರಿಗೆ ಅವರು ಕುಳಿತಿರುವ ಕಡೆಗೆ ಕುಡಿವ ನೀರು, ಮಜ್ಜಿಗೆ ಪ್ಯಾಕೆಟ್‌ಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗಿದೆ. ಬನ್, ಬಾಳೆಹಣ್ಣು ನೀಡಲಾಗುವುದು. ಇದಕ್ಕಾಗಿ ಹಲವು ಪ್ರಬಂಧಕರನ್ನು ನೇಮಿಸಲಾಗಿದೆ.

ಔಷಧೋಪಕರಣ, ವೈದ್ಯರ ತಂಡದ ವ್ಯವಸ್ಥೆ

ಅಭಿಮಾನೋತ್ಸವಕ್ಕೆ ಬರುವ ಯಾವೊಬ್ಬ ಅಭಿಮಾನಿಗೂ ಚಿಕ್ಕ ಜನರಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರ ವಹಿಸಲಾಗುತ್ತಿದೆ. ಆರೋಗ್ಯದ ದೃಷ್ಟಿಯಿಂದ ಅಗತ್ಯ ವೈದ್ಯರ ತಂಡ ಕಾರ್ಯನಿರ್ವಹಿಸಲಿದೆ. ಅಲ್ಲದೇ ಅಗತ್ಯ ವಾಹನಗಳು ಹಾಗೂ ಔಷಧೋಪಕರಣಗಳ ವ್ಯವಸ್ಥೆ ಮಾಡಲಾಗಿದೆ.

ಒಂದು ಸಾವಿರ ಊಟದ ಕೌಂಟರ್

ವೇದಿಕೆ ಇಕ್ಕೆಲಗಳಲ್ಲಿ 25 ಕಡೆಗಳಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ. ಇವುಗಳಲ್ಲಿ ಸುಮಾರು ಒಂದು ಸಾವಿರದಷ್ಟು ಊಟದ ಕೌಟರ್‌ಗಳನ್ನು ತೆರೆಯಲಾಗಿದೆ. ಕಾರ್ಯಕ್ರಮ ನಿರ್ವಹಣೆಗೆ 22 ಸಮಿತಿಗಳನ್ನು ರಚಿಸಲಾಗಿದೆ. ಇವುಗಳಲ್ಲಿ ಸುಮಾರು 2000 ಸಂಖ್ಯೆಯ ಪ್ರಬಂಧಕರು ಸ್ವಯಂಪ್ರೇರಣೆಯಿಂದ ಕೆಲಸ ಮಾಡುತ್ತಿದ್ದಾರೆ.

1 ಕಿ.ಮೀ ವ್ಯಾಪ್ತಿಯಲ್ಲಿ ವಾಹನ ನಿಲುಗಡೆ

ವೇದಿಕೆಯ ಸುತ್ತಮುತ್ತಲಿನ ಒಂದು ಕಿ.ಮೀ. ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಸುಮಾರು 10 ರಿಂದ 12 ಸಾವಿರ ಬಸ್ಸುಗಳು, 80ರಿಂದ 90 ಸಾವಿರ ಕಾರು, ವ್ಯಾನ್ ಮತ್ತಿತರ ವಾಹನಗಳು, ಸುಮಾರು 50 ರಿಂದ 60 ಸಾವಿರ ದ್ವಿಚಕ್ರ ವಾಹನಗಳು ಬರುವ ನಿರೀಕ್ಷೆಯಿದೆ. 200 ಕಡೆಗಳಲ್ಲಿ ಬ್ಯಾರಿಕೇಡ್ ವ್ಯವಸ್ಥೆ ಮಾಡಿ ಪಾರ್ಕಿಂಗ್ ಸಮಸ್ಯೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡಲಾಗುತ್ತಿದೆ.

ಪ.ಬಂಗಾಳ ವಿಧಾನಸಭೆ ವಿಸರ್ಜಿಸಿದ ರಾಜ್ಯಪಾಲ

ಪುಟ 9➜ ಭಾರತೀಯ ಸಂವಿಧಾನದ 174(2)(ಬಿ) ವಿಧಿಯ ಅನ್ವಯ ಮೇ 7, 2026ರಿಂದ ಜಾರಿಗೆ ಬರುವಂತೆ ಈ ಆದೇಶ ಹೊರಡಿಸಲಾಗಿದೆ. 2026ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿದ್ದರೂ ಮುಖ್ಯಮಂತ್ರಿ ಸ್ಥಾನ ತೊರೆಯಲು ಮಮತಾ ಬ್ಯಾನರ್ಜಿ ನಿರಾಕರಿಸಿದ್ದರು.

ವಿಧಾನಸಭೆಯ ಅವಧಿ ಪೂರ್ಣಗೊಂಡಿದ್ದರೂ ಸರ್ಕಾರ ರಾಜೀನಾಮೆ ನೀಡದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಂವಿಧಾನಾತ್ಮಕ ಅನಿಶ್ಚಿತತೆ ಉಂಟಾಗಿದೆ ಎಂದು ರಾಜ್ಯಪಾಲರು ತಮ್ಮ ಅಧಿಸೂಚನೆಯಲ್ಲಿ ಉಲ್ಲೇಖಿಸಿದ್ದಾರೆ. ಹೊಸ ಸರ್ಕಾರ ರಚನೆಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ವಿಧಾನಸಭೆ ವಿಸರ್ಜನೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ಇದಕ್ಕೂ ಮುನ್ನ ಮಮತಾ ಬ್ಯಾನರ್ಜಿ ಅವರು ಚುನಾವಣಾ ಫಲಿತಾಂಶವನ್ನು ತಿರಸ್ಕರಿಸಿ, ಇದು ಜನಾದೇಶವಲ್ಲ, ಸಂಚು. ಚುನಾವಣಾ ಆಯೋಗದ ಬೆಂಬಲದೊಂದಿಗೆ ಬಿಜೆಪಿ ಅಕ್ರಮ ನಡೆಸಿದೆ. ಅಧಿಕೃತ ಫಲಿತಾಂಶಗಳಲ್ಲಿ ನಾವು ಸೋತಿರಬಹುದು, ಆದರೆ ನೈತಿಕವಾಗಿ ಗೆದ್ದಿದ್ದೇವೆ. ನಾನು ರಾಜೀನಾಮೆ ನೀಡುವುದಿಲ್ಲ ಎಂದು ಮೊಂಡು ವಾದ ಮಂಡಿಸಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಭ್ರಷ್ಟಾಚಾರ ಎನ್ನುವುದು ನೀಗದ ದಾಹವಿದ್ದಂತೆ. ಒಮ್ಮೆ ಭ್ರಷ್ಟಾಚಾರಕ್ಕೆ ಇಳಿದ ವ್ಯಕ್ತಿ ಎಷ್ಟೇ ಹಣ ಮಾಡಿದರೂ ಮತ್ತಷ್ಟು ಮಾಡಬೇಕು ಎನ್ನುವ ದಾಹಕ್ಕೆ ಇಳಿಯುತ್ತಾನೆ – **ಸಂತೋಷ್ ಹೆಗ್ಡೆ**

- ಬದುಕಲು ಹಣ ಬೇಕು ನಿಜ, ಆದರೆ ಹಣ ಮಾಡುವುದಕ್ಕಾಗಿಯೇ ಬದುಕು ಅಂತ ಹೇಳುವಂತಿದೆ ಇಂದಿನ ಆಧುನಿಕತೆ ಎಂದು ಹೇಳಿಕೊಳ್ಳುವ ಬದುಕು. ದಿನಾ ದುಡಿದು ದುಡಿದು ಒಂದು ದಿನ ಮಡಿದು ಮುಗಿಯುತ್ತೆ ಈ ಬದುಕು!

ದಿನ ಭವಿಷ್ಯ

ಮೇಷ ಸಮಾಧಾನಕರ ದಿನ. ದೊಡ್ಡ ಪ್ರಗತಿ ಇಲ್ಲದಿದ್ದರೂ ಹಿನ್ನಡೆ ಕೂಡಾ ಇಲ್ಲ. ಕೌಟುಂಬಿಕ ಚಿಂತೆ ಪರಿಹಾರ. ಆರ್ಥಿಕ ಸ್ಥಿತಿ ತೃಪ್ತಿಕರ.

ವೃಷಭ ಇತರರ ಜತೆ ವ್ಯವಹಾರದಲ್ಲಿ ಎಚ್ಚರ ವಹಿಸಿ. ಮೋಸ ಹೋಗುವ ಸಾಧ್ಯತೆ. ಕೌಟುಂಬಿಕ ವಿಷಯದಲ್ಲಿ ಭಾವನಾತ್ಮಕ ಏರುಪೇರು.

ಮಿಥುನ ವಿರಾಮ ಸಿಗದಷ್ಟು ಕಾರ್ಯದ ಒತ್ತಡ. ಪ್ರೇಮದ ವಿಚಾರದಲ್ಲಿ ಪ್ರತಿಕೂಲ ಬೆಳವಣಿಗೆ. ನಾಜೂಕಿನಿಂದ ನಿಭಾಯಿಸಿ. ಬಂಧು ಜತೆ ವಿರಸ.

ಕಟಕ ಯಶ ಸಾಧಿಸಲು ತಾಳ್ಮೆ ಅವಶ್ಯ. ದುಡುಕಿನ ನಡೆ ಬೇಡ. ಆರ್ಥಿಕ ಹಿನ್ನಡೆ ಬಾಧಿಸಬಹುದು. ಮನೆಯವರ ಸಂಗದಲ್ಲಿ ಸಮಾಧಾನ.

ಸಿಂಹ ಕೆಲದಿನಗಳ ಕಷ್ಟದ ಬಳಿಕ ಖುಷಿ ತರುವ ಹೊಸ ಬೆಳವಣಿಗೆ. ಕೈಗೊಂಡ ನಿರ್ಧಾರದಲ್ಲಿ ಯಶಸ್ಸು. ಆರ್ಥಿಕ ಸ್ಥಿತಿ ಸಮಾಧಾನಕರ.

ಕನ್ಯಾ ಸಮಸ್ಯೆಯೊಂದು ಮನಃಶಾಂತಿ ಕೆಡಿಸಲಿದೆ. ಆದರೆ ಪರಿಹಾರವೂ ಕಷ್ಟವೆನಿಸುವುದು. ಆತುರ ಬೇಡ. ಕಾದುನೋಡುವ ತಂತ್ರ ಅನುಸರಿಸಿ.

ತುಲಾ ಅತೃಪ್ತಿ ತರುವ ಕೆಲವು ಬೆಳವಣಿಗೆ ನಡೆದೀತು. ಬಂದುದನ್ನು ಸಮಾಧಾನದಿಂದ ಸ್ವೀಕರಿಸಿ. ದುಡುಕಿನ ವರ್ತನೆ ತೋರದಿರಿ.

ವೃಶ್ಚಿಕ ಶುಭಕರ ಬೆಳವಣಿಗೆ. ಕ್ಲಿಷ್ಟವಾಗಿದ್ದ ಪರಿಸ್ಥಿತಿ ತಿಳಿಯಾಗಲಿದೆ. ಅನಿರೀಕ್ಷಿತ ದಿಕ್ಕಿನಿಂದ ಬೆಂಬಲ. ಆರ್ಥಿಕ ಉನ್ನತಿ. ಖರ್ಚು ನಿಯಂತ್ರಿಸಿರಿ.

ಧನು ದಿನವಿಡೀ ಏನೇನೋ ಅಡ್ಡಿಗಳು. ಮಹತ್ವದ ಕೆಲಸ ಮುಂದೂಡಿ. ದೊಡ್ಡ ಸಮಸ್ಯೆಗೆ ಸರಳ ಪರಿಹಾರವಿದೆ, ಅತ್ತ ಗಮನ ಹರಿಸಿರಿ.

ಮಕರ ಕೆಲ ಸಮಯದಿಂದ ಕಾಡುತ್ತಿದ್ದ ಸಮಸ್ಯೆಗೆ ಪರಿಹಾರ ಸಿಗಲಿದೆ. ಸೂಕ್ತ ನೆರವೂ ಸಿಗಲಿದೆ. ಯಾರ ಜತೆಗೂ ವಾಗ್ವಾದಕ್ಕೆ ಆಸ್ಪದ ನೀಡಬೇಡಿ.

ಕುಂಭ ನೆಗೆಟಿವ್ ಚಿಂತನೆ ಬಾಧಿಸಲಿದೆ. ಸಂಗಾತಿ ಜತೆ ಜಗಳಕ್ಕೆ ಆಸ್ಪದ ನೀಡದಿರಿ. ಹೊಂದಾಣಿಕೆ ಒಳಿತು. ಮಕ್ಕಳ ಸಾಧನೆಯ ತೃಪ್ತಿ. ಖರ್ಚು ಹೆಚ್ಚಳ.

ಮೀನ ಪ್ರತಿಕೂಲ ಪರಿಸ್ಥಿತಿ ಎದುರಿಸಿದರೂ ಅದನ್ನು ನಿಮ್ಮ ಪರವಾಗಿ ಬದಲಿಸಿಕೊಳ್ಳಿ. ಕೌಟುಂಬಿಕ ಸಾಮರಸ್ಯ ಕೆಡದಂತೆ ನೋಡಿಕೊಳ್ಳಿ.

ರಾಹುಕಾಲ : 10.30–12.00
ಗುಳಿಕಕಾಲ : 7.30–9.00

ಅದೃಷ್ಟ ಸಂಖ್ಯೆ : 4,7,2,0

ಕಾರ್ಯಕ್ರಮದಲ್ಲಿ ವಿವಿಧ ಕಲಾತಂಡಗಳ ಮೆರವಣಿಗೆ: ರಘು ಕೌಟಿಲ್ಯ

ಬಿಎಸ್‌ವೈ ಪುರಪ್ರವೇಶ

• **ಚಿತ್ರದುರ್ಗ:** ಚಿತ್ರದುರ್ಗದಲ್ಲಿ ಮೇ 9 ರಂದು ನಡೆಯುವ ಬಿಎಸ್‌ವೈ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಮೇ 8ರಂದು ಬಿಎಸ್‌ವೈ ಪುರ ಪ್ರವೇಶ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ವಿವಿಧ ಕಲಾತಂಡಗಳು ಭಾಗವಹಿಸಲಿದ್ದು ಮೈಸೂರು ದಸರಾ ಜಂಬೂ ಸವಾರಿ ಮಾದರಿಯಲ್ಲಿ ಮೆರವಣಿಗೆ ನಡೆಸಲಾಗುವುದು ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ತಿಳಿಸಿದರು.

ನಗರದ ಹೊರವಲಯದ ಎಸ್‌ಜೆಎಂ ಕಾಲೇಜು ಆವರಣದಲ್ಲಿ ಮೆರವಣಿಗೆಗೆ ಸಿದ್ಧತೆ ಸುತ್ತಿರುವ ಟ್ಯಾಬ್ಲೋಗಳನ್ನು ಪರಿಶೀಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಜೀವನ ಹಿನ್ನೆಲೆಯಲ್ಲಿ ನಗರದ ಹೊರ ವಲಯದಲ್ಲಿ ಹಮ್ಮಿಕೊಂಡಿರುವ ಬಿಎಸ್‌ವೈ ಅಭಿಮಾನೋತ್ಸವ ಹಬ್ಬದ ರೀತಿಯಲ್ಲಿ ಆಚರಿಸಬೇಕು. ಈ ಹಿನ್ನೆಲೆಯಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಓಬಿಸಿ ಮೋರ್ಚ ಉಪಾಧ್ಯಕ್ಷ ವೆಂಕಟೇಶ್, ಬಿಜೆಪಿ ಕಾರ್ಯದರ್ಶಿ ಸಂಪತ್‌ಕುಮಾರ್, ಕೂಡಾ ಮಾಜಿ ಅಧ್ಯಕ್ಷ ಜಿ.ಟಿ. ಸುರೇಶ್, ಅಶ್ವಿನಿ, ಬಸವರಾಜ್, ಶ್ಯಾಮಲಾ ಶಿವಪ್ರಕಾಶ್, ಕವನ ರಾಘವೇಂದ್ರ, ಶೈಲಜಾರೆಡ್ಡಿ, ರಜನಿ ಹಾಜರಿದ್ದರು.

ಅಭಿಮಾನೋತ್ಸವದಲ್ಲಿ ಕಾರ್ಯಕರ್ತರಿಗೆ ಜವಾಬ್ದಾರಿ

ದಾವಣಗೆರೆ: ಕೋಟೆನಾಡು ಚಿತ್ರದುರ್ಗದಲ್ಲಿ ಮೇ 9ರಂದು ಆಯೋಜಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ದಾವಣಗೆರೆ ಲೋಕಸಭಾ ಕ್ಷೇತ್ರದಿಂದ 25 ಸಾವಿರಕ್ಕೂ ಅಧಿಕ ಕಾರ್ಯಕರ್ತರನ್ನು ಕರೆದೊಯ್ಯಲಾಗುವುದು ಎಂದು ಕೇಂದ್ರದ ಮಾಜಿ ಸಚಿವ ಡಾ.ಜಿ.ಎಂ.ಸಿದ್ದೇಶ್ವರ ತಿಳಿಸಿದರು. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 104 ಬಸ್, 500ಕ್ಕೂ ಅಧಿಕ ಕಾರು, ಟ್ರ್ಯಾಕ್ಟರ್‌ಗಳಲ್ಲಿ ಸುಮಾರು 25 ಸಾವಿರ ಜನರು ಕಾರ್ಯಕ್ರಮಕ್ಕೆ ತೆರಳಲಿದ್ದಾರೆ. ಜನರನ್ನು ಕಾರ್ಯಕ್ರಮಕ್ಕೆ ಕರೆದೊಯ್ಯಲು ಪ್ರತಿ ಹಳ್ಳಿಗಳ ಮುಖಂಡ ಕಾರ್ಯಕರ್ತರಿಗೆ ಜವಾಬ್ದಾರಿ ನೀಡಲಾಗಿದೆ. ಪ್ರತಿ ಬಸ್ಸಿಗೂ ಉಸ್ತುವಾರಿಗಳನ್ನು ನೇಮಿಸಿದ್ದು, ಯಾವುದೇ ತೊಂದರೆಯಾಗದಂತೆ ನಿಗಾ ವಹಿಸಲಾಗುವುದು ಎಂದರು. ರಾಜಕೀಯ ಜೀವನದಲ್ಲಿ 50 ವರ್ಷ ಪೂರೈಸಿರುವ ನಾಡು ಕಂಡ ಅಪರೂಪದ ರಾಜಕಾರಣಿ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯಕ್ಕೆ ನೂರಾರು ಹೊಸ ಯೋಜನೆಗಳನ್ನು ಜಾರಿಗೊಳಿಸಿದ್ದರು. ಸೈಕಲ್ ಶೇಡ್ ಓಡಾಡಿ ಪಕ್ಷವನ್ನು ರಾಜ್ಯಾದ್ಯಂತ ಸಂಘಟಿಸಿ, ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಯಡಿಯೂರಪ್ಪನವರ ಶ್ರಮ ಅಪಾರ ಎಂದು ಅವರು ತಿಳಿಸಿದರು. ಜಗಳೂರು ಮಾಜಿ ಶಾಸಕ ಹೆಚ್.ಪಿ.ರಾಜೇಶ್, ಮುಖಂಡರಾದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ದೇವರಮನಿ ಶಿವಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ದೊಗ್ಗಳ್ಳಿ ವೀರೇಶ್, ಮುರುಗೇಶ್ ಆರಾಧ್ಯ, ಅಣಬೇರು ಜೀವನಮೂರ್ತಿ, ಅತಿಥ್ ಅಂಬರ್‌ಕರ್, ವೀರೇಶ್, ಶಿವನಗೌಡ ಪಾಟೀಲ್ ಸುದ್ದಿಗೋಷ್ಠಿಯಲ್ಲಿದ್ದರು.

13 ಯುದ್ಧವಿಮಾನ ಧ್ವಂಸ

ಪುಟ 9➜ ಅದರ ಸಾಕ್ಷ್ಯಗಳು ಸಾರ್ವಜನಿಕ ವಲಯದಲ್ಲಿವೆ. ನಂತರ ಪಾಕಿಸ್ತಾನದ ಸೈನಿಕ ಮೂಲಸೌಕರ್ಯಗಳನ್ನು ಗುರಿ ಯಾಗಿಸಿ 11 ಏರ್‌ಫೀಲ್ಡ್‌ಗಳ ಮೇಲೆ ದಾಳಿ ನಡೆಸಲಾಯಿತು' ಎಂದು ವಿವರಿಸಿದರು. ಭಾರತೀಯ ಸೇನೆ, ವಾಯುಪಡೆ ಹಾಗೂ ನೌಕಾಪಡೆಗಳ ಜಂಟಿ ಕಾರ್ಯಾಚರಣೆಯಾಗಿದ್ದ ಆಪರೇಷನ್ ಸಿಂದೂರ, ಕಳೆದ ವರ್ಷ ಪಹಲ್ಗಾಮ್ ಉಗ್ರ ದಾಳಿಯ ಬಳಿಕ ನಡೆಸಲಾಗಿತ್ತು. ಗಡಿಪಾರು ಉಗ್ರ ಚಟುವಟಿಕೆಗಳಿಗೆ ತಕ್ಕ ಪ್ರತಿಕ್ರಿಯೆ ನೀಡುವ ಉದ್ದೇಶ ದಿಂದ ಭಾರತ ಈ ಕಾರ್ಯಾಚರಣೆ ಆರಂಭಿಸಿತ್ತು. ಏರ್ ಮಾರ್ಷಲ್ ಭಾರ್ತಿ ಅವರು ನೀಡಿದ ಮಾಹಿತಿಯ ಪ್ರಕಾರ, ಪಾಕಿಸ್ತಾನದ 13 ಯುದ್ಧವಿಮಾನಗಳನ್ನು ಆಗಸದಲ್ಲಿ ಅಥವಾ ನೆಲದಲ್ಲೇ ಹೊಡೆದುರುಳಿಸಲಾಗಿತ್ತು. ಇದರಲ್ಲಿ ಅತ್ಯಾಧುನಿಕ ಹೈ ವ್ಯಾಲ್ಯೂ ಏರ್‌ಬೋರ್ನ್ ಅಸೆಟ್ ಕೂಡ ಸೇರಿದ್ದು, 300 ಕಿಲೋಮೀಟರ್‌ಗಿಂತ ಹೆಚ್ಚಿನ ದೂರದಿಂದ ಗುರಿ ಹೊಡೆದಿರುವುದು ಭಾರತೀಯ ವಾಯುಪಡೆಯ ದೀರ್ಘದೂರ ನಿಖರ ದಾಳಿ ಸಾಮರ್ಥ್ಯವನ್ನು ತೋರಿಸಿದೆ ಎಂದು ಹೇಳಿದರು. ಈ ಕಾರ್ಯಾಚರಣೆಯ ಯಶಸ್ಸಿನ ಕುರಿತು ಮಾತನಾಡಿದ ಅವರು, 'ಯುದ್ಧದಲ್ಲಿ ಗೆಲುವು ಘೋಷಣೆಗಳಿಂದ ಸಿಗುವುದಿಲ್ಲ. ವಾಸ್ತವಾಂಶಗಳಿಂದ ಸಿಗುತ್ತದೆ. ಪಾಕಿಸ್ತಾನ ಪ್ರಚಾರ ನಡೆಸಬಹುದು, ಆದರೆ ನೆಲದ ಸತ್ಯ ಬೇರೆ. ನಾವು ಗುರಿಗಳನ್ನು ನಿಖರವಾಗಿ ಹೊಡೆದಿದ್ದೇವೆ' ಎಂದು ತಿರುಗೇಟು ನೀಡಿದರು.

ಪಾಕ್‌ಗೆ ತಕ್ಕ ಪ್ರತ್ಯುತ್ತರ: ಮೋದಿ

• ಹೊಸದಿಲ್ಲಿ: ಭಯೋತ್ಪಾದನೆಗೆ ಭಾರತದ ಪ್ರತ್ಯುತ್ತರ ಅತ್ಯಂತ ದೃಢ ಮತ್ತು ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ನಮ್ಮ ಬದ್ಧತೆ ಅಚಲವೆಂಬುದನ್ನು ಆಪರೇಷನ್ ಸಿಂದೂರ್ ಸಾಕ್ಷೀಕರಿಸಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ವರ್ಷದ ನಂತರವೂ ಭಯೋತ್ಪಾದನೆಯ ಪರಾಭವ ಮತ್ತು ಅದಕ್ಕೆ ಪೂರಕವಾದ ವಾತಾವರಣವನ್ನು ದಮನಿಸುವ ವಿಚಾರದಲ್ಲಿ ಭಾರತ ದೃಢ ಸಂಕಲ್ಪಬದ್ಧವಾಗಿದೆ. ವರ್ಷದ ಹಿಂದೆ ಆಪರೇಷನ್ ಸಿಂದೂರ್‌ನಲ್ಲಿ ಭಾರತದ ಸಶಸ್ತ್ರ ಪಡೆಗಳು ಸರಿಸಾಟಿರಹಿತ ಶೌರ್ಯ, ದಾಳಿ ಕಾರ್ಯಾಚರಣೆಯಲ್ಲಿ ನಿಖರತೆ ಮೆರೆದಿದ್ದರು. ಪಹಲ್ಗಾಮ್‌ನಲ್ಲಿ ಅಮಾಯಕ ಭಾರತೀಯರ ಮೇಲೆ ದಾಳಿ ನಡೆಸಿದವರಿಗೆ ನಮ್ಮ ಸೇನಾ ಪಡೆ ತಕ್ಕ ಪ್ರತ್ಯುತ್ತರ ನೀಡಿದೆ.

ಪಾಂಡಿಚೇರಿ ಬಿಜೆಪಿ ಉಸ್ತುವಾರಿ ನಿರ್ಮಲ್‌ಕುಮಾರ್ ಸುರಾಣ ಹೇಳಿಕೆ

ನರೇಂದ್ರ ಮೋದಿಯಿಂದ ಬಂಗಾಳದಲ್ಲಿ ಬದಲಾವಣೆ



• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಚಾಣಕ್ಯ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುನಾವಣಾ ಪ್ರಚಾರದಲ್ಲಿ ಹೇಳಿದಂತೆಯೇ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಪಾಂಡಿಚೇರಿ ಬಿಜೆಪಿ ಉಸ್ತುವಾರಿಯಾಗಿದ್ದ ನಿರ್ಮಲ್‌ಕುಮಾರ್ ಸುರಾಣ ಹೇಳಿದ್ದಾರೆ.

ಪಂಚರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪಾಂಡಿಚೇರಿಯಲ್ಲಿ ಭರ್ಜರಿ ಜಯಗಳಿಸಿದ್ದಕ್ಕಾಗಿ ಶಿವಾಜಿನಗರ ಮಂಡಲ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ವಿಜಯೋತ್ಸವದಲ್ಲಿ ಮಾತನಾಡಿದ ಅವರು, ಪಶ್ಚಿಮ ಬಂಗಾಳದಲ್ಲಿ ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿತ್ತು. ಮಮತಾ ಬ್ಯಾನರ್ಜಿ ಅವರ ಆಡಳಿತದಿಂದ ರೋಸಿ ಹೋಗಿದ್ದ ಜನರು ಬದಲಾವಣೆಯನ್ನು ಬಯಸಿದ್ದರು. ಅಲ್ಲದೇ, ಕೇಂದ್ರ ಗೃಹ ಸಚಿವರಾಗಿರುವ ಅಮಿತ್ ಶಾ ಅವರೂ ಈ ಬಾರಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಧ್ವಜವನ್ನು ಹಾರಿಸುತ್ತೇವೆ, ಮಮತಾ ಬ್ಯಾನರ್ಜಿ ಸರ್ಕಾರವನ್ನು ಕಿತ್ತೊಗೆಯುತ್ತೇವೆ ಎಂದು ಶಪಥ ಮಾಡಿದ್ದರು. ಅದರಂತೆಯೇ ಬಂಗಾಳದಲ್ಲಿ ಈ ಬಾರಿ ಬಿಜೆಪಿ ಭರ್ಜರಿ ಯಶಸ್ಸುಗಳಿಸಿ ಅಧಿಕಾರಕ್ಕೆ ಬಂದಿದೆ ಎಂದರು.

ಇನ್ನು ಅಸ್ಸಾಂನಲ್ಲಿ ಬಿಜೆಪಿ ಸತತ ಎರಡನೇ ಬಾರಿ ಅಧಿಕಾರದ ಗದ್ದುಗೆ ಏರಿದೆ, ಇದೇ ಮೊದಲ ಬಾರಿ ಮುಸ್ಲಿಂ ಸಮುದಾಯದವರೂ ಅಸ್ಸಾಂನಲ್ಲಿ ಬಿಜೆಪಿಯನ್ನು ಬೆಂಬಲಿಸಿದ್ದಾರೆ. ಮುಸ್ಲಿಂರಲ್ಲಿಯೂ ಬದಲಾವಣೆ ಕಾಣುತ್ತಿದ್ದು, ಅಭಿವೃದ್ಧಿಯನ್ನು ಬಯಸಿ ಬಿಜೆಪಿ ಪಕ್ಷಕ್ಕೆ ಮತ ನೀಡಿದ್ದಾರೆ ಎಂದು ನಿರ್ಮಲ್ ಕುಮಾರ್ ಸುರಾಣ ಹೇಳಿದರು. ಈ ವಿಜಯೋತ್ಸವ ಕಾರ್ಯಕ್ರಮದಲ್ಲಿ ಶಿವಾಜಿನಗರ ಮಂಡಲ ಬಿಜೆಪಿ ಅಧ್ಯಕ್ಷ ಬಾಲಾಜಿ ಮಣಿ, ಮಾಜಿ ಮಹಾನಗರ ಪಾಲಿಕೆ ಸದಸ್ಯರಾದ ಗುಣಶೇಖರ್, ಸಂಪತ್, ಎಂ. ಗೋಪಿ, ಸೂರ್ಯಕಾಂತ್ ಸೇರಿದಂತೆ ನೂರಾರು ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.

ಸಂಪೂರ್ಣ ಚಿತ್ರಣವೇ ಬದಲು

ಪಾಂಡಿಚೇರಿಯಲ್ಲಿ, 10 ವರ್ಷದ ಕೆಳಗೆ ಯಾರೊಬ್ಬರು ಬಿಜೆಪಿ ಶಾಲನ್ನೂ ಹಾಕುತ್ತಿರಲಿಲ್ಲ. ಭಾರತ್ ಮಾತಾ ಕಿ ಜೈ ಅನ್ನುವಷ್ಟು ಸ್ವಾತಂತ್ರ್ಯವಿರಲಿಲ್ಲ. ಆದರೆ, ಕಳೆದ 10 ವರ್ಷಗಳಲ್ಲಿ ಅಲ್ಲಿಯ ಸಂಪೂರ್ಣ ಚಿತ್ರಣವೇ ಬದಲಾಗಿದೆ ಎಂದರು. ತಮಿಳುನಾಡು ಹಾಗೂ ಪಾಂಡಿಚೇರಿಯಲ್ಲಿ ಎರಡೂ ರಾಜ್ಯಗಳಲ್ಲಿ ತಮಿಳು ಮಾತನಾಡುತ್ತಿದ್ದರೂ, ತಮಿಳುನಾಡಿನ ಪ್ರಭಾವ ಇಲ್ಲಿ ಆಗಿಲ್ಲ. ಟಿವಿಕೆ ಪ್ರಭಾವವೂ ಇಲ್ಲಿ ಕೆಲಸ ಮಾಡಿಲ್ಲ ಎಂದು ಪಾಂಡಿಚೇರಿಯ ಚುನಾವಣಾ ಉಸ್ತುವಾರಿಯೂ ಆಗಿದ್ದ ನಿರ್ಮಲ್ ಕುಮಾರ್ ಸುರಾಣ ಹರ್ಷ ವ್ಯಕ್ತಪಡಿಸಿದರು.

ರಾಜ್ಯ ಶಿಕ್ಷಣ ನೀತಿಗಾಗಿ ಸಂಪುಟ ಉಪ ಸಮಿತಿ

• **ಬೆಂಗಳೂರು:** ರಾಜ್ಯ ಶಿಕ್ಷಣ ನೀತಿ ಅನುಷ್ಠಾನಗೊಳಿಸುವ ಸಂಬಂಧ ಪ್ರೊ. ಸುಖದೇವ್ ಥೋರಟ್ ಆಯೋಗದ ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಸಂಪುಟ ಉಪ ಸಮಿತಿ ರಚಿಸಲು ಸರ್ಕಾರ ನಿರ್ಧಾರ ಕೈಗೊಂಡಿದೆ. ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವ ದಲ್ಲಿ ನಡೆದ ಸಂಪುಟ ಸಭೆಯಲ್ಲಿ ರಾಜ್ಯದಲ್ಲಿ ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸುವ ಬಗ್ಗೆ ರಚನೆಯಾಗಿರುವ ಆಯೋಗದ ಅಂತಿಮ ವರದಿಯ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ವರದಿಯ ಶಿಫಾರಸುಗಳ ಅನುಷ್ಠಾನದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರದಿಯ ಶಿಫಾರಸುಗಳನ್ನು ಅನುಷ್ಠಾನ ಮಾಡಲು ಸಂಪುಟ ಉಪ ಸಮಿತಿ ರಚಿಸಲು ಸೂಚಿಸಿದ್ದು, ಇದು 8 ಸಂಪುಟಗಳ ವರದಿಯಾಗಿದೆ. ಎಲ್ಲವನ್ನೂ ಪರಾಮರ್ಶೆ ನಡೆಸಿ ಶಿಫಾರಸು ಮಾಡಬೇಕಿರುವುದರಿಂದ ಇದೇ ಶೈಕ್ಷಣಿಕ ವರ್ಷದಲ್ಲಿ ಅನುಷ್ಠಾನದ ಬಗ್ಗೆ ಸ್ಪಷ್ಟನೆ ಇಲ್ಲ ಎಂದು ಕಾನೂನು ಸಚಿವ ಎಚ್.ಕೆ ಪಾಟೀಲ ತಿಳಿಸಿದರು.

ತಮಿಳುನಾಡಲ್ಲಿ ದಳಪತಿ ಸರ್ಕಾರ್ ಕಸರತ್ತು

• **ಚೆನ್ನೈ:** ತಮಿಳುನಾಡಿನಲ್ಲಿ ಬಹುಮತವಿಲ್ಲದೆ ಸರ್ಕಾರ ರಚಿಸಲು ಟಿವಿಕೆ ಮುಖ್ಯಸ್ಥ ವಿಜಯ್ ಸಲ್ಲಿಸಿದ ಮನವಿಯನ್ನು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ತಿರಸ್ಕರಿಸಿದ್ದಾರೆ. ಇದರಿಂದಾಗಿ ಗುರುವಾರ ನಡೆಯಬೇಕಾಗಿದ್ದ ದಳಪತಿ ವಿಜಯ್ ಪ್ರಮಾಣವಚನ ಕಾರ್ಯಕ್ರಮ ಮುಂದೂಡಲ್ಪಟ್ಟಿತು. ಸರಳ ಬಹುಮತಕ್ಕಿಂತ ಕಡಿಮೆ ಸ್ಥಾನಗಳಿದ್ದರೂ, ವಿಧಾನಸಭಾ ಚುನಾವಣೆಯಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಟಿವಿಕೆಗೆ ಸರ್ಕಾರ ರಚಿಸಲು ಮೊದಲ ಅವಕಾಶ ನೀಡುವುದಾಗಿ ವಿಜಯ್‌ಗೆ ರಾಜ್ಯಪಾಲರು ಭರವಸೆ ನೀಡಿರುವುದಾಗಿ ಮೂಲಗಳು ತಿಳಿಸಿವೆ.



ಕೇವಲ 112 ಶಾಸಕರೊಂದಿಗೆ ಸರ್ಕಾರ ರಚಿಸಲು ಅನುಮತಿ ಕೇಳಿದರೆ ಅನುಮತಿ ನೀಡಲು ಸಾಧ್ಯವಾಗುವುದಿಲ್ಲ. ಕನಿಷ್ಠಪಕ್ಷ 118 ಶಾಸಕರಾದರೂ ನಿಮ್ಮೊಂದಿಗಿದ್ದಾರೆಂದು ಅವರ ಸಹಿ ಸಂಗ್ರಹಿಸಿಕೊಂಡು ಬಂದರೆ, ತಾನು ಸರ್ಕಾರ ರಚಿಸಲು ತಕ್ಷಣವೇ ಅನುಮತಿ ನೀಡುವುದಾಗಿ ರಾಜ್ಯಪಾಲರು ವಿಜಯ್‌ಗೆ ಸಲಹೆ ನೀಡಿದ್ದಾರೆಂದು ತಿಳಿದುಬಂದಿದೆ. ಆದರೆ ಸರ್ಕಾರ ರಚಿಸಲು ಅವಕಾಶ ನೀಡಿ, ವಿಧಾನಸಭೆಯಲ್ಲಿ ಬಹುಮತ ಸಾಬೀತು ಮಾಡುವುದಾಗಿ ವಿಜಯ್ ಮನವಿ ಮಾಡಿದ್ದು, ರಾಜ್ಯಪಾಲರು ತಮ್ಮ ಒಪ್ಪಿಗೆಯನ್ನು ನೀಡಿಲ್ಲ. 234 ಸದಸ್ಯರ ತಮಿಳುನಾಡು ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನಗಳನ್ನು ಗೆದ್ದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ, ಸರ್ಕಾರ ರಚನೆಗೆ ಬೇಕಾದ 118 ಸಂಖ್ಯೆಗೆ ಇನ್ನೂ 10 ಸ್ಥಾನಗಳ ಕೊರತೆಯಿದೆ.

ಕಾಂಗ್ರೆಸ್ ತನ್ನ 5 ಶಾಸಕರ ಬೆಂಬಲವನ್ನು ಈಗಾಗಲೇ ಘೋಷಿಸಿದ್ದು, ಉಳಿದ ಬೆಂಬಲಕ್ಕಾಗಿ ಟಿವಿಕೆ ಎಡಪಕ್ಷಗಳು, ವಿಸಿಕೆ ಹಾಗೂ ಐಯುಎಂಎಲ್ ಕಡೆಗೆ ಮತ್ತೊಮ್ಮೆ ಕೈಚಾಚಿದೆ.

ಈ ನಡುವೆ ವಿಸಿಕೆ ನಾಯಕ ತೋಳ್ ತಿರುಮಾವಳವನ್, ಅತಿದೊಡ್ಡ ಪಕ್ಷಕ್ಕೆ ಮೊದಲು ಸರ್ಕಾರ ರಚನೆ ಅವಕಾಶ ನೀಡುವುದು ಸಂವಿಧಾನಾತ್ಮಕ ಸಂಪ್ರದಾಯ. ರಾಜ್ಯಪಾಲರು ಮುಂಚಿತವಾಗಿ 118 ಶಾಸಕರ ಪಟ್ಟಿಯನ್ನು ಕೇಳಲು ಸಾಧ್ಯವಿಲ್ಲ ಎಂದು ರಾಜ್ಯಪಾಲರ ಕ್ರಮವನ್ನು ಟೀಕಿಸಿದರು.

24 ತಾಸಿನಲ್ಲಿ 2ನೇ ಬಾರಿ ರಾಜ್ಯಪಾಲರ ಭೇಟಿ

24 ಗಂಟೆಗಳೊಳಗೆ ಎರಡನೇ ಬಾರಿ ವಿಜಯ್ ಅವರು ಲೋಕಭವನಕ್ಕೆ ಭೇಟಿ ನೀಡಿ ರಾಜ್ಯಪಾಲರನ್ನು ಭೇಟಿಯಾದರು. ಬಳಿಕ ಲೋಕಭವನ ಹೊರಡಿಸಿದ ಪ್ರಕಟಣೆಯಲ್ಲಿ, "ಸರ್ಕಾರ ರಚನೆಗೆ ಅಗತ್ಯವಾದ ಬಹುಮತ ಬೆಂಬಲ ಇನ್ನೂ ಸ್ಪಷ್ಟವಾಗಿಲ್ಲ" ಎಂದು ಹೇಳಲಾಗಿದೆ.

ಹಳೆಯ ಸ್ವಭಾವ ಬದಲಾಗಿಲ್ಲ: ಡಿಎಂಕೆ

• **ಚೆನ್ನೈ:** ಕಾಂಗ್ರೆಸ್ ಪಕ್ಷ ತನ್ನ ಹಳೆಯ ರಾಜಕೀಯ ಸ್ವಭಾವವನ್ನು ಇನ್ನೂ ಬದಲಿಸಿಕೊಂಡಿಲ್ಲ ಎಂದು ಡಿಎಂಕೆ ತೀವ್ರ ಟೀಕೆ ಮಾಡಿದೆ. ಪಕ್ಷದ ಸಾಮಾನ್ಯ ಸಭೆಯಲ್ಲಿ ಈ ಸಂಬಂಧ ನಿರ್ಣಯ ಅಂಗೀಕರಿಸಲಾಗಿದ್ದು, ಕಾಂಗ್ರೆಸ್ ವಿರುದ್ಧ ದ್ರೋಹದ ಆರೋಪ ಮಾಡಲಾಗಿದೆ. ನಮ್ಮ ಮೈತ್ರಿಯಲ್ಲಿ ಕಾಂಗ್ರೆಸ್‌ಗೆ ಒಂದು ರಾಜ್ಯಸಭಾ ಸ್ಥಾನ ಹಾಗೂ 28 ವಿಧಾನಸಭಾ ಕ್ಷೇತ್ರಗಳನ್ನು ನೀಡಲಾಗಿತ್ತು. ಆದರೆ ಕೇವಲ ಮೂರು ದಿನಗಳಲ್ಲೇ ಅದು ಪರ್ಯಾಯ ರಾಜಕೀಯ ಶಕ್ತಿಯತ್ತ ವಾಲಿ, ಮೈತ್ರಿ ಪಕ್ಷಗಳ ಶ್ರಮದಿಂದ ದೊರೆತ ಗೆಲುವನ್ನೇ ಅಪಾಯಕ್ಕೆ ಒಳಪಡಿಸಿತು ಎಂದು ನಿರ್ಣಯದಲ್ಲಿ ಉಲ್ಲೇಖಿಸಿದೆ.

ಸರ್ವಾಂಗೀಣ ಪ್ರಗತಿಗೆ ಧರ್ಮ ಅಡಿಪಾಯ

ಪುಟ 9➜ ಸೌಹಾರ್ದತೆಯು ಹಿತವಾದ ಸಂಗೀತದಂತೆ ಇರಬೇಕು. ನಾವು ಸಂಯಮ ಕಳೆದು ಕೊಂಡರೆ ಏಕಭಾವ ಮೂಡುವುದಿಲ್ಲ. ಎಲ್ಲರೂ ಒಂದೇ ಎನ್ನುವ ಸಮಭಾವವೇ ಸೌಹಾರ್ದತೆ ಎಂದು ಪ್ರತಿಪಾದಿಸಿದರು.

ಸಾವಿರಾರು ವರ್ಷಗಳಿಂದಲೂ ಧರ್ಮ ರಕ್ಷಣೆಯಾಗಿ ಉಳಿದುಕೊಂಡು ಬಂದಿದೆ. ನಾವು ಧರ್ಮವನ್ನು ರಕ್ಷಣೆ ಮಾಡಿದರೆ, ಧರ್ಮ ನಮ್ಮನ್ನು ರಕ್ಷಣೆ ಮಾಡುತ್ತದೆ. ಧರ್ಮವಿಲ್ಲದೆ ಮನುಷ್ಯನ ಜೀವನ ಸಾರ್ಥಕವಾಗುವುದಿಲ್ಲ. ಧರ್ಮ ಶಾಂತಿ, ನೆಮ್ಮದಿಯನ್ನು ನೀಡುತ್ತದೆ. ಧರ್ಮವಿದ್ದಲ್ಲಿ ಸಂತೋಷ, ಸಮೃದ್ಧಿ ಇರುತ್ತದೆ. ಅದು ದುಃಖವನ್ನು ನೀಡುವುದಿಲ್ಲ ಎಂದು ತಿಳಿಸಿದರು.

ಸಹೋದರರನ್ನು ಅಸ್ಪೃಶ್ಯರಾಗಿ ಶತಮಾನಗಳ ಕಾಲ ದೂರವಿಡಲಾಗಿದೆ. ಮೇಲು ಕೀಳು ಎಂಬ ಮನೋಭಾವ ಕಳೆದು ಸರ್ವರೂ ಒಂದೇ ಎಂಬ ಏಕ ಭಾವ ಭಾರತೀಯರಲ್ಲಿ ಮೂಡಬೇಕಿದೆ ಎಂದು ಪ್ರತಿಪಾದಿಸಿದರು. ಅಂಬೇಡ್ಕರ್ ಅವರ ಸಂವಿಧಾನ ಸಭೆಯ ಭಾಷಣಗಳನ್ನು ಮತ್ತೊಮ್ಮೆ ಓದಿಕೊಳ್ಳಬೇಕಿದೆ. ಸಾಮಾಜಿಕ ಸ್ವಾತಂತ್ರ್ಯ ನೆಲೆಗೊಳ್ಳದೆ ರಾಜಕೀಯ, ಆರ್ಥಿಕ ಸ್ವಾತಂತ್ರ್ಯ ಸಿಗುವುದಿಲ್ಲವೆಂದಿದ್ದರು. ಸಂವಿಧಾನದಲ್ಲಿನ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಫ್ರೆಂಚ್ ಕ್ರಾಂತಿಯಿಂದ ತೆಗೆದುಕೊಂಡದ್ದಲ್ಲ. ಈ ಪರಿಕಲ್ಪನೆಯು ಭಾರತದ್ದೇ ಆಗಿದೆ. ಇದು ತಥಾಗತ ಬುದ್ಧ ನೀಡಿದ್ದು ಎಂದರು.

ವಿಭಿನ್ನತೆಯು ವ್ಯಕ್ತಿಗತವಾಗಿ ಎಲ್ಲರಲ್ಲೂ ಇದೆ. ಅದೇ ನಮ್ಮ ನಡುವಿನ ದೂರಕ್ಕೆ ನಾಂದಿಯಾಗಬಾರದು. ಸಮಾನತೆ ನೆಲೆಸಲು ನಮ್ಮ ಮನಸ್ಸಿನೊಳಗಿನ ಭೇದವೆಂಬ ಕಲ್ಮಶವನ್ನು ತೆಗೆದು ಹಾಕಬೇಕು. ಸಬ್ಬತ್ತೆ ಬರಬೇಕೆಂದರೆ ಇನ್ನೊಬ್ಬರಿಗೆ ತೊಂದರೆ ಕೊಡಬಾರದು. ಎಲ್ಲರೂ ನಮ್ಮವರೇ ಎಂಬ ಭಾವ ಬಂದಾಗ ಸಮಾಜದ ವಿಕಾಸ ತಂತಾನೇ ಆಗುತ್ತದೆ ಎಂದು ಭಾಗವತ್ ಹೇಳಿದರು.

ಭಾಷೆ, ಜಾತಿ, ಪಂಗಡಗಳನ್ನು ಮೀರಿ ಬಂಧುತ್ವ ನೆಲೆಗೊಳ್ಳಬೇಕು. ಅಸ್ತಿತ್ವಕ್ಕಾಗಿ ಮತ್ತೊಬ್ಬರ ವಿರುದ್ಧ ಹೋರಾಟ ನಡೆಸುವುದು ಪಾಶ್ಚಾತ್ಯ ಪರಿಕಲ್ಪನೆಯಾಗಿದೆ. ಆದರೆ, ಭಾರತೀಯರು ಭ್ರಾತೃತ್ವ ಮತ್ತು ಪರಸ್ಪರ ಸಹಾಯದೊಂದಿಗೆ ನಾಗರಿಕತೆ ಕಟ್ಟಿದ್ದಾರೆ. ನಮ್ಮ ಸಮಾಜವು, ಪರೋಪಕಾರವೇ ಸೇವೆ, ಕರ್ತವ್ಯವೇ ಜೀವನದ ಪರಮ ಗುರಿಯೆಂದು ತಿಳಿದಿದೆ ಎಂದು ವಿವರಿಸಿದರು. ಸಮಾಜವು ದೇಶಕ್ಕೆ ನಿಷ್ಠೆಯಾಗಿದ್ದರೆ, ಅಭಿವೃದ್ಧಿ ತಂತಾನೆ ಆಗುತ್ತದೆ. ವಿಶ್ವಾಸಾತ್ಮಕವಾಗಿ ನೋಡಬೇಕು ಎಂದು ಹೇಳಿದರು.

ಇದೇ ವೇಳೆ ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಸತ್ಯಸಾಯಿ ಆಶ್ರಮದ ಮಧುಸೂದನ ಸಾಯಿ ಅವರ 14ನೇ ಉಪನ್ಯಾಸದ ಆತ್ಮನೋ ಮೋಕ್ಷಂ ಜಗತ್ ಹಿತಾಯಚ ಕೃತಿಯನ್ನು ಬಿಡುಗಡೆ ಮಾಡಿದರು.

ಗಾಯಕಿಯರಾದ ಕೆ.ಜಿ.ವಿನುತಾ, ಅಮೂಲ್ಯ ಅವರು ಪುರುಷೋತ್ತಮ್, ಎಸ್.ನಾಗರಾಜ್ ಅವರ ಪಕ್ಕಾವಾದ್ಯದ ಸಾಂಗತ್ಯದಲ್ಲಿ ವಚನಗಳನ್ನು ಹಾಡಿದರು. ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಶೋಧನಾ ಅಕಾಡೆಮಿಯ ಪ್ರೊ. ಚಾನ್ಸಲರ್ ಪ್ರೊ.ಬಿ.ಸುರೇಶ್, ಜೆಎಸ್‌ಎಸ್ ಕಾನೂನು ಕಾಲೇಜಿನ ಕಾರ್ಯಕಾರಿ ಮುಖ್ಯಸ್ಥ ಪ್ರೊ.ಕೆ.ಎಸ್. ಸುರೇಶ್, ಕಾರ್ಯನಿರ್ವಹಣಾಧಿಕಾರಿ ಬೆಟ್ ಸೂರ್‌ಮಠ್ ಮತ್ತಿತರರು ಉಪಸ್ಥಿತರಿದ್ದರು.

ಉಪನ್ಯಾಸದ ನಂತರ ಮೋಹನ್ ಭಾಗವತ್ ಅವರೊಂದಿಗೆ ಪ್ರಶ್ನೋತ್ತರ ಸಂವಾದ ನಡೆಯಿತು. ಮಾಜಿ ವಿಧಾನಪರಿಷತ್ ಸದಸ್ಯ ಗೋ.ಮಧುಸೂದನ್, ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಚಿವ ಎನ್.ಮಹೇಶ್ ಸೇರಿದಂತೆ ಹಲವಾರು ಮಂದಿ ಬಿಜೆಪಿ ಮುಖಂಡರು, ಆರ್‌ಎಸ್‌ಎಸ್ ಸ್ವಯಂಸೇವಕರು ಉಪಸ್ಥಿತರಿದ್ದರು.

ಸುವೇಂದು ಅಧಿಕಾರಿ ಆಪ್ತನ ಗುಂಡಿಕ್ಕಿ ಹತ್ಯೆ

ಪುಟ 9➜ ಮಧ್ಯರಾತ್ರಿ ಆಸ್ಪತ್ರೆಗೆ ತಲುಪಿದ ವಿರೋಧ ಪಕ್ಷದ ನಾಯಕ ಸುವೇಂದು, ಇದು ಹೃದಯ ವಿದ್ರಾವಕ ಮತ್ತು ಪೂರ್ವನಿಯೋಜಿತ ಹತ್ಯೆ ಎಂದು ಆರೋಪಿಸಿದ್ದಾರೆ.

ಬಂಗಾಳ ಚುನಾವಣೆಯಲ್ಲಿ ಬಿಜೆಪಿ ಐತಿಹಾಸಿಕ ಗೆಲುವಿನ ನಂತರ ಈ ಹತ್ಯೆ ನಡೆದಿರುವುದು ರಾಜಕೀಯ ವಲಯದಲ್ಲಿ ಭಾರೀ ಆಘಾತ ಮೂಡಿಸಿದೆ. ಟಿಎಂಸಿ ಪ್ರತೀಕಾರಾತ್ಮಕ ಹಿಂಸೆಯನ್ನು ಪ್ರೇರೇಪಿಸಿದೆ ಎಂದು ಬಿಜೆಪಿ ಆರೋಪಿಸಿದೆ. ತನ್ನ ಕಾರ್ಯಕರ್ತರ ಮೇಲೂ ವಿವಿಧ ಜಿಲ್ಲೆಗಳಲ್ಲಿ ದಾಳಿಗಳು ನಡೆದಿವೆ ಎಂದು ಟಿಎಂಸಿ ಆರೋಪಿಸಿದೆ.

ಅಡ್ಡಗಟ್ಟಿ ಗುಂಡಿನ ದಾಳಿ: ಬುಧವಾರ ರಾತ್ರಿ 10.30ರ ಆಸುಪಾಸಿನಲ್ಲಿ ಮಧ್ಯಮಗ್ರಾಮದ ಡೋಲ್ತಲಾ ಪ್ರದೇಶದ ಬಳಿ ಚಂದ್ರನಾಥ್ ಪ್ರಯಾಣಿಸುತ್ತಿದ್ದ ಎಸ್‌ಯುವಿ ವಾಹನವನ್ನು ಸಣ್ಣ ಕಾರ್‌ನಲ್ಲಿ ಹಿಂಬಾಲಿಸಿ ಬಂದ ದುಷ್ಕರ್ಮಿಗಳು ದೋಹಾರಿಯಾ ಜಂಕ್ಷನ್ ಬಳಿ ಅಡ್ಡಗಟ್ಟಿದ್ದು, ರಾಥ್ ಮತ್ತು ಚಾಲಕನ ಮೇಲೆ ಗುಂಡಿನ ದಾಳಿ ನಡೆಸಿ ತಮ್ಮ ಕಾರನ್ನು ಅಲ್ಲೇ ಬಿಟ್ಟು ಬೈಕ್‌ನಲ್ಲಿ ಪರಾರಿಯಾಗಿದ್ದಾರೆ.

ಎದೆಗೆ ಎರಡು ಗುಂಡು: ಚಂದ್ರನಾಥ್ ಎದೆಗೆ ಎರಡು ಗುಂಡು ತಗುಲಿದ್ದು, ಅವು ಹೃದಯವನ್ನು ಭೇದಿಸಿವೆ. ಮತ್ತೊಂದು ಗುಂಡು ಹೊಟ್ಟೆ ಭಾಗಕ್ಕೆ ತಗುಲಿದೆ. ಅವರನ್ನು ಬದುಕಿಸಲು ಯಾವುದೇ ಅವಕಾಶ ಇರಲಿಲ್ಲ ಎಂದು ಆಸ್ಪತ್ರೆ ವೈದ್ಯರೊಬ್ಬರು ಹೇಳಿದ್ದಾರೆ. ದಾಳಿಯಲ್ಲಿ ಗಾಯಗೊಂಡು ಗಂಭೀರ ಸ್ಥಿತಿಯಲ್ಲಿದ್ದ ರಾಥ್ ಅವರ ಚಾಲಕನನ್ನು ಕೋಲ್ಕತ್ತಾದ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಹೌರಾದಲ್ಲೂ ಗಲಭೆ: 15 ಬಾಂಬ್ ಬಳಕೆ?: ನಗರದ ಚೌರಾಬಸ್ತಿ ಪ್ರದೇಶದಲ್ಲಿ ಗುರುವಾರ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ಮಧ್ಯೆ ಹಿಂಸಾತ್ಮಕ ಗಲಭೆ ಭುಗಿಲೆದ್ದಿದೆ. ಗಲಭೆಯಲ್ಲಿ ದುಷ್ಕರ್ಮಿ ಶಮಿ ಅಕ್ತರ್ 12ರಿಂದ 15 ಬಾಂಬ್ ಎಸೆದಿದ್ದಾನೆ ಎಂದು ಹೌರಾ ಬಿಜೆಪಿ ಅಧ್ಯಕ್ಷ ಗೌರಾಂಗ ಭಟ್ಟಾಚಾರ್ಯ ಆರೋಪಿಸಿದ್ದಾರೆ. ಸ್ಥಳಕ್ಕೆ ಆಗಮಿಸಿದ ಹೌರಾ ನಗರ ಪೊಲೀಸರು ಎರಡೂ ಬಣಗಳನ್ನು ಚದುರಿಸಿದ್ದಾರೆ. ಎನ್‌ಐಎ ಪ್ರಕರಣದಲ್ಲಿ ಜಾಮೀನಿನಲ್ಲಿ ಹೊರಗಿರುವ ಶಮಿ ದಾಳಿ ನಡೆಸಿದ್ದಾನೆ ಎಂದು ಬಿಜೆಪಿ ನಾಯಕರು ಆರೋಪಿಸಿದೆ.

ಇನ್ನೂ ಇಬ್ಬರ ಮೇಲೆ ದಾಳಿ, ಚಾಕು ಇರಿತ!

ಪುಟ 9➜ ನಾವಿಲ್ಲಿ ಮಾತನಾಡುತ್ತಿದ್ದಾಗಲೇ ಬಸಿರ್‌ಹಾಟ್‌ನಲ್ಲಿ ನಮ್ಮ ಕಾರ್ಯಕರ್ತನಿಗೆ ಗುಂಡು ಹಾರಿಸಲಾಗಿದ್ದು, ಬರಾನಗರದಲ್ಲಿ ಇನ್ನೊಬ್ಬನ ಮೇಲೆ ಚಾಕು ಇರಿತವಾಗಿದೆ ಎಂದು ಸುವೇಂದು ತಿಳಿಸಿದ್ದಾರೆ. ಚಂದ್ರನಾಥ್ ಹತ್ಯೆ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್‌ರೊಂದಿಗೆ ಮಾತನಾಡಿದ್ದೇನೆ ಎಂದವರು ಹೇಳಿದ್ದಾರೆ.

ಬಾಂಬ್ ದಾಳಿ: 5 ಬಿಜೆಪಿ ಕಾರ್ಯಕರ್ತರಿಗೆ ಗಾಯ

ಚಂದ್ರನಾಥ್ ಹತ್ಯೆ ಬಳಿಕ ಬಿಜೆಪಿ ಶಾಸಕಿ ರತ್ನಾ ದೇಬನಾಥ್ ಮನೆ ಬಳಿ ದುಷ್ಕರ್ಮಿಗಳು ನಡೆಸಿದ ಬಾಂಬ್ ದಾಳಿಗೆ ಐವರು ಬಿಜೆಪಿ ಕಾರ್ಯಕರ್ತರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನೀರಿಂಗ್ ವಿಭಾಗ, ಬೆಳಗಾವಿ

ಕ್ರಸಂ.:ಪಂರಾಇಂ/ವಿಬೆ/ಪಿಬಿ-1/ಟೆಂಡರ್-05/2026-27/524 ದಿನಾಂಕ: 06-05-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1 & 2 ರಲ್ಲಿ ಒಟ್ಟು **18 (26304, 26239, 25441/call-4, 25437/call-4, 25432/call-4, 26159/call-2, 26167/call-2, 26166/call-2, 26147, 26149, 26137, 26158/call-2, 26163/call-2, 26100/call-2, 26153, 26125, 26123/call-2, 26112/call-2)** ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ **ರೂ.100.00** ಹಾಗೂ **ರೂ.5.50 ಲಕ್ಷಗಳು** ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ **ರೂ.2,00,000/-** ಹಾಗೂ **ರೂ.13,750/-**ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ **ದಿನಾಂಕ: 16-05-2026 ಸಂಜೆ 17:28 ರೊಳಗಾಗಿ,** ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ **ದಿನಾಂಕ: 16-05-2026 ಸಂಜೆ 17.30 ಗಂಟೆಯವರೆಗೆ,** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 18-05-2026. ಮುಂಜಾನೆ 11:00 ಗಂಟೆಯ** ನಂತರ ಹಾಗೂ ಆರ್ಥಿಕ ಬಿಡ್‌ತೆರೆಯುವ **ದಿನಾಂಕ: 18-05-2026 ರಂದು ಮುಂಜಾನೆ 11.30 ಗಂಟೆಗೆ** ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.

ವಾ.ಸಾ.ಇ./ಬೆಳಗಾವಿ/205/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಚಿಕ್ಕಮಗಳೂರು ಜಿಲ್ಲೆ

ಸಂಖ್ಯೆ:ಅಸಂಕಇ/ಹೊಸಂಸೇಪಿ/ಸಿಆರ್-04/2026-27 ದಿನಾಂಕ: 28-04-2026

ಪ್ರಕಟಣೆ

2026-27ನೇ ಸಾಲಿಗೆ ಚಿಕ್ಕಮಗಳೂರು ಜಿಲ್ಲೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕಚೇರಿ/ಜಿಲ್ಲಾ ಮತ್ತು ತಾಲ್ಲೂಕು ಅರಿವು ಮಾಹಿತಿ ಕೇಂದ್ರ, ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯ /ಮಹಿಳಾ ಪದವಿ ಪೂರ್ವ ಕಾಲೇಜು / ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ / ಕಾಲೇಜು, ಮೊರಾರ್ಜಿ ದೇಸಾಯಿ ವಸತಿ ಶಾಲೆ / ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಮಾನವ ಸೇವೆಯನ್ನು ತಾತ್ಕಾಲಿಕವಾಗಿ ಪಡೆಯುವ ಸಲುವಾಗಿ ಟೆಂಡರ್‌ನ್ನು ಇ-ಪೋರ್ಟಲ್ https://kppp.karnataka.gov.in ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್ ಅಂದಾಜು ಮೊತ್ತ ರೂ. 170.00ಲಕ್ಷಗಳು. ಇ.ಎಂ.ಡಿ ಮೊತ್ತ: ರೂ.2.55 ಲಕ್ಷಗಳು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:27-05-2026 ರ ಸಂಜೆ: 5.00 ಗಂಟೆ.**

ಹೆಚ್ಚಿನ ಮಾಹಿತಿಗಾಗಿ:

https://kppp.karnataka.gov.in ವೆಬ್‌ಸೈಟ್‌ಗೆ ಲಾಗಿನ್ ಆಗಬಹುದು ಅಥವಾ ಜಿಲ್ಲಾ ಕಚೇರಿ ದೂರವಾಣಿ ಸಂಖ್ಯೆ:08262-295848ಗೆ ಸಂಪರ್ಕಿಸಬಹುದು.

ಸಹಿ/-ಜಿಲ್ಲಾ ಅಧಿಕಾರಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಚಿಕ್ಕಮಗಳೂರು

ಕರ್ನಾಟಕ ಸರ್ಕಾರ

ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಶಿವಮೊಗ್ಗ.

1ನೇ ಮಹಡಿ, ಸತ್ಯಶ್ರೀ ಆರ್ಕೇಡ್, 5ನೇ ಪ್ಯಾರಲಲ್ ರಸ್ತೆ, ದುರ್ಗಿಗುಡಿ.
E-mail- domshimoga@gmail.com PH: (08182) 220206

ಸಂ:ಅಸಂಕಇಶಿ/ಆ.ಸಾ.ಟೆ/ಸಿ.ಆರ್-08/2026-27 ದಿನಾಂಕ: 06/05/2026

E PROCUREMENT SHORT TERM TENDER NOTIFICATION

ಶಿವಮೊಗ್ಗ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ/ ಕಾಲೇಜು, ಮೊ.ದೇ.ವ.ಶಾಲೆ/ ಕಾಲೇಜುಗಳಿಗೆ ಹಾಗೂ ವಿದ್ಯಾರ್ಥಿನಿಲಯಗಳಿಗೆ ಆಹಾರ ಹಾಗು ಇತರೆ ಅವಶ್ಯಕ ಸಾಮಗ್ರಿಗಳ ಪೂರೈಸಲು ಅರ್ಹ ಏಜೆನ್ಸಿ ಆಯ್ಕೆಗಾಗಿ ಆಸಕ್ತಿಯುಳ್ಳ ಟೆಂಡರ್‌ದಾರರಿಂದ E-Procurement (KPPP Portal) ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ. 1. ಟೆಂಡರ್ ನಂ.: MWD/2026-27/IND0128 **ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ:** ರೂ.457.59 ಲಕ್ಷ **ಟೆಂಡರ್ ಅರ್ಜಿ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:** 04.05.2026 **ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:** 19.05.2026 ರಂದು ಸಂಜೆ 5.00 ಗಂಟೆ **ಟೆಂಡರ್ ಅರ್ಜಿ ಶುಲ್ಕ:** As pe E-Procurement (KPPP Portal) **ಇ.ಎಂ.ಡಿ ಮೊತ್ತ :** 6.86 ಲಕ್ಷ

ಆಸಕ್ತಿಯುಳ್ಳ ಟೆಂಡರ್‌ದಾರರು Website: http://kppp.karnataka.gov.in ನಲ್ಲಿ ಅಪ್‌ಲೊಡ್ ಮಾಡುವುದು ಹಾಗೂ ಸದರಿ ವೆಬ್‌ಸೈಟ್‌ನಲ್ಲಿ ಟೆಂಡರ್ ದಸ್ತಾವೇಜು ಮತ್ತು ಮಾಹಿತಿಗಳು ಲಭ್ಯವಿದೆ.

ಸಹಿ/- ಜಿಲ್ಲಾ ಅಧಿಕಾರಿಗಳು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಶಿವಮೊಗ್ಗ ಜಿಲ್ಲೆ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/20/05/193

ಕರ್ನಾಟಕ ಬ್ಯಾಂಕ್ ಲಿ.

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ
3ನೇ ಮಹಡಿ, ಕರ್ನಾಟಕ ಬ್ಯಾಂಕ್ ಬಿಲ್ಡಿಂಗ್,
ಕೊಡಿಯಾಲ್‌ಬೈಲ್, ಮಂಗಳೂರು-575003.

ದೂರವಾಣಿ : 0824-2422811(Gen)/2427811 (CM)
ಇ-ಮೇಲ್ : mlr.arm@ktkbank.com
Website : https://www.karnatakabank.bank.in
CIN : L85110KA1924PLC001128

ಸ್ವಾಧೀನತೆಯ ಸೂಚನೆ

ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002 (ಮುಂದಕ್ಕೆ ಕಾಯಿದೆಯೆಂದು ನಮೂದಿಸಲಾಗುವುದು) ಅಡಿಯಲ್ಲಿ ನೇಮಕಗೊಂಡ ಕೆಳಗೆ ಸಹಿ ಮಾಡಿರುವ **ಕರ್ನಾಟಕ ಬ್ಯಾಂಕ್,** ಅಧಿಕೃತ ಅಧಿಕಾರಿ, ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮಗಳು 2002 ಇದರ ಪರಿಚ್ಛೇದ 13(12) ನಿಯಮ 3 ರಲ್ಲಿ ದತ್ತವಾದ ಅಧಿಕಾರವನ್ನು ಉಪಯೋಗಿಸಿಕೊಂಡು ಸೆಕ್ಷನ್ 13(2) & 13(3) ರಂತೆ ದಿನಾಂಕ **31.01.2026** ರಂದು **ತಗಾದೆ ನೋಟೀಸನ್ನು ಸಾಲಗಾರರು / ಜಾಮೀನುದಾರರು: 1) ಕು. ಕುಂದರ್ ಅಪೂರ್ವ ಅಪ್ಪು,** ಶ್ರೀ ಅಪ್ಪು ಬಿ. ಕುಂದರ್‌ರವರ ಮಗಳು, **ವಿಳಾಸ:** #1-217/1ಎ, "ಶ್ರೀ ರಕ್ಷಾ" ಮನೆ, ಮೂಡುತೋಟ ಬೆಳ್ಳಾರು ಗ್ರಾಮ, ಹಳೆಯಂಗಡಿ, ಮುಲ್ಕಿ ತಾಲೂಕು, ದ.ಕ.ಜಿಲ್ಲೆ – 574 146, **2) ಶ್ರೀ ಗೌತಮ್,** ಶ್ರೀ ರಮೇಶ ರವರ ಮಗ, **ವಿಳಾಸ:** #1-220-, ಮೂಡುತೋಟ ಬೆಳ್ಳಾರು ಗ್ರಾಮ, ಹಳೆಯಂಗಡಿ, ಮುಲ್ಕಿ ತಾಲೂಕು, ದ.ಕ.ಜಿಲ್ಲೆ – 574 146, **3) ಶ್ರೀ ಗುರುಪ್ರಸಾದ್,** ಶ್ರೀ ರಮೇಶ ರವರ ಮಗ, **ವಿಳಾಸ:** #1-217/1ಎ, "ಶ್ರೀ ರಕ್ಷಾ" ಮನೆ, ಮೂಡುತೋಟ ಬೆಳ್ಳಾರು ಗ್ರಾಮ, ಹಳೆಯಂಗಡಿ, ಮುಲ್ಕಿ ತಾಲೂಕು, ದ.ಕ.ಜಿಲ್ಲೆ – 574 146, **4) ಶ್ರೀಮತಿ ಲಕ್ಷ್ಮೀ,** ಶ್ರೀ ಅಣ್ಣು ಕುಂದರ್ ರವರ ಪತ್ನಿ, **ವಿಳಾಸ:** #1-220, ಮೂಡುತೋಟ ಬೆಳ್ಳಾರು ಗ್ರಾಮ, ಹಳೆಯಂಗಡಿ, ಮುಲ್ಕಿ ತಾಲೂಕು, ದ.ಕ.ಜಿಲ್ಲೆ – 574 146, **5) ಶ್ರೀ ಪ್ರಜ್ವಲ್,** ಶ್ರೀ ಅಪ್ಪು ಬಿ. ಕುಂದರ್ ರವರ ಮಗ, **ವಿಳಾಸ:** #1-220-, ಮೂಡುತೋಟ ಬೆಳ್ಳಾರು ಗ್ರಾಮ, ಹಳೆಯಂಗಡಿ, ಮುಲ್ಕಿ ತಾಲೂಕು, ದ.ಕ.ಜಿಲ್ಲೆ – 574 146, **ನಂ. 5 ಇವರ ಇನ್ನೊಂದು ವಿಳಾಸ:** #2/351, ಕೋಟಿ ರಸ್ತೆ, ಮಲ್ಪಾರ್, ಮೇಜರ್ ಕಾಪು, ಉಡುಪಿ – 574 106 ಇವರಿಗೆ ಸದ್ರಿ ಸಾಲದ ಬಾಬ್ತು ನೋಟೀಸಿನಲ್ಲಿ ಕಾಣಿಸಿದ ಒಟ್ಟು ಮೊತ್ತ **ಟಿಎಲ್ ಖಾತೆ ಸಂಖ್ಯೆ 0127001600044501** ರಲ್ಲಿ **ರೂ. 33,05,835.70 (ರೂಪಾಯಿ ಮೂವತ್ತಮೂರು ಲಕ್ಷದ ಐದು ಸಾವಿರದ ಎಂಟ್ನೂರ ಮೂವತ್ತೈದು ಮತ್ತು ಪೈಸೆ ಎಪ್ಪತ್ತು ಮಾತ್ರ)** ಮತ್ತು ದಿನಾಂಕ **20.01.2026** ರಿಂದ ಅನ್ವಯವಾಗುವ ಭವಿಷ್ಯದ ಈ ನೋಟೀಸು ಪಡೆದ ದಿನಾಂಕದಿಂದ **60** ದಿನಗಳೊಳಗೆ ಪಾವತಿಸುವಂತೆ ನೋಟೀಸು ಜಾರಿಯಾಗಿರುತ್ತದೆ.

ಸಾಲಗಾರರು ಬಾಕಿ ಹಣವನ್ನು ಮರುಪಾವತಿಸಲು ವಿಫಲರಾಗಿರು ವುದರಿಂದ **ಅಧಿಕೃತ ಅಧಿಕಾರಿಯವರು ಮೇಲೆ ಹೇಳಿದ ಕಾಯಿದೆಯ ಪರಿಚ್ಛೇದ 13(4) ರ ನಿಯಮ 8 ರಲ್ಲಿ ದತ್ತವಾದ ಅಧಿಕಾರದಂತೆ ಕೆಳಗೆ ವಿವರಣೆ ನೀಡಿದ ಆಸ್ತಿಯನ್ನು 06.05.2026 ರಂದು ಸ್ವಾಧೀನಪಡಿಸಿಕೊಳ್ಳಲಾಗಿದೆ** ಎಂದು ಸಾಲಗಾರರಿಗೆ / ಜಾಮೀನುದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಸಾಲಗಾರರು & ಜಾಮೀನುದಾರರು ಮತ್ತು ಸಾರ್ವಜನಿಕರು ಈ ಸ್ಥಿರಾಸ್ತಿಯ ಬಗ್ಗೆ ಯಾವುದೇ ವ್ಯವಹಾರ ಮಾಡಬಾರದಾಗಿ ಈ ಮೂಲಕ ಎಚ್ಚರಿಸಲಾಗಿದೆ. ಆದಾಗ್ಯೂ ಈ ಸ್ಥಿರಾಸ್ತಿ ಬಗ್ಗೆ ವ್ಯವಹಾರ ನಡೆಸಿದಲ್ಲಿ **ಕರ್ನಾಟಕ ಬ್ಯಾಂಕ್ ಲಿ., ಐಕಳ ಶಾಖೆಗೆ ಟಿಎಲ್ ಖಾತೆ ಸಂಖ್ಯೆ 0127001600044501** ರಲಿ ಸಲ್ಲತಕ್ಕ **ಒಟ್ಟು ಮೊತ್ತ ರೂ. 33,21,449.70 (ರೂಪಾಯಿ ಮೂವತ್ತಮೂರು ಲಕ್ಷದ ಇಪ್ಪತ್ತೊಂದು ಸಾವಿರದ ನಾಲ್ನೂರ ನಲ್ವತ್ತೊಂಭತ್ತು ಮತ್ತು ಪೈಸೆ ಎಪ್ಪತ್ತು ಮಾತ್ರ)** ಮತ್ತು ದಿನಾಂಕ **20.04.2026** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳ ಪಾವತಿಗೆ ಬಾಧ್ಯಸ್ಥರಾಗಿರುತ್ತಾರೆ.

ಭದ್ರತೆಯ ಸ್ವತ್ತುಗಳನ್ನು ಹಿಂದೆ ಪಡೆಯುವ ಬಗ್ಗೆ ಕಾಯಿದೆಯ ಸೆಕ್ಷನ್ 13 ಉಪನಿಯಮ (8) ರಲ್ಲಿ ಲಭ್ಯವಾಗುವ ಕಾಲಾವಕಾಶದ ಬಗ್ಗೆ ಸಾಲಗಾರರು / ಜಾಮೀನುದಾರರ ಗಮನವನ್ನು ಸೆಳೆಯಲಾಗಿದೆ.

ಸ್ಥಿರಾಸ್ತಿಗಳ ವಿವರ

ಕು. ಕುಂದರ್ ಅಪೂರ್ವ ಅಪ್ಪು ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಕೃಷಿಯೇತರ ಆಸ್ತಿಯ **ಸರ್ವೆ ನಂಬ್ರ 45/24, 45/25, ಆಸ್ತಿ ನಂಬ್ರ 151100301100220651, 151100301100220650** (ಕ್ರಮವಾಗಿ ವಿಸ್ತೀರ್ಣ 101.77 ಚದರಮೀಟರ್ ಮತ್ತು 101.17 ಚದರಮೀಟರ್) ಒಟ್ಟು ವಿಸ್ತೀರ್ಣ **202.34** ಚದರಮೀಟರ್ ಅದರೊಂದಿಗೆ ಅಲ್ಲಿರುವ ಕಟ್ಟಡ **"ಶ್ರೀ ದೇವಿ ಕೃಪಾ"**, ಡೋರ್ ನಂಬ್ರ 1-217/ಎ ಮತ್ತು 1-220/1 ನ್ನು ಹೊಂದಿದೆ. ಈ ಸ್ಥಿರಾಸ್ತಿಯು ಬೆಳ್ಳಾಯರು ಗ್ರಾಮ, ಪಡುಪಣಂಬೂರು ಬಂದರು, ಕೋರ್ದಬ್ಬು ಸ್ಥಾನದ ಹತ್ತಿರ, ಮುಲ್ಕಿ ತಾಲೂಕು, ದ.ಕ.ಜಿಲ್ಲೆಯಲ್ಲಿದೆ. **ಗಡಿರೇಖೆಗಳು: ದಾಖಲೆಗಳ ಪ್ರಕಾರ/ವಾಸ್ತವ: ಪೂರ್ವ:** ರಸ್ತೆ; **ಪಶ್ಚಿಮ:** ಸರ್ವೆ ನಂಬ್ರ 44; **ಉತ್ತರ:** ಸರ್ವೆ ನಂಬ್ರ 45/25ರ ಉಳಿದ ಭಾಗ–ಸರ್ವೆ ನಂಬ್ರ 45/25ರ ಉಳಿದ ಭಾಗ; **ದಕ್ಷಿಣ:** ಸರ್ವೆ ನಂಬ್ರ 45/23 ರ ಉಳಿದ ಭಾಗ – ಸರ್ವೆ ನಂಬ್ರ 45/23 ರ ಉಳಿದ ಭಾಗ.

ದಿನಾಂಕ : 06.05.2026
ಸ್ಥಳ : ಬೆಳ್ಳಾಯರು ಗ್ರಾಮ

ಸಹಿ/-, ಮುಖ್ಯ ಪ್ರಬಂಧಕರು ಮತ್ತು ಅಧಿಕೃತ ಅಧಿಕಾರಿ
ಕರ್ನಾಟಕ ಬ್ಯಾಂಕ್ ಲಿ.,

ಮಾನ್ಯ ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೆಳ್ತಂಗಡಿ

ಜಿ & ಡಬ್ಲ್ಯೂ ನಂಬ್ರ : 32/2026

ಇವರೊಳಗೆ,
ಶ್ರೀ ಉದನೇಶ್ವರ ಭಟ್ @ ಯು.ಕೆ. ಭಟ್
...ಅರ್ಜಿದಾರರು
ವಿರುದ್ಧ
ಯಾರೂ ಇರುವುದಿಲ್ಲ
...ಪ್ರತಿವಾದಿಯರು

ನೋಟೀಸು

ಬೆಳ್ತಂಗಡಿ ತಾಲೂಕು, ಕುವೆಟ್ಟು ಗ್ರಾಮ, ಗುರುವಾಯನಕೆರೆ ಅಂಚೆ, ಶಕ್ತಿನಗರ, ಸನ್ಯೋಧ್ಯಾನ, ಎಂಬಲ್ಲಿರುವ ಶ್ರೀ ಮಹಾಲಕ್ಷ್ಮಿ ಮನೆ ನಂಬ್ರ: 2-100(17) ರ ನಿವಾಸಿ, ಮಹಾಲಿಂಗ ಭಟ್ ರವರ ಮಗ ಶ್ರೀ ಉದನೇಶ್ವರ ಭಟ್ @ಯು.ಕೆ. ಭಟ್ ಅರ್ಜಿದಾರರಾಗಿ, ತನ್ನ ಸಂರಕ್ಷಣೆಯಲ್ಲಿರುವ ಕೋಮಾ ಸ್ಥಿತಿಯಲ್ಲಿರುವ ತನ್ನ ಪತ್ನಿ ಶ್ರೀಮತಿ ಸುಬ್ರಹ್ಮಣೇಶ್ವರಿ ಉದನೇಶ್ವರ ಭಟ್ ಅವರ ಹೆಸರಲ್ಲಿ ಫೆಡರಲ್ ಬ್ಯಾಂಕ್, ಬೆಳ್ತಂಗಡಿ ಶಾಖೆಯಲ್ಲಿರುವ ಬ್ಯಾಂಕ್ ಖಾತೆ ನಿರ್ವಹಣೆ ಸಹಿತ ಅವರ ಪರವಾಗಿ ಅಗತ್ಯವಿರುವ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುವರೇ ಅವರ ರಕ್ಷಕರನ್ನಾಗಿ ನೇಮಿಸಿ ಅನುಮತಿ ನೀಡಿ ಘನ ನ್ಯಾಯಾಲಯ ಉದ್ಘೋಷಣೆ ಮಾಡಬೇಕೆಂದು ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಸದ್ರಿ ಪ್ರಕರಣದಲ್ಲಿ ಶ್ರೀಮತಿ ಸುಬ್ರಹ್ಮಣೇಶ್ವರಿ ಉದನೇಶ್ವರ ಭಟ್ ಇವರ ಇತರ ಹಿತಚಿಂತಕರಾಗಿ ಇನ್ನಾರಿಗಾದರೂ ಯಾವುದೇ ಆಕ್ಷೇಪವಿದ್ದಲ್ಲಿ ಮಾನ್ಯ ನ್ಯಾಯಾಲಯದ ಸಮಕ್ಷಮ ದಿನಾಂಕ: **02.06.2026 ರಂದು ಬೆಳಗ್ಗೆ ಘಂಟೆ 11.00ಕ್ಕೆ ಸರಿಯಾಗಿ** ಖುದ್ದಾಗಿ ಇಲ್ಲವೇ ವಕೀಲರ ಮೂಲಕ ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಕಾನೂನು ರೀತ್ಯ ಸದ್ರಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದೆಂದು ಈ ಮೂಲಕ ನೋಟೀಸು ಪ್ರಚುರ ಪಡಿಸಿದೆ.

ನ್ಯಾಯಾಲಯದ ಆದೇಶದ ಮೇರೆಗೆ 2026ನೇ ಇಸವಿ ಮೇ ತಿಂಗಳ 7ನೇ ದಿನಾಂಕದಂದು ನ್ಯಾಯಾಲಯದ ಮೊಹರು/ಸಹಿ ನನ್ನ ದಸ್ತಕ್ತಿನೊಡನೆ ಕೊಡಲಾಗಿದೆ.

ಸಹಿ/- ಶಿರಸ್ತೇದಾರರು
ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಧೀಶರು, ಬೆಳ್ತಂಗಡಿ

ಸಹಿ/- ವೈ. ಶಾಮ ಭಟ್
ವಕೀಲರು, ಬೆಳ್ತಂಗಡಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ-1/ಟೆಂಡರ-02/2026-27/541 ದಿನಾಂಕ: 06-05-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ-4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 13-05-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 14-05-2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 15-05-2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 18-05-2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ: Mitigation- 8443-Deposite Contribution During 2025-26 ವರ್ಕ ಇನಡೆಂಟ್ (1) PWD/2025-26/OW/WORK_INDENT32655

(ಕೆಡಬ್ಲೂ-4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/110/26-27 dt. 06.05.2026

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ವಿಜನಿನಿ, ಭ.ಮೇ.ಯೋ. ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.
ದೂರವಾಣಿ ಸಂ:08194-200187 Email ID:ubpeediv07@gmail.com

ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2026-27/ 7 & 8
ದಿನಾಂಕ:07.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ನಂ.148 ಎಂಬೇಸಿ ಸ್ಕ್ವೇರ್, ಇನ್‌ಫ್ಯಾಂಟ್ರಿ ರಸ್ತೆ ಬೆಂಗಳೂರು 560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್:ಚಿತ್ರದುರ್ಗ ಕಛೇರಿ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳ ದ್ವಿ-ಲಕೋಟೆ ಪದ್ಧತಿಯಲ್ಲಿ Karnataka Public Procurement Portalನ https://kppp.karnataka.gov.in ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಇ.ಎಂ.ಡಿ ಮೊತ್ತ/ ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕದವರೆಗೆ ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194-200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಇಂಡೆಂಟ್ ಸಂಖ್ಯೆ **(1) VJNL/2025-26/BD/WORK_INDENT496/ CALL-2 4701 ಲೆಕ್ಕಶೀರ್ಷಿಕೆ:-V.V.Sagara ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ:-41,44,032.78**

(1) VJNL/2025-26/BD/ WORK_INDENT 497/CALL-2
4701 ಲೆಕ್ಕಶೀರ್ಷಿಕೆ:-V.V.Sagara ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ:-41,69,280.73
ಟೆಂಡರ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 15.05.2026 @ 5.00 PM
ಬಿಡ್ಡನ್ನು ತೆರೆಯುವ ದಿನಾಂಕ 16.05.2026 @ 5.30 PM

ಸಹಿ/- ಕಾರ್ಯಪಾಲಕ ಇಂಜಿನಿಯರ್
ವಿ.ಜ.ನಿ.ನಿ., ಭ.ಮೇ.ಯೋ., ವಿಭಾಗ ನಂ.07,
ಹಿರಿಯೂರು ಕ್ಯಾಂಪ್: ಚಿತ್ರದುರ್ಗ

DIPR/CTA/KSMCA/ 90 /2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-3/ಕೆಎಂಎಆರ್‌ಸಿ/2026-27/540 ದಿನಾಂಕ: 29-04-2026.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಸಿ.ಇ.ಪಿ.ಎಂ.ಐ.ಜಡ್ (ಕೆ.ಎಂ.ಇ.ಆರ್.ಸಿ.) ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಹಾಗೂ ಅನುಮೋದನೆಯಾದ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಈ ಕೆಳಕಾಣಿಸಿದ ಸೇವೆ ಮತ್ತು ಟೆಂಡರ್ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ಧತಿಯಂತೆ ಕೆಪಿ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಯೋಜನಾ ಸಮಾಲೋಚಕರುಗಳು ಹಾಗೂ ಗುತ್ತಿಗೆದಾರರು ವೆಬ್‌ಸೈಟ್ **https:kppp.karnataka.gov.in** ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. ಸದರಿ ಸೇವೆ ಟೆಂಡರ್/ ಕಾಮಗಾರಿಗಳ ವಿವರ ಈ ಕೆಳಗೆನಂತಿವೆ.

ಸದರಿ ಕಾಮಗಾರಿಗಳ ವಿವರ ಈ ಕೆಳಗೆನಂತಿವೆ – PWD/2026-27/BD/WORK_INDENT35971, PWD/2026-27/BD/WORK_INDENT35837, PWD/2026-27/BD/WORK_INDENT35853, PWD/2026-27/SE1194 and PWD/2026-27/SE1187

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ದಾಖಲೆಗಳನ್ನು ಇ-ಪ್ರೋಕೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿದ ದಿನಾಂಕ ಮತ್ತು ಸಮಯ : **ದಿನಾಂಕ: 05-05-2026 ರಿಂದ 03-06-2026 ರ 16.00 ಗಂಟೆವರೆಗೆ.** ಆ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ : **18-05-2026 ರಂದು 11.30 ಗಂಟೆಗೆ ಕಾರ್ಯನಿರ್ವಾಹಕ ಇಂಜೀನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಇ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **29-05-2026 ರಂದು 16.00 ಗಂಟೆಯ ವರೆಗೆ.** ಈ)ಇ-ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **03-06-2026 ರಂದು 16.00 ಗಂಟೆಯ ವರೆಗೆ.** ಉ)ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **04-06-2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು.** ಊ)ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/123

ಮುಥೂಟ್ ಫಿನ್ಕಾರ್ಪ್ ಲಿಮಿಟೆಡ್

muthoot FINCORP

ನೋಂದಾಯಿತ ಕಛೇರಿ: ಮುತ್ತೂಟ್ ಸೆಂಟರ್, ಟಿಸಿ ನಂ. 27/3022, ಪುನ್ನನ್ ರಸ್ತೆ, ತಿರುವನಂತಪುರಂ, ಕೇರಳ - 695 001.
CIN: U65929KL1997PLC011518
ಫೋನ್: +91 471 4911550 | ವೆಬ್‌ಸೈಟ್: www.muthootfincorp.com

ಸಾರ್ವಜನಿಕ ಸೂಚನೆ
ಗೋಲ್ಡ್ ಲೋನ್ ಅಕೌಂಟ್‌ಗಳ ಹರಾಜಿನ ಹೆಚ್ಚುವರಿ ಮೊತ್ತದ ರಿಫಂಡ್

ದಿನಾಂಕ: 05.05.2026

ಗೋಲ್ಡ್ ಲೋನ್ ಅಕೌಂಟ್‌ಗಳ ಮರುಪಾವತಿಯಲ್ಲಿನ ಡೀಫಾಲ್ಟ್ ಕಾರಣದಿಂದಾಗಿ ನಡೆಸಿದ ಅಡವಿಟ್ಟ ಚಿನ್ನದ ಆಭರಣಗಳ ಹರಾಜಿನಲ್ಲಿ, ಹೆಚ್ಚುವರಿ ಮೊತ್ತಗಳು ಉಳಿದಿವೆ ಎಂದು ಈ ಮೂಲಕ ಮುತ್ತೂಟ್ ಫಿನ್‌ಕಾರ್ಪ್ ಲಿಮಿಟೆಡ್‌ನ ಸಾಲಗಾರರಿಗೆ ತಿಳಿಸಲಾಗುತ್ತದೆ. ಈ ಕೆಳಗಿನ ಲೋನ್ ಅಕೌಂಟ್ ನಂಬರ್‌ಗಳು ಹೆಚ್ಚುವರಿ ಮೊತ್ತದ ರಿಫಂಡ್‌ಗೆ ಅರ್ಹವಾಗಿವೆ:

ಅರ್ಹ ಲೋನ್ ನಂಬರ್‌ಗಳು: SHIMOGA DISTRICT:- BADRAVATI:- 112500004, 112500039, 112500235, 112500400, F25551. BHADRAVATI-B H ROAD:- 366400505, F11104, F11380. HOLEHONNUR:- 361000139, 361000187, 361000237, 361000349, 361000421, 361000510, 361000551, 361000679, 361000727, 361001504, 361001549, F15604, F16186, F16446, F16574. SAGAR:- 128000658, 128001492, 128000725, 128000726, 128000738, F28374. SHIKARIPURA-SHIVMOGA:- 169700286, 169700779, 169700780, F27079. SHIMOGA-B H ROAD:- 287700014, 287700727, 287700897, F12089, F12367, F12602. SHIMOGA-N T ROAD:- 356100194, 356100648, 356100769. SHIMOGA-SHANKAR MATHA CIRCLE:- 363800870, F12691. SHIMOGA-VINOBA NAGAR:- 360600548, 360600592, 360601160, F10214. SHIRALKOPPA:- 253800164, 253800502, 253800630, 253800790, 253800826, 253800864, 253800983, 253800991, 253801051, 253801590, 253801074, 253801147, 253801181, 253801826, 253802050, 253802969, 253803112, 253803127, 253803171, F23865, F27386, F24696, F25249, F25347, F25691, F25870, F26715, F27111, F27159, F27247. SORAB:- 362200234, 362200900, 362200953, 362201544, 362201578, 362201640, F14796, F14853. THIRTHAHALLY:- 125300007, 125300024, 125300530, F17690.

CHAMRAJNAGAR DISTRICT:- CHAMARAJANAGAR-PVT BUS STAND:- 362100112, 362100400, 362100443, 362100521, 362101106, 362101137. CHAMARAJNAGAR:- 094600470, 094601284, F22104, F23413. CHAMARAJNAGAR-SAMPIGE ROAD:- 262600565, 262600796, 262600992, F18573, F19135. CHANDAKAVADI:- 389300104, 389300375, 389300540, 389300811, 389301218, 389301983, 389302184, 389302240, 389302412, F23547, F23569, F23710, F23844, F24343, F24579, F24582. GUNDLUPET:- F20065, F20170, GDPT#383/ME. HANUR :- F11338, F13319. KOLLEGAL:- 090900211, 090900517, 090900282, 090900468, 090900735, 090900759, 090900804, 090901173, 090901186, 090901189, 090901191, F28298. KOLLEGAL-BASTIPURA ROAD:- 344100687, 344100751, 344100901, 344100948, 344101351, F15288. KOLLEGAL-MAIN ROAD:- 293100051, 293100232, 293100279, 293101319, 293101588, 293101712, 293101728, F22066, F22826, F22624, F23370, F23528, F23873. TERAKANAMBI:- 319700976, 319701156, 319701192, F15132, F20642. YELANDUR:- 115600433, 115601757, F38618, F38890, F40371

KODAGU DISTRICT:- GONIKOPPAL-KODAGU:- 264300339, 264300535, 264300625, 264300751, 264300952, F21029, F21678. KODLIPET:- F10045, F10656. KUSHAL NAGAR:- 109400795, 109401193. MADIKERI:- 041400833, F25108, F25610. NAPOKLU-KODAGU:- F20836, F21081. SOMWARPET:- 099400078, 099400152, 099400692, 099400940, F16025, F17150. SUNTIKOPPA-KODAGU:- F8833.

ಅರ್ಹ ಸಾಲಗಾರರು, ಅಥವಾ ಸಾಲಗಾರರ ಮರಣ ಅಥವಾ ಲಭ್ಯವಿಲ್ಲದ ಸಂದರ್ಭದಲ್ಲಿ, ಅವರ ನಾಮಿನಿ/ಕಾನೂನು ಉತ್ತರಾಧಿಕಾರಿಗಳು ರಿಫಂಡ್ ಕ್ಲೈಮ್ ಮಾಡಲು ಮಾನ್ಯ ID, ಅಸಲಿ ಪ್ಲೆಡ್ಜ್ ಫಾರ್ಮ್ ಮತ್ತು ಇತರ ಸಂಬಂಧಿತ ಲೋನ್ ವಿವರಗಳೊಂದಿಗೆ ಮುತ್ತೂಟ್ ಫಿನ್‌ಕಾರ್ಪ್ ಲಿಮಿಟೆಡ್‌ನ ಹತ್ತಿರದ ಶಾಖೆಗೆ ಭೇಟಿ ನೀಡುವಂತೆ ಕೋರಲಾಗುತ್ತದೆ.

ರಿಫಂಡ್ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಸಹಾಯಕ್ಕಾಗಿ, ದಯವಿಟ್ಟು ಸಂಪರ್ಕಿಸಿ: ಮುತ್ತೂಟ್ ಫಿನ್‌ಕಾರ್ಪ್ ಲಿಮಿಟೆಡ್, ಮುತ್ತೂಟ್ ಸೆಂಟರ್, TC ನಂಬರ್ 27/3022, ಪುನ್ನೆನ್ ರೋಡ್, ತಿರುವನಂತಪುರಂ - 695001
ಗ್ರಾಹಕ ಸಹಾಯವಾಣಿ:1800-102-1616 ಇಮೇಲ್: customercare@muthoot.com
ವೆಬ್‌ಸೈಟ್: www.muthoot.com

ಮುಥೂಟ್ ಫಿನ್ಕಾರ್ಪ್ ಲಿಮಿಟೆಡ್

ಮುಥೂಟ್ ಫಿನ್ಕಾರ್ಪ್ ಲಿಮಿಟೆಡ್

muthoot FINCORP

ನೋಂದಾಯಿತ ಕಛೇರಿ: ಮುತ್ತೂಟ್ ಸೆಂಟರ್, ಟಿಸಿ ನಂ. 27/3022, ಪುನ್ನನ್ ರಸ್ತೆ, ತಿರುವನಂತಪುರಂ, ಕೇರಳ - 695 001.
CIN: U65929KL1997PLC011518
ಫೋನ್: +91 471 4911550 | ವೆಬ್‌ಸೈಟ್: www.muthootfincorp.com

ಸಾರ್ವಜನಿಕ ಸೂಚನೆ
ಗೋಲ್ಡ್ ಲೋನ್ ಅಕೌಂಟ್‌ಗಳ ಹರಾಜಿನ ಹೆಚ್ಚುವರಿ ಮೊತ್ತದ ರಿಫಂಡ್

ದಿನಾಂಕ: 05.05.2026

ಗೋಲ್ಡ್ ಲೋನ್ ಅಕೌಂಟ್‌ಗಳ ಮರುಪಾವತಿಯಲ್ಲಿನ ಡೀಫಾಲ್ಟ್ ಕಾರಣದಿಂದಾಗಿ ನಡೆಸಿದ ಅಡವಿಟ್ಟ ಚಿನ್ನದ ಆಭರಣಗಳ ಹರಾಜಿನಲ್ಲಿ, ಹೆಚ್ಚುವರಿ ಮೊತ್ತಗಳು ಉಳಿದಿವೆ ಎಂದು ಈ ಮೂಲಕ ಮುತ್ತೂಟ್ ಫಿನ್‌ಕಾರ್ಪ್ ಲಿಮಿಟೆಡ್‌ನ ಸಾಲಗಾರರಿಗೆ ತಿಳಿಸಲಾಗುತ್ತದೆ. ಈ ಕೆಳಗಿನ ಲೋನ್ ಅಕೌಂಟ್ ನಂಬರ್‌ಗಳು ಹೆಚ್ಚುವರಿ ಮೊತ್ತದ ರಿಫಂಡ್‌ಗೆ ಅರ್ಹವಾಗಿವೆ:

ಅರ್ಹ ಲೋನ್ ನಂಬರ್‌ಗಳು: DAKSHIN KANNADA DISTRICT:- ALAKE:- 0657000038, 0657000551, 065700158. BEJAI-MANGALORE:- F12535. BELTHANGADI:- 0435000196, 0435000314, 0435000428, 043500242, F38449, F38821. GURUVAYANAKERE:- 3255000153, 3255000339, F11198, F13656. KAKKINJE:- 3380000481, F13195. KANKANADY-BYPASS ROAD:- 2966000304. KULAI:- 087100062. MOODBIDRI:- F10044. NELLYADI:- F13018. PUTHOOR (DK):- 0413000471. SULLIA - KARNATAKA:- 081700337, 081700339, 081700484, 081700581, 081700812, 081700983, 081701131, F15236, F17355. THOKOTTU:- 0873000070, 0873000394. UPPINANGADY-KARNATAKA:- 1971000018, F11038. VAMANJOOR:- 293000263, F18561. VENUR:- F10578.

UDUPI DISTRICT:- BHRAMAVAR-UDUPI:- 1635000344, 1635000592, 163500346, F12883, F13102, F13600, F13841, F13891. HEBRI:- 127900024, 127900028, 1279000495, 127900141, 127900163, 127900351, 127900493, F16033. KARKALA:- 0992000010, F12730. KAUP:- F7311. KOTESHWARA:- F14243.

ಅರ್ಹ ಸಾಲಗಾರರು, ಅಥವಾ ಸಾಲಗಾರರ ಮರಣ ಅಥವಾ ಲಭ್ಯವಿಲ್ಲದ ಸಂದರ್ಭದಲ್ಲಿ, ಅವರ ನಾಮಿನಿ/ಕಾನೂನು ಉತ್ತರಾಧಿಕಾರಿಗಳು ರಿಫಂಡ್ ಕ್ಲೈಮ್ ಮಾಡಲು ಮಾನ್ಯ ID, ಅಸಲಿ ಪ್ಲೆಡ್ಜ್ ಫಾರ್ಮ್ ಮತ್ತು ಇತರ ಸಂಬಂಧಿತ ಲೋನ್ ವಿವರಗಳೊಂದಿಗೆ ಮುತ್ತೂಟ್ ಫಿನ್‌ಕಾರ್ಪ್ ಲಿಮಿಟೆಡ್‌ನ ಹತ್ತಿರದ ಶಾಖೆಗೆ ಭೇಟಿ ನೀಡುವಂತೆ ಕೋರಲಾಗುತ್ತದೆ.

ರಿಫಂಡ್ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಸಹಾಯಕ್ಕಾಗಿ, ದಯವಿಟ್ಟು ಸಂಪರ್ಕಿಸಿ: ಮುತ್ತೂಟ್ ಫಿನ್‌ಕಾರ್ಪ್ ಲಿಮಿಟೆಡ್, ಮುತ್ತೂಟ್ ಸೆಂಟರ್, TC ನಂಬರ್ 27/3022, ಪುನ್ನೆನ್ ರೋಡ್, ತಿರುವನಂತಪುರಂ - 695001
ಗ್ರಾಹಕ ಸಹಾಯವಾಣಿ:1800-102-1616 ಇಮೇಲ್: customercare@muthoot.com
ವೆಬ್‌ಸೈಟ್: www.muthoot.com

ಮುಥೂಟ್ ಫಿನ್ಕಾರ್ಪ್ ಲಿಮಿಟೆಡ್

ಕರ್ನಾಟಕ ಸರ್ಕಾರ

(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಬೈತ್‌ಖೋಲ್, ಕಾರವಾರ

ಕ್ರ.ಸಂ.ಕಜಮಂ-60/ಕಾಮಗಾರಿ-III/2025-26 ದಿನಾಂಕ: 05.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ: ಕಾರವಾರ ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್ (ಒಜಸಾ) ರವರಿಗೆ ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗೆ ಹವಾನಿಯಂತ್ರಿತ (ಎ.ಸಿ.) ಖಾಸಗಿ ವಾಹನವನ್ನು ಚಾಲಕ ಸಮೇತ ಹೊರಗುತ್ತಿಗೆಯ ಮೂಲಕ ಬಾಡಿಗೆ ಆಧಾರದಲ್ಲಿ ಒದಗಿಸುವುದು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ : ಸಿಅಸುಇ : 30: ಶಿವಾನಿ : 2019 ಬೆಂಗಳೂರು, ದಿನಾಂಕ : 31.03.2022

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್, ಬಂಒಜಸಾ ನಿರ್ದೇಶನಾಲಯ, ಕಾರವಾರರವರಿಗೆ ಕಛೇರಿಯ ಹಾಗೂ ಒಳನಾಡು ಜಲಸಾರಿಗೆ ಅಧಿಕೃತ ಕೆಲಸ ಕಾರ್ಯಗಳಿಗೆ ಹವಾನಿಯಂತ್ರಿತ ಸೆಡಾನ್ ಕಾರ್ (Sedan Car) (ಮಾರುತಿ ಸ್ವಿಫ್ಟ್ ಡಿಜೈರ್ / ರ್‍ಝಿಗಾ ಮಾರುತಿ ಸುಜುಕಿ/ ಹ್ಯುಂಡೈ-ಎಕ್ಸೆಂಟ್/ ಹೊಂಡಾ – ಅಮೇಜ್ / ಟೊಯೊಟಾ – ಪ್ಲಾಟಿನಂ ಇಟಿಯೋಸ್ / ಟಾಟಾ – ಟಿಗೋರ್) / ಅದೇ ರೀತಿ ಮಾದರಿಯ ಖಾಸಗಿ ವಾಹನವನ್ನು 2026-27 ನೇ ಸಾಲಿಗೆ ಬಾಡಿಗೆ ಆಧಾರದ ಮೇಲೆ ಪಡೆಯಲು 2021 ರಿಂದ ಮೇಲ್ಪಟ್ಟು ಮಾದರಿಯ ವಾಹನದ ದರವನ್ನು ಅನುಬಂಧ-I ರಂತೆ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 19.05.2026 ರಂದು ಅಪರಾಹ್ನ 4:00 ಗಂಟೆಯ ಒಳಗಾಗಿ ಬಂದರು ಇಂಜನೀಯರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿರವರ ಕಛೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರರವರಿಗೆ ಮೊಹರು ಮಾಡಿದ ಲಕೋಟೆಯಲ್ಲಿ ಕಚೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು. ಸ್ವೀಕರಿಸಿದ ಲಕೋಟೆಗಳನ್ನು ದಿನಾಂಕ: 19.05.2026 ಅಪರಾಹ್ನ 4:30 ಗಂಟೆಗೆ ಬಂದರು ಇಂಜನೀಯರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿರವರ ಕಛೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು: ಕಾರವಾರ ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್ (ಒಜಸಾ) ರವರಿಗೆ ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗೆ ಹವಾನಿಯಂತ್ರಿತ (ಎ.ಸಿ.) ಖಾಸಗಿ ವಾಹನವನ್ನು ಚಾಲಕ ಸಮೇತ ಹೊರಗುತ್ತಿಗೆಯ ಮೂಲಕ ಬಾಡಿಗೆ ಆಧಾರದಲ್ಲಿ ಒದಗಿಸುವುದು. ಟೆಂಡರ್‌ಗಿಟ್ಟ ಮೊತ್ತ: ರೂ. 4,03,600.00, ಮುಂಗಡ ಠೇವಣಿ: ರೂ. 10,500.00, ಕಾಮಗಾರಿ ಮುಗಿಸಲು ಕಾಲಾವಧಿ: 10 ತಿಂಗಳು, ಖಾಲಿ ಟೆಂಡರು ಫಾರ್ಮ ಬೆಲೆ: ರೂ. 500.00 (ತೆರಿಗೆ ರಹಿತ), ಕಛೇರಿ ವೆಳೆಯಲ್ಲಿ ಟೆಂಡರು ಫಾರ್ಮಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08.05.2026, ಕಛೇರಿ ವೇಳೆಯಲ್ಲಿ ಟೆಂಡರು ಫಾರ್ಮು ನೀಡುವ ದಿನಾಂಕ: 12.05.2026, ಭರ್ತಿ ಮಾಡಿದ ಟೆಂಡರು ಸಲ್ಲಿಸಲು ಕೊನೆಯ ದಿನಾಂಕ: 19.05.2026 (ಸಂಜೆ 4.00 ಗಂಟೆಯವರೆಗೆ), ಷರಾ:.....

ಸಹಿ/- ಬಂದರು ಇಂಜನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ

DIPR/KWR/KSMCA/108/26-27 Dt: 07.05.2026

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ) ಕಚೇರಿ, ಹುಬ್ಬಳ್ಳಿ.

ನಂ. ಎಚ್‌ಡಿಎಮ್‌ಸಿ/63/04/2026-27 ದಿನಾಂಕ: 07-05-2026

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2023 ರ ಪ್ರಕಾರ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಸಿವ್ಹಿಲ್ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಸನ್ 2025-26 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.48658/10.82ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.47246/10.00ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.48222/2.50ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.49733/5.00ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.51690/4.36ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.49586/ 7.45ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54694/6.00ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.54691/9.45ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.54855/ 30.00ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.49574/6.20ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.49592/8.00ಲಕ್ಷ/ 4ನೇಕರೆ/ಸಾಮಾನ್ಯ, ಇಂಡೆಂಟ್ ನಂ.49730/10.00ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.52363/6.32ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.52316/3.06ಲಕ್ಷ/4ನೇಕರೆ/ ಸಾಮಾನ್ಯ, ಇಂಡೆಂಟ್ ನಂ.52268/32.41ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.52315/4.57ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.51688/15.00ಲಕ್ಷ/ 4ನೇಕರೆ/ಸಾಮಾನ್ಯ, ಇಂಡೆಂಟ್ ನಂ.54689/4.88ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54865/9.00ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54867/ 25.75ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.54871/ 3.70ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.43605/2.94ಲಕ್ಷ/5ನೇಕರೆ/ಸಾಮಾನ್ಯ, ಇಂಡೆಂಟ್ ನಂ.48985/ 9.88ಲಕ್ಷ/3ನೇಕರೆ/ ಸಾಮಾನ್ಯ, ಇಂಡೆಂಟ್ ನಂ.55493/15.00ಲಕ್ಷ/2ನೇಕರೆ/ಪ.ಜಾ(ಎಸ್.ಸಿ), ಇಂಡೆಂಟ್ ನಂ.55494/20.00ಲಕ್ಷ/ 2ನೇಕರೆ/ಪ.ಪಂ(ಎಸ್.ಟಿ) ಇಂಡೆಂಟ್ ನಂ.55305/28.25ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.55304/18.75ಲಕ್ಷ/ 2ನೇಕರೆ/ಪ.ಜಾ(ಎಸ್.ಸಿ), ಇಂಡೆಂಟ್ ನಂ.55303/27.50ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.56078/4.23ಲಕ್ಷ/ 2ನೇಕರೆ/ಪ್ರವರ್ಗII(ಎ), ಇಂಡೆಂಟ್ ನಂ.49593/9.70ಲಕ್ಷ/2ನೇಕರೆ/ ಪ್ರವರ್ಗII(ಎ), ಇಂಡೆಂಟ್ ನಂ.54740/20.00ಲಕ್ಷ/ 2ನೇಕರೆ/ಪ.ಜಾ(ಎಸ್.ಸಿ), ಇಂಡೆಂಟ್ ನಂ.56265/31.82ಲಕ್ಷ/ಪ್ರವರ್ಗII(ಎ), ಇಂಡೆಂಟ್ ನಂ.49731/3.00ಲಕ್ಷ/ 2ನೇಕರೆ/ಸಾಮಾನ್ಯ, ಇಂಡೆಂಟ್ ನಂ.55766/7.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.55762/4.20ಲಕ್ಷ/ಸಾಮಾನ್ಯ, ಇಂಡೆಂಟ್ ನಂ. 56727/15.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.56729/10.00ಲಕ್ಷ/ಪ್ರವರ್ಗII(ಎ), ಇಂಡೆಂಟ್‌ನಂ.57913/18.17ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57912/5.63ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57910/7.10ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57925/6.31ಲಕ್ಷ/ ಪ್ರವರ್ಗII(ಎ), ಇಂಡೆಂಟ್ ನಂ.57911/3.00ಲಕ್ಷ/ ಪ.ಜಾ(ಎಸ್.ಸಿ) ಇಂಡೆಂಟ್ ನಂ.57914/12.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57918/8.00ಲಕ್ಷ/ಪ್ರವರ್ಗII(ಎ), ಇಂಡೆಂಟ್ ನಂ.57928/12.67ಲಕ್ಷ/ ಸಾಮಾನ್ಯ, ಇಂಡೆಂಟ್ ನಂ.57909/7.35ಲಕ್ಷ/ ಸಾಮಾನ್ಯ, ಇಂಡೆಂಟ್ ನಂ.57919/2.50ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57921/14.00ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57923/7.65ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57924/15.00ಲಕ್ಷ/ಪ.ಪಂ(ಎಸ್.ಟಿ), ಇಂಡೆಂಟ್ ನಂ.57926/4.63ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57927/10.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57915/6.14ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57917/4.48ಲಕ್ಷ/ ಪ.ಪಂ(ಎಸ್.ಟಿ), ಇಂಡೆಂಟ್ ನಂ.57790/6.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57789/9.41ಲಕ್ಷ/ಸಾಮಾನ್ಯ, ಇಂಡೆಂಟ್‌ನಂ.57791/39.88ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57788/29.50ಲಕ್ಷ/ಸಾಮಾನ್ಯ, ಸನ್ 2026-27 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.57943/49.00ಲಕ್ಷ/ಪ್ರವರ್ಗI, ಇಂಡೆಂಟ್ ನಂ.57944/20.00ಲಕ್ಷ/ ಸಾಮಾನ್ಯ, ಸನ್ 2024-25 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.36183/14.70ಲಕ್ಷ/6ನೇಕರೆ/ಸಾಮಾನ್ಯ, ಇಂಡೆಂಟ್ ನಂ.33790/6.00ಲಕ್ಷ/7ನೇಕರೆ/ಸಾಮಾನ್ಯ, ಇಂಡೆಂಟ್ ನಂ.37759/13.50ಲಕ್ಷ/6ನೇಕರೆ/ಸಾಮಾನ್ಯ ಇಂಡೆಂಟ್ ನಂ.37468/ 18.89ಲಕ್ಷ/6ನೇಕರೆ/ಸಾಮಾನ್ಯ, ಇಂಡೆಂಟ್ ನಂ.34041/2.00ಲಕ್ಷ/6ನೇಕರೆ/ಸಾಮಾನ್ಯ ಸನ್ 2024-25ನೇ ಸಾಲಿನ ಪೂಜ್ಯ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.56080/4.00ಲಕ್ಷ/2ನೇಕರೆ/ಪ್ರವರ್ಗI, ಸನ್ 2025-26ನೇ ಸಾಲಿನ ಪೂಜ್ಯ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.54678/10.00ಲಕ್ಷ/3ನೇಕರೆ/ಸಾಮಾನ್ಯ ಇಂಡೆಂಟ್ ನಂ.56069/5.00ಲಕ್ಷ/2ನೇಕರೆ/ಪ.ಪಂ(ಎಸ್.ಟಿ) ಇಂಡೆಂಟ್ ನಂ.56081/10.00ಲಕ್ಷ/ 2ನೇಕರೆ/ಪ.ಜಾ(ಎಸ್.ಸಿ), ಸನ್ 2024-25ನೇ ಸಾಲಿನ ಉಪ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.36184/5.00ಲಕ್ಷ/7ನೇಕರೆ/ಸಾಮಾನ್ಯ, ಇಂಡೆಂಟ್ ನಂ.43159/8.00ಲಕ್ಷ/5ನೇಕರೆ/ಸಾಮಾನ್ಯ ಇಂಡೆಂಟ್ ನಂ.40713/15.00ಲಕ್ಷ/5ನೇಕರೆ/ಸಾಮಾನ್ಯ, ಸನ್ 2024-25ನೇ ಸಾಲಿನ ಉಪ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.51684/4.50ಲಕ್ಷ/ 3ನೇಕರೆ/ಸಾಮಾನ್ಯ, ಸನ್ 2025-26ನೇ ಸಾಲಿನ ಉಪ ಮಹಾಪೌರರ ಅನುದಾನದಡಿಯಲ್ಲಿ ಇಂಡೆಂಟ್ ನಂ.51685/ 25.00ಲಕ್ಷ/3ನೇಕರೆ/ಸಾಮಾನ್ಯ, ಸನ್ 2025-26ನೇ ಸಾಲಿನ ನಾಮನಿರ್ದೇಶಿತ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.40719/10.00ಲಕ್ಷ/5ನೇಕರೆ/ಸಾಮಾನ್ಯ, ಇಂಡೆಂಟ್ ನಂ.48225/5.25ಲಕ್ಷ/4ನೇಕರೆ/ಸಾಮಾನ್ಯ, ಇಂಡೆಂಟ್ ನಂ.57276/15.00ಲಕ್ಷ/ ಸಾಮಾನ್ಯ, ಇಂಡೆಂಟ್ ನಂ.57438/5.00ಲಕ್ಷ/ಸಾಮಾನ್ಯ, ಇಂಡೆಂಟ್ ನಂ.57792/21.75ಲಕ್ಷ/ಸಾಮಾನ್ಯ, ಸನ್ 2025-26ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ **(Village development Fund)** ಇಂಡೆಂಟ್ ನಂ.52680/49.82ಲಕ್ಷ/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.56730/37.70ಲಕ್ಷ/ಸಾಮಾನ್ಯ, ಸನ್ 2024-25ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್‌ನಂ.49734/10.00ಲಕ್ಷ/3ನೇಕರೆ/ಸಾಮಾನ್ಯ, ಸನ್ 2023-24ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ.20268/15.64ಲಕ್ಷ/ 8ನೇಕರೆ/ಸಾಮಾನ್ಯ, ಸನ್ 2025-26ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ.54823/15.00ಲಕ್ಷ/2ನೇಕರೆ/ಸಾಮಾನ್ಯ, ಇಂಡೆಂಟ್ ನಂ.57583/2.63ಲಕ್ಷ/ಸಾಮಾನ್ಯ, ಸನ್ 2026-27ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ ಇಂಡೆಂಟ್ ನಂ.57895/5.00ಲಕ್ಷ/ಪ್ರವರ್ಗII (ಎ), ಇಂಡೆಂಟ್ ನಂ.57963/5.00ಲಕ್ಷ/ಪ.ಪಂ(ಎಸ್.ಟಿ), ಸನ್ 2025-26 ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.31079/49.25ಲಕ್ಷ/4ನೇಕರೆ/ಸಾಮಾನ್ಯ, ಸನ್ 2025-26ನೇ ಸಾಲಿನ 50% ಅನುಪಾತದಲ್ಲಿ ಪಾಲಿಕೆ ಹಾಗೂ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾದಡಿಯಲ್ಲಿ ಇಂಡೆಂಟ್ ನಂ.57962/8.00ಲಕ್ಷ/ಪ.ಜಾ(ಎಸ್.ಸಿ), ಇಂಡೆಂಟ್ ನಂ.57960/8.00ಲಕ್ಷ /ಸಾಮಾನ್ಯ, ಸನ್ 2024-25ನೇ ಸಾಲಿನ 50% ಅನುಪಾತದಲ್ಲಿ ಪಾಲಿಕೆ ಹಾಗೂ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾದಡಿಯಲ್ಲಿ ಇಂಡೆಂಟ್ ನಂ.57751/8.00ಲಕ್ಷ/ಸಾಮಾನ್ಯ ಸನ್ 2025-26ನೇ ಸಾಲಿನ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾದಡಿಯಲ್ಲಿ ಇಂಡೆಂಟ್ ನಂ.54853/17.00ಲಕ್ಷ/ಪ.ಜಾ(ಎಸ್.ಸಿ) ಸನ್ 2024-25ನೇ ಸಾಲಿನ ವಾರ್ಡ ಸದಸ್ಯರ ಅನುದಾನದಡಿಯಲ್ಲಿ ಇಂಡೆಂಟ್ ನಂ.57920/3.03ಲಕ್ಷ/ಪ್ರವರ್ಗII(ಎ) ಇ-ಪ್ರೋಕ್ಯೂರಮೆಂಟ್ ನಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗೆ ಸಂಬಂಧಿಸಿದ ಹೆಸರು ಇ.ಎಂ.ಡಿ ಕಾಮಗಾರಿ ನಿರ್ವಹಣಾ ಅವಧಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು **https://kppp.karnataka.gov.in** ರಲ್ಲಿ ಪಡೆಯಬಹುದು. ಸದರ ಟೆಂಡರ್ ದಾಖಲೆಗಳನ್ನು ಇ-ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ:13-05-2026 ರಿಂದ ಪಡೆಯಬಹುದಾಗಿದೆ. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

1) ಟೆಂಡರ್ ಸಲ್ಲಸಲು ಕೊನೆಯ **ದಿನಾಂಕ: 29/05/2026 ಸಂಜೆ: 4.00 ಗಂಟೆ** ವರೆಗೆ ಹಾಗೂ

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)
ಹು.ಧಾ.ಮ. ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ./ಧಾರವಾಡ/142/2026-27/ದೇಶಪಾಂಡೆಪಬ್ಲಿಸಿಟಿ

ಮಹಿಳಾ ಉದ್ದಿಮೆದಾರರ ಸಮಾವೇಶದಲ್ಲಿ ರಾಜೇಶ್ ಖನ್ನಾ
ಶಿವಮೊಗ್ಗ, ಹಾಸನಕ್ಕೆ ವಿಆರ್‌ಡಿಎಫ್ ವಿಸ್ತರಣೆ

ಮಂಗಳೂರು: ಪ್ರತಿಯೊಬ್ಬ ಮಹಿಳೆಯೂ ಸ್ವಾವಲಂಬಿಯಾಗಿ ಬದುಕುವಂತಾಗಬೇಕು ಎಂಬ ಆಶಯದೊಂದಿಗೆ ಕಾರ್ಯಾಚರಿಸುತ್ತಿರುವ ವಿಆರ್‌ಡಿಎಫ್ ಉಡುಪಿ ಮತ್ತು ದಕ್ಷಿಣ ಕನ್ನಡದಲ್ಲಿ ಕಳೆದ 36 ವರ್ಷಗಳಿಂದ ಯಶಸ್ವಿ ಹೆಜ್ಜೆಗಳನ್ನು ಇಡುತ್ತಾ ಬಂದಿದೆ. ಇದೀಗ ಶಿವಮೊಗ್ಗ ಹಾಗೂ ಹಾಸನ ವಿಸ್ತರಣೆಗೆ ಮುಂದಾಗಿದೆ. ಗ್ರಾಮೀಣ ಮಟ್ಟದಿಂದಲೇ ಅಭಿವೃದ್ಧಿ ಕಾರ್ಯಗಳು, ಜ್ಞಾನ ವೃದ್ಧಿ ಹಾಗೂ ಸಮಾಜ ಸೇವೆಯ ಕೆಲಸಗಳಾಗಬೇಕು ಅನ್ನುವ ಉದ್ದೇಶದೊಂದಿಗೆ ಕಾರ್ಯಾಚರಿಸುತ್ತಿದೆ ಎಂದು ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ಪ್ರಧಾನ ವ್ಯವಸ್ಥಾಪಕ ರಾಜೇಶ್ ಖನ್ನಾ ತಿಳಿಸಿದರು.



ಅವರು ಬ್ಯಾಂಕ್ ಆಫ್ ಬರೋಡ ಪ್ರವರ್ತಿತ ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಮಂಗಳೂರು ವತಿಯಿಂದ ಮಲ್ಲಿಕಟ್ಟೆಯ ಲಯನ್ಸ್ ಸೇವಾ ಮಂದಿರದಲ್ಲಿ ಗುರುವಾರ ಹಮ್ಮಿಕೊಂಡ 'ಸ್ವಾವಲಂಬಿ 2026' ಮಹಿಳಾ ಉದ್ದಿಮೆದಾರರ ಸಮಾವೇಶ ಕ್ಕೆ ಚಾಲನೆ ನೀಡಿ ಮಾತನಾಡಿದರು.

ಎನ್‌ಆರ್‌ಎಲ್‌ಎಂ, ಎಸ್‌ಕೆಡಿಆರ್‌ಪಿ ಸೇರಿದಂತೆ ಹಲವು ಯೋಜನೆಗಳ ಮೂಲಕ ಮಹಿಳಾ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ. ಬ್ಯಾಂಕ್ ವ್ಯವಸ್ಥೆಗಳ ಮೂಲಕ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಕಾರ್ಯದರ್ಶಿ ಬಿ. ರಾಜೇಂದ್ರ ರೈ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಬ್ಯಾಂಕ್ ಆಫ್ ಬರೋಡಾ ಮಂಗಳೂರು ವಲಯದ ಉಪ ಪ್ರಧಾನ ವ್ಯವಸ್ಥಾಪಕ ರಾಜೇಶ್ ಶರ್ಮಾ ಮಾತನಾಡಿ, ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಇಂತಹ ತರಬೇತಿ ಮತ್ತು ಉದ್ಯಮಶೀಲತಾ ಕಾರ್ಯಕ್ರಮಗಳು ಅತ್ಯಂತ ಸಹಕಾರಿಯಾಗಿವೆ ಎಂದರು.

ಸಮಾವೇಶದಲ್ಲಿ ವಿವಿಧ ಕಾರ್ಯಾಗಾರಗಳಲ್ಲಿ ತರಬೇತಿ ಪಡೆದು ಸ್ವಉದ್ಯಮ ಆರಂಭಿಸಿದ ಮಹಿಳಾ ಉದ್ದಿಮೆದಾರರನ್ನು, ತರಬೇತುದಾರರನ್ನು ಅಭಿನಂದಿಸಲಾಯಿತು. ಮಹಿಳೆಯರು ತಯಾರಿಸಿದ ವಿವಿಧ ಉತ್ಪನ್ನಗಳ ಪ್ರದರ್ಶನವೂ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಎನ್‌ಆರ್‌ಎಲ್‌ಎಮ್ ಜಿಲ್ಲಾ ವ್ಯವಸ್ಥಾಪಕ ಹರಿಪ್ರಸಾದ್, ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಮಂಡಳಿ ಸದಸ್ಯೆ ಗಿರಿಜಾತೆ ಭಂಡಾರಿ ಹಾಗೂ ಪ್ರತಿಷ್ಠಾನದ ಖಜಾಂಚಿ ಮತ್ತು ಬ್ಯಾಂಕ್ ಆಫ್ ಬರೋಡಾ ಮಂಗಳೂರು ಪ್ರಾದೇಶಿಕ ಕಚೇರಿಯ ಉಪ ಪ್ರಧಾನ ವ್ಯವಸ್ಥಾಪಕ ಪಂಕಜ್ ಕುಮಾರ್ ಉಪಸ್ಥಿತರಿದ್ದರು.

ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜ್ಯೋತಿ ರಾಜ್ ಸ್ವಾಗತಿಸಿ, ಪ್ರಸ್ತಾವನೆಗೈದರು. ಮಣಿಪಾಲದ ಭಾರತೀಯ ವಿಕಾಸ ಟ್ರಸ್ಟ್‌ನ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಕೊಲ್ಯ ವಂದಿಸಿದರು. ಚಂದ್ರಿಕಾ ರೈ ಕಾರ್ಯಕ್ರಮ ನಿರೂಪಿಸಿದರು. ಮಹಿಳಾ ತರಬೇತುದಾರರು, ಸ್ವಸಹಾಯ ಸಂಘಗಳ ಸದಸ್ಯರು ಭಾಗವಹಿಸಿದ್ದರು.

ಆಸ್ತಿ ಕಲಹ ಹಿನ್ನೆಲೆ; ಮಹಿಳೆ ಮೇಲೆ ಪೆಟ್ರೋಲ್ ಸುರಿದು ಕೊಲೆಗೆ ಯತ್ನ

ಕಡಬ: ಆಸ್ತಿ ವಿಚಾರಕ್ಕೆ ಸಂಬಂಧಿಸಿದ ಮನಸ್ತಾಪವೊಂದು ವಿಕೋಪಕ್ಕೆ ತಿರುಗಿ, ವ್ಯಕ್ತಿಯೊಬ್ಬ ತನ್ನ ಸಹೋದರನ ಪತ್ನಿಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲು ಯತ್ನಿಸಿದ ಘಟನೆ ಕಡಬ ಪೊಲೀಸ್ ಠಾಣಾ ವ್ಯಾಪ್ತಿಯ ಐತ್ತೂರು ಗ್ರಾಮದಲ್ಲಿ ಬುಧವಾರ ಸಂಭವಿಸಿದೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಕುಸುಮಾಧರ ಎಂಬಾತನನ್ನು ಬಂಧಿಸಿದ್ದಾರೆ. ಐತ್ತೂರು ಗ್ರಾಮದ ಕೆರ್ಮಾಯಿ ಪಾದೆಮಜಲು ನಿವಾಸಿ ಬೇಬಿ ಹಾಗೂ ಅವರ ಮೈದುನ ಕುಸುಮಾಧರ ಅವರಿಗೆ ಆಸ್ತಿ ವಿಚಾರದಲ್ಲಿ ಮನಸ್ತಾಪವಿದ್ದು, ಬೇಬಿ ಅವರ ಪತಿ ನೋಣಯ್ಯ ಹಾಗೂ ಅವರ ಸಹೋದರ ಕುಸುಮಾಧರ ಅವರು ಅಕ್ಕ ಪಕ್ಕದಲ್ಲಿ ವಾಸವಾಗಿದ್ದಾರೆ. ನೋಣಯ್ಯ ಅವರು ಹೊಸ ಮನೆ ನಿರ್ಮಾಣ ಮಾಡಲು ಅಡಿಪಾಯ ಹಾಕಿದ್ದರು. ಮಾತ್ರವಲ್ಲದೆ ಕೊಳವೆ ಬಾವಿ ಕೂಡ ಕೊರೆಸಿ ಉತ್ತಮ ನೀರು ಸಿಕ್ಕಿದೆ. ಆದರೆ ಕುಸುಮಾಧರ ಕೊರೆಸಿದ ಕೊಳವೆ ಬಾವಿಯಲ್ಲಿ ನೀರು ಸಿಕ್ಕದ ಹಿನ್ನೆಲೆಯಲ್ಲಿ ಅಸೂಯೆಯಿಂದ ಕುಸುಮಾಧರ ಒಂದು ಕ್ಯಾನ್‌ನಲ್ಲಿ ಪೆಟ್ರೋಲ್ ತೆಗೆದುಕೊಂಡು ಬಂದು ಬೇಬಿ ಅವರನ್ನು ಉದ್ದೇಶಿಸಿ ನೀನು ಮನೆ ನಿರ್ಮಾಣ ಮಾಡುತ್ತಿದ್ದೀಯಾ, ನಿಮಗೆ ಬೋರ್ ವೆಲ್‌ನಲ್ಲಿ ನೀರು ಸಿಕ್ಕಿದೆ, ನೀವು ನೆಮ್ಮದಿಯಲ್ಲಿ ಇರಬಾರದು ನಿನ್ನನ್ನು ಕೊಂದು ಬಿಡುತ್ತೇನೆ ಎಂದು ಹೇಳಿ ಕೈಯ್ಯಲ್ಲಿ ಬೆಂಕಿ ಪೆಟ್ಟಿಗೆ ಮತ್ತು ಕ್ಯಾನ್‌ನಲ್ಲಿ ಪೆಟ್ರೋಲ್ ತೆಗೆದುಕೊಂಡು ಬಂದು ಬೇಬಿಯವರಿಗೆ ಪೆಟ್ರೋಲ್ ಸುರಿದಿದ್ದಾನೆ. ಆದರಿಂದ ಹೆದರಿದ ಬೇಬಿ ಬೊಬ್ಬೆ ಹಾಕಿದಾಗ ಬೇಬಿಯವರ ಅತ್ತೆ ಹಾಗೂ ನೆರೆಮನೆಯವರು ಬಂದಿದ್ದಾರೆ. ಆಗ ಕುಸುಮಾಧರ ಪೆಟ್ರೋಲ್ ಕ್ಯಾನ್ ಮತ್ತು ಬೆಂಕಿ ಪೊಟ್ಟಣವನ್ನು ಅಲ್ಲೇ ಬಿಸಾಡಿ ಓಡಿ ಹೋದ ಎಂದು ಕಡಬ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಯಕ್ಷಗಾನ ಕಲಾವಿದರಿಗೆ ಬೆದರಿಕೆ ಪ್ರಕರಣ
ತಿಮರೋಡಿ ಜಾಮೀನು ಅರ್ಜಿ ವಜಾ

ಮಂಗಳೂರು: ಯಕ್ಷಗಾನ ಕಲಾವಿದರು ಮತ್ತು ಹೆತ್ತವರ ಅವಹೇಳನ ಹಾಗೂ ಬೆದರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹೇಶ್ ಶೆಟ್ಟಿ ತಿಮರೋಡಿ ಅವರ ನಿರೀಕ್ಷಣಾ ಜಾಮೀನು ಅರ್ಜಿ ಮಂಗಳೂರಿನ ಆರನೇ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಲ್ಲಿ ವಜಾಗೊಂಡಿದೆ.

ಯಕ್ಷಗಾನ ಕಲಾವಿದ ಪ್ರಜ್ವಲ್ ಕುಮಾರ್ ಅವರ ಜತೆ ಮೊಬೈಲ್‌ನಲ್ಲಿ ಮಾತನಾಡುವ ವೇಳೆ ಮಹೇಶ್ ಶೆಟ್ಟಿ ತಿಮರೋಡಿ, ಯಕ್ಷಗಾನ ಕಲಾವಿದ ದಿನೇಶ್ ಕೊಡಪದವು ಹಾಗೂ ಅವರ ತಾಯಿಯ ಬಗ್ಗೆ ಅವಹೇಳನವಾಗಿ ಮಾತನಾಡಿದ್ದರು. ಈ ಬಗ್ಗೆ ದಿನೇಶ್ ಅವರ ತಾಯಿ ಲೀಲಾವತಿ ಶೆಟ್ಟಿಗಾರ್ ಅವರು ಪುತ್ತೂರಿನ ಮಹಿಳಾ ಠಾಣೆಯಲ್ಲಿ ಏ.13ರಂದು ಪ್ರಕರಣ ದಾಖಲಿಸಿದ್ದರು. ಬಿಎನ್ ಎಸ್ ಕಾಯ್ದೆ ಕಲಂ 196 (1), 352, 351(2) ಹಾಗೂ 79ರಡಿ ಧರ್ಮ ನಿಂದನೆ, ಅವಾಚ್ಯ ಶಬ್ದಗಳಿಂದ ಬೈಗುಳ, ಜೀವ ಬೆದರಿಕೆ ಹಾಗೂ ಮಹಿಳೆಯ ಘನತೆಗೆ ಕುತ್ತು ತಂದಿರುವ ಬಗ್ಗೆ ಪ್ರಕರಣ ದಾಖಲಾಗಿತ್ತು. ಕಲಾವಿದರಾದ ಸುಂದರ ರೈ, ಪ್ರಜ್ವಲ್ ಕುಮಾರ್ ಅವರಿಗೂ ಬೈದಿರುವ ಬಗ್ಗೆ ಪ್ರಕರಣದಲ್ಲಿ ಉಲ್ಲೇಖಿಸಲಾಗಿತ್ತು.

ಸರಕಾರದ ಪರವಾಗಿ ಸರಕಾರಿ ಅಭಿಯೋಜಕ ಮೋಹನ್ ಕುಮಾರ್ ಬಿ. ವಾದ ಮಂಡಿಸಿ, ತಿಮರೋಡಿ ವಿರುದ್ಧ 1992ರಿಂದ ಇಲ್ಲಿಯವರೆಗೆ 31 ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವ ಬಗ್ಗೆ ಹಾಗೂ ಇತ್ತೀಚೆಗೆ ಸುಪ್ರೀಕೋರ್ಟ್‌ನಲ್ಲಿ 21ಕ್ರಿಮಿನಲ್ ಪ್ರಕರಣ ಇರುವ ಆರೋಪಿಯ ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಳಿಸಿರುವ ಬಗ್ಗೆ ಉಲ್ಲೇಖಿಸಿದ್ದರು. ವಾದ ಪ್ರತಿವಾದನ್ನು ಆಲಿಸಿದ ಆರನೇ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜೇಶ್ ಮಾರುತಿ ಕಮಟೆ ಅವರು ನಿರೀಕ್ಷಣಾ ಜಾಮೀಜು ಅರ್ಜಿ ವಜಾಗೊಳಿಸಿದ್ದಾರೆ.

ತಿಮರೋಡಿ ವಿರುದ್ಧ ಇನ್ನೊಂದು ಪ್ರಕರಣ ಪುತ್ತೂರು ನಗರ ಠಾಣೆಯಲ್ಲಿ ದಾಖಲಾಗಿದೆ. ಅದಕ್ಕೆ ಸಂಬಂಧಿಸಿಯೂ ನಿರೀಕ್ಷಣಾ ಜಾಮೀಜಿಗೆ ಅರ್ಜಿ ಸಲ್ಲಿಸಿದ್ದಾರೆ. ಪುತ್ತೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

ಅಸ್ತಮಾ ಬಗ್ಗೆ ಕಾಳಜಿ ವಹಿಸಿ: ಡಾ.ಆದರ್ಶ್ ಶೆಟ್ಟಿ

ಮಂಗಳೂರು: ಅಸ್ತಮಾ ಬಗ್ಗೆ ಜನತೆ ವಿಶೇಷ ಕಾಳಜಿ ವಹಿಸಬೇಕು ಎಂದು ಮಂಗಳೂರಿನ ಶ್ವಾಸಕೋಶ ಶಾಸ್ತ್ರಜ್ಞರಾದ ಡಾ.ಆದರ್ಶ್ ಶೆಟ್ಟಿ ತಿಳಿಸಿದ್ದಾರೆ. ಅಸ್ತಮಾಕ್ಕೆ ಈಗ ಉತ್ತಮ ಔಷಧಿಗಳು ಲಭ್ಯವಿದ್ದು, ಭಯಪಡುವ ಅಗತ್ಯವಿಲ್ಲ. ಪರಿಣಾಮಕಾರಿ ಮತ್ತು ಸಾಮಾನ್ಯವಾಗಿ ಕೈಗೆಟುಕುವ ಚಿಕಿತ್ಸೆಗಳು ಇದ್ದರೂ ಸಹ, ರೋಗನಿರ್ಣಯ ಮಾಡುವುದರಲ್ಲಿ ತಡವಾಗುವುದು, ಪ್ರವೇಶದಲ್ಲಿನ ಅಸಮಾನತೆಗಳು ಮತ್ತು ಇನ್ಹೇಲರ್‌ಗಳ ಬಗ್ಗೆ ನಿರಂತರವಾದ ಜನರ ತಪ್ಪು ಕಲ್ಪನೆಗಳ ಸಂಯೋಜನೆಯಿಂದಾಗಿ ಅವುಗಳ ಸೇವನೆಯು ಸೀಮಿತವಾಗಿದೆ. ಶಿಫಾರಸು ಮಾಡಲಾದ ಇನ್ಹೇಲರ್‌ಗಳನ್ನು ಪಾಲಿಸದಿರುವುದು ಶೇ.75ರಷ್ಟು ಹೆಚ್ಚಾಗಿದೆ ಎಂದು ಅಧ್ಯಯನಗಳು ತೋರಿಸುತ್ತವೆ. ಇದು ದೇಶದ ಅಸ್ತಮಾ ಆರೈಕೆ ಪರಿಸರ ವ್ಯವಸ್ಥೆಯಲ್ಲಿ ಉಂಟಾದ ಸಂಪರ್ಕ ಕಡಿತವನ್ನು ಪ್ರತಿಬಿಂಬಿಸುತ್ತದೆ ಎಂದವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರು ಡಿಕ್ಕಿ; ವ್ಯಕ್ತಿ ಮೃತ್ಯು

ನಿಡ್ಪಳ್ಳಿ: ಬಿ.ಸಿ. ರೋಡಿನ ಸಾಗರ ಆಡಿಟೋರಿಯಂನಲ್ಲಿ ನಡೆದ ಮದುವೆ ಸಮಾರಂಭಕ್ಕೆ ತೆರಳಿದ್ದ ನಿಡ್ಪಳ್ಳಿ ಆನಾಜೆ ನಿವಾಸಿ ವಿಶ್ವನಾಥ ರೈ(65) ಎಂಬವರು ಕಾರು ಅಪಘಾತದಲ್ಲಿ ಮೃತಪಟ್ಟ ಘಟನೆ ಮೇ 3ರಂದು ಸಂಭವಿಸಿದೆ.



ಮದುವೆ ಕಾರ್ಯಕ್ರಮ ಮುಗಿದು ಮಧ್ಯಾಹ್ನ ರಸ್ತೆ ದಾಟುತ್ತಿದ್ದ ಸಂದರ್ಭ ಬಿ.ಸಿ.ರೋಡ್ ಕಡೆಯಿಂದ ಮೆಲ್ಕಾರ್ ಕಡೆಗೆ ತೆರಳುತ್ತಿದ್ದ ಮಹಿಳೆಯೊಬ್ಬರು ಚಲಾಯಿಸುತ್ತಿದ್ದ ಕಾರು ಅವರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡ ಅವರನ್ನು ಬಿ.ಸಿ. ರೋಡ್ ಸೋಮಯಾಜಿ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಕೆ.ಎಸ್. ಹೆಗ್ಡೆ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಸಂಜೆ ಮೃತ ಪಟ್ಟಿದ್ದಾರೆ.

ಮೃತರು ಪತ್ನಿ, ಮೂವರು ಪುತ್ರರು ಹಾಗೂ ಸಹೋದರನನ್ನು ಅಗಲಿದ್ದಾರೆ.

ಮಾದಕ ವಸ್ತು ಸೇವನೆ: ಯುವಕನ ಬಂಧನ

ಮಂಗಳೂರು: ಮಾದಕ ವಸ್ತು ಬೆರೆಸಿದ ಸಿಗರೇಟು ಸೇವನೆ ಮಾಡಿದ ಆರೋಪದಡಿ ಯುವಕನೊಬ್ಬನನ್ನು ಉರ್ವ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹೊಯ್ಗೆ ಬಜಾರ್ ನಿವಾಸಿ ಪ್ರಥಮ್ ಕೋಟಿಯಾನ್ ಆರೋಪಿ. ಬುಧವಾರ ರಾತ್ರಿ ಗಸ್ತಿನಲ್ಲಿರುವಾಗ ಬಿಜೈ, ಕಾಪಿಕಾಡ್ ಆನೆಗುಂಡಿ ರಸ್ತೆಯಲ್ಲಿ ಸಿಗರೇಟ್ ಸೇದುತ್ತ ನಿಂತಿದ್ದ ಯುವಕನನ್ನು ಕಂಡು ಅವನ ಬಳಿ ಹೋದಾಗ ಆತ ಸಿಗರೇಟನ್ನು ಚರಂಡಿಗೆ ಎಸೆದಿದ್ದಾನೆ. ಅನುಮಾನಗೊಂಡು ವಿಚಾರಣೆಗೆ ಒಳಪಡಿಸಿದಾಗ ಮಾದಕ ವಸ್ತು ಬೆರೆಸಿ ಸಿಗರೇಟು ಸೇದುತ್ತಿರುವ ಬಗ್ಗೆ ತಿಳಿಸಿದ್ದಾನೆ. ವೈದ್ಯಕೀಯ ಪರೀಕ್ಷೆಗೆ ಒಳ ಪಡಿಸಿದಾಗ ಮಾದಕ ವಸ್ತು ಸೇವನೆ ಮಾಡಿರುವುದು ದೃಢಪಟ್ಟಿದೆ. ಆರೋಪಿ ವಿರುದ್ಧ ಎನ್ ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಉಮೇಶ್ ಹೆಬ್ಬಾರ್ ಹೆಚ್., ಎಳ್ಳಿಮಾರು ಮನೆ, ನಿಡ್ಲೆ, ಬೆಳ್ತಂಗಡಿ (ತಾ).
2. ಸಂಪತ್ ಬೆಂಗಳೂರು, ತ್ಯಾಗರಾಜ ನಗರ, ಕೆದಂಬಾಡಿ, ಪುತ್ತೂರು (ತಾ).
3. ಯಂ. ಪದ್ಮರಾಜ ಹೆಗ್ಡೆ, 'ಅಭಿವೃದ್ಧಿ ನಿವಾಸ', ಸದಾನಂದ ಕಾಮತ್ ರಸ್ತೆ, ಕಾರ್ಕಳ (ತಾ).
4. ಯಸ್. ಸುಜಾತ ಅಶೋಕ್ ಶೆಟ್ಟಿ, ಸಾಲೆಮನೆ, ಸಾಲೆ ಶ್ರೀ ವಿಶ್ವನಾಥ ದೇವಸ್ಥಾನದ ವಠಾರ, ಗುರುಪುರ.
5. ಲಿಂಗಪ್ಪ ಬಿ., ಪಠಾರಿ ಹೌಸ್, ಪಟ್ಟೆ, ಎಣ್ಮೂರು, ಕಡಬ (ತಾ).
6. ಜಯರಾಮ ಶೆಟ್ಟಿ, 'ಜಯ ಗೀತಾ', ಕಂಬಳಕೋಡಿ, ಶಿರ್ತಾಡಿ ವಯಾ ಮೂಡುಬಿದ್ರಿ.
7. ಸಿದ್ದಪ್ಪ ಗೌಡ ಮತ್ತು ಮನೆಯವರು, ತಾರೆಮಾರು ದರ್ಖಾಸು, ಮಚ್ಚಿನ, ಬೆಳ್ತಂಗಡಿ (ತಾ).

ಶ್ರೀ ಧರ್ಮಸ್ಥಳ ಮೇಳ

ಮಾನ್ಯದಲ್ಲಿ
ಶ್ರೀಮತಿ ಮತ್ತು ಶ್ರೀ ರವಿಶಂಕರ್ ಮಾನ್ಯ ಮತ್ತು ಮಕ್ಕಳು
ನಿತ್ಯಾನಂದ ಫಾರ್ಮ್ಸ್

ಶ್ರೀ ಸಾಲಿಗ್ರಾಮ ಮೇಳ

ಮೇ 9: ಬಗ್ವಾಡಿ ಶ್ರೀ ಮಹಿಷಾಸುರ ಮರ್ದಿನಿ ದೇವಸ್ಥಾನದಲ್ಲಿ ಬಯಲಾಟ- **ರಂಗನಾಯಕಿ**

ಶ್ರೀ ಪೆರ್ಡೂರು ಮೇಳ

ಶಿರಸಿಯಲ್ಲಿ
ಕೃಷ್ಣಕುಚೇಲ, ಮಾಯಾ ಮೃಗಾವತಿ

ಶ್ರೀ ಹನುಮಗಿರಿ ಮೇಳ

ಪುತ್ತೂರು ಕೊಟ್ಯದಲ್ಲಿ

ಶ್ರೀ ಪಾವಂಜೆ ಮೇಳ

ಕಾರ್ಕಳ- ನಾರಾವಿ ಮುಖ್ಯರಸ್ತೆ, ಬಿರ್ಮೊಟ್ಟು
ಶ್ರೀ ದೇವಿ ಮಹಾತ್ಮೆ

ಪುತ್ತೂರು ಮಾರುಕಟ್ಟೆ ಧಾರಣೆ
07-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 445 - 475
ಚೋಲ್ ಅಡಿಕೆ	: 525 - 550
ಡಬಲ್ ಚೋಲ್	: 525 - 550
ಹೊಸ ಪಠೋರ	: 355 - 405
ಹಳೆ ಪಠೋರ	: 375 - 405
ಹೊಸ ಉಳ್ಳಿ	: 120 - 290
ಹಳೆ ಉಳ್ಳಿ	: 110 - 290
ಹೊಸ ಕೋಕಾ	: 325 - 345
ಹಳೆ ಕೋಕಾ	: 325 - 345
ಹೊಸ ಕರಿಗೋಟು	: 255 - 285
ಹಳೆ ಕರಿಗೋಟು	: 255 - 285
ಹಸಿ ಕೊಕ್ಕೋ	: 70 - 105
ಒಣ ಕೊಕ್ಕೋ	: 270 - 315

ಕಾಳುಮೆಣಸು ಧಾರಣೆ

ಕಾಳುಮೆಣಸು	: 450 - 670

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	- 247.00
ಆರ್‌ಎಸ್‌ಎಸ್ 2	- 211.00
ಸ್ಕ್ರಾಪ್ 1	- 149.00
ಸ್ಕ್ರಾಪ್ 2	- 140.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-622) ಡ್ರಾ ಮೇ 7ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PN 756438 (KOTTAYAM)

Consolation Prize Rs.5,000/-
PO 756438 PP 756438 PR 756438 PS 756438
PT 756438 PU 756438 PV 756438 PW 756438
PX 756438 PY 756438 PZ 756438

2nd Prize Rs.30,00,000/- [30 Lakhs]
PV 629477 (KANNUR)

3rd Prize Rs.5,00,000/- [5 Lakhs]
PN 313556 (CHITTUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0378 0855 1264 2332 2850 3679 4205 4925 6112 7015
7355 7375 7685 7699 7862 8019 8293 8627 9013

5th Prize Rs.2,000/-
0083 2484 3574 4298 8267 9939

6th Prize Rs.1,000/-
0264 0577 0791 0795 1115 1574 3139 3347 5050 5082
5245 5849 6376 6492 6792 7079 7080 7294 7465 8066
8341 8851 9113 9334 9355

7th Prize Rs.500/-
0184 0318 0401 0901 1314 1677 2019 2195 2301 2420 2967
3034 3198 3438 3464 3554 3579 3711 3974 4017 4040 4056
4268 4339 4357 4380 4514 4577 4836 4841 4859 4876 5253
5404 5562 5596 5708 5879 5911 6009 6094 6233 6428 6523
6525 6540 6773 7124 7228 7277 7309 7449 7508 7534 7552
7687 7822 8033 8198 8490 8595 8750 8836 8874 8922 9265
9276 9311 9504 9518 9531 9600 9641 9664 9677 9760

8th Prize Rs.200/-
0005 0094 0151 0241 0357 0364 0510 0767 0819 1078 1090
1134 1206 1388 1697 2017 2618 2834 3001 3061 3263 3278
3721 3955 3989 4164 4406 4641 4767 4824 4867 4882 5049
5090 5099 5129 5138 5302 5386 5488 5641 5707 5712 5713
5829 6298 6498 6563 6688 6822 7146 7203 7237 7238 7298
7377 7590 7742 7808 7852 7984 8184 8204 8252 8283 8523
8542 8549 8779 8810 9012 9020 9045 9108 9253 9258 9281
9294 9515 9525 9790 9811 9817 9845

9th Prize Rs.100/-
0142 0162 0487 0488 0546 0719 0764 0799 0826 0845 0935
0974 0988 0999 1076 1142 1215 1307 1349 1442 1443 1502
1528 1544 1885 1902 1976 2002 2049 2144 2147 2171 2175
2187 2204 2400 2401 2437 2496 2591 2595 2688 2704 2761
2797 2819 2895 2905 2946 2997 3019 3072 3239 3257 3422
3483 3534 3762 4091 4142 4172 4181 4191 4336 4342 4383
4436 4582 4646 4654 4679 4754 5022 5070 5107 5113 5124
5230 5242 5280 5319 5377 5421 5455 5456 5469 5582 5595
5663 5684 5837 5910 5921 5924 6031 6066 6109 6163 6170
6226 6246 6313 6331 6440 6442 6455 6468 6524 6531 6594
6686 6762 6783 6806 6817 6825 7023 7177 7206 7290 7305
7360 7428 7505 7658 7732 7878 8036 8096 8212 8281 8435
8609 8646 8761 8946 9006 9019 9102 9155 9166 9175 9223
9288 9358 9446 9452 9458 9469 9492 9511 9604 9646 9659
9820 9851

ಕೇವಲ 22 ರಿಂದ 25 ನಿಮಿಷಗಳ ಕಾಲ ನಡೆದ ಕಾರ್ಯಾಚರಣೆ ದೇಶದ ರಕ್ಷಣಾ ಭೂಪಟವನ್ನೇ ಬದಲಿಸಬಲ್ಲುದು ಎಂದು ಯಾರೂ ಊಹಿಸಿರಲಿಲ್ಲ. 'ಆಪರೇಷನ್ ಸಿಂದೂರ್' ನಡೆದು ಒಂದು ವರ್ಷ ಸಂದಿದೆ. ಆದರೆ, ಅಂದು ಪಾಕಿಸ್ತಾನದ ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ನಡೆದ ಆ ನಿಖರ ದಾಳಿ, ಇಂದು ಭಾರತೀಯ ಸಶಸ್ತ್ರ ಪಡೆಗಳಲ್ಲಿ 1999ರ ಕಾರ್ಗಿಲ್ ಕಾರ್ಯಾಚರಣೆ ನಂತರದ ಅತಿದೊಡ್ಡ ರಚನಾತ್ಮಕ ಮತ್ತು ಸೈದ್ಧಾಂತಿಕ ಬದಲಾವಣೆಗೆ ನಾಂದಿ ಹಾಡಿದೆ. ಇದು ಕೇವಲ ಒಂದು ದಾಳಿಯಾಗಿ ಉಳಿಯದೆ, ಭವಿಷ್ಯದ ಯುದ್ಧಗಳನ್ನು ಭಾರತ ಹೇಗೆ ಎದುರಿಸಲಿದೆ ಎಂಬುದಕ್ಕೆ ದಿಕ್ಸೂಚಿಯಾಗಿದೆ.

ಕಾರ್ಗಿಲ್‌ನಿಂದ ಸಿಂದೂರವರೆಗೆ ಸೋಲೆ ಇಲ್ಲ, ಗೆಲುವೇ ಎಲ್ಲಾ



ಬದಲಾದ ಯುದ್ಧ ಸಿದ್ಧಾಂತ

ಈಗ ಭಾರತದ ಯುದ್ಧ ಸಿದ್ಧಾಂತ, 'ದೀರ್ಘಕಾಲದ ಸಂಘರ್ಷ'ದಿಂದ 'ನಿಖರ ಮತ್ತು ತೀವ್ರ ದಾಳಿ'ಯತ್ತ ವಾಲಿದೆ. ಗಡಿ ಭಾಗಗಳಲ್ಲಿ ಭೂಗತ ಕಮಾಂಡ್ ಸೆಂಟರ್‌ಗಳು ಮತ್ತು ಸುಧಾರಿತ ವಾಯು ರಕ್ಷಣಾ ವ್ಯವಸ್ಥೆಗಳನ್ನು ಬಲಪಡಿಸಲಾಗುತ್ತಿದೆ. ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಗಳ ನಡುವೆ ಅಭೂತಪೂರ್ವ ಸಮನ್ವಯ ಸಾಧಿಸಲು ಹೊಸ ನಿಯಮಗಳನ್ನು ಜಾರಿಗೆ ತರಲಾಗಿದೆ. ಟೀಕೆಗಳು ಮತ್ತು ಸವಾಲುಗಳ ನಡುವೆಯೂ, ಆಪರೇಷನ್ ಸಿಂದೂರ್ ಭಾರತವನ್ನು ಆಧುನಿಕ, ತಂತ್ರಜ್ಞಾನ ಆಧಾರಿತ ಮತ್ತು ಸ್ವಾವಲಂಬಿ ರಕ್ಷಣಾ ಶಕ್ತಿಯನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದೆ.

ಮಿಲಿಟರಿ ವಿಶ್ಲೇಷಕರ ಪ್ರಕಾರ, ದಾಳಿ ನಡೆದ ಕೆಲವೇ ವಾರಗಳಲ್ಲಿ, ಏಕೀಕೃತ ಮಿಲಿಟರಿ ಕಮಾಂಡ್ ರಚನೆಯನ್ನು ಬಲಪಡಿಸಲು ಸರ್ಕಾರ ಹೊಸ ನಿಯಮಗಳನ್ನು ಜಾರಿಗೆ ತಂದಿದೆ. ಇದು ಮೂರೂ ಸೇನಾ ಪಡೆಗಳನ್ನು ಒಂದೇ ಸೂರಿನಡಿ ತರುವ 'ಥಿಯೇಟರ್ ಕಮಾಂಡ್' ವ್ಯವಸ್ಥೆಯತ್ತ ಭಾರತ ಹೆಜ್ಜೆ ಇಡುತ್ತಿರುವುದನ್ನು ಸೂಚಿಸುತ್ತದೆ. ಇದೇ ವೇಳೆ ಕೆಲವು ತಜ್ಞರು ಎಚ್ಚರಿಕೆಯನ್ನೂ ನೀಡಿದ್ದಾರೆ. ವೇಗವಾಗಿ ನಡೆಯುತ್ತಿರುವ ಈ ಆಧುನೀಕರಣ ಯಶಸ್ವಿಯಾಗಬೇಕಾದರೆ ನಿರಂತರ ಹೂಡಿಕೆ, ಆಡಳಿತಾತ್ಮಕ ಸುಧಾರಣೆ ಮತ್ತು ಬಲಿಷ್ಠವಾದ ದೇಶೀಯ ಉತ್ಪಾದನಾ ವ್ಯವಸ್ಥೆ ಅಗತ್ಯ. ಆಗ ಮಾತ್ರ ತುರ್ತು ಪರಿಸ್ಥಿತಿಗಳಲ್ಲಿ ವಿದೇಶಿ ಆಮದುಗಳ ಮೇಲೆ ಅವಲಂಬಿತವಾಗುವುದನ್ನು ತಪ್ಪಿಸಲು ಸಾಧ್ಯ ಎಂದು ಅವರು ಅಭಿಪ್ರಾಯಪಡುತ್ತಾರೆ. 1999ರ ಕಾರ್ಗಿಲ್ ಕಾರ್ಯಾಚರಣೆ ನಂತರ ಭಾರತದ ಗಡಿ ಯುದ್ಧತಂತ್ರ ಮತ್ತು ಗುಪ್ತಚರ ಸಮನ್ವಯದ ದೃಷ್ಟಿಕೋನವನ್ನೇ ಹೇಗೆ ಬದಲಿಸಿತೋ, ಹಾಗೆಯೇ 'ಆಪರೇಷನ್ ಸಿಂದೂರ್ ಕೂಡ ಭಾರತವು ತಂತ್ರಜ್ಞಾನ, ಶತ್ರುವನ್ನು ತಡೆಯುವ ಶಕ್ತಿ, ತ್ವರಿತ ಪ್ರತಿಕ್ರಿಯೆ ಮತ್ತು ಭವಿಷ್ಯದ ಸಂಘರ್ಷಗಳನ್ನು ಎದುರಿಸುವ ರೀತಿಯನ್ನು ಮರು ವ್ಯಾಖ್ಯಾನಿಸಿದೆ.

ಆಪರೇಷನ್ ಸಿಂದೂರ್ ಬಳಿಕದ ಭಾರತದ ಹೊಸ ರಕ್ಷಣಾ ನೀತಿ

ಆಪರೇಷನ್ ಸಿಂದೂರ್ ನಂತರ ಪಾಕಿಸ್ತಾನದ ಸೇನಾ ಪಡೆಗಳು ಮತ್ತಷ್ಟು ಬಲಗೊಂಡಿದ್ದು, ತಂತ್ರಜ್ಞಾನ ಆಧಾರಿತ ಹೊಸ ಮಾದರಿಯ ಭಯೋತ್ಪಾದನೆಯನ್ನು ಎದುರಿಸಲು ಭಾರತ ತನ್ನ ರಕ್ಷಣಾ ಮತ್ತು ಭಯೋತ್ಪಾದನಾ ನಿರೋಧಕ ನೀತಿಗಳನ್ನು ಪರಿಷ್ಕರಿಸುತ್ತಿದೆ. ಪಾಕಿಸ್ತಾನದ ಸೇನೆ 27ನೇ ಸಾಂವಿಧಾನಿಕ ತಿದ್ದುಪಡಿಯ ಮೂಲಕ ದೇಶದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿದೆ ಎಂದು ಭೂಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ತಿಳಿಸಿದ್ದಾರೆ. ಅಮೆರಿಕ ಮತ್ತು ಪಶ್ಚಿಮ ಏಷ್ಯಾದ ರಾಷ್ಟ್ರಗಳೊಂದಿಗೆ ಪಾಕಿಸ್ತಾನ ಉತ್ತಮ ರಾಜತಾಂತ್ರಿಕ ಸಂಬಂಧಗಳನ್ನು ಬೆಳೆಸಿಕೊಂಡಿರುವುದು ಅದಕ್ಕೆ ಹೆಚ್ಚಿನ ಶಸ್ತ್ರಾಸ್ತ್ರ ಮತ್ತು ಹಣಕಾಸಿನ ನೆರವು ಸಿಗಲು ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಕೇವಲ ಸೈನಿಕ ದಾಳಿಗಳಷ್ಟೇ ಸಾಕಾಗುವುದಿಲ್ಲ ಎಂಬ ಅರಿವು ಭಾರತಕ್ಕಿದೆ.

ತಾಂತ್ರಿಕ ಮತ್ತು ರಚನಾತ್ಮಕ ಬದಲಾವಣೆ: ಕಾರ್ಯಾಚರಣೆಯ ವೇಳೆ ಆಕಾಶ್ ಕ್ಷಿಪಣಿ ವ್ಯವಸ್ಥೆ ಡ್ರೋನ್ ಮತ್ತು ಕ್ಷಿಪಣಿಗಳನ್ನು ಯಶಸ್ವಿಯಾಗಿ ಹೊಡೆದುರುಳಿಸಿದ ನಂತರ, ಭಾರತ ಸ್ವದೇಶಿ ರಕ್ಷಣಾ ವ್ಯವಸ್ಥೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಕ್ಷಿಪಣಿಗಳು ಉಡಾವಣೆಯಾದ ಆರಂಭಿಕ ಹಂತದಲ್ಲೇ ಅವುಗಳನ್ನು ಪತ್ತೆಹಚ್ಚಲು ಬಾಹ್ಯಾಕಾಶ ಆಧಾರಿತ ಇನ್‌ಫ್ರಾರೆಡ್ ಸೆನ್ಸಾರ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಅಲ್ಲದೆ, ಡ್ರೋನ್ ಮತ್ತು ವಿಶೇಷ ಪಡೆಗಳನ್ನು ಒಳಗೊಂಡ 'ರುದ್ರ' ಬ್ರಿಗೇಡ್ ಹಾಗೂ 'ಭೈರವ' ಬೆಟಾಲಿಯನ್‌ಗಳಂತಹ ಹೊಸ ಯುದ್ಧ ಘಟಕಗಳನ್ನು ರಚಿಸಲಾಗಿದೆ.

ಖರೀದಿ ಪ್ರಕ್ರಿಯೆ ಮತ್ತು ಆಂತರಿಕ ಸವಾಲುಗಳು: ರಕ್ಷಣಾ ವಲಯದಲ್ಲಿ ಆಧುನೀಕರಣ ನಡೆಯುತ್ತಿದ್ದರೂ, ಖರೀದಿ ಪ್ರಕ್ರಿಯೆಯಲ್ಲಿ ಇನ್ನೂ ಕೆಲವು ಸಮಸ್ಯೆಗಳಿವೆ. ಎನ್‌ಕ್ರಿಪ್ಟ್ ಮಾಡಿದ ಆ್ಯಪ್‌ಗಳ ಮೂಲಕ ನಡೆಯುತ್ತಿರುವ ಡಿಜಿಟಲ್ ಮೂಲಭೂತವಾದ ಮತ್ತು ವಿದೇಶಗಳಿಂದ ನಿಯಂತ್ರಿಸಲ್ಪಡುವ ಸ್ಥಳೀಯ ಭಯೋತ್ಪಾದಕ ಜಾಲಗಳು ಭಾರತಕ್ಕೆ ಹೊಸ ಸವಾಲೊಡ್ಡಿವೆ. ಕಳೆದ ನವೆಂಬರ್‌ನಲ್ಲಿ ನಡೆದ ಕೆಂಪು ಕೋಟೆ ಸ್ಫೋಟ, ವಿದೇಶದಿಂದ ಮಾರ್ಗದರ್ಶನ ಪಡೆದು ಸ್ಥಳೀಯವಾಗಿ ತರಬೇತಿ ಪಡೆಯುವ ಹೊಸ ಮಾದರಿಯ ಭಯೋತ್ಪಾದನೆಗೆ ಉದಾಹರಣೆಯಾಗಿತ್ತು.

ಪ್ರಮುಖಾಂಶಗಳು

- **ಅವಧಿ:** 25 ನಿಮಿಷಗಳ ದಾಳಿ, 88 ಗಂಟೆಗಳ ಮಿಲಿಟರಿ ಜಾಗರೂಕತೆ.
- **ವೆಚ್ಚ:** ರಕ್ಷಣಾ ಖರೀದಿ ಅನುಮೋದನೆ 6.81 ಲಕ್ಷ ಕೋಟಿಗೆ ಏರಿಕೆ.
- **ಹೊಸ ಪಡೆಗಳು:** ಡ್ರೋನ್ ತಂತ್ರಜ್ಞಾನ ಒಳಗೊಂಡ 'ರುದ್ರ' ಮತ್ತು 'ಭೈರವ' ಘಟಕಗಳ ರಚನೆ.
- **ವೇಗ:** ತುರ್ತು ಖರೀದಿ ಮೂಲಕ ಶೇ. 30-50 ರಷ್ಟು ಸಮಯ ಉಳಿತಾಯ.
- **ಸ್ವದೇಶಿ:** 38,000ಕ್ಕೂ ಹೆಚ್ಚು ಡ್ರೋನ್‌ಗಳ ನೋಂದಣಿ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಆದ್ಯತೆ.



ಆತ್ಮನಿರ್ಭರತೆಯ ಅನಿವಾರ್ಯತೆ

ಯುದ್ಧದ ಸಮಯದಲ್ಲಿ ಪರಕೀಯರ ಮೇಲೆ ಅವಲಂಬಿತವಾಗುವುದು ಅಪಾಯಕಾರಿ ಎಂಬ ಪಾಠವನ್ನು ಈ ಕಾರ್ಯಾಚರಣೆ ಕಲಿಸಿದೆ. ಆದ್ದರಿಂದಲೇ ಸರ್ಕಾರ, ದೇಶೀಯ ಸ್ಟಾರ್ಟ್‌ಅಪ್‌ಗಳಿಗೆ ಮನ್ನಣೆ ನೀಡುತ್ತಿದೆ. ಇಂದು ಭಾರತದಲ್ಲಿ 38,000ಕ್ಕೂ ಹೆಚ್ಚು ಡ್ರೋನ್‌ಗಳು ನೋಂದಣಿಯಾಗಿವೆ. ಯುದ್ಧದ ತೀವ್ರತೆ ಹೆಚ್ಚಾದಾಗ ತಕ್ಷಣವೇ ಯುದ್ಧ ಸಾಮಗ್ರಿಗಳನ್ನು ಪೂರೈಸುವ ಸಾಮರ್ಥ್ಯವನ್ನು ಭಾರತೀಯ ಕಂಪನಿಗಳು ಬೆಳೆಸಿಕೊಳ್ಳುತ್ತಿವೆ. ಇದು ಕೇವಲ ರಕ್ಷಣಾ ಸಿದ್ಧತೆಯಲ್ಲ, ಬದಲಾಗಿ ದೇಶದ ತಾಂತ್ರಿಕ ಸಾರ್ವಭೌಮತ್ವದ ಸಂಕೇತ ಎನಿಸಿದೆ.

ತಂತ್ರಜ್ಞಾನ ಪ್ರಧಾನ ಯುದ್ಧತಂತ್ರ

ಆಪರೇಷನ್ ಸಿಂದೂರ್ ನಂತರದ ಮಿಲಿಟರಿ ಮೌಲ್ಯಮಾಪನದಲ್ಲಿ ಒಂದು ವಿಷಯ ಸ್ಪಷ್ಟವಾಗಿದೆ: ಇನ್ನು ಮುಂದೆ ಯುದ್ಧಗಳು ಕೇವಲ ಭೂಸೇನೆ ಅಥವಾ ವಾಯುಸೇನೆಯ ಪ್ರತ್ಯೇಕ ಪ್ರದರ್ಶನಗಳಲ್ಲ. ಬದಲಾಗಿ ಡ್ರೋನ್‌ಗಳು, ನಿಖರ ಅಸ್ತ್ರಗಳು ಮತ್ತು ಎಲೆಕ್ಟ್ರಾನಿಕ್ ಯುದ್ಧತಂತ್ರಗಳ ಸಂಘಟಿತ ದಾಳಿ. ಶತ್ರುವನ್ನು ಗುರುತಿಸಿದ ತಕ್ಷಣ ಸಂಹರಿಸುವ 'ಸೆನ್ಸರ್-ಟು-ಶೂಟರ್ ಸಮಯವನ್ನು ಕಡಿಮೆ ಮಾಡುವುದು ಈಗಿನ ಆದ್ಯತೆ. ಇದಕ್ಕಾಗಿ 'ರುದ್ರ ಬ್ರಿಗೇಡ್' ಮತ್ತು 'ಭೈರವ ಬೆಟಾಲಿಯನ್'ಗಳಂತಹ ಚುರುಕಾದ ಯುದ್ಧ ಘಟಕಗಳನ್ನು ರೂಪಿಸಲಾಗುತ್ತಿದೆ. ಇವು ಒಂದೇ ಸೂರಿನಡಿ ಪದಾತಿ ದಳ, ಫಿರಂಗಿ ಮತ್ತು ಡ್ರೋನ್ ತಂತ್ರಜ್ಞಾನವನ್ನು ಹೊಂದಿರುತ್ತವೆ.

ಖರೀದಿ ಪ್ರಕ್ರಿಯೆಯಲ್ಲಿ ಕ್ರಾಂತಿ

ಈ ಕಾರ್ಯಾಚರಣೆಯ ನಂತರ ರಕ್ಷಣಾ ಇಲಾಖೆಯ ಖರೀದಿ ವೇಗ ಅಚ್ಚರಿ ಮೂಡಿಸುವಂತಿದೆ. ಕಳೆದ ವರ್ಷ ಕೇವಲ 1.76 ಲಕ್ಷ ಕೋಟಿ ರೂ. ಇದ್ದ ಖರೀದಿ ಅನುಮೋದನೆ, ಈ ವರ್ಷ 6.81 ಲಕ್ಷ ಕೋಟಿ ರೂ. ಗೆ ಏರಿದೆ. ಕೇವಲ ಹಣದ ಹರಿವು ಮಾತ್ರವಲ್ಲದೆ, ತುರ್ತು ಖರೀದಿ ಅಧಿಕಾರದ ಮೂಲಕ ಕೆಂಪು ಪಟ್ಟಿಯ ವಿಳಂಬವನ್ನು ಶೇ. 50ರಷ್ಟು ಕಡಿಮೆ ಮಾಡಲಾಗಿದೆ.

ಫ್ರೊಫೈಲ್ ಚಿತ್ರ ಬದಲಾಯಿಸಿದ ನಾಯಕರು

ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ತಮ್ಮ ಸಾಮಾಜಿಕ ಡಿಪಿ ಚಿತ್ರಗಳನ್ನು ಆಪರೇಷನ್ ಸಿಂದೂರ್ ಒಂದು ವರ್ಷದ ಸ್ಮರಣಾರ್ಥವಾಗಿ ಬದಲಾಯಿಸಿದ್ದಾರೆ. ಸಶಸ್ತ್ರ ಪಡೆಗಳು ಮತ್ತು ಅವರ ಯಶಸ್ಸಿಗೆ ಗೌರವದ ಸಂಕೇತವಾಗಿ ಎಲ್ಲರೂ ತಮ್ಮ ಸಾಮಾಜಿಕ ಮಾಧ್ಯಮದ ಡಿಪಿಯನ್ನು ಬದಲಾಯಿಸುವಂತೆ ಮನವಿ ಮಾಡಿದ್ದಾರೆ. ಮೋದಿ ಜತೆಗೆ ರಾಜನಾಥ್ ಸಿಂಗ್, ಅಮಿತ್ ಶಾ ಮತ್ತು ಎಸ್ ಜೈಶಂಕರ್ ಸೇರಿದಂತೆ ಎಲ್ಲಾ ಕೇಂದ್ರ ಸಚಿವರು, ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಮತ್ತು ಇತರ ಪಕ್ಷದ ನಾಯಕರು ಬದಲಾಯಿಸಿದ್ದಾರೆ.

ಭಯೋತ್ಪಾದಕ ನೆಲೆ ಸುರಕ್ಷಿತವಾಗಿಲ್ಲ

ಗಡಿಯಾಚಿನ ಯಾವುದೇ ಭಯೋತ್ಪಾದಕ ನೆಲೆ ಸುರಕ್ಷಿತವಾಗಿಲ್ಲ. ಪಹಲ್ಗಾಮ್ ದಾಳಿ ನಂತರದ ನವ ಸಹಜ ಸನ್ನಿವೇಶದಲ್ಲಿ ಭಯೋತ್ಪಾದಕರ ಮೂಲ ಸೌಕರ್ಯಗಳೆಲ್ಲವನ್ನು ಭಾರತವು ನಿರಂತರ ನೆಲೆಯಲ್ಲಿ ಧ್ವಂಸಗೊಳಿಸಲಿದೆ ಎಂದು ಆಪರೇಶನ್ ಸಿಂದೂರ್ ವರ್ಧಂತಿ ಕ್ಷಣಗಳಲ್ಲಿ ಭಾರತದ ಮಿಲಿಟರಿ ಪಡೆ ಪಾಕ್‌ಗೆ ನೇರ ಎಚ್ಚರಿಕೆ ನೀಡಿದೆ.

ಭಾರತದ ಮಿಲಿಟರಿ ಕಾರ್ಯಾಚರಣೆ ಅತ್ಯಂತ ಮಹತ್ವದ್ದೆಂದು ಕಳೆದೈದು ದಶಕಗಳಲ್ಲಿ ಪರಿಗಣಿತವಾಗಿದೆ. ಭಾರತೀಯ ಸೇನೆಯ ಮೂರೂ ಪಡೆಗಳು ವ್ಯೂಹಾತ್ಮಕ ಯಶಸ್ಸುಗಳನ್ನು ದಾಖಲಿಸಿವೆ ಎಂದು ಸಿಂದೂರ್ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಸೇನಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಹೆಮ್ಮೆ ವ್ಯಕ್ತಪಡಿಸಿದರು. ಸೇನೆಯ ತ್ರಿವಳಿ ಪಡೆಗಳ ಸಾಮರ್ಥ್ಯ ಕುರಿತು ವಿಸ್ತೃತ ಮಾಹಿತಿ ನೀಡಿದರು. ಗಡಿಯಾಚೆಯ ಭಯೋತ್ಪಾದನೆ ವಿರುದ್ಧ ಮಿಲಿಟರಿ ಕಾರ್ಯಾಚರಣೆಯ ಕಿಟಕಿ ಮುಚ್ಚಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಬೆಂಬತ್ತಿಯೇ ಸಿದ್ಧ: ವಾಸ್ತವ ಗಡಿ ನಿಯಂತ್ರಣ ರೇಖೆಯಾಚಿನ ಯಾವುದೇ ಉಗ್ರ ನೆಲೆ ಸುರಕ್ಷಿತವಾಗಿಲ್ಲ. ಕಳೆದ ವರ್ಷ ಪ್ರಧಾನಿ ನರೇಂದ್ರ ಮೋದಿ ಅವರು ಖಡಾಖಂಡಿತವಾಗಿ ಹೇಳಿರುವಂತೆ, ಹೊಸ ಸಹಜ ಸನ್ನಿವೇಶದಲ್ಲಿ ಭಯೋತ್ಪಾದನೆಯ ಯಾವುದೇ ಚಟುವಟಿಕೆಗಳನ್ನು ನಾವು ಬೆಂಬತ್ತಿಯೇ ಸಿದ್ಧ ಎಂದು ಲೆ.ಜ.ರಾಜೀವ್ ಘಾಯ್ ಗುಡುಗಿದ್ದಾರೆ. ಸಿಂದೂರ್ ಕಾರ್ಯಾಚರಣೆ ಸಂದರ್ಭ ಭಾರತೀಯ ಸೇನೆಯ ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕ ಹೊಣೆ ಹೊಂದಿದ್ದ ಮತ್ತು ಪ್ರಸ್ತುತ ಸೇನಾ ಉಪ ಮುಖ್ಯಾಧಿಕಾರಿ (ರಣತಂತ್ರಗಳು)ಯಾಗಿರುವ ಘಾಯ್, ಭಾರತೀಯ ವಾಯುಪಡೆ ಮತ್ತು ನೌಕಾಪಡೆಗಳ ಜತೆ ಆಪರೇಶನ್ ಸಿಂದೂರ್ ಯಶಸ್ವೀ ಅನುಷ್ಠಾನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದರು. ಆಪರೇಶನ್ ಸಿಂದೂರ್ ಮುಕ್ತಾಯವಲ್ಲ, ಬದಲಾಗಿ ಆರಂಭವಷ್ಟೆ ಎಂದು ಲೆ.ಜ.ಘಾಯ್ ಘೋಷಿಸಿದರು.

ಪಾಕ್ ಗೋಗರೆದ ಕಾರಣ ಸಂಘರ್ಷ ನಿಲ್ಲಿಸಿದ್ದೆವು: ಜಗತ್ತಿನಾದ್ಯಂತ ದೀರ್ಘಕಾಲೀನ ಸಂಘರ್ಷಗಳು ನಡೆಯುತ್ತಲೇ ಇವೆ . ಆದರೆ ನಾವು ಕಠಿಣ ಪರಿಶ್ರಮಿಸಿ ನಮ್ಮ ಧ್ಯೇಯೋದ್ದೇಶಗಳನ್ನು ಸಾಧಿಸಿದೆವು ಮತ್ತು ಪಾಕಿಸ್ಥಾನ ಮಾತುಕತೆ ಜತೆ ಸಂಘರ್ಷ ಕೊನೆಗಾಣಿಸುವಂತೆ ಗೋಗರೆದ ಕಾರಣ ಹಗೆತನವನ್ನು ಬಿಟ್ಟುಬಿಡಲು ನಿರ್ಧರಿಸಿದೆವು ಎಂದು ವಾಸ್ತವವನ್ನು ನೆನಪಿಸಿದ ಲೆ.ಜ.ಘಾಯ್, ಭಾರತದ ದೇಶೀ ಶಸ್ತ್ರಾಸ್ತ್ರ ವ್ಯವಸ್ಥೆಗಳ ಸಾಮರ್ಥ್ಯದ ಜತೆಜತೆಗೆ ಬ್ರಹ್ಮೋಸ್, ಆಕಾಶ್‌ನಂತಹ ಶಕ್ತಿಶಾಲಿ ಕ್ಷಿಪಣಿಗಳ ಸಾಮರ್ಥ್ಯ, ದೇಶದಲ್ಲಿನ ಸುಸಜ್ಜಿತ ನಿಗಾವ್ಯವಸ್ಥೆ, ಟಾರ್ಗೆಟಿಂಗ್ ವ್ಯವಸ್ಥೆ , ಭಾರತದ ಬಲಿಷ್ಠ ಶಸ್ತ್ರಾಸ್ತ್ರ ಕೋಠಿಯನ್ನು ಸಿಂದೂರ್ ಜಗತ್ತಿಗೇ ಪರಿಚಯಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಪಾಕ್‌ಗೆ ತಕ್ಕ ಪ್ರತಿಕ್ರಿಯೆ ನೀಡಿದ್ದೇವೆ:ಎಂಇಎ

ಪಾಕಿಸ್ತಾನ ಬೆಂಬಲಿತ ಗಡಿಯಾಚೆಗಿನ ಭಯೋತ್ಪಾದಕ ಚಟುವಟಿಕೆಗಳ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕನ್ನು ಭಾರತ ಗುರುವಾರ ಪುನರುಚ್ಚರಿಸಿದೆ. ಇದೇ ವೇಳೆ ಭಯೋತ್ಪಾದನೆಯ ವಿರುದ್ಧದ ಜಾಗತಿಕ ಹೋರಾಟವನ್ನು ಬಲಪಡಿಸುವುದಾಗಿ ಪ್ರತಿಜ್ಞೆ ಮಾಡಿದೆ. ನಾವು ಆಪರೇಷನ್ ಸಿಂದೂರ ಕಾರ್ಯಾಚರಣೆಯ ಮೊದಲ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರಾಯೋಜಿಸಿದ್ದಕ್ಕಾಗಿ ನಾವು ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡಿದ್ದೇವೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ಗಡಿಯಾಚೆಗಿನ ಭಯೋತ್ಪಾದನೆಯು ಪಾಕಿಸ್ತಾನಕ್ಕೆ ಬಹಳ ಹಿಂದಿನಿಂದಲೂ ರಾಜ್ಯ ನೀತಿಯ ಸಾಧನವಾಗಿದೆ ಎಂದು ಜಗತ್ತಿಗೆ ತಿಳಿದಿದೆ. ಭಾರತದಲ್ಲಿ ಭಯೋತ್ಪಾದನೆಯ ವಿರುದ್ಧ ನಮ್ಮನ್ನು ನಾವು ರಕ್ಷಿಸಿಕೊಳ್ಳುವ ಎಲ್ಲಾ ಹಕ್ಕಿದೆ ಎಂದು ತಮ್ಮ ಸಾಪ್ತಾಹಿಕ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು. ಭಯೋತ್ಪಾದನೆ ವಿರುದ್ಧದ ಜಾಗತಿಕ ಹೋರಾಟವನ್ನು ಬಲಪಡಿಸಲು ಭಾರತವು ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಎಂದು ಜೈಸ್ವಾಲ್ ಹೇಳಿದರು.

ಕಿರುಸುದ್ದಿ

ವಂಚನೆ: ಪಂಜಾಬ್‌ನ ಹಲವೆಡೆ ಇಡಿ ದಾಳಿ

ಚಂಡೀಗಢ: ಭೂ ವಂಚನೆ ಪ್ರಕರಣದ ಅಕ್ರಮ ಹಣ ವರ್ಗಾವಣೆ ತನಿಖೆ ಭಾಗವಾಗಿ ಜಾರಿ ನಿರ್ದೇಶನಾಲಯ ಗುರುವಾರ ಪಂಜಾಬ್ ಮತ್ತು ಚಂಡೀಗಢದ ಅನೇಕ ಸ್ಥಳಗಳಲ್ಲಿ ಶೋಧ ನಡೆಸಿದೆ. ದಾಳಿ ನಡೆಸಿದ ಪ್ರದೇಶದಲ್ಲಿ ಸಿಎಮ್ ಒನಲ್ಲಿ ಒಎಸ್‌ಡಿಒ ಆಪಾದಿತ ನಿಕಟ ಸಹವರ್ತಿ ನಿವಾಸಗಳು ಸೇರಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಂಟೆಕ್ ಸಿಟಿ ಯೋಜನೆ, ಅಜಯ್ ಸೆಹಗಲ್, ಎಬಿಎಸ್ ಟೌನ್‌ಶಿಪ್, ಆಲ್ಟಸ್ ಬಿಲ್ಡರ್ಸ್, ಧೀರ್ ಕನ್ಸ್ಟ್ರಕ್ಷನ್ ಮತ್ತು ಸಹವರ್ತಿಗಳಿಗೆ ಸಂಬಂಧಿಸಿದ ಮೊಹಾಲಿ ಮತ್ತು ಚಂಡೀಗಢದ ಸುಮಾರು 12ಕ್ಕೂ ಹೆಚ್ಚು ಸ್ಥಳಗಳಲ್ಲಿ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅನ್ವಯದಲ್ಲಿ ಶೋಧ ನಡೆಸಲಾಗುತ್ತಿದೆ ಎಂದು ಹೇಳಿದರು. ಮೊಹಾಲಿಯಲ್ಲಿ ದಾಳಿಗೊಳಗಾದ ಕಟ್ಟಡವೊಂದರಲ್ಲಿ ಕಾರ್ಯಾಚರಣೆಯು ನಾಟಕೀಯ ಬೆಳವಣಿಗೆಗೆ ಸಾಕ್ಷಿಯಾಗಿದೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ದಾಳಿ ವೇಳೆ ಒಂಬತ್ತನೇ ಮಹಡಿಯಿಂದ 500 ರೂ. ನೋಟುಗಳಿಂದ ತುಂಬಿದ ಚೀಲಗಳನ್ನು ಎಸೆಯಲಾಗಿದೆ.

ಧಾರ್ಮಿಕ ವಿಚಾರ ಪ್ರಶ್ನಿಸಿದರೆ ಧರ್ಮ ಒಡೆಯುತ್ತದೆ

ಹೊಸದಿಲ್ಲಿ: ನ್ಯಾಯಾಲಯದ ಮುಂದೆ ಪ್ರತಿಯೊಂದು ಧಾರ್ಮಿಕ ಆಚರಣೆಯನ್ನು ಅಥವಾ ಧರ್ಮದ ವಿಷಯಗಳನ್ನು ಪ್ರಶ್ನಿಸಲು ಪ್ರಾರಂಭಿಸಿದರೆ, ನೂರಾರು ಅರ್ಜಿಗಳು ಬರುತ್ತವೆ ಮತ್ತು ಇದರಿಂದಾಗಿ ಪ್ರತಿಯೊಂದು ಧರ್ಮವೂ ಒಡೆಯುತ್ತದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ. ಶಬರಿಮಲೆ ದೇವಾಲಯಕ್ಕೆ ಮಹಿಳೆಯರ ಪ್ರವೇಶದ ವಿಷಯದಲ್ಲಿ ವಿರೋಧಾತ್ಮಕ ನಿಲುವನ್ನು ತೆಗೆದುಕೊಂಡಿರುವ ಕೇರಳ ಸರ್ಕಾರದ ಬಗ್ಗೆ ಸುಪ್ರೀಂ ಈ ಅಭಿಪ್ರಾಯ ತಿಳಿಸಿದೆ. ಯಾರ ಹಕ್ಕೂ ಶ್ರೇಷ್ಠವಲ್ಲ ಮತ್ತು ಮೂಲಭೂತ ಧಾರ್ಮಿಕ ಆಚರಣೆಯ ಮೇಲೆ ಸಮಸ್ಯೆ ಉದ್ಭವಿಸಿದರೆ, ನ್ಯಾಯಾಲಯವು ಧರ್ಮದ ಸದಸ್ಯರ ಸಾಕ್ಷ್ಯದ ಆಧಾರದ ಮೇಲೆ ಅದನ್ನು ನಿರ್ಣಯಿಸುತ್ತದೆ ಆದರೆ ತನ್ನದೇ ಆದ ಮತಧರ್ಮಶಾಸ್ತ್ರದ ಅಭಿಪ್ರಾಯವನ್ನು ಬದಲಿಸುವುದಿಲ್ಲ ಎಂದು ಹೇಳಿದೆ.

1,400 ಕೋಟಿ ಮೌಲ್ಯದ ಅಕ್ರಮ ಹಣ ವಶ:ಇಸಿ

ಹೊಸದಿಲ್ಲಿ: ಈ ಬಾರಿಯ ವಿಧಾನಸಭಾ ಚುನಾವಣೆಯ ವೇಳೆ ಚುನಾವಣಾ ಆಯೋಗ ಒಟ್ಟು 1,400 ಕೋಟಿ ರೂ. ಹೆಚ್ಚು ಮೌಲ್ಯದ ಅಕ್ರಮ ನಿಧಿಯನ್ನು ವಶಪಡಿಸಿಕೊಂಡಿದೆ. ಈ ಪೈಕಿ ಪಶ್ಚಿಮ ಬಂಗಾಳದಲ್ಲಿ ಅತಿ ಹೆಚ್ಚು ಹಣವನ್ನು ವಶಕ್ಕೆ ಪಡೆಯಲಾಗಿದೆ ಎಂದು ಭಾರತೀಯ ಚುನಾವಣಾ ಆಯೋಗ (ಇಸಿಐ) ಹೇಳಿದೆ. 5 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಧಾನಸಭಾ ಚುನಾವಣೆ ವೇಳೆ 1,400 ಕೋಟಿಗೂ ಹೆಚ್ಚು ಮೌಲ್ಯದ ಅಕ್ರಮ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ದೇಶ ವಿರೋಧಿ ಚಟುವಟಿಕೆ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಿ

ಹೊಸದಿಲ್ಲಿ: ಕೆನಡಾದಲ್ಲಿದ್ದುಕೊಂಡು ಭಾರತ ವಿರೋಧಿ ಚಟುವಟಿಕೆಗಳಲ್ಲಿ ನಿರತ ಉಗ್ರಗಾಮಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಭಾರತವು ಕೆನಡಾ ಸರಕಾರಕ್ಕೆ ಕರೆ ನೀಡಿದೆ. ಖಲಿಸ್ತಾನಿ ಶಕ್ತಿಗಳು ಕೆನಡಾದ ರಾಷ್ಟ್ರೀಯ ಭದ್ರತೆಗೆ ನಿರಂತರ ಗಂಡಾಂತರವಾಗಿದ್ದಾರೆಂಬ ಅಲ್ಲಿನ ಗುಪ್ತಚರ ವರದಿ ಬೆನ್ನಲ್ಲೇ ಭಾರತದ ವಿದೇಶಾಂಗ ಸಚಿವಾಲಯ ಈ ತೆರ ಕರೆ ನೀಡಿದೆ. ಕೆನಡಾದಿಂದ ಭಾರತ ವಿರೋಧಿ ಚಟುವಟಿಕೆಗಳಲ್ಲಿ ನಿರತ ಉಗ್ರಗಾಮಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಭಾರತವು ಕೆನಡಾ ಸರಕಾರವನ್ನು ನಿರಂತರ ಆಗ್ರಹಿಸಿದೆ. ಉಗ್ರರಿಂದ ಹಿಂಸಾಚಾರಗಳ ವೈಭವೀಕರಣ, ಭಾರತೀಯ ನಾಯಕರು ಮತ್ತು ರಾಜತಾಂತ್ರಿಕರಿಗೆ ಬೆದರಿಕೆ, ದೇವಾಲಯಗಳನ್ನು ಧ್ವಂಸಗೊಳಿಸುವುದು ಇತ್ಯಾದಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಭಾರತ ನಿರಂತರ ಒತ್ತಾಯಿಸಿದೆ ಎಂದು ವಿದೇಶ ವ್ಯವಹಾರಗಳ ಖಾತೆ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ಕೆನಡಾ ಬೇಹುಗಾರಿಕಾ ಪಡೆಯ ವರದಿ ಕುರಿತ ಪ್ರಶ್ನೆಗೆ ಜೈಸ್ವಾಲ್ ಪ್ರಸ್ತುತ ಮಾಹಿತಿ ನೀಡಿದರು. ಉಗ್ರರು ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ಭಾರತ ವಿರೋಧಿ ಚಟುವಟಿಕೆಗಳಿಗೆ ಕೆನಡಾವನ್ನು ಸುರಕ್ಷಿತ ಸ್ವರ್ಗವಾಗಿ ಬಳಸಿಕೊಳ್ಳುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದೆ. ಖಲಿಸ್ತಾನ್ ಪ್ರತ್ಯೇಕತಾವಾದಿ ಆಂದೋಲನದ ಬೆಂಬಲಿಗರು ಕೆನಡಾದಲ್ಲಿರುವುದು ಮತ್ತು ಕೆನಡಾ ಮೂಲದ ಖಲಿಸ್ತಾನಿ ಉಗ್ರರ ಗುಂಪುಗಳು ಭಾರತಕ್ಕೆ ಮಾತ್ರವಲ್ಲ ಕೆನಡಾದ ರಾಷ್ಟ್ರೀಯ ಭದ್ರತೆಗೂ ನಿರಂತರ ಗಂಡಾಂತರವಾಗಿ ಪರಿಣಮಿಸಿರುವುದು.

ಲಿಪುಲೇಖ್ ವಿವಾದ ಬಗ್ಗೆ ಮಾತುಕತೆಗೆ ಸಿದ್ಧ: ಭಾರತ

ಹೊಸದಿಲ್ಲಿ: ಲಿಪುಲೇಖ್ ಪಾಸ್ ಕುರಿತು ನೇಪಾಳ ಇತ್ತೀಚೆಗೆ ಮರುಪ್ರತಿಪಾದಿಸಿರುವ ಪ್ರಾದೇಶಿಕ ಹಕ್ಕುಗಳ ಹಿನ್ನೆಲೆಯಲ್ಲಿ, ಗಡಿ ವಿವಾದದ ಕುರಿತು ನೇಪಾಳದೊಂದಿಗೆ ಮಾತುಕತೆ ನಡೆಸಲು ಸಿದ್ಧವಿರುವುದಾಗಿ ಭಾರತ ತಿಳಿಸಿದೆ. ನೇಪಾಳ ಈ ವಿಷಯವನ್ನು ಮತ್ತೆ ಪ್ರಸ್ತಾಪಿಸಿದರೆ ಚರ್ಚೆಗೆ ಭಾರತ ಸಿದ್ಧವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್



ತಿಳಿಸಿದ್ದಾರೆ. ಉತ್ತರಾಖಂಡದ ಪಿತೋರಗಢ ಜಿಲ್ಲೆಯ ಲಿಪುಲೇಖ್ ಮೂಲಕ ಸಾಗುವ ಕೈಲಾಸ ಮಾನಸಸರೋವರ ಯಾತ್ರೆಯ ಮಾರ್ಗದ ಕುರಿತು ಕಠ್ಮಂಡು ಆಕ್ಷೇಪ ವ್ಯಕ್ತಪಡಿಸಿದ ನಂತರ ಈ ಪ್ರತಿಕ್ರಿಯೆ ಬಂದಿದೆ. ನೇಪಾಳದ ಈ ಹಕ್ಕು ಸಮರ್ಥನೀಯವಲ್ಲ ಎಂದು ತಿರಸ್ಕರಿಸಿರುವ ಭಾರತ, ಈ ಯಾತ್ರಾ ಮಾರ್ಗ 1954 ರಿಂದಲೂ ಬಳಕೆಯಲ್ಲಿದೆ ಎಂದು ಸ್ಪಷ್ಟಪಡಿಸಿದೆ.

ವಿವಾದದ ಹಿನ್ನೆಲೆ: 1816 ರ ಸುಗೌಲಿ ಒಪ್ಪಂದದ ಪ್ರಕಾರ ಲಿಪುಲೇಖ್, ಕಾಲಾಪಾನಿ ಮತ್ತು ಲಿಂಪಿಯಾಧುರಾ ಪ್ರದೇಶಗಳು ತನ್ನ ಭೂಭಾಗಕ್ಕೆ ಸೇರಿವೆ ಎಂದು ನೇಪಾಳ ಪ್ರತಿಪಾದಿಸುತ್ತಿದೆ. 2020 ರಲ್ಲಿ ನೇಪಾಳ ಈ ಪ್ರದೇಶಗಳನ್ನು ಒಳಗೊಂಡ ಪರಿಷ್ಕೃತ ರಾಜಕೀಯ ಭೂಪಟ ಪ್ರಕಟಿಸಿದಾಗ ಉಭಯ ದೇಶಗಳ ನಡುವೆ ಉದ್ವಿಗ್ನತೆ ಹೆಚ್ಚಾಗಿತ್ತು. ನೇಪಾಳ ಸರ್ಕಾರದ ವಕ್ತಾರ ಸಾಸ್ಮಿತ್ ಪೋಖರೆಲ್ ತಮ್ಮ ನಿಲುವಿಗೆ ಬದ್ಧರಾಗಿರುವುದಾಗಿ ತಿಳಿಸಿದ್ದರೂ, ರಾಜತಾಂತ್ರಿಕತೆಯ ಮೂಲಕ ಪರಿಹಾರ ಕಂಡುಕೊಳ್ಳಲು ಭಾರತ ಒತ್ತು ನೀಡಿದೆ. ಐದು ವರ್ಷಗಳ ಬಿಡುವಿನ ನಂತರ ಈ ಯಾತ್ರೆ ಇತ್ತೀಚೆಗಷ್ಟೇ ಪುನರಾರಂಭಗೊಂಡಿದೆ.

ಮಹಿಳಾ ಶಾಸಕಿ ಅಪ್ಪಿಕೊಳ್ಳಲು ಯತ್ನಿಸಿದ ಕಾಂಗ್ರೆಸ್ ನಾಯಕ

ತಿರುವನಂತಪುರಂ: ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಕಚೇರಿಯಲ್ಲಿ ನಡೆದ ಘಟನೆಯೊಂದು ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ. ಹಿರಿಯ ಕಾಂಗ್ರೆಸ್ ನಾಯಕ ಚೆರಿಯನ್ ಫಿಲಿಪ್ ಅವರು ನೂತನವಾಗಿ ಆಯ್ಕೆಯಾದ ಕಾಂಗ್ರೆಸ್ ಶಾಸಕಿ ಬಿಂದು ಕೃಷ್ಣ ಅವರನ್ನು ಅಪ್ಪಿಕೊಳ್ಳಲು ಯತ್ನಿಸಿದ ವಿಡಿಯೋ ವೈರಲ್ ಆಗಿದ್ದು, ವ್ಯಾಪಕ ಟೀಕೆ ವ್ಯಕ್ತವಾಗಿದೆ. ಕೆಪಿಸಿಸಿ ಕಚೇರಿಯಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಗೆ ಆಗಮಿಸಿದ್ದ ಬಿಂದು ಕೃಷ್ಣಾ ಅವರು ಮಾಧ್ಯಮ ಪ್ರತಿನಿಧಿಗಳು ಹಾಗೂ ಪಕ್ಷದ ಕಾರ್ಯಕರ್ತರನ್ನು ಅಭಿನಂದಿಸುತ್ತಿದ್ದರು. ಈ ವೇಳೆ ಚೆರಿಯನ್ ಫಿಲಿಪ್ ಅವರು ಅವರನ್ನು ಎದುರುಗೊಂಡರು. ಬಿಂದು ಕೃಷ್ಣಾ ಅವರು ಕೈಕುಲುಕಲು ಮುಂದಾದರೂ, ಫಿಲಿಪ್ ಅವರು ಅಪ್ಪಿಕೊಳ್ಳಲು ಯತ್ನಿಸಿದ ದೃಶ್ಯ ವಿಡಿಯೋದಲ್ಲಿ ಕಂಡುಬಂದಿದೆ. ವಿಡಿಯೋದಲ್ಲಿ ಬಿಂದು ಕೃಷ್ಣಾ ಅವರು ಅಸೌಕರ್ಯ ವ್ಯಕ್ತಪಡಿಸಿ ಹಿಂದೆ ಸರಿಯಲು ಯತ್ನಿಸುತ್ತಿರುವುದು ಕಾಣಿಸಿದ್ದು, ಅವರು ಫಿಲಿಪ್ ಅವರನ್ನು ದೂರ ಸರಿಸಿ ಮುಂದೆ ನಡೆದಿರುವ ದೃಶ್ಯವೂ ವೈರಲ್ ಆಗಿದೆ. ಈ ಘಟನೆ ನಡೆದ ಸಂದರ್ಭದಲ್ಲಿ ಅಲ್ಲಿದ್ದ ಕೆಲ ನಾಯಕರು ಹಾಗೂ ಕಾರ್ಯಕರ್ತರು ನಗುತ್ತಿರುವ ದೃಶ್ಯವೂ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಸಾಮಾಜಿಕ ಜಾಲತಾಣ ಬಳಕೆದಾರರು ಈ ಘಟನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಮಹಿಳೆಯರ ವೈಯಕ್ತಿಕ ಮೇರೆಯನ್ನು ಗೌರವಿಸಬೇಕು, ಸಾರ್ವಜನಿಕ ಬದುಕು ಅಥವಾ ರಾಜಕೀಯ ಹಿರಿಯತೆ ಯಾರಿಗೂ ಅನಗತ್ಯ ದೈಹಿಕ ಸ್ಪರ್ಶಕ್ಕೆ ಹಕ್ಕು ನೀಡುವುದಿಲ್ಲ ಎಂದು ಅನೇಕರು ಟೀಕಿಸಿದ್ದಾರೆ. ಕೆಲವರು ಕಾಂಗ್ರೆಸ್ ಪಕ್ಷ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಮೇ 12ಕ್ಕೆ ಅಸ್ಸಾಂ ಸಿಎಂ ಪ್ರಮಾಣ: ಮೋದಿ ಭಾಗಿ ಸಾಧ್ಯತೆ

ಗುವಾಹಟಿ: ಅಸ್ಸಾಂನಲ್ಲಿ ಹೊಸದಾಗಿ ಆಯ್ಕೆಯಾದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಪ್ರಮಾಣ ವಚನ ಸಮಾರಂಭವು ಮೇ 12ರಂದು ನಡೆಯಲಿದೆ ಎಂದು ಮುಖ್ಯ ಕಾರ್ಯದರ್ಶಿ ರವಿ ಕೋಟಾ ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಹಲವಾರು ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಮತ್ತು ಬಿಜೆಪಿ ಆಡಳಿತದ ರಾಜ್ಯಗಳ ಉಪ ಮುಖ್ಯಮಂತ್ರಿಗಳು ಮತ್ತು ಕೈಗಾರಿಕೆಗಳ ಪ್ರತಿನಿಧಿಗಳು ಈ ಸಮಾರಂಭದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಪ್ರಮಾಣ ವಚನ ಸಮಾರಂಭವು ಖಾನಪಾರಾದ ಪಶುವೈದ್ಯಕೀಯ ಕ್ಷೇತ್ರದಲ್ಲಿ ನಡೆಯಲಿದೆ ಎಂದು ರವಿ ಕೋಟಾ ಮಾಹಿತಿ ನೀಡಿದ್ದಾರೆ. ಹೊಸದಾಗಿ ಆಯ್ಕೆಯಾದ ಸಚಿವ ಸಂಪುಟದ ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸಲು ಪ್ರಧಾನಮಂತ್ರಿಯ ಮುಂಬರುವ ಭೇಟಿಯ ಸನ್ನದ್ಧತೆಯನ್ನು ನಿರ್ಣಯಿಸಲು, ಅಸ್ಸಾಂನ ಡಿಜಿಪಿಯೊಂದಿಗೆ ಸಮಗ್ರ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು ಎಂದು ಕೋಟಾ ಬುಧವಾರ ರಾತ್ರಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

12 ಜನರಲ್ಲಿ ಸೋಂಕು ದೃಢ | ಆತಂಕ ಬೇಡ: ಆರೋಗ್ಯ ಇಲಾಖೆ
ಪ್ರವಾಸಿ ಹಡಗಿನಲ್ಲಿ ಹಂಟಾವೈರಸ್!

ಜಿನೀವಾ: ಮೆಡಿಟರೇನಿಯನ್ ಸಮುದ್ರದಲ್ಲಿ ಸಂಚರಿಸುತ್ತಿದ್ದ ಐಷಾರಾಮಿ ಪ್ರವಾಸಿ ಹಡಗಿನ ಪ್ರಯಾಣಿಕರಲ್ಲಿ ಹಂಟಾವೈರಸ್ ಸೋಂಕು ಕಾಣಿಸಿಕೊಂಡಿರುವುದನ್ನು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲುಎಚ್‌ಒ) ದೃಢಪಡಿಸಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಹಡಗನ್ನು ಪ್ರಾದೇಶಿಕ ಬಂದರಿನಲ್ಲಿ ಪ್ರತ್ಯೇಕವಾಗಿ ಇರಿಸಲಾಗಿದೆ.



ಹಡಗಿನಲ್ಲಿದ್ದ ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಿದಾಗ 12 ಜನರಲ್ಲಿ ಸೋಂಕು ಇರುವುದು ಪತ್ತೆಯಾಗಿದೆ. ಹಡಗಿನ ಆಹಾರ ಸಂಗ್ರಹಣಾ ಘಟಕಗಳಲ್ಲಿನ ಕಲುಷಿತ ವಾತಾವರಣವೇ ಈ ಸೋಂಕಿನ ಮೂಲವೆಂದು ವಿಶ್ವ ಆರೋಗ್ಯ ಸಂಸ್ಥೆ ಪತ್ತೆಹಚ್ಚಿದೆ. ಸಾಮಾನ್ಯವಾಗಿ ಈ ವೈರಸ್ ಇಲಿಗಳ ಮಲ, ಮೂತ್ರ ಅಥವಾ ಲಾಲಾರಸದ ನೇರ ಸಂಪರ್ಕದಿಂದ ಮನುಷ್ಯರಿಗೆ ಹರಡುತ್ತದೆ. ಸೋಂಕಿತರಲ್ಲಿ ತೀವ್ರ ಜ್ವರ, ಸ್ನಾಯು ನೋವು ಮತ್ತು ಸುಸ್ತು ಕಾಣಿಸಿಕೊಂಡಿದ್ದು, ಪ್ರಸ್ತುತ ಎಲ್ಲರನ್ನೂ ಪ್ರತ್ಯೇಕ ವಾರ್ಡ್‌ಗಳಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಆರೋಗ್ಯ ಇಲಾಖೆ ಸ್ಪಷ್ಟನೆ: ವೈದ್ಯಕೀಯ ತಜ್ಞರು ಮತ್ತು ಅಂತರಾಷ್ಟ್ರೀಯ ಆರೋಗ್ಯ ಸಂಸ್ಥೆಗಳು ಈ ಬಗ್ಗೆ ಸ್ಪಷ್ಟನೆ ನೀಡಿದ್ದು, ಹಂಟಾವೈರಸ್ ಕೊರೋನಾದಂತೆ ಜಾಗತಿಕ ಸಾಂಕ್ರಾಮಿಕವಾಗಿ ಹರಡುವ ಸಾಧ್ಯತೆ ಕಡಿಮೆ ಎಂದು ತಿಳಿಸಿವೆ. ಇದು ಗಾಳಿಯ ಮೂಲಕ ಅಥವಾ ಒಬ್ಬ ಮನುಷ್ಯನಿಂದ ಇನ್ನೊಬ್ಬನಿಗೆ ಸುಲಭವಾಗಿ ಹರಡುವುದಿಲ್ಲ. ಕಿರಿದಾದ ಜಾಗಗಳಲ್ಲಿ ಕಲುಷಿತ ಧೂಳನ್ನು ಉಸಿರಾಡುವುದರಿಂದ ಮಾತ್ರ ಇದು ಹರಡುವ ಕಾರಣ, ಸಾರ್ವಜನಿಕರಿಗೆ ಇರುವ ಅಪಾಯ ಕಡಿಮೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಮುಂದಿನ ಕ್ರಮಗಳು: ವೈದ್ಯಕೀಯ ತಂಡಗಳು ಹಡಗಿನ ಸಂಪೂರ್ಣ ನೈರ್ಮಲ್ಯೀಕರಣ ಪ್ರಕ್ರಿಯೆಯನ್ನು ಪೂರ್ಣಗೊಳಿಸುವವರೆಗೆ ಮತ್ತು ಆರೋಗ್ಯ ಸಚಿವಾಲಯ ಸುರಕ್ಷತಾ ಪ್ರಮಾಣಪತ್ರ ನೀಡುವವರೆಗೆ ಹಡಗು ಬಂದರಿನಲ್ಲೇ ಇರಲಿದೆ. ಅಂತಾರಾಷ್ಟ್ರೀಯ ಸಮುದ್ರಯಾನ ಸಂಸ್ಥೆಗಳು ಹಡಗುಗಳಲ್ಲಿ ಇಲಿಗಳ ನಿಯಂತ್ರಣ ಮತ್ತು ನೈರ್ಮಲ್ಯದ ನಿಯಮಗಳನ್ನು ಮರುಪರಿಶೀಲಿಸಲು ಆರಂಭಿಸಿವೆ. ಅಂತಾರಾಷ್ಟ್ರೀಯ ಪ್ರಯಾಣದ ಸಂದರ್ಭದಲ್ಲಿ ಇಂತಹ ಅಪರೂಪದ ವೈರಸ್‌ಗಳ ಮೇಲೆ ನಿಗಾ ಇಡುವ ಪ್ರಯತ್ನದ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಒಟ್ಟು ಸದಸ್ಯರ ಸಂಖ್ಯೆ 35ಕ್ಕೆ ಏರಿಕೆ | ಪ್ರಧಾನಿ ಮೋದಿ,ಶಾ ಭಾಗಿ
ಬಿಹಾರ ಸಂಪುಟಕ್ಕೆ ನೀತೀಶ್ ಪುತ್ರ ಸೇರ್ಪಡೆ

ಪಾಟ್ನಾ: ಬಿಹಾರದ ಸಾಮ್ರಾಟ್ ಚೌಧರಿ ನೇತೃತ್ವದ ಸರ್ಕಾರ ಗುರುವಾರ, 32 ಹೊಸ ಸಚಿವರನ್ನು ಸೇರಿಸಿಕೊಳ್ಳುವ ಮೂಲಕ ಸಚಿವ ಸಂಪುಟವನ್ನು ವಿಸ್ತರಿಸಿದೆ. ಇದರೊಂದಿಗೆ ಸಂಪುಟದ ಒಟ್ಟು ಸದಸ್ಯರ ಸಂಖ್ಯೆ 35ಕ್ಕೇರಿದೆ.

ನೂತನ ಸಚಿವರ ಪೈಕಿ ಬಿಜೆಪಿಯಿಂದ 15, ಜೆಡಿಯು(ಜೆಡಿ-ಯು)ನಿಂದ 13, ಎಲ್‌ಜೆಪಿ(ಆರ್‌ವಿ) ಯಿಂದ ಇಬ್ಬರು ಹಾಗೂ ಎಚ್‌ಎಎಂ(ಎಸ್) ಮತ್ತು ಆರ್‌ಎಲ್‌ಎಂನಿಂದ ತಲಾ ಒಬ್ಬರು ಆಯ್ಕೆಯಾಗಿದ್ದಾರೆ. ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅಟಾ ಹಸ್ನೈನ್, ಸಚಿವರಿಗೆ ಪ್ರಮಾಣವಚನ ಬೋಧಿಸಿದರು. ಸಂಪುಟದ ಗರಿಷ್ಠ ಮಿತಿ 36 ಆಗಿದ್ದು, ಒಂದು ಸ್ಥಾನವಷ್ಟೇ ಖಾಲಿ ಇದೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಮತ್ತು ನಿತೀಶ್ ಕುಮಾರ್ ಈ ಸಮಾರಂಭಕ್ಕೆ ಸಾಕ್ಷಿಯಾದರು.

ಸಾಮಾಜಿಕ ಸಮೀಕರಣ: ಈ ವಿಸ್ತರಣೆಯಲ್ಲಿ ಜಾತಿ ಸಮೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಸಾಮಾನ್ಯ ವರ್ಗ, ಹಿಂದುಳಿದ ವರ್ಗ (ಒಬಿಸಿ), ಅತ್ಯಂತ ಹಿಂದುಳಿದ ವರ್ಗ (ಇಬಿಸಿ), ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಮುಸ್ಲಿಂ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಲಾಗಿದೆ. ಬಿಜೆಪಿಯ ಕೋಟಾದಲ್ಲಿ ಆರು ಮಂದಿ ಮೇಲ್ಜಾತಿಯವರಿದ್ದರೆ, ಜೆಡಿಯು ನಾಲ್ವರು ಒಬಿಸಿ ಮತ್ತು ನಾಲ್ವರು ಇಬಿಸಿ ಸಚಿವರಿಗೆ ಅವಕಾಶ



ನೀಡಿದೆ. ಸಂಪುಟದಲ್ಲಿ ಒಟ್ಟು ಐವರು ಮಹಿಳಾ ಸಚಿವರಿದ್ದಾರೆ.

ಹೊಸಬರಿಗೆ ಅವಕಾಶ: ಸಂಪುಟದಲ್ಲಿ ಅನುಭವ ಮತ್ತು ಹೊಸತನದ ಮಿಶ್ರಣವಿದ್ದು, ಏಳು ಮಂದಿ ಹೊಸಬರಿಗೆ ಅವಕಾಶ ನೀಡಲಾಗಿದೆ. ಇದರಲ್ಲಿ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಸೇರಿದಂತೆ ಮೂವರು ಮಾಜಿ ಮುಖ್ಯಮಂತ್ರಿಗಳ ಪುತ್ರರು ಸಚಿವರಾಗಿ ಆಯ್ಕೆಯಾಗಿದ್ದಾರೆ. ಕಳೆದ ಸಂಪುಟದಲ್ಲಿದ್ದ 19 ಸಚಿವರನ್ನು ಉಳಿಸಿಕೊಳ್ಳಲಾಗಿದ್ದು, ಸಚಿವರಿಗೆ ಇಲಾಖೆಗಳ ಹಂಚಿಕೆ ಶುಕ್ರವಾರದೊಳಗೆ ನಡೆಯುವ ಸಾಧ್ಯತೆಯಿದೆ.

ಅನಾರೋಗ್ಯ: ನೇಣು ಬಿಗಿದು ವೃದ್ಧ ಆತ್ಮಹತ್ಯೆ

ಬೆಳ್ತಂಗಡಿ: ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ವೃದ್ಧರೊಬ್ಬರು ಮನೆಯ ಹೊರಗಿನ ಅಳವಡಿಸಿದ್ದ ರಾಡ್‌ಗೆ ಹಗ್ಗವನ್ನು ಕಟ್ಟಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಧರ್ಮಸ್ಥಳದಲ್ಲಿ ನಡೆದಿದೆ. ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳ ಗ್ರಾಮದ ಜೋಡುಸ್ನಾನದ ಅಗುಳಿ ನಿವಾಸಿ ಐತಪ್ಪ ಪೂಜಾರಿ (68) ಎಂಬವರೇ ಆತ್ಮಹತ್ಯೆ ಮಾಡಿಕೊಂಡವರು. ಐತಪ್ಪ ಪೂಜಾರಿ ಅವರ ಸೊಸೆ ಬೆಳಗ್ಗೆ 6 ಗಂಟೆಗೆ ಎದ್ದು ಮನೆಯ ಅಂಗಳಕ್ಕೆ ಬಂದಾಗ ಆತ್ಮಹತ್ಯೆ ಘಟನೆ ಬೆಳಕಿಗೆ ಬಂದಿದೆ. ಮೇ 7 ರಂದು ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಆತ್ಮಹತ್ಯೆ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ನಾಗೇಶ್ ಎಂ.



ಉಡುಪಿ: ಉಡುಪಿ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಸಹಾಯಕ ಮೀಸಲು ಉಪನಿರೀಕ್ಷಕರಾದ ನಾಗೇಶ್ ಎಮ್. ಗುರುವಾರ ನಿಧನರಾದರು. ಒಂದು ವರ್ಷದಿಂದ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ಮೂಲತಃ ಮಂಗಳೂರಿನ ಕಿನ್ನಿಗೋಳಿ ಸಮೀಪದ ಪದ್ಮನೂರು ನಿವಾಸಿಯಾದ ನಾಗೇಶ್ ಅವರು, 1996ರ ಅಕ್ಟೋಬರ್ 10ರಂದು ಮಂಗಳೂರು ಡಿಎಆರ್ ಘಟಕದಲ್ಲಿ ಪೊಲೀಸ್ ಸೇವೆಗೆ ಸೇರ್ಪಡೆಗೊಂಡಿದ್ದರು. ಉಡುಪಿ ಜಿಲ್ಲೆ ನೂತನವಾಗಿ ಸೃಜನೆಯಾದ ಸಮಯದಲ್ಲಿ ಅವರು ಉಡುಪಿ ಜಿಲ್ಲೆಗೆ ವರ್ಗಾವಣೆಗೊಂಡು ಅಂದಿನಿಂದ ಇಲ್ಲಿಯೇ ಸೇವೆ ಸಲ್ಲಿಸುತ್ತಿದ್ದರು. ಇಲಾಖೆಯಲ್ಲಿ ದಕ್ಷ ಅಧಿಕಾರಿಯಾಗಿ ಗುರುತಿಸಿಕೊಂಡಿದ್ದ ಇವರು 2016ರ ಡಿಸೆಂಬರ್ 17ರಂದು ಎಆರ್‌ಎಸ್‌ಐ ಆಗಿ ಪದೋನ್ನತಿ ಹೊಂದಿದ್ದರು. ಮೂಲತಃ ಮಂಗಳೂರಿನವರಾದರೂ ವೃತ್ತಿ ನಿಮಿತ್ತ ಕುಟುಂಬದೊಂದಿಗೆ ಉಡುಪಿಯಲ್ಲೇ ವಾಸ್ತವ್ಯ ಹೊಂದಿದ್ದರು. ಮೃತರು ಇಬ್ಬರು ಮಕ್ಕಳನ್ನು ಹಾಗೂ ಅಪಾರ ಬಂಧು-ಮಿತ್ರರನ್ನು ಮತ್ತು ಇಲಾಖೆಯ ಸಹೋದ್ಯೋಗಿಗಳನ್ನು ಅಗಲಿದ್ದಾರೆ.

ಭವಾನಿ



ಉಳ್ಳಾಲ: ಉಳ್ಳಾಲ ಪುರಸಭೆಯ ಮಾಜಿ ಉಪಾಧ್ಯಕ್ಷೆ, ತೊಕ್ಕೊಟ್ಟು ಕಾಪಿಕಾಡು ನಿವಾಸಿ ಭವಾನಿ (65) ಅವರು ಅಲ್ಪಕಾಲದ ಅಸೌಖ್ಯದಿಂದ ಬುಧವಾರದಂದು ನಿಧನರಾದರು. ಮೃತ ಭವಾನಿ ಅವರು ಅವಿವಾಹಿತರಾಗಿದ್ದು ಬಿಜೆಪಿ ಪಕ್ಷದಿಂದ ಎರಡು ಬಾರಿ ಕಾಪಿಕಾಡು ವಾರ್ಡಿನಿಂದ ಸ್ಪರ್ಧಿಸಿ ಉಳ್ಳಾಲ ಪುರಸಭೆ ಮತ್ತು ಉಳ್ಳಾಲ ನಗರಸಭೆಯಾಗಿ ಮೇಲ್ದರ್ಜೆಗೇರಿದ ಬಳಿಕ ಕೌನ್ಸಿಲರ್ ಆಗಿ ಆಯ್ಕೆಯಾಗಿದ್ದರು. ಭವಾನಿ ಅವರು ಉಳ್ಳಾಲ ಪುನ್ಕೆದಡಿ ಆದಿ ಕ್ಷೇತ್ರ ಬಂಡಿಕೊಟ್ಯ ಕೋರ್ದಬ್ಬು ದೈವಸ್ಥಾನದ ಸಮಿತಿಯಲ್ಲಿ ಸಕ್ರಿಯ ಸದಸ್ಯೆಯಾಗಿದ್ದರು. ಆರಂಭದಲ್ಲಿ ಉಳ್ಳಾಲ ಪುರಸಭೆಯ ಉಪಾಧ್ಯಕ್ಷರಾಗಿದ್ದ ಅವರು ಬಳಿಕ ಉಳ್ಳಾಲ ನಗರಸಭೆಯ ಸದಸ್ಯರಾಗಿ ಕಳೆದ ನವೆಂಬರ್ ತಿಂಗಳಲ್ಲಿ ಅಧಿಕಾರಾವಧಿ ಮುಗಿಸಿದ್ದರು.

ಸುಲೋಚನಾ



ಮಂಜೇಶ್ವರ: ಪಾವೂರು ಮುಡಿಮಾರು ಕಾಂಜರ ಮನೆತನದ ಕಿರಿಯ ಸೊಸೆ, ದಿ.ಶೇಷಪ್ಪ ಪೂಜಾರಿಯವರ ಪತ್ನಿ ಸುಲೋಚನಾ (67) ನಿಧನ ಹೊಂದಿದರು. ಮೃತರು ಪುತ್ರ ಹರೀಶ್, ಪುತ್ರಿಯರಾದ ಬಬಿತಾ ದಿನೇಶ್, ಅಮಿತಾ ದಿನೇಶ್ ಅವರನ್ನು ಅಗಲಿದ್ದಾರೆ.

ನಝೀರ್ ಟಿ. ಎಂ.

ಬಂಟ್ವಾಳ: ಬಿ.ಸಿ.ರೋಡ್ ತಲಪಾಡಿ ಬದ್ರಿಯಾ ಜುಮಾ ಮಸೀದಿಯ ಮಾಜಿ ಅಧ್ಯಕ್ಷ ನಝೀರ್ ಟಿ. ಎಂ.(57) ಅವರು ಅಲ್ಪಕಾಲದ ಅನಾರೋಗ್ಯದಿಂದ ಬುಧವಾರ ರಾತ್ರಿ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ತಲಪಾಡಿ ಬದ್ರಿಯಾ ಜುಮಾ ಮಸೀದಿ ಆಡಳಿತ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮೃತರು ಪುತ್ರಿ, ಇಬ್ಬರು ಪುತ್ರರ ಸಹಿತ ಬಂಧುಗಳನ್ನು ಅಗಲಿದ್ದಾರೆ.

ನಾರಾಯಣ

ಪೆರ್ಲ: ಸ್ವರ್ಗ ಕೊಡೆಂಕೀರಿ ನಿವಾಸಿ ನಾರಾಯಣ (52) ಸ್ವಗೃಹದಲ್ಲಿ ಬುಧವಾರ ನಿಧನ ಹೊಂದಿದರು. ಅಸೌಖ್ಯ ಬಾಧಿಸಿದ್ದ ಅವರು ಕಳೆದ ನಾಲ್ಕು ತಿಂಗಳುಗಳಿಂದ ಕಾಸರಗೋಡು ಮತ್ತು ಮಂಗಳೂರಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರು. ಅವರು ಕೂಲಿ ಕಾರ್ಮಿಕರಾಗಿದ್ದರು. ಮೃತರು ಪತ್ನಿ ಸುಮಿತ್ರಾ, ಮಕ್ಕಳಾದ ಮಮತಾ, ಮಹೇಶ್, ಚೈತ್ರಾ ಅವರನ್ನು ಅಗಲಿದ್ದಾರೆ.

ಕಮಲಾ ರೈ

ಬದಿಯಡ್ಕ: ಕೆಳಗಿನ ವಳಮಲೆ ನಿವಾಸಿ ದಿ.ಉಗ್ರಾಣಿ ಬಾಬು ರೈಯವರ ಪತ್ನಿ ಕಮಲಾ ರೈ (101) ಮಂಗಳವಾರ ಸ್ವಗೃಹದಲ್ಲಿ ನಿಧನರಾದರು. ಮೃತರು ಮಕ್ಕಳಾದ ಚಂದ್ರಾವತಿ, ಜಯಕರ, ಸಾವಿತ್ರಿ, ಶಾರದಾ ಅವರನ್ನು ಅಗಲಿದ್ದಾರೆ.

ಕಿಶೋರ್ ಆಳ್ವಗೆ 'ಮಹಾತ್ಮ ಗಾಂಧಿ ಸಬರಮತಿ ಸಂತ' ಪ್ರಶಸ್ತಿ ಪ್ರದಾನ

ಪಡುಬಿದ್ರಿ: ಕರ್ನಾಟಕ ರಾಜ್ಯದ ಕೈಗಾರಿಕೆ, ವಾಣಿಜ್ಯ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕ್ಷೇತ್ರಗಳಿಗೆ ನೀಡಿದ ಅನುಪಮ ಕೊಡುಗೆಯನ್ನು ಗುರುತಿಸಿ, ಅದಾನಿ ಸಮೂಹದ ಕಾರ್ಯನಿರ್ವಾಹಕ ನಿರ್ದೇಶಕ ಹಾಗೂ ಅಧ್ಯಕ್ಷ ಕಿಶೋರ್ ಆಳ್ವ ಅವರಿಗೆ ಪ್ರತಿಷ್ಠಿತ 'ಮಹಾತ್ಮ ಗಾಂಧಿ ಸಬರಮತಿ ಸಂತ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಗಾಂಧಿ ಸ್ಮೃತಿ ಸಂಸ್ಥೆ ವತಿಯಿಂದ ಆಯೋಜಿಸಲಾಗಿದ್ದ 'ಮಹಾತ್ಮಾ ಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ 2026' ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಕಿಶೋರ್ ಆಳ್ವ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.



ಕಿಶೋರ್ ಆಳ್ವ ಅವರು ಸದ್ಯ ಅದಾನಿ ಸಮೂಹದ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಜವಾಬ್ದಾರಿ ನಿರ್ವಹಿಸುತ್ತಿರುವುದರ ಜೊತೆಗೆ, ಸನಾತನ ಫೌಂಡೇಶನ್‌ನ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್‌ನ ಅಧ್ಯಕ್ಷರಾಗಿ ಹಾಗೂ ಬೆಂಗಳೂರು ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ ಮಾಜಿ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆಯನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು.

ರಾಜ್ಯಪಾಲರ ಸಮ್ಮುಖದಲ್ಲಿ ನಡೆದ ಈ ಸಮಾರಂಭದಲ್ಲಿ ಕರ್ನಾಟಕ ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್, ಕರ್ನಾಟಕ ಸರ್ಕಾರದ ಮಾಜಿ ಸಚಿವರಾದ ಪ್ರಮೋದ್ ಮಧ್ವರಾಜ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಂಪತ್ ರಾಜ್ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

ಈ ಪ್ರಶಸ್ತಿ ಪ್ರದಾನ ಸಮಾರಂಭವು ಮಹಾತ್ಮ ಗಾಂಧೀಜಿಯವರ ಆದರ್ಶಗಳನ್ನು ಎತ್ತಿ ಹಿಡಿಯುವ ಉದ್ದೇಶ ಹೊಂದಿತ್ತು. ರಾಷ್ಟ್ರನಿರ್ಮಾಣ, ಸಾಮಾಜಿಕ ಸೌಹಾರ್ದತೆ, ಕೈಗಾರಿಕಾ ವಿಕಸನ ಮತ್ತು ಸಮಾಜದ ಸಬಲೀಕರಣಕ್ಕಾಗಿ ಶ್ರಮಿಸಿದ ಸಾಧಕರನ್ನು ಗೌರವಿಸುವ ಮೂಲಕ ಈ ಕಾರ್ಯಕ್ರಮವು ಅರ್ಥಪೂರ್ಣವಾಯಿತು.

ಮೇ 10: ಮೂಡಬಿದಿರೆಯಲ್ಲಿ ಡರ್ಟ್ ಫೆಸ್ಟ್-2026

ಮಂಗಳೂರು: ಟೀಮ್ ಡೈನಾಮಿಕ್ಸ್ ರೇಸಿಂಗ್ ವತಿಯಿಂದ ಡರ್ಟ್ ಫೆಸ್ಟ್ 2026 ಮೇ 10ರಂದು ಮೂಡುಬಿದರೆಯ ಸ್ವರಾಜ್ ಮೈದಾನದ ಫಾರ್ಚ್ಯೂನ್ ಮೈದಾನದಲ್ಲಿ ನಡೆಯಲಿದೆ. ಕಳೆದ ಮೂರು ವರ್ಷಗಳಿಂದ ಇಂತಹ ಸ್ಪರ್ಧೆಯನ್ನು ನಡೆಸಲಾಗುತ್ತಿದ್ದು, ಈ ಬಾರಿ 4ನೇ ವರ್ಷದ ಸ್ಪರ್ಧೆ ನಡೆಯಲಿದೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಕೇರಳ ಮತ್ತು ಗೋವಾದಿಂದ 60ರಿಂದ 100 ಕಾರುಗಳು ಸ್ಪರ್ಧೆಯಲ್ಲಿ ಭಾಗವಹಿಸಲಿದೆ. ವಿಜೇತರಿಗೆ ನಗದು ಹಾಗೂ ಟ್ರೋಫಿಗಳನ್ನು ನೀಡಲಾಗುತ್ತದೆ. ಪ್ರವೇಶ ಶುಲ್ಕ 2,500 ರೂ. ಇರಲಿದೆ ಎಂದು ಸಂಘಟಕ ಕೆಟಿಸಿ ನಜೀರ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕರಾವಳಿ ಭಾಗದಲ್ಲಿ ಇಂತಹ ಡರ್ಟ್ ಕಾರು ರೇಸಿಂಗ್‌ವನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಸ್ಪರ್ಧೆಯನ್ನು ಆಯೋಜನೆ ಮಾಡಲಾಗುತ್ತಿದ್ದು, ಇದರಲ್ಲಿ ಫುಡ್ ಸ್ಟಾಲ್‌ಗಳು, ಮನೋರಂಜನೆಯ ಕಾರ್ಯಕ್ರಮಗಳು ಸೇರಿದಂತೆ ಹಲವು ವಿಶೇಷತೆಗಳು ಇರಲಿದೆ ಎಂದರು. ಸಂಘಟಕ ಮಹಮ್ಮದ್ ತಲ್ಹಾ ಉಪಸ್ಥಿತರಿದ್ದರು.

ಮೇ 10-16: ಶ್ರೀಮದ್ ಭಾಗವತ ಸಪ್ತಾಹ ಪ್ರವಚನ

ಮಂಗಳೂರು: ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಅಸೋಸಿಯೇಷನ್ ಮತ್ತು ತುಳುನಾಡು ಎಜ್ಯುಕೇಶನಲ್ ಟ್ರಸ್ಟ್ ಆಶ್ರಯದಲ್ಲಿ ಮೇ 10ರಿಂದ 16ರ ವರೆಗೆ ಸಂಜೆ 5.30ರಿಂದ 7.30ರ ತನಕ ಕೊಡಿಯಾಲ್‌ಬೈಲ್‌ನ ಶಾರದಾ ವಿದ್ಯಾಲಯದ ಧ್ಯಾನಮಂದಿರದಲ್ಲಿ ಶ್ರೀಮದ್ ಭಾಗವತ ಸಪ್ತಾಹ ಪ್ರವಚನ ನಡೆಯಲಿದೆ. ಹುಬ್ಬಳ್ಳಿ ಡಾ. ಶ್ರೀಹರಿ ಆಚಾರ್ಯ ವಾಳ್ವೇಕರ್ ಅವರು ಪ್ರವಚನ ನಡೆಸಿಕೊಡ ಲಿದ್ದು, ಪ್ರತೀದಿನ ಸಂಜೆ 5 ಗಂಟೆಯಿಂದ ವಿವಿಧ ಮಾತೃಮಂಡಳಿಯವರಿಂದ ಶ್ರೀಭಗವನ್ನಾಮ ಸಂಕೀರ್ತನೆ ನಡೆಯಲಿದೆ. ಪ್ರತೀ ದಿನ ವಿವಿಧ ಮಠಾಧೀಶರು ಆಗಮಿಸಿ ಆಶೀರ್ವಚನ ನೀಡಲಿದ್ದಾರೆ.

ಆಯುರ್ವೇದ ಕುರಿತಾದ ಅಂತಾರಾಷ್ಟ್ರೀಯ ಸಮ್ಮೇಳನ

ಬ್ರೋಷರ್ ಬಿಡುಗಡೆಗೊಳಿಸಿದ ಡಾ. ಹೆಗ್ಗಡೆ

ಉಡುಪಿ: ಆಟೋಇಮ್ಯೂನ್ ಅಸ್ವಸ್ಥತೆಗಳಲ್ಲಿ ಟ್ರಾನ್ಸ್‌ಲೇಷನಲ್ ಆಯುರ್ವೇದದ ಕುರಿತಾದ 6ನೇ ಅಂತಾರಾಷ್ಟ್ರೀಯ ಸಮ್ಮೇಳನ 'ಕ್ಷಮತ್ವಂ 2026' ರ ಬ್ರೋಷರನ್ನು ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಬಿಡುಗಡೆ ಮಾಡಿದರು.

ಸಂಸ್ಥೆಯ ಪ್ರಾಚಾರ್ಯರಾದ ಡಾ. ಮಮತಾ ಕೆ.ವಿ., ಡಾ. ನಾಗರಾಜ್ ಎಸ್., ಉಪಪ್ರಾಚಾರ್ಯರು (ಅಕಾಡಮಿಕ್) ಮತ್ತು ಕ್ಷಮತ್ವಂ 2026 ರ ಆಯೋಜನಾ ಕಾರ್ಯದರ್ಶಿ ಡಾ. ಪ್ರಸನ್ನ ಮೊಗಸಾಲೆ ಅವರು ಧರ್ಮಸ್ಥಳಕ್ಕೆ ತೆರಳಿ ಧರ್ಮಾಧಿಕಾರಿಯವರನ್ನು ಭೇಟಿ ಮಾಡಿದರು. ಡಾ. ವೀರೇಂದ್ರ ಹೆಗ್ಗಡೆಯವರು ಸಮ್ಮೇಳನದ ಬ್ರೋಷರ್ ಬಿಡುಗಡೆ ಮಾಡಿ, ಸಮ್ಮೇಳನದ ಯಶಸ್ಸಿಗೆ ಹಾರೈಸಿದರು.



ಕ್ಷಮತ್ವಂ 2026 ಸಮ್ಮೇಳನವು ಸೆ. 29ರಿಂದ ಅ.1ರವರೆಗೆ ನಡೆಯಲಿದ್ದು, ದೇಶ-ವಿದೇಶಗಳ ಪ್ರಮುಖ ವೈದ್ಯರು, ಸಂಶೋಧಕರು ಮತ್ತು ಶಿಕ್ಷಣತಜ್ಞರನ್ನು ಒಂದೆಡೆ ಸೇರಿ ಆಯುರ್ವೇದದ ದೃಷ್ಟಿಕೋನದಿಂದ ಆಟೋಇಮ್ಯೂನ್ ಅಸ್ವಸ್ಥತೆಗಳ ಸಮಗ್ರ ಮತ್ತು ಸಾಕ್ಷ್ಯಾಧಾರಿತ ಚಿಕಿತ್ಸಾ ವಿಧಾನಗಳ ಬಗ್ಗೆ ಚರ್ಚಿಸಲಿದ್ದಾರೆ.

ಇಂದಿನಿಂದ ಕದ್ರಿ ಪಾರ್ಕ್‌ನಲ್ಲಿ ಗೇರು-ಮಾವು ಹಲಸು ಮೇಳ

ಮಂಗಳೂರು: ರೈತ ಕುಡ್ಲ ಪ್ರತಿಷ್ಠಾನ, ಸಿರಿ ತೋಟಗಾರಿಕೆ ಸಂಘ ಮಂಗಳೂರು ಮತ್ತು ಸಾವಯವ ಕೃಷಿಕ ಗ್ರಾಹಕ ಬಳಗ ಮಂಗಳೂರು ಸಹಯೋಗದೊಂದಿಗೆ ಗೇರು - ಮಾವು- ಹಲಸು ಮೇಳ ಮೇ 8, 9,10 ರಂದು ಕದ್ರಿ ಪಾರ್ಕ್‌ನಲ್ಲಿ ನಡೆಯಲಿದೆ.

ಬೆಳಗ್ಗೆ 9ರಿಂದ ರಾತ್ರಿ 8 ವರೆಗೆ ಸಾರ್ವಜನಿಕರಿಗೆ ಮುಕ್ತ ಪ್ರವೇಶ ಇರಲಿದೆ. ಸಕ್ಕರೆ, ನೀರು ಬೆರೆಸದ ತಾಜಾ ಗೇರು ಹಣ್ಣಿನ ಜ್ಯೂಸ್, ಗೇರು ಹಣ್ಣಿನ ಬೆಲ್ಲ, ಐಸ್ ಕ್ರೀಂ, ಉಪ್ಪಿನ ಕಾಯಿ, ಬರ್ಫಿ, ಕ್ಯಾಶ್ಯು ಆಪಲ್ ಮಫಿನ್ಸ್, ಸ್ವಾಶ್, ಹಲ್ವ, ಶೀರಾ, ಪಾಯಸ, ಗೇರು ಬೀಜದ ಮೊಳಕೆ, ಬಿಸ್ಕತ್ತು, ಸುಕಾಜು ಇನ್ನೂ ಹಲವಾರು ಗೇರು ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ನಗರದಲ್ಲೂ ಬೆಳೆಸಬಹುದಾದ ಗೇರು ಸಸಿಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ.

ಗೇರು ಹಣ್ಣಿನ ಜಾಗೃತಿ ಮೂಡಿಸಲು ಮಂಗಳೂರಿನಲ್ಲಿ ಪ್ರಥಮ ಬಾರಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಗೇರು ಹಣ್ಣಿನ ಮೌಲ್ಯವರ್ಧನೆ ಉತ್ತೇಜನ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

60ಕ್ಕೂ ಅಧಿಕ ಬಗೆಯ ತಳಿಗಳ ಮಾವು ಪ್ರದರ್ಶನ ಮತ್ತು ಮಾರಾಟ ಇರಲಿದೆ. ರಾಮನಗರ, ಅಂಕೋಲ, ಕೋಲಾರ ಮೊದಲಾದೆಡೆಯಿಂದ ರೈತರು ಭಾಗಿಯಾಗಿ ನೇರ ಮಾರಾಟ ಕೈಗೊಳ್ಳುವರು. ವಿವಿಧ ತಳಿಗಳ ಹಲಸಿನ ಮಾರಾಟ ಇರಲಿದೆ.

ಮೇ 8ರಂದು ಬೆಳಗ್ಗೆ 11 ಗಂಟೆಗೆ ಅಡಿಕೆ ಪತ್ರಿಕೆ ಸಂಪಾದಕ, ಗೇರು ಹಣ್ಣು ಮೌಲ್ಯವರ್ಧನೆಯ ರೂವಾರಿ ಶ್ರೀ ಪಡ್ರೆ ಕಾರ್ಯಕ್ರಮ ಉದ್ಘಾಟಿಸುವರು. ಸಿರಿ ತೋಟಗಾರಿಕೆ ಸಂಘದ ಉಪಾಧ್ಯಕ್ಷೆ ಡಾ.ಭಾರತಿ ನಿರ್ಮಲ್, ಸಾವಯವ ಕೃಷಿಕ ಗ್ರಾಹಕ ಬಳಗದ ಕಾರ್ಯದರ್ಶಿ ರತ್ನಾಕರ ಕುಳಾಯಿ, ಕದ್ರಿ ಉದ್ಯಾನವನ ಅಭಿವೃದ್ಧಿ ಸಮಿತಿ ಕಾರ್ಯಕಾರಿ ಸದಸ್ಯರಾದ ಜಗನ್ನಾಥ ಗಾಂಭೀರ್, ಜಿ.ಕೆ. ಭಟ್, ರಾಮ ಮೊಗರೋಡಿ, ರೈತ ಕುಡ್ಲ ಪ್ರತಿಷ್ಠಾನದ ಅಧ್ಯಕ್ಷ ಭರತ್ ರಾಜ್ ಸೊರಕೆ, ಕಾರ್ಯದರ್ಶಿ ಲತೀಶ್ ಭಾಗವಹಿಸುವರು.

ಕೇರಳ ವಿಧಾನಸಭಾ ಚುನಾವಣೆ

ಭದ್ರತೆ ಒದಗಿಸಿದ ಸಿಬ್ಬಂದಿಗಳಿಗೆ ಗೌರವ



ಕಾಸರಗೋಡು: 2026ರ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಇವಿಎಂ ಸ್ಟ್ರಾಂಗ್ ರೂಮ್‌ಗಳ ಭದ್ರತೆಗೆ ಜವಾಬ್ದಾರರಾಗಿದ್ದ ಸಶಸ್ತ್ರ ಮೀಸಲು ಪಡೆಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಮೆಚ್ಚುಗೆಯ ಪ್ರಮಾಣಪತ್ರವನ್ನು ನೀಡಿ ಸನ್ಮಾನಿಸಿದರು. ಜಿಲ್ಲಾಧಿಕಾರಿಗಳು ಕಾಸರಗೋಡು ಸರಕಾರಿ ಕಾಲೇಜಿಗೆ ಗುರುವಾರ ಭೇಟಿ ನೀಡಿ ಕೃತಜ್ಞತೆ ಸಲ್ಲಿಸಿದರು.

ಭದ್ರತಾ ಪಡೆಗಳ ನೇತೃತ್ವವನ್ನು ಸಹಾಯಕ ಕಮಾಂಡೆಂಟ್ ಮೋಹಿತ್ ಭಾರ್ಗವ್, ಸಬ್ ಇನ್‌ಸ್ಪೆಕ್ಟರ್‌ಗಳಾದ ಬಿಷಂದಾಸ್, ಸಂಜಯ್ ಕುಮಾರ್ ಮತ್ತು ಕಾನ್‌ಸ್ಟೇಬಲ್ ಬಿ.ಶಾನು ವಹಿಸಿದ್ದರು. ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಯವರು 86 ಮಂದಿ ಭದ್ರತಾ ಪಡೆ ಸಿಬ್ಬಂದಿಗಳಿಗೆ ಪ್ರಶಂಸಾ ಪತ್ರ ನೀಡಿ ಗೌರವಿಸಿದರು.

ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್, ಕಲೆಕ್ಟರೇಟ್ ಚುನಾವಣಾ ವಿಭಾಗದ ಜೂನಿಯರ್ ಸೂಪರಿಂಟೆಂಡೆಂಟ್ ಎ.ರಾಜೀವನ್ ಮತ್ತು ಇತರರು ಮಾತನಾಡಿದರು. ನಂತರ ಭದ್ರತಾ ಪಡೆಗಳ ಸಿಬ್ಬಂದಿಗಳು ಬಿಹಾರಕ್ಕೆ ಮರಳಿದರು. ಚುನಾವಣಾ ನೀತಿ ಸಂಹಿತೆಗೆ ಸಂಬಂಧಿಸಿದ ಕಾನೂನು ಜಾರಿ, ಮತಗಟ್ಟೆ ಹಾಗೂ ಮತ ಎಣಿಕೆ ಕೇಂದ್ರಗಳಲ್ಲಿ ಭದ್ರತಾ ವ್ಯವಸ್ಥೆಗಳು ಮತ್ತು ಚುನಾವಣಾ ಸಾಮಗ್ರಿಗಳ ವಿತರಣೆಯ ಸಮಯದಲ್ಲಿ ಭದ್ರತಾ ಬೆಂಗಾವಲು ಸೇರಿದಂತೆ ಚುನಾವಣಾ ಪ್ರಕ್ರಿಯೆಯ ಭಾಗವಾಗಿ ಭದ್ರತಾ ಪಡೆಗಳು ವಿವಿಧ ಸೇವೆಗಳನ್ನು ಸಮರ್ಥವಾಗಿ ನಿರ್ವಹಿಸಿದವು.

ಜಿಲ್ಲೆಯಲ್ಲಿ ದೊರೆತ ಅತ್ಯುತ್ತಮ ಸಹಕಾರಕ್ಕಾಗಿ ಕೇಂದ್ರ ಪಡೆಗಳ ಸಿಬ್ಬಂದಿಗಳು ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸರಿಗೆ ಧನ್ಯವಾದ ಸಮರ್ಪಿಸಿದರು.

ಮನೆಗೆ ನುಗ್ಗಿ ಲಕ್ಷಾಂತರ ರೂ. ಮೌಲ್ಯದ ನಗ-ನಗದು ಕಳವು

ಬಂಟ್ವಾಳ: ಮನೆಯೊಂದರ ಮುಂಬಾಗಿಲಿನ ಚಿಲಕ ಮುರಿದು ಒಳಪ್ರವೇಶಿಸಿರುವ ಕಳ್ಳರು ಕಪಾಟಿನಲ್ಲಿರಿಸಲಾಗಿದ್ದ ಲಕ್ಷಾಂತರ ರೂ. ಮೌಲ್ಯದ ನಗ - ನಗದನ್ನು ಕಳವುಗೈದ ಘಟನೆ ಬಂಟ್ವಾಳ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಗೋರೆಮಾರ್ ಎಂಬಲ್ಲಿ ನಡೆದಿದೆ.

ಇಲ್ಲಿನ ಪ್ರಕಾಶ್ ಎಂಬವರ ಮನೆಯಲ್ಲಿ ಈ ಕಳವು ಕೃತ್ಯ ನಡೆದಿದ್ದು, ನಗದು ಸೇರಿದಂತೆ ಸುಮಾರು 4,13,000 ಲ.ರೂ.ಮೌಲ್ಯದ ಚಿನ್ನಾಭರಣ ಕಳವಾಗಿದೆ ಎಂದು ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಮನೆ ಮಾಲಕ ಪ್ರಕಾಶ್ ಅವರು ಕೇರಳ ರಾಜ್ಯದಲ್ಲಿ ಬೇಕರಿಯೊಂದರಲ್ಲಿ ಕೆಲಸಮಾಡುತ್ತಿದ್ದು, ತಿಂಗಳಿಗೊಮ್ಮೆ ಮನೆಗೆ ಬರುತ್ತಿದ್ದರು. ಮನೆಯಲ್ಲಿ ಪತ್ನಿ, ಮಕ್ಕಳು ಹಾಗೂ ಅತ್ತೆ ಜೊತೆಗಿದ್ದರು. ಶಾಲೆಗೆ ರಜಾ ಆಗಿದ್ದರಿಂದ ಅತ್ತೆಯವರು ಬೆಂಗಳೂರಿಗೆ ದೊಡ್ಡ ಮಗನ ಮನೆಗೆ ಹೋಗಿದ್ದರೆ, ಪತ್ನಿ ಮಕ್ಕಳು ಶಿವಮೊಗ್ಗದಲ್ಲಿರುವ ತವರು ಮನೆಗೆ ಎ.23 ರಂದು ತೆರಳಿದ್ದರು.

ಮನೆಗೆ ಬೀಗ ಹಾಕಿ ತೆರಳಿದ್ದರಿಂದ ಇದನ್ನೇ ಸದುಯೋಗಪಡಿಸಿಕೊಂಡ ಕಳ್ಳರು ಈ ಕೃತ್ಯ ನಡೆಸಿ ಪರಾರಿಯಾಗಿದ್ದಾರೆ.

ಮೇ 6 ರಂದು ಪ್ರಕಾಶ್ ಅವರ ಮನೆಯ ಸುತ್ತಲಿರುವ ಹೂವಿನ ಗಿಡಗಳಿಗೆ ನೀರು ಹಾಕಲೆಂದು ಬಂದಿದ್ದ ಪಕ್ಕದಮನೆಯ ವ್ಯಕ್ತಿಯೋರ್ವರು ಬಂದಾಗ ಮುಂಬಾಗಿಲು ಸ್ವಲ್ಪ ತೆರೆದ ಸ್ಥಿತಿಯಲ್ಲಿದ್ದದನ್ನು ಗಮನಿಸಿ ಅನುಮಾನಗೊಂಡು ಮನೆಯವರಿಗೆ ಮಾಹಿತಿ ನೀಡಿದ್ದಾರೆ.

ತಕ್ಷಣ ಪ್ರಕಾಶ್ ಅವರು ಕೇರಳದಿಂದ ಮನೆಗೆ ಬಂದು ನೋಡಿದಾಗ ಎರಡು ಬೆಡ್ ರೂಂನಲ್ಲಿದ್ದ 3 ಕವಾಟು, ಹಾಲ್‌ನಲ್ಲಿದ್ದ 1ಹಾಗೂ ಸ್ಟೇರ್ ಕೇಸ್ ಬಳಿಯಿದ್ದ ಸ್ಟೀಲ್ ಕವಾಟಿನ ಬಾಗಿಲನ್ನು ಯಾವುದೋ ಆಯುಧದಿಂದ ಮೀಟಿ ಬಟ್ಟೆ ಬರೆಗಳನ್ನು ಚೆಲ್ಲಾ ಪಿಲ್ಲಿ ಮಾಡಿದ್ದಲ್ಲದೆ ಅದರಲ್ಲಿಟ್ಟಿದ್ದ ಚಿನ್ನಾಭರಣ ಹಾಗೂ ನಗದನ್ನು ಕಳವುಗೈದಿರುವುದು ಬೆಳಕಿಗೆ ಬಂದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಘಟನಾ ಸ್ಥಳಕ್ಕೆ ಬಂಟ್ವಾಳ ನಗರ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಲ್ಲದೆ ಶ್ವಾನದಳ, ಬೆರಳಚ್ಚು ತಜ್ಞರನ್ನು ಕರೆಸಿ ಹೆಚ್ಚಿನ ತನಿಖೆ ನಡೆಸಲಾಗಿದೆ. ಈ ಬಗ್ಗೆ ಬಂಟ್ವಾಳ ಪೊಲೀಸದ ಠಾಣೆಯಲ್ಲಿ ಕೇಸು ದಾಖಲಾಗಿದೆ.

ಬೀಗ ಜಡಿದ ಮನೆಯಿಂದ ಐದೂವರೆ ಪವನ್ ಚಿನ್ನಾಭರಣ, 40 ಸಾವಿರ ರೂ. ಕಳವು

ಕಾಞಂಗಾಡು: ಬೀಗ ಜಡಿದ ಮನೆಗೆ ನುಗ್ಗಿದ ಕಳ್ಳರು ಐದೂವರೆ ಪವನ್ ಚಿನ್ನಾಭರಣ ಹಾಗೂ 40 ಸಾವಿರ ರೂ. ಗಳನ್ನು ಕಳವುಗೈದ ಘಟನೆ ನಡೆದಿದೆ. ಈ ಬಗ್ಗೆ ನೀಲೇಶ್ವರ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಕರಿಂದಳ ಕಾಲಿಚ್ಚಾಮರ, ಇರಟ್ಟಿ ಮುಂಡಕ್ಕಲ್ ನಿವಾಸಿ ಜೋರ್ಜ್ ಸೆಬಾಸ್ಟಿಯನ್ ಎಂಬವರ ಮನೆಯಿಂದ ಈ ರೀತಿ ಕಳವುಗೈಯ್ಯಲಾಗಿದೆ.
ಸೋಮವಾರ ಮನೆಯವರು ಬಾಗಿಲು ಮುಚ್ಚಿ ಪುತ್ರಿಯ ಚಿಕಿತ್ಸೆಗಾಗಿ ಆಲುವಾದ ಆಸ್ಪತ್ರೆಗೆ ತೆರಳಿದ್ದರು. ಮಂಗಳವಾರ ಬೆಳಗೆ ಬಂದು ನೋಡಿದಾಗ ಮನೆಯ ಬಾಗಿಲು ತೆರೆದಿಟ್ಟಿರುವು ದನ್ನು ಕಂಡ ನೆರೆಮನೆಯವರು ನೀಡಿದ ಮಾಹಿತಿಯಂತೆ ನೀಲೇಶ್ವರ ಪೊಲೀಸರು ಸ್ಥಳಕ್ಕಾಗಮಿಸಿ ತನಿಖೆ ಆರಂಭಿಸಿದ್ದಾರೆ. ಬೆರಳಚ್ಚು ತಜ್ಞರಿಂದ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಲಾಯಿತು.

ವಯಾ ವಿಕಾಸ್ ಸಂಸ್ಥೆಯ 5ನೇ ವಾರ್ಷಿಕೋತ್ಸವ
ಹಿರಿಯ ನಾಗರಿಕರಿಗೆ ಸಾಮಾಜಿಕ ಭದ್ರತೆ

ಬೆಂಗಳೂರು: ಹಿರಿಯ ನಾಗರಿಕರ ಸಮಗ್ರ ಶ್ರೇಯೋಭಿವೃದ್ಧಿ, ಆರೋಗ್ಯ ರಕ್ಷಣೆ ಹಾಗೂ ನಾಗರಿಕ ಹಕ್ಕುಗಳ ಬಲವರ್ಧನೆಗಾಗಿ ಕಾರ್ಯ ನಿರ್ವಹಿಸುತ್ತಿರುವ ವಯಾ ವಿಕಾಸ್ ಸಂಸ್ಥೆಯ ಸದಸ್ಯತ್ವನ್ನು 20 ಲಕ್ಷಕ್ಕೆ ಹೆಚ್ಚಿಸುವ ಗುರಿ ಹೊಂದಿದೆ. ಹಿರಿಯ ನಾಗರಿಕರ ಆರೋಗ್ಯ, ಸಾಮಾಜಿಕ ಭದ್ರತೆ ಮತ್ತು ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದು ವಯಾ ವಿಕಾಸ್ ಸಂಸ್ಥೆ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್ ಹೇಳಿದರು.



ಗುರುವಾರ ವಯಾ ವಿಕಾಸ್ ಸಂಸ್ಥೆಯ 5ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತ ನಾಡಿದ ಅವರು, ಹಿರಿಯ ನಾಗರಿಕರ ಆರೋಗ್ಯ, ಸಾಮಾಜಿಕ ಭದ್ರತೆ ಮತ್ತು ಸಮಗ್ರ ಅಭಿ ವೃದ್ಧಿಗೆ ಸಂಬಂಧಿಸಿದ ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತರಲಾಗುವುದು. ವಯಾ ವಿಕಾಸ್ ಸಂಸ್ಥೆಯ ಸಂಘಟನೆಯನ್ನು ಜಾಗತಿಕ ಮಟ್ಟದಲ್ಲಿ ವಿಸ್ತರಿಸುವ ಗುರಿ ಹೊಂದಿದ್ದು, ದೇಶಾದ್ಯಂತ ಹಿರಿಯ ನಾಗರಿಕರ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ಈಗಾಗಲೇ 1.85ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದೆ ಎಂದು ತಿಳಿಸಿದರು.

ಎಲ್ಲ ವರ್ಗದ ಹಿರಿಯರಿಗೆ ಸಂಘಟನೆಯಲ್ಲಿ ಸೇರ್ಪಡೆಯಾಗಲು ಅವಕಾಶ ನೀಡಲಾಗಿದೆ. 1 ಲಕ್ಷ ಹಿರಿಯ ನಾಗರಿಕರಿಗೆ ಲಸಿಕೆ ಹಾಕಿಸುವ ಅಭಿಯಾನ ಅತ್ಯಂತ ಮಹತ್ವದ್ದು ಎಂದರು. ಹೃದ್ರೋಗ ತಜ್ಞರ ಡಾ. ದೇವಿ ಪ್ರಸಾದ್ ಶೆಟ್ಟಿ ಮಾತನಾಡಿ, ಆರೋಗ್ಯ ಸೇವೆಗಳು ಮತ್ತು ಸೂಕ್ತ ಆರೋಗ್ಯ ನೀತಿಗಳು ಅತ್ಯಂತ ಅಗತ್ಯವಾಗಿವೆ. ಹಿರಿಯರಿಗೆ ಅಗತ್ಯವಾದ ಆರೋಗ್ಯ ಮಾರ್ಗದರ್ಶನ ವಯಾ ವಿಕಾಸ್ ಮೂಲಕ ನೀಡಲಾಗುತ್ತದೆಂ ದರು. ವಯಾ ವಿಕಾಸ್ ಸಂಸ್ಥೆ ಡಾ. ಅಲೆಕ್ಸಾಂಡರ್ ಥಾಮಸ್, ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಮುನಾ ರವಿ, ಮುಖ್ಯ ಕಾರ್ಯಾಚರಣಾಧಿಕಾರಿ ಪವಿತ್ರಾ ರೆಡ್ಡಿ ಸೇರಿದಂತೆ ಇತರರಿದ್ದರು.

ಬಿಜೆಪಿ ಮುಖಂಡ ಎನ್.ಆರ್.ರಮೇಶ್ ಒತ್ತಾಯ
ನಿಯಮ ಬಾಹಿರ ಸ್ವತ್ತಿನ ಎ-ಖಾತಾ ರದ್ದಾಗಲಿ

ಬೆಂಗಳೂರು: ನಿಯಮಬಾಹಿರವಾಗಿ 10,94, 127 ಚ.ಅಡಿ ವಿಸ್ತೀರ್ಣದ ಸ್ವತ್ತಿಗೆ ಮಾಡಿರುವ ಎ-ಖಾತಾವನ್ನು ಕೂಡಲೇ ರದ್ದು ಪಡಿಸುವ ಸಂಬಂಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಬಿಜೆಪಿ ಮುಖಂಡ ರಮೇಶ್ ಎನ್.ಆರ್. ಒತ್ತಾಯಿಸಿದ್ದಾರೆ.



ಈ ಬಗ್ಗೆ ಆಯುಕ್ತರಿಗೆ ದೂರು ನೀಡಿದ ಅವರು, ಯಶವಂತಪುರ ವಿಧಾನಸಭಾ ಕ್ಷೇತ್ರದ ಹೆಮ್ಮಿಗೆಪುರ ವಾರ್ಡಿನ ಅಥವಾ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದಲ್ಲಿ 10 ಎಕರೆ ಸ್ವತ್ತಿಗೆ ಸತೀಶ್ ಸಿ. ಜಿ. ಎಂಬುವವರು ಕಾನೂನಿನ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಎ ಖಾತಾವನ್ನು ಮಾಡಿಕೊಟ್ಟಿದ್ದ ಮತ್ತು ಈ ಕಾರ್ಯಕ್ಕಾಗಿ 5 ಕೋಟಿ ರೂ. ಗಳಿಗೂ ಹೆಚ್ಚು ಮೊತ್ತದ ಹಣವನ್ನು ಲಂಚದ ರೂಪದಲ್ಲಿ ಪಡೆದಿದ್ದ ಮಹಾ ವಂಚನೆಯ ಹಗರಣದ ಬಗ್ಗೆ ಪರಮ ಭ್ರಷ್ಟ ಅಧಿಕಾರಿಗಳಾದ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಜಂಟಿ ಆಯುಕ್ತ ಆರತಿ ಆನಂದ್, ಉಪ ಆಯುಕ್ತ ಅಬ್ದುಲ್ ರಬ್, ಸಹಾಯಕ ಕಂದಾಯ ಅಧಿಕಾರಿ ರಮೇಶ್ ರಾಥೋಡ್ , ಕಂದಾಯ ಪರಿವೀಕ್ಷಕ ಶಿವಕುಮಾರ್ ಅವರುಗಳ ವಿರುದ್ಧ ದೂರುಗಳನ್ನು ನೀಡಲಾಗಿತ್ತು.ಈ ರೀತಿ ತಮ್ಮ ವಿರುದ್ಧ ದೂರುಗಳು ದಾಖಲಾಗುತ್ತಿದ್ದಂತೆ ಮತ್ತು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಆಯುಕ್ತರು ನೀಡಿದ್ದ ಎಚ್ಚರಿಕೆಯ ನಂತರ ಕಾನೂನು ಬಾಹಿರವಾಗಿ 4,21,577 ಚ. ಅಡಿ ಸ್ವತ್ತಿಗೆ ಮಾಡಲಾಗಿದ್ದ ಎ ಖಾತಾವನ್ನು ಜಂಟಿ ಆಯುಕ್ತರಾದ ಆರತಿ ಆನಂದ್ ಅವರು ರದ್ದು ಪಡಿಸಿದ್ದರು. ದೊಡ್ಡ ಮಟ್ಟದ ಭ್ರಷ್ಟಾಚಾರ ಪ್ರಕರಣಗಳಲ್ಲಿ ಭಾಗಿಯಾಗಿ ಈಗಾಗಲೇ ಹಲವಾರು ಕಾನೂನು ಬಾಹಿರ ಕಾರ್ಯ ಮಾಡುವ ಮೂಲಕ ಸರ್ಕಾರಕ್ಕೆ ಹತ್ತಾರು ಕೋಟಿ ರೂಪಾಯಿ ನಷ್ಟ ಉಂಟು ಮಾಡಿರುವ ಆರತಿ ಆನಂದ್ ಎಂಬ ಭ್ರಷ್ಟ ಅಧಿಕಾರಿ, ಈ ಮೊದಲು ಎ ಖಾತಾ ರದ್ದು ಪಡಿಸಿದ್ದ 4,21,577 ಚ. ಅಡಿ ವಿಸ್ತೀರ್ಣದ ಸ್ವತ್ತಿನೊಂದಿಗೆ, ಅದಕ್ಕೆ ಹೊಂದಿಕೊಂಡಿರುವ 6,72,550 ಚ. ಅಡಿ ವಿಸ್ತೀರ್ಣದ ಸ್ವತ್ತನ್ನೂ ಸೇರಿಸಿ ಒಟ್ಟು 10,94,127 ಚ. ಅಡಿ ವಿಸ್ತೀರ್ಣದ ಸ್ವತ್ತಿಗೆ ಕಾನೂನಿನ ಎಲ್ಲಾ ನಿಯಮ ಗಾಳಿಗೆ ತೂರಿ ಎ ಖಾತಾ ಮಾಡಿಕೊಟ್ಟಿರುವ ಆಘಾತಕಾರಿಯಾಗಿದೆ.

ಉದ್ಘಾಟನೆ



ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿವಿ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕೆಮಿಕಲ್ ಸೊಸೈಟಿ ಮತ್ತು ಸೆಂಟ್ರಲ್ ಕಾಲೇಜು ರಸಾಯನಶಾಸ್ತ್ರ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದೊಂದಿಗೆ ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಆವರಣದಲ್ಲಿ ಕೆಮೋತ್ಸವ-2026 ಕಾರ್ಯಕ್ರಮ ಉದ್ಘಾಟಿಸಲಾಯಿತು. ಕುಲಪತಿ ಪ್ರೊ. ರಮೇಶ್ ಬಿ. ಇತರರಿದ್ದರು.

ಕಿರುಸುದ್ದಿ

ಮೋಟಾರು ಕಾಯ್ದೆ ತಿದ್ದುಪಡಿಗೆ ಸಂಪುಟ ಸಭೆ ಅನುಮೋದನೆ

ಬೆಂಗಳೂರು: ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧಿನಿಯಮ, 2024ಕ್ಕೆ ತಿದ್ದುಪಡಿಗೆ ಸಂಪುಟ ಸಭೆ ಅನುಮೋದನೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಬಳಿಕ ಮಾಹಿತಿ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರು, ಈಗ ಇರುವ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಾರಿಗೆ ಸಂಬಂಧಿಸಿದ ಕಾರ್ಮಿಕರಿದ್ದು, ಕಾರ್ಮಿಕ ಇಲಾಖೆಯಿಂದ ಸಾರಿಗೆ ಇಲಾಖೆಯ ಅಧೀನಕ್ಕೆ ಪಡೆದು ಸಾರಿಗೆ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಾಡಲು ಪ್ರತ್ಯೇಕ ಮಂಡಳಿ ಸ್ಥಾಪಿಸಲಾಗುತ್ತದೆ ಎಂದು ಹೇಳಿದರು. ಸಂಪುಟ ಸಭೆಯ ಇತರೇ ಪ್ರಮುಖ ನಿರ್ಧಾರಗಳು ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ ಮತ್ತು ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಇಮ್ಮರ್ಸಿವ್ ವನ್ಯಜೀವಿ ಕೂತಡಿ ಮತ್ತು ಡಿಜಿಟಲ್ ಮೃಗಾಲಯ ಮಾರ್ಗದರ್ಶಿ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ. ಅಲ್ಲದೇ, ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ ಮಾದರಿಯಲ್ಲಿ (ಪಿಪಿಪಿ) ವರ್ಷಗಳ ಅವಧಿಗೆ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಸಾರ್ವಜನಿಕ ಮತ್ಸ್ಯಾಗಾರ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಎಸ್. ಕಡಾಂಬಿ ವಿದ್ಯಾ ಕೇಂದ್ರಕ್ಕೆ ಉತ್ತಮ ಫಲಿತಾಂಶ



ಬೆಂಗಳೂರು: ಪ್ರಸಕ್ತ ಸಾಲಿನ ಐಸಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಬಸವೇಶ್ವರ ನಗರದ ಎಸ್. ಕಡಾಂಬಿ ವಿದ್ಯಾ ಕೇಂದ್ರ ಇಂಗ್ಲಿಷ್ ಸೆಕೆಂಡರಿ ಸ್ಕೂಲ್ ಶೇ. 100 ಫಲಿತಾಂಶ ದಾಖಲಿಸಿದೆ. ಶಾಲೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಾದ ಯಶಸ್ ಬಿ. ಗೌಡ ಶೇ. 99.4, ಬೃಂದ ಡಿ. ಗೌಡಿಗೆರೆ ಶೇ. 98.2 ಮತ್ತು ಅದಿತಿ ಪಿ. ಕುಮಾರ್ ಶೇ. 97.4 ರಷ್ಟು ಫಲಿತಾಂಶ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಈ ಸಾಧನೆಗಾಗಿ ವಿದ್ಯಾರ್ಥಿಗಳಿಗೆ ಶಾಲಾ ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದೆ.

ಶಾಸಕ ಎಸ್‌ಟಿಎಸ್‌ಗೆ ಮಾತೃವಿಯೋಗ

ಕೆಂಗೇರಿ: ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಟಿ.ಸೋಮಶೇಖರ್ ತಾಯಿ ನಿಧನರಾಗಿದ್ದಾರೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಸೀತಮ್ಮ (98) ಗುರುವಾರ ಸಂಜೆ 6.30ರಲ್ಲಿ ಬಿಟಿಎಂ ಲೇಔಟ್‌ನ ಸ್ವಗೃಹದಲ್ಲಿ ನಿಧನ ಹೊಂದಿದ್ದಾರೆ. ಇವರ ನಿಧನಕ್ಕೆ ರಾಜಕೀಯ ಗಣ್ಯರು, ಯಶವಂತಪುರ ಕ್ಷೇತ್ರದ ಮತದಾರರು, ಕಾರ್ಯಕರ್ತರು ಹಲವಾರು ನಾಯಕರು ಸಂತಾಪ ಸೂಚಿಸಿದ್ದಾರೆ.



ವಿಶ್ವ ಬ್ಯಾಂಕ್ ಅನುದಾನದಲ್ಲಿ ಕಾಮಗಾರಿ | ಮಳೆಗಾಲಕ್ಕೂ ಮೊದಲೇ ಯೋಜನೆ ಪೂರ್ಣಗೊಳಿಸಿ
ಮಳೆ ನೀರುಗಾಲುವೆ ಸಮಗ್ರ ಅಭಿವೃದ್ಧಿ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ವಿಶ್ವ ಬ್ಯಾಂಕ್ ಅನುದಾನ ದಡಿ ಕೈಗೆತ್ತಿಕೊಂಡಿರುವ ಮಳೆ ನೀರುಗಾಲುವೆ ಕಾಮಗಾರಿಗಳನ್ನು ವೇಗವಾಗಿ ಪೂರ್ಣಗೊಳಿಸುವ ಕೆಲಸ ಮಾಡಲಾಗುತ್ತಿದೆ ಎಂದು ಯೋಜನಾ ಅನುಷ್ಠಾನ ಘಟಕದ ಮುಖ್ಯ ಅಭಿಯಂತರ ಎಸ್.ವಿ. ರಾಜೇಶ್‌ತಿಳಿಸಿದರು.

ನಗರದಲ್ಲಿರುವ ಮಳೆ ನೀರುಗಾಲುವೆಗಳ ಸಮಗ್ರ ಅಭಿವೃದ್ಧಿ, ಪುನರ್ ನಿರ್ಮಾಣ ಹಾಗೂ ಅವುಗಳ ಬಲಪಡಿಸುಕೆ ಕಾರ್ಯವನ್ನು ವಿಶ್ವ ಬ್ಯಾಂಕ್ ಅನುದಾನದಡಿ ಕೈಗೆತ್ತಿಕೊಳ್ಳಲಾಗಿದ್ದು, ಈ ಸಂಬಂಧ ವಿಶ್ವ ಬ್ಯಾಂಕ್ ಪ್ರತಿನಿಧಿಗಳು ಹಾಗೂ ಯೋಜನಾ ಅನುಷ್ಠಾನ ಘಟಕದ ಅಧಿಕಾರಿಗಳು ಗುರುವಾರ ಪ್ರಗತಿಯಲ್ಲಿರುವ ಕೆಲ ಕಾಮಗಾರಿಗಳ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿಶ್ವ ಬ್ಯಾಂಕ್‌ನ 2000 ಕೋಟಿ ರೂ.ಅನುದಾನದಲ್ಲಿ 173 ಕಿ.ಮೀ ಉದ್ದದ ಕಚ್ಚಾ ಮಳೆ ನೀರುಗಾಲುವೆಯನ್ನು ಆರ್.ಸಿ.ಸಿ ತಡೆಗೋಡೆ ಸಹಿತ ಪಕ್ಕಾ ಡ್ರೈನ್ ಹಾಗೂ 80 ಕಿ.ಮೀ ಉದ್ದದ ಮಳೆ ನೀರುಗಾಲುವೆಯ ನವೀಕರಣ ಕಾರ್ಯ ಪ್ರಗತಿಯಲ್ಲಿದೆ.

ಅದರಂತೆ, ಈಗಾಗಲೇ ಬಹುತೇಕ ಕಡೆ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಕೆಲಸ ಆರಂಭವಾಗಿರುವ ಕಾಮಗಾರಿಗಳಿಗೆ ಮತ್ತಷ್ಟು ವೇಗ ನೀಡಿ ಮಳೆಗಾಲಕ್ಕೂ ಮುಂಚಿತವಾಗಿ ಪೂರ್ಣ ಗೊಳಿಸಲು ಯೋಜನೆ ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರಗತಿಯಲ್ಲಿರುವ ಮಳೆ ನೀರು ಗಾಲುವೆ ಕಾಮಗಾರಿಗಳ ಬಳಿ ಸುರಕ್ಷಾ ಕ್ರಮಗಳನ್ನು ಕೈಗೊಂಡು ಕೆಲಸ ಮಾಡಬೇಕು. ಜೊತೆಗೆ ಕಾಲಮಿತಿಯೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ವಿಶ್ವ ಬ್ಯಾಂಕ್ ಪ್ರತಿನಿಧಿಗಳು ಮನವಿ ಮಾಡಿದರು.



ಭೂಸ್ವಾಧೀನ ವಿಲೇವಾರಿ : ಲೋಖಂಡೆ ಸ್ನೇಹಲ್ ಸುಧಾಕರ್

ಭೂಸ್ವಾಧೀನ ಮತ್ತು ಟಿ.ಡಿ.ಆರ್ ವಿಭಾಗಗಳಲ್ಲಿ ಬಾಕಿ ಇರುವ ಎಲ್ಲಾ ಕಡತಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಬೇಕು. ಟಿಡಿಆರ್ ಪಡೆದಿರುವ ಆರ್.ಡಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಇ-ಆಸ್ತಿ ತಂತ್ರಾಂಶದಲ್ಲಿ ಖಾತೆ ವಿಭಜನೆ ಪ್ರಕ್ರಿಯೆಯನ್ನು ವೇಗಗೊಳಿಸಲು ಅಗತ್ಯ ಕ್ರಮ ಕೈಗೊಳಿಸಬೇಕು. ಇ-ಟಿ.ಡಿ.ಆರ್ ಪೋರ್ಟಲ್ ಅಭಿವೃದ್ಧಿ ಕಾರ್ಯವನ್ನು ತಾಂತ್ರಿಕ ತಂಡವು ಶೀಘ್ರದಲ್ಲೇ ಪೂರ್ಣಗೊಳಿಸುವಂತೆ ಹಾಗೂ ಟಿ.ಡಿ.ಆರ್ ಸಂಬಂಧಿತ ಎಲ್ಲಾ ಕಡತಗಳನ್ನು ಇ-ಟಿ.ಡಿ.ಆರ್ ಪೋರ್ಟಲ್ ಮೂಲಕ ನಿರ್ವಹಿಸುವಂತೆ ಸೂಚನೆ ನೀಡಲಾಯಿತು.

ಅಂಜನಾಪುರದ ಬಳಿಯ ಕಾಲುವೆಗೆ ತಡೆಗೋಡೆ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, 250 ಮೀ. ಉದ್ದದ ಕಾಲುವೆ ಕಾಮಗಾರಿಯ ಪೈಕಿ 180 ಮೀ. ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ 15 ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಗಾಂಧಿ ನಗರದ ರ್ಝಿಯಾನ್ ಚರ್ಚ್ ಬಳಿ 188 ಮೀ. ಉದ್ದದ ಬಾಕ್ಸ್ ಡ್ರೈನ್ ಕಾಮಗಾರಿ ಪ್ರಗತಿಯಲ್ಲಿದ್ದು, 33 ಮೀ. ಕಾಮಗಾರಿ ಪೂರ್ಣ ಗೊಂಡಿದ್ದು, ಬಾಕಿ ಕೆಲವನ್ನು ತ್ವರಿತವಾಗಿ ಪೂರ್ಣಗೊಳಿಸ ಲಾಗುವುದು. ಮಡಿವಾಳ ಕೆರೆಗೆ ಸ್ಲೂಯಿಸ್ ಗೇಟ್ ಅಳವಡಿಸಿರು ವುದನ್ನು ಪರಿಶೀಲಿಸಲಾಯಿತು.

ಪರಿಶೀಲನೆಯ ವೇಳೆ ವಿಶ್ವ ಬ್ಯಾಂಕ್‌ನ ಪ್ರತಿನಿಧಿಗಳಾದ ಕ್ರಿಸ್ ವಿಲ್ಸನ್, ಡೇವಿಡ್ ಲಾರ್ಡ್ ಉಪಸ್ಥಿತರಿದ್ದರು.

ಸಿಲ್ಕ್ ಬೋರ್ಡ್ ಜಂಕ್ಷನ್

ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಆಗುತ್ತಿದ್ದ ಜಲಾವೃತವನ್ನು ತಪ್ಪಿಸುವ ಸಲುವಾಗಿ ಸ್ಟೀಲ್ ಗರ್ಡಲ್ ಅಳವಡಿಸುವ ಮುಖಾಂತರ, 1.5 ಮೀ. ಸಾಮರ್ಥ್ಯದ ರಾಜಕಾಲುವೆಯನ್ನು 3.5 ಮೀ. ರಾಜಕಾಲುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಈ ಸಂಬಂಧ ಮೊದಲ ಹಂತದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದ್ದು, ಶೀಘ್ರವೇ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು. ಅನಂತರ ಮತ್ತೆರಡು ಭಾಗದ ಕಲ್ವರ್ಟ್ ಅನ್ನು ಎರಡನೇ ಹಂತದಲ್ಲಿ ಕೈಗೆತ್ತಿಕೊಂಡು ಮಳೆಗಾಲ ಪ್ರಾರಂಭ ಆಗುವುದಕ್ಕೂ ಮುಂಚಿತವಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ.

ರಾಜಕಾಲುವೆಗಳ ಪರಿಶೀಲನೆ | ಬೆಂಗಳೂರು ದಕ್ಷಿಣ ವಲಯ ಆಯುಕ್ತ ರಮೇಶ್ ಸೂಚನೆ
ಚರಂಡಿಯಲ್ಲಿ ನಿಂತ ಹೂಳು ತೆರವಾಗಲಿ

ಬೆಂಗಳೂರು: ಚರಂಡಿಯಲ್ಲಿ ಮಳೆ ನೀರು ಕಾಲುವೆಯಲ್ಲಿ ಸಂಗ್ರಹವಾದ ಹೂಳನ್ನು ತೆರವುಗೊಳಿಸುವುದರೊಂದಿಗೆ ವಿಳಂಬವಿಲ್ಲದೆ ತಕ್ಷಣವೇ ಸ್ಥಳಾಂತರಿಸಬೇಕು ಎಂದು ಬೆಂಗಳೂರು ದಕ್ಷಿಣ ವಲಯದ ಆಯುಕ್ತ ಕೆ.ಎನ್.ರಮೇಶ್ ಸೂಚನೆ ನೀಡಿದರು.

ಬೆಂಗಳೂರು ದಕ್ಷಿಣ ವಲಯದ ಆಯುಕ್ತ ಕೆ.ಎನ್.ರಮೇಶ್ ಅವರು ಮುಂಗಾರು ಮಳೆಯಿಂದ ಪಾಲಿಕೆ ವ್ಯಾಪ್ತಿಯಲ್ಲಿ ಸಂಭವಿಸಬಹುದಾದ ವಿಪತ್ತನ್ನು ತಡೆಯುವ ನಿಟ್ಟಿನಲ್ಲಿ ಗುರುವಾರ ಸಾರಕ್ಕಿ ಜೆ.ಪಿ.ನಗರದ ಸಿಂಧೂರ ಕಲ್ಯಾಣ ಮಂಟಪದ ಸಮೀಪದಲ್ಲಿ ಹೊರವರ್ತುಲ ರಸ್ತೆಯ ರಾಜಕಾಲುವೆ ಪ್ರದೇಶದಲ್ಲಿ ನಡೆಯುತ್ತಿರುವ ಹೂಳೆತ್ತುವ ಕಾಮಗಾರಿಗಳನ್ನು ಪರಿಶೀಲಿಸಿದರು.



ರಸ್ತೆ ಬದಿಯ ಚರಂಡಿಗಳ ಮೇಲಿರುವ ಸ್ಲ್ಯಾಬ್‌ಗಳನ್ನು ತೆಗೆದು, ಒಳಗೆ ಶೇಖರವಾಗಿರುವ ಕಸ ಮತ್ತು ಕಳೆ ಗಿಡಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಬೇಕು. ರಾಜಕಾಲುವೆಗಳ ಸೇತುವೆ ಜಂಕ್ಷನ್‌ಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವು ನೀರಿನ ಹರಿವಿಗೆ ಅಡ್ಡಿಪಡಿಸದಂತೆ ಎಚ್ಚರಿಕೆ ವಹಿಸಬೇಕು. ಇಂತಹ ಸೂಕ್ಷ್ಮ ಪ್ರದೇಶಗಳಲ್ಲಿ ನಿರಂತರವಾಗಿ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದುಹಾಕುವ ಮೂಲಕ ಸರಾಗ ನೀರು ಹರಿವಿಗೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಅಭಿವೃದ್ಧಿ ವಿಭಾಗದ ಆಯುಕ್ತ ಡಾ.ನವೀನ್ ಕುಮಾರ್ ರಾಜುರವರ ನೇತೃತ್ವದಲ್ಲಿ ವಿಪತ್ತು ನಿರ್ವಹಣಾ ತಂಡವು ಬೊಮ್ಮನಹಳ್ಳಿ ವಲಯದ ವಿವಿಧೆಡೆ ವ್ಯಾಪಕ ತಪಾಸಣೆ ನಡೆಸಿತು. ಎಚ್.ಎಸ್.ಆರ್ ಲೇಔಟ್ 1ನೇ ಮುಖ್ಯರಸ್ತೆ, 14ನೇ ಅಡ್ಡರಸ್ತೆ, ಮಡಿವಾಳ ಕೆರೆ, ಮತ್ತು ಅನುಗ್ರಹ ಲೇಔಟ್‌ನಂತಹ ಪ್ರಮುಖ ಪ್ರದೇಶಗಳಿಗೆ ತಂಡವು ಭೇಟಿ ನೀಡಿ ಮಳೆಯಿಂದ ವಿಪತ್ತು ಉಂಟಾಗಬಹುದಾದ ಪ್ರದೇಶಗಳ ಸಮಗ್ರ ಪರಿಶೀಲನೆ ನಡೆಸಿತು.

ವಿಪತ್ತು ನಿರ್ವಹಣಾ ತಂಡವು ಈ ಭಾಗದ ರಾಜಕಾಲುವೆಗಳಲ್ಲಿನ ಹೂಳೆತ್ತುವ ಪ್ರಗತಿ, ನೀರಿನ ಹರಿವಿನ ಸ್ಥಿತಿಗತಿ ಮತ್ತು ಕಾಲುವೆ ಒತ್ತುವರಿ ತೆರವು ಕುರಿತು ಸಮಗ್ರವಾಗಿ ಪರಾಮರ್ಶಿಸಿ, ಮುಂಬರುವ ಮಳೆಗಾಲದಲ್ಲಿ ಎದುರಾಗಬಹುದಾದ ಪ್ರವಾಹ ಪರಿಸ್ಥಿತಿಯನ್ನು ಎದುರಿಸಲು ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಹೆಚ್ಚುವರಿ ಆಯುಕ್ತ ನವೀನ್ ಕುಮಾರ್ ರಾಜು ನಿರ್ದೇಶಿಸಿದರು.

ನೀರು ಸರಾಗ ಹರಿಯಲು ವೈಜ್ಞಾನಿಕ ಯೋಜನೆ

ಬೆಂಗಳೂರು: ವೃಷಭಾವತಿ ವ್ಯಾಲಿಯಲ್ಲಿ ಸರಾಗವಾಗಿ ನೀರು ಹರಿದುಹೋಗಲು ವೈಜ್ಞಾನಿಕ ಯೋಜನೆ ರೂಪಿಸಬೇಕೆಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ.ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವಿಜಯ ನಗರ ವ್ಯಾಪ್ತಿಯಲ್ಲಿ ಗುರುವಾರ ವಿವಿಧ ಸ್ಥಳ ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ವೇಳೆ ಮಾತನಾ ಡಿದ ಅವರು, ಗಾಳಿ ಆಂಜನೇಯ ದೇವಸ್ಥಾನದ ಬಳಿ ವೃಷಭಾವತಿ ವ್ಯಾಲಿಯನ್ನು ಪರಿಶೀಲಿಸಿ ಹೂಳು, ತ್ಯಾಜ್ಯವನ್ನು ತಕ್ಷಣ ಸ್ವಚ್ಛಗೊಳಿಸಿ ಮಳೆ ನೀರು ಸರಾಗವಾಗಿ ಹರಿದುಹೋಗಲು ಅನುಕೂಲ ವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.



ವಿಜಯನಗರ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಆಯುಕ್ತರ ಭೇಟಿ

ಮಳೆಗಾಲದ ವೇಳೆ ಗಾಳಿ ಆಂಜನೇಯ ದೇವ ಸ್ಥಾನದ ಬಳಿ ವೃಷಭಾವತಿ ವ್ಯಾಲಿಯಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಾಗಿ ಜಲಾವೃತ ಆಗುವುದನ್ನು ತಪ್ಪಿಸುವ ಸಲುವಾಗಿ, ವ್ಯಾಲಿಯನ್ನು ನಿರಂತರವಾಗಿ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ಜೊತೆಗೆ ವ್ಯಾಲಿಗೆ ತ್ಯಾಜ್ಯ ಹಾಕದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಿದರು.

ಕವಿಕಾ ಫ್ಯಾಕ್ಟರಿ ಹಿಂಭಾಗ ವೃಷಭಾವತಿ ವ್ಯಾಲಿಯಲ್ಲಿ ಹೂಳೆತ್ತುವ ಕಾರ್ಯವನ್ನು ಪರಿವೀಕ್ಷಿಸಿ, ಮುಂಗಾರು ಸನ್ನಿಹಿತವಾಗುತ್ತಿರುವ ಹಿನ್ನೆಲೆಯಲ್ಲಿ ತ್ವರಿತವಾಗಿ ಕೆಲಸ ಪೂರ್ಣಗೊಳಿಸಲು ಸೂಚನೆ ನೀಡಿದರು. ಮಳೆಗಾಲದ ವೇಳೆ ಗಾಳಿ ಆಂಜನೇಯ ದೇವಸ್ಥಾನ, ಕವಿಕಾ ಹಾಗೂ ನಾಯಂಡ ಹಳ್ಳಿ ಜಂಕ್ಷನ್ ಭಾಗದಲ್ಲಿ ಜಲಾವೃತ ಆಗುವುದನ್ನು ತಪ್ಪಿಸುವ ಸಲುವಾಗಿ ಹೆಚ್ಚುವರಿ ಯಂತ್ರೋಪಕರಣಗಳನ್ನು ಬಳಸಿಕೊಂಡು ನಿರಂತರವಾಗಿ ಸ್ವಚ್ಛತಾ ಕಾರ್ಯ ನಡೆಸಬೇಕು. ಅಗತ್ಯವಿದ್ದಲ್ಲಿ ಸ್ವಚ್ಛತೆಗಾಗಿ ಹೆಚ್ಚುವರಿ ತಂಡಗಳನ್ನು ನಿಯೋಜಿಸಿಕೊಳ್ಳಲು ಸೂಚನೆ ನೀಡಿದರು.

ಮುಂಗಾರು ಮಳೆಗೂ ಮುನ್ನ ಜಾಗ್ರತೆ

ಬೆಂಗಳೂರು: ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆಯ ಮುನ್ನ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೋಮ್ಮಲ ಸುನೀಲ್ ಕುಮಾರ್ ಸೂಚನೆ ನೀಡಿದ್ದಾರೆ.

ಈ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿ ಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಭಾರತೀಯ ರೈಲ್ವೆ ಇಲಾಖೆ, ಕೆ-ರೈಡ್, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬಿಎಂಆರ್‌ಸಿಎಲ್, ಬೆಸ್ಕಾಂ ಹಾಗೂ ಬಿ-ಸ್ಮೈಲ್ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳಿಗೆ ಪ್ರತ್ಯೇಕ ಪತ್ರಗಳ ಮುಖೇನ ಕೋರಲಾಗಿರುತ್ತದೆ.

ಮಳೆಗಾಲದ ವೇಳೆ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ರಸ್ತೆ, ಚರಂಡಿ, ಪಾದಚಾರಿ ಮಾರ್ಗ, ಮೇಲ್ಸೇತುವೆ ಹಾಗೂ ಒಳಚರಂಡಿ ವ್ಯವಸ್ಥೆಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಹಾಗೂ ಮಳೆ ನೀರು ಸರಾಗವಾಗಿ ಹರಿದು ಹೋಗುವ ನಿಟ್ಟಿನಲ್ಲಿ ಚರಂಡಿಗಳಲ್ಲಿನ ಹೂಳು ತೆರವು, ರಸ್ತೆ ಗುಂಡಿ ಮುಚ್ಚುವಿಕೆ, ರಸ್ತೆ ಬದಿಯ ಅವಶೇಷ ತೆರವು ಹಾಗೂ ನೀರು ನಿಲುವು ಸಮಸ್ಯೆ ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಲಾಗಿದೆ. ಮೆಟ್ರೊ, ರೈಲ್ವೆ ಹಾಗೂ ರಸ್ತೆ ಕಾಮಗಾರಿಗಳ ಸ್ಥಳಗಳಲ್ಲಿ ಕಾಮಗಾರಿ ಅವಶೇಷ ಗಳನ್ನು ತಕ್ಷಣ ತೆರವುಗೊಳಿಸಿ, ಮಳೆ ನೀರಿನ ಹರಿವಿಗೆ ಯಾವುದೇ ಅಡಚಣೆ ಉಂಟಾಗದಂತೆ ನೋಡಿಕೊಳ್ಳುವಂತೆ ತಿಳಿಸಲಾಗಿದ್ದು, ಜೊತೆಗೆ, ಕಾಮಗಾರಿಯಿಂದ ಹಾಳಾಗಿರುವ ರಸ್ತೆ, ಚರಂಡಿ ಹಾಗೂ ಪಾದಚಾರಿ ಮಾರ್ಗಗಳನ್ನು ತುರ್ತಾಗಿ ದುರಸ್ತಿ ಮಾಡುವಂತೆ ಮನವಿ ಮಾಡಿದ್ದಾರೆ. ಬೆಸ್ಕಾಂ ಇಲಾಖೆಗೆ ಅಪಾಯದ ಸ್ಥಿತಿಯಲ್ಲಿರುವ ವಿದ್ಯುತ್ ಕಂಬಗಳನ್ನು ಬದಲಾ ಯಿಸುವುದು, ಪ್ಯಾನಲ್ ಬೋರ್ಡ್‌ಗಳನ್ನು ಸುರಕ್ಷಿತವಾಗಿ ನಿರ್ವಹಿಸುವುದು, ಏಖ ಕೇಬಲ್ಗಳನ್ನು ಭೂಗತಗೊಳಿಸುವುದು ಹಾಗೂ ರಸ್ತೆ ಅಗೆತ ನಡೆದ ಪ್ರದೇಶ ಗಳಲ್ಲಿ ಮರುಡಾಂಬರೀಕರಣ ಕೈಗೊಳ್ಳುವಂತೆ ತಿಳಿಸಲಾಗಿದೆ.

ಇದಲ್ಲದೆ, ಎಲ್ಲಾ ಇಲಾಖೆಗಳ ಆಸ್ತಿಗಳ ರಕ್ಷಣೆಗೆ ನಿರ್ಮಿಸಲಾದ ಕಾಂಪೌಂಡ್ ಗೋಡೆಗಳು ಹಾಗೂ ಕಟ್ಟಡಗಳ ಸುರಕ್ಷತೆ ಪರಿಶೀಲಿಸಿ, ಅಪಾಯದ ಸ್ಥಿತಿಯಲ್ಲಿರುವ ಕಟ್ಟಡಗಳು ಮತ್ತು ಗೋಡೆಗಳನ್ನು ತಕ್ಷಣ ತೆರವುಗೊಳಿಸಿ ಸಂಭವನೀಯ ಅನಾಹುತಗಳನ್ನು ತಪ್ಪಿಸಲು ಕೋರಲಾಗಿದೆ. ಮುಂಗಾರು ಮಳೆಯಿಂದ ಸಾರ್ವಜನಿಕರಿಗೆ ಹಾಗೂ ಸರ್ಕಾರಿ ಆಸ್ತಿಗಳಿಗೆ ಯಾವುದೇ ಹಾನಿಯಾಗದಂತೆ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಆಯುಕ್ತರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

16 ವಿವಿಧ ಸ್ಥಳದಲ್ಲಿ ಇಡಿ ಅಧಿಕಾರಿಗಳ ಕಾರ್ಯಾಚರಣೆ
ರಮ್ಮಿ ಕಲ್ಚರ್ ಆ್ಯಪ್ ಮೂಲಕ ವಂಚನೆ

ಬೆಂಗಳೂರು: ರಮ್ಮಿ ಕಲ್ಚರ್ ಆ್ಯಪ್ ಮೂಲಕ ಜನರಿಗೆ ವಂಚನೆ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯದ (ಇಡಿ) ಬೆಂಗ ಳೂರು ಘಟಕದ ಅಧಿಕಾರಿಗಳು 16 ವಿವಿಧ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ.



ಗುರುವಾರ ಅಧಿಕಾರಿಗಳು ಪ್ರಮುಖ ಆನ್‌ಲೈನ್ ಗೇಮಿಂಗ್ ಸಂಸ್ಥೆಯಾದ ಗೇಮ್ಸ್ ಕ್ರಾಫ್ಟ್ ಕಂಪನಿಯನ್ನು ಗುರಿಯಾಗಿಸಿ ಕೊಂಡು ಈ ದಾಳಿ ನಡೆಸಿದ್ದಾರೆ. ಹೊಸದಿಲ್ಲಿ ಹಾಗೂ ಬೆಂಗಳೂರಿನ ಒಟ್ಟು 16 ವಿವಿಧ ಸ್ಥಳಗಳಲ್ಲಿ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ರಮ್ಮಿ ಕಲ್ಚರ್ ಆ್ಯಪ್ ಮೂಲಕ ಹಣದ ವಂಚನೆಗೆ ಸಂಬಂಧಿಸಿದಂತೆ ದೆಹಲಿಯಲ್ಲಿ ದಾಖಲಾಗಿದ್ದ ಎಫ್‌ಐಆರ್‌ಯನ್ನು ಆಧರಿಸಿ ಈ ತನಿಖೆ ಕೈಗೊಳ್ಳಲಾಗಿದ್ದು, ವಂಚನೆಯಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ಮಾಡಿ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಪಾಸ್ತಿಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಆನ್‌ಲೈನ್ ಬೆಟ್ಟಿಂಗ್ ಮತ್ತು ಮನಿ ಗೇಮಿಂಗ್ ವಿಚಾರದಲ್ಲಿ ಕೇಂದ್ರ ಸರ್ಕಾರವು ಈಗಾಗಲೇ ಕಠಿಣ ಕಾನೂನನ್ನು ಜಾರಿಗೆ ತಂದಿದ್ದು, ಇಂತಹ ಚಟು ವಟಿಕೆಗಳನ್ನು ಗಂಭೀರ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲಾಗಿದೆ. ಹೊಸ ಕಾನೂನಿನ ಅಡಿಯಲ್ಲಿ ಅಕ್ರಮ ವಾಗಿ ಆನ್‌ಲೈನ್ ಮನಿ ಗೇಮಗಳನ್ನು ಆಯೋಜಿಸು ವವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ಒಂದು ಕೋಟಿ ರೂ.ಗಳವರೆಗೆ ದಂಡ ವಿಧಿಸಲು ಅವಕಾಶವಿದೆ. ಇದರ ಜತೆಗೆ, ಇಂತಹ ಅಕ್ರಮ ಆಟಗಳ ಪ್ರಚಾರ ಅಥವಾ ಜಾಹೀರಾತು ನೀಡುವುದು ಕೂಡ ಅಪರಾಧವಾಗಿದ್ದು, ಅಂತಹವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ಮತ್ತು 50 ಲಕ್ಷ ರೂ. ಗಳವರೆಗೆ ದಂಡ ವಿಧಿಸಬಹುದಾಗಿದೆ.

ಹರೀಶ್ ಬಂಧನ ವಾರೆಂಟ್‌ಗೆ ತಡೆ

ಬೆಂಗಳೂರು: ಶಾಸಕ ಬಿ.ಪಿ.ಹರೀಶ್ ಅವರ ವಿರುದ್ಧ ಹೊರಡಿಸಲಾಗಿದ್ದ ಬಂಧನ ವಾರಂಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಗುರುವಾರ ರದ್ದುಪಡಿಸಿ ಆದೇಶಿಸಿದೆ.

ಜಾತಿ ನಿಂದನೆ ಆರೋಪ ಎದುರಿಸುತ್ತಿರುವ ಶಾಸಕರು ನ್ಯಾಯಾಲಯದ ವಿಚಾರಣೆಗೆ ಸತತವಾಗಿ ಗೈರುಹಾಜರಾಗಿದ್ದ ಹಿನ್ನೆಲೆಯಲ್ಲಿ ಈ ಹಿಂದೆ ಅವರ ವಿರುದ್ಧ ಬಂಧನ ವಾರಂಟ್ ಜಾರಿ ಮಾಡಲಾಗಿತ್ತು. ಪೊಲೀಸರು ತಮ್ಮನ್ನು ಬಂಧಿಸುವ ಮುನ್ನವೇ ಎಚ್ಚೆತ್ತುಕೊಂಡ ಶಾಸಕ ಹರೀಶ್ ಅವರು ಗುರುವಾರ ತಮ್ಮ ಪರ ವಕೀಲರೊಂದಿಗೆ ನ್ಯಾಯಾಧೀಶರ ಮುಂದೆ ಖುದ್ದಾಗಿ ಹಾಜರಾದರು. ಈ ವೇಳೆ ಅವರ ಪರ ವಕೀಲರು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಕಲಂ 70(2)ರ ಅಡಿಯಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿ, ವಾರಂಟ್ ಹಿಂಪಡೆಯುವಂತೆ ಪೀಠಕ್ಕೆ ಮನವಿ ಮಾಡಿದರು. ವಕೀಲರ ವಾದವನ್ನು ಆಲಿಸಿದ ನ್ಯಾಯಾಲಯವು ಅರ್ಜಿಯಲ್ಲಿದ್ದ ಕಾರಣಗಳನ್ನು ಪುರಸ್ಕರಿಸಿ ವಾರಂಟ್ ರದ್ದುಗೊಳಿಸಲು ಸಮ್ಮತಿಸಿತು.

ಆದರೆ, ನ್ಯಾಯಾಲಯದ ಸಮಯ ವ್ಯಯ ಮಾಡಿರುವುದಕ್ಕೆ ಪ್ರತಿಯಾಗಿ ಶಾಸಕರಿಗೆ 1,000 ರೂ.ಗಳ ದಂಡ ವಿಧಿಸಲಾಗಿದೆ. ಈ ಮೊತ್ತವನ್ನು ಬೆಂಗಳೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸುವಂತೆ ಸೂಚನೆ ನೀಡಲಾಗಿದೆ. ವಾರಂಟ್ ರದ್ದತಿಯ ಕುರಿತು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಅಧಿಕೃತ ಮಾಹಿತಿ ರವಾನಿಸಲು ನಿರ್ದೇಶಿಸಿದ ನ್ಯಾಯಾಲಯವು, ಪ್ರಕರಣದ ಮುಂದಿನ ವಿಚಾರಣೆಯನ್ನು ಮೇ.27ಕ್ಕೆ ಮುಂದೂಡಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಜಯಗಳಿಸಿದ ನಂತರ ನಡೆದ ವಿಜಯೋತ್ಸವದ ಸಂದರ್ಭದಲ್ಲಿ ಶಾಸಕ ಬಿ.ಪಿ. ಹರೀಶ್ ಅವರು ಮಾದಿಗ ಸಮುದಾಯದ ಭಾವನೆಗಳಿಗೆ ಧಕ್ಕೆ ತರುವಂತಹ ಪ್ರಚೋದನಾಕಾರಿ ಹೇಳಿಕೆ ನೀಡಿದ್ದರು ಎಂಬ ಆರೋಪವಿದೆ. ಹರಿಹರ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದ ವಿಚಾರಣೆಗೆ ಹಾಜರಾಗದ ಕಾರಣ ಕೋರ್ಟ್ ಕಠಿಣ ಕ್ರಮಕ್ಕೆ ಮುಂದಾಗಿತ್ತು.

ಬಿಜಿಎಸ್ ಬಿ ಸ್ಕೂಲ್ ಸಂಸ್ಥೆಯಲ್ಲಿ ಪದವಿ ಪ್ರದಾನ
ಶಿಕ್ಷಣವೇ ಜೀವನದ ಅಡಿಪಾಯ

ಕೆಂಗೇರಿ: ಶಿಕ್ಷಣವೇ ಜೀವನದ ಅಡಿಪಾಯ. ಆದ್ದರಿಂದ ಅಡಿಪಾಯ ಸುಭದ್ರವಾಗಿದ್ದರೆ ಬದುಕು ಭವ್ಯವಾಗಿರುತ್ತದೆ ಎಂದು ಬೆಂಗಳೂರು ವಿಶ್ವ ವಿದ್ಯಾಲಯದ ಉಪ ಕುಲಪತಿ ಡಾ.ಜಯಕರ್ ಶೆಟ್ಟಿ ಹೇಳಿದರು.

ಕೆಂಗೇರಿ -ಉತ್ತರಹಳ್ಳಿ ಮುಖ್ಯ ರಸ್ತೆಯಲ್ಲಿರುವ ಬಿಜಿಎಸ್ ಬಿ ಸ್ಕೂಲ್ ಸಂಸ್ಥೆಯ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿ, ಕಲಿಕೆ ಹಾಗೂ ಔದ್ಯಾಗಿಕ ನಿರೀಕ್ಷೆ ಪರಸ್ಪರ ಪೂರಕವಾಗಿರಬೇಕು. ಈ ನಿಟ್ಟಿನಲ್ಲಿ ಶಿಕ್ಷಣದೊಂದಿಗೆ ಉದ್ಯಮಗಳು ಬಯಸುವ ಕೌಶಲ್ಯತೆಯನ್ನು ಒದಗಿಸುವ ಅಗತ್ಯತೆ ಇದೆ. ಕೇಂದ್ರ ಹಾಗೂ ರಾಜ್ಯದ ಪ್ರಸ್ತುತ ಪಠ್ಯ ಕ್ರಮಗಳು ಈ ದಿಸೆಯಲ್ಲಿ ಸಾಗುತ್ತಿದ್ದು, ಸ್ಟಾರ್ಟ್ ಅಪ್ ಆರಂಭಕ್ಕೆ ಸೂಕ್ತ ಸಮಯವಾಗಿದೆ ಎಂದರು.

ವಿದ್ಯಾರ್ಥಿಗಳು ಉದ್ಯೋಗ ಗಳಿಕೆಗೆ ಒತ್ತು ನೀಡದೆ ಉದ್ಯೋಗ ಸೃಜನೆಗೆ ಮುಂದಾಗಬೇಕು. ಶಿಕ್ಷಣ, ಆರೋಗ್ಯ ಹಾಗೂ ಉದ್ಯೋಗ ಸೃಜನೆಯಲ್ಲಿ ಬಿಜಿಎಸ್ ಸಂಸ್ಥೆ ಅದ್ಭುತವಾಗಿ ಸಾಧನೆ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಬಿಜಿಎಸ್ ಮತ್ತು ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿ ಮಾತನಾಡಿ, ಸಮಾಜದ ಎಲ್ಲಾ ವರ್ಗಕ್ಕೂ ಅನ್ನ, ಅಕ್ಷರ ಹಾಗೂ ಆರೋಗ್ಯವನ್ನು ಖಾತ್ರಿ ಪಡಿಸಲು ಶ್ರಮಿಸಿದ ಬಾಲಗಂಗಾಧರನಾಥ ಸ್ವಾಮೀಜಿ ಅವರ ಪ್ರೇರಣೆಯೊಂದಿಗೆ ಎಲ್ಲಾ ವಿದ್ಯಾರ್ಥಿಗಳು, ತಮ್ಮ ಪೋಷಕರು ಹಾಗೂ ಸಮಾಜದ ಬೆಳವಣಿಗೆಗೆ ಅಗತ್ಯ ಕಾಣಿಕೆ ನೀಡಬೇಕು ಎಂದು ಸಲಹೆ ನೀಡಿದರು.



ಇದೇ ಸಂದರ್ಭದಲ್ಲಿ 270 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಪ್ರಮೋದ್, ವರದರಾಜನ್, ಡಾ.ಎಸ್.ಪಿ.ಯೋಗಣ್ಣ, ಡಾ.ಪುಟ್ಟರಾಜು, ಮೇಘ ಪಾಟೀಲ್ ಮಂಗೋಲಿ, ಡಾ.ಮೋಹನ್, ಡಾ.ಗುರುಪ್ರಸಾದ್, ಪ್ರಾಂಶುಪಾಲೆ ರಮ್ಯಾ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಕೊಂಕಣಿ ಕವಿಗೋಷ್ಠಿ

ಮಂಗಳೂರು: ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ವತಿಯಿಂದ ಮೇ 9ರಂದು ಸಂಜೆ 4 ಗಂಟೆಗೆ ಅಕಾಡೆಮಿ ಸಭಾಂಗಣದಲ್ಲಿ 'ಕಾವ್ಯಾಂ ವ್ಹಾಳೊ-14' ಶೀರ್ಷಿಕೆಯಡಿ ಕವಿಗೋಷ್ಠಿ ಹಮ್ಮಿಕೊಳ್ಳಲಾಗಿದೆ. ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. 'ಪರಿಚಯ' ಪಾಂಬೂರ್ ಇದರ ಕಾರ್ಯದರ್ಶಿ ಪ್ರಕಾಶ್ ನೊರೊನ್ಹಾ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಕುಡುಬಿ ಸಮುದಾಯದ ಹಿರಿಯ ಕಲಾವಿದ ಕೆ. ಸುಂದರ ಗೌಡ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ಕವಿ ಡಾ.ವೆಂಕಟೇಶ್ ನಾಯಕ್ ಅವರು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದು, ಕವಿಗಳಿಂದ ಕವಿತಾ ವಾಚನ ನಡೆಯಲಿದೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶುಕ್ರವಾರ, 8 ಮೇ 2026
ಮಂಗಳೂರು



ಅಭಿಮಾನೋತ್ಸವ

ಬಿಎಸ್‌ವೈ 50 ವರ್ಷಗಳ ಸಾರ್ಥಕ ಪಯಣ




ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದಲ್ಲಿ ಪ್ರಬಲ ಹಿಂದುತ್ವದ ಪ್ರತಿಪಾದಕರಲ್ಲಿ ಒಬ್ಬರು. ಕೇವಲ ಪ್ರಚಾರಕ್ಕೆ ಮಾತ್ರ ಹಿಂದುತ್ವ ಜಪಿಸದೇ, ಉಪ ಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿ ಹುದ್ದೆಗೆ ಏರಿದ ಸಂದರ್ಭದಲ್ಲಿ ತಾವು ಪ್ರತಿಪಾದಿಸುತ್ತಿದ್ದ ಅಂಶಗಳನ್ನು ಜಾರಿಗೊಳಿಸಲು ತಮ್ಮ ಬದ್ಧತೆಯನ್ನು ತೋರ್ಪಡಿಸಿದರು. ಯಡಿಯೂರಪ್ಪ ಅವರ ಶ್ರಮದ ಫಲವಾಗಿಯೇ ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ, ಮತಾಂತರ ನಿಷೇಧ ಕಾಯ್ದೆಗಳು ಜಾರಿಗೆ ಬಂದವು. ಈಗಲೂ ಅವು ಜಾರಿಯಲ್ಲಿವೆ. ಇದಷ್ಟೇ ಅಲ್ಲದೆ ಹಿಂದುತ್ವದ ಪರವಾದ ಅನೇಕ ಹೋರಾಟವನ್ನು ಕರ್ನಾಟಕದಲ್ಲಿ ಮುಂಚೂಣಿಯಲ್ಲಿ ನಿಂತು ಮುನ್ನಡೆಸಿದ್ದೇ ಯಡಿಯೂರಪ್ಪ.

ಹಿಂದುತ್ವದ ಪ್ರಬಲ ಧ್ವನಿ ಬಿಎಸ್‌ವೈ

ರಾಮ ಜನ್ಮಭೂಮಿ ಹೋರಾಟದಲ್ಲಿ ಶ್ರದ್ಧೆಯ ಕರಸೇವಕ

ಅಯೋಧ್ಯೆಯ ಶ್ರೀರಾಮ ಮಂದಿರ ಹೋರಾಟವನ್ನು ದೇಶಾದ್ಯಂತ ಲಾಲ್‌ಕೃಷ್ಣ ಆಡ್ವಾನಿ, ಮುರಳಿ ಮನೋಹರ ಜೋಷಿ, ಉಮಾಭಾರತಿ ಮೊದಲಾದವರು ಮುನ್ನಡೆಸಿದರೆ ಕರ್ನಾಟಕದಲ್ಲಿ ರಾಮನ ಜನ್ಮಸ್ಥಾನ ಹಿಂದುಗಳಿಗೆ ಬಿಟ್ಟು ಕೊಡಬೇಕೆಂದು ಬಲವಾಗಿ ಪ್ರತಿಪಾದಿಸಿದವರು ಯಡಿಯೂರಪ್ಪ. ಯಡಿಯೂರಪ್ಪ ಅವರು 1992ರ ಡಿಸೆಂಬರ್‌ನಲ್ಲಿ ಅಯೋಧ್ಯೆಯಲ್ಲಿ ನಡೆದ ರಾಮ ಜನ್ಮಭೂಮಿ ಚಳವಳಿಯಲ್ಲಿ ಕರಸೇವಕರಾಗಿ ನೇರವಾಗಿ ಭಾಗವಹಿಸಿದ್ದರು. ಅವರು ಅಂದು ಅಯೋಧ್ಯೆಯಲ್ಲಿ ಹಿರಿಯ ಮುಖಂಡರೊಂದಿಗೆ ಇದ್ದರು. ಇದಕ್ಕೂ ಮೊದಲು ಕರ್ನಾಟಕದಲ್ಲಿ ರಥಯಾತ್ರೆ ಸಂಚರಿಸಿದ ಸಂದರ್ಭದಲ್ಲಿ ರಾಜ್ಯದುದ್ದಕ್ಕೂ ಯಡಿಯೂರಪ್ಪ ಪ್ರವಾಸ ಮಾಡಿದ್ದರು. 2020ರಲ್ಲಿ ಮಂದಿರದ ಭೂಮಿ ಪೂಜೆ ನೆರವೇರಿದಾಗ, ಕರಸೇವಕನಾಗಿದ್ದ ನನಗೆ ಇದು ಸುದೀರ್ಘ ಕಾಲದ ಕನಸು ನನಸಾದ ಕ್ಷಣ ಎಂದು ಅವರು ಭಾವುಕರಾಗಿ ಸ್ಮರಿಸಿದ್ದರು. ರಾಮಮಂದಿರ ನಿರ್ಮಾಣಕ್ಕಾಗಿ ನಡೆದ ನಿಧಿ ಸಂಗ್ರಹ ಅಭಿಯಾನದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. 2024ರ ಉದ್ಘಾಟನಾ ಸಮಾರಂಭಕ್ಕೆ ಮುಂಚಿತವಾಗಿ ಮನೆ-ಮನೆಗೆ ತೆರಳಿ ಮಂತ್ರಾಕ್ಷತೆ ವಿತರಿಸಿ ಜನರನ್ನು ಆಮಂತ್ರಿಸಿ ತಮ್ಮ ಶ್ರದ್ಧೆಯನ್ನು ಸಾಬೀತುಪಡಿಸಿದ್ದರು.





ಗೋಹತ್ಯೆ ನಿಷೇಧ ಕಾಯ್ದೆ

ಕರ್ನಾಟಕದಲ್ಲಿ ಗೋಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತರುವಲ್ಲಿ ಯಡಿಯೂರಪ್ಪ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ ನೇತೃತ್ವದ ಬಿಜೆಪಿ ಸರ್ಕಾರವು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ-2020ನ್ನು ಜಾರಿಗೆ ತಂದಿತು. 2010ರಲ್ಲಿ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಮೊದಲ ಬಾರಿಗೆ 1964ರ ಕಾಯ್ದೆಗಿಂತ ಕಠಿಣವಾದ ನಿಬಂಧನೆಗಳೊಂದಿಗೆ ಈ ಮಸೂದೆಯನ್ನು ಮಂಡಿಸಿದ್ದರು. ಆದರೆ ಅಂದಿನ ರಾಜ್ಯಪಾಲರಾಗಿದ್ದ ಎಚ್.ಆರ್. ಭಾರದ್ವಾಜ್ ಅವರು ಇದಕ್ಕೆ ಅಂಕಿತ ಹಾಕದ ಕಾರಣ ಮತ್ತು ನಂತರ ಬಂದ ಕಾಂಗ್ರೆಸ್ ಸರ್ಕಾರ ಅದನ್ನು ಹಿಂಪಡೆದಿದ್ದರಿಂದ ಅದು ಜಾರಿಯಾಗಲಿಲ್ಲ. ಆದರೆ ಪಟ್ಟು ಬಿಡದ ಯಡಿಯೂರಪ್ಪ 2020ರಲ್ಲಿ ಅವರಿಗೆ ಅವಕಾಶ ಸಿಕ್ಕಾಗ ಮತ್ತೆ ಗೋಮಾತೆಯ ಬಗ್ಗೆ ತಮಗಿದ್ದ ಬದ್ಧತೆಯನ್ನು ಪ್ರದರ್ಶಿಸಿದರು. ಡಿಸೆಂಬರ್ 2020ರಲ್ಲಿ ವಿಧಾನಸಭೆಯಲ್ಲಿ ಹೊಸ ವಿಧೇಯಕ ಮಂಡಿಸಿ ತೀವ್ರ ವಿರೋಧದ ನಡುವೆಯೂ ಅನುಮೋದನೆ ಪಡೆದರು. ಫೆಬ್ರವರಿ 25, 2021ರಿಂದ ಈ ಕಾಯ್ದೆಯ ಎಲ್ಲಾ ನಿಬಂಧನೆಗಳು ರಾಜ್ಯದಲ್ಲಿ ಅಧಿಕೃತವಾಗಿ ಜಾರಿಗೆ ಬಂದವು. ಹೊಸ ಕಾಯ್ದೆಯು ಹಸು, ಆಕಳು ಕರು, ಹೋರಿ, ಎತ್ತು ಮತ್ತು 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಮ್ಮೆ ಹಾಗೂ ಕೋಣಗಳ ಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ. ಕಾಯ್ದೆಯಡಿ ಗೋಹತ್ಯೆ ಮಾಡುವುದು ಅಪರಾಧ. ತಪ್ಪಿತಸ್ಥರಿಗೆ 3 ರಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 50,000 ರಿಂದ 5 ಲಕ್ಷದವರೆಗೆ ದಂಡ ವಿಧಿಸಲು ಅವಕಾಶವಿದೆ. ವಿಧಾನಸಭೆಯಲ್ಲಿ ಮಸೂದೆ ಅಂಗೀಕಾರವಾದ ನಂತರ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಕಾವೇರಿ ನಿವಾಸದಲ್ಲಿ ಗೋಪೂಜೆ ಮಾಡಿ ಸಂಭ್ರಮಿಸಿದ್ದರು.

ಮತಾಂತರ ನಿಷೇಧ ಕಾಯ್ದೆ

ಬಿ.ಎಸ್. ಯಡಿಯೂರಪ್ಪ ಅವರು ಕರ್ನಾಟಕದಲ್ಲಿ ಮತಾಂತರ ನಿಷೇಧ ಕಾಯ್ದೆ (ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆ) ಜಾರಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಮತ್ತು ನಂತರವೂ ಬಲವಂತದ ಮತಾಂತರ ತಡೆಯಲು ಕಠಿಣ ಕಾನೂನಿನ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದರು. ಪ್ರಲೋಭನೆ ಅಥವಾ ಒತ್ತಾಯದ ಮೂಲಕ ನಡೆಯುವ ಮತಾಂತರಗಳು ದೇಶದ ಹಿತಾಸಕ್ತಿಗೆ ವಿರುದ್ಧವಾಗಿವೆ ಎಂಬುದು ಅವರ ನಿಲುವು. 2021ರ ಡಿಸೆಂಬರ್‌ನಲ್ಲಿ ಬೆಳಗಾವಿ ಅಧಿವೇಶನದಲ್ಲಿ ಈ ವಿಧೇಯಕವನ್ನು ಮಂಡಿಸಲಾಯಿತು. ಈ ಸಂದರ್ಭದಲ್ಲಿ ಯಡಿಯೂರಪ್ಪ ಅವರು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ವಿಧೇಯಕವನ್ನು ಸರ್ವಾನುಮತದಿಂದ ಅಂಗೀಕರಿಸಬೇಕು ಎಂದು ಮನವಿ ಮಾಡಿದ್ದರು. ಮತಾಂತರದ ವಿರುದ್ಧದ ಹೋರಾಟದಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ಪಾತ್ರವು ಕೇವಲ ರಾಜಕೀಯ ನಿರ್ಧಾರವಾಗಿರದೆ, ಅವರ ಸುದೀರ್ಘ ಸಾರ್ವಜನಿಕ ಜೀವನದ ಒಂದು ಪ್ರಮುಖ ಭಾಗವಾಗಿದೆ.

ಲವ್ ಜಿಹಾದ್ ವಿರುದ್ಧ ನಿಲುವು



ಯುವತಿಯರನ್ನು ಆಮಿಷ ಅಥವಾ ಮದುವೆಯ ಭರವಸೆಯ ಮೂಲಕ ಮತಾಂತರ ಮಾಡುವುದನ್ನು (ಲವ್ ಜಿಹಾದ್) ರಾಜ್ಯದಲ್ಲಿ ಸಹಿಸುವುದಿಲ್ಲ ಎಂದು 2020ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪ ಅವರು ಕಠಿಣ ಎಚ್ಚರಿಕೆ ನೀಡಿದ್ದರು. ಈ ಕುರಿತು ಕಾನೂನು ರೂಪಿಸಲು ಅವರು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದರು. 2021ರ ಡಿಸೆಂಬರ್‌ನಲ್ಲಿ ಬೆಳಗಾವಿ ಅಧಿವೇಶನದಲ್ಲಿ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ ಮಂಡನೆಯಾದಾಗ, ಯಡಿಯೂರಪ್ಪ ಅವರು ಸಕ್ರಿಯವಾಗಿ ಭಾಗವಹಿಸಿ ವಿರೋಧ ಪಕ್ಷಗಳ ಮನವೊಲಿಸಲು ಪ್ರಯತ್ನಿಸಿದ್ದರು. ಇದು ದೇಶದ ಹಿತದೃಷ್ಟಿಯಿಂದ ಜಾರಿಗೆ ಬರಬೇಕಾದ ಕಾಯ್ದೆ ಎಂದು ಅವರು ಪ್ರತಿಪಾದಿಸಿದ್ದರು. ಮತಾಂತರವು ಕೇವಲ ಧಾರ್ಮಿಕ ವಿಷಯವಲ್ಲ, ಅದು ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುತ್ತದೆ ಎಂಬುದು ಅವರ ನಿಲುವು.

ಮಠಗಳಿಗೆ ಭರಪೂರ ಅನುದಾನ

ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಜ್ಯದ ವಿವಿಧ ಮಠಗಳು ಮತ್ತು ದೇವಸ್ಥಾನಗಳಿಗೆ ದೊಡ್ಡ ಪ್ರಮಾಣದಲ್ಲಿ ಅನುದಾನ ಮತ್ತು ದೇಣಿಗೆಯನ್ನು ಬಜೆಟ್‌ನಲ್ಲೇ ಘೋಷಣೆ ಮಾಡಿದರು. ಹಿಂದೆ ಯಾವುದೇ ಸರ್ಕಾರ ಈ ಪ್ರಮಾಣದ ಅನುದಾನ ನೀಡಿ ಬೆಂಬಲಿಸಿರಲಿಲ್ಲ. ಅವರ ಮೊದಲ ಅವಧಿಯ (2008-2011) ಆಡಳಿತದಲ್ಲಿ ಸುಮಾರು 110 ಕೋಟಿ ರಾಜ್ಯ ಮತ್ತು ಹೊರರಾಜ್ಯಗಳ 269 ದೇವಸ್ಥಾನಗಳಿಗೆ ಅನುದಾನ ನೀಡಿದ್ದು ದಾಖಲೆಯಾಗಿದೆ. 2019-20ನೇ ಸಾಲಿನ ಬಜೆಟ್‌ನಲ್ಲಿ ಹಿಂದೂ ದೇವಾಲಯಗಳು ಮತ್ತು ಧಾರ್ಮಿಕ ಸಂಸ್ಥೆಗಳಿಗಾಗಿ ಯಡಿಯೂರಪ್ಪ ಅವರ ನೇತೃತ್ವದ ಸರ್ಕಾರವು 294 ಕೋಟಿ ಅನುದಾನ ಮೀಸಲಿಟ್ಟಿತ್ತು. ಆದಿಚುಂಚನಗಿರಿ ಮಠ, ಸಿದ್ಧಗಂಗಾ ಮಠ, ಕಾಗಿನೆಲೆ ಮಠ ಸೇರಿದಂತೆ ಪ್ರಮುಖ ಧಾರ್ಮಿಕ ಸಂಸ್ಥೆಗಳಿಗೆ ಕೋಟ್ಯಂತರ ರೂ. ಅನುದಾನ ನೀಡಿದರು. ಅಯೋಧ್ಯೆಯ ಶ್ರೀರಾಮ ಜನ್ಮಭೂಮಿಯಲ್ಲಿ ಕರ್ನಾಟಕದ ಯಾತ್ರಿಕರಿಗಾಗಿ ಯಾತ್ರಿ ನಿವಾಸ ನಿರ್ಮಿಸಲು 10 ಕೋಟಿ ಅನುದಾನ ಘೋಷಿಸಲಾಗಿತ್ತು. ಕೋವಿಡ್ ಸಂಕಷ್ಟದ ನಡುವೆಯೂ, ನವೆಂಬರ್ 2020ರಲ್ಲಿ ರಾಜ್ಯ ಸರ್ಕಾರ 143 ಮಠಗಳು, ಟ್ರಸ್ಟ್‌ಗಳು ಮತ್ತು ದೇವಾಲಯಗಳಿಗೆ 88.75 ಕೋಟಿ ಅನುದಾನ ಬಿಡುಗಡೆ ಮಾಡಿತ್ತು. ಇದರಲ್ಲಿ 39 ಮಠಗಳಿಗೆ ತಲಾ 1 ಕೋಟಿ ನೀಡಲಾಯಿತು.

ಅಭಿವೃದ್ಧಿ ಪ್ರಾಧಿಕಾರಗಳಿಗೆ

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ 10 ಕೋಟಿ, ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ಮತ್ತು ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ಅನುದಾನವನ್ನು ವಿವಿಧ ಹಂತಗಳಲ್ಲಿ ನೀಡಿದ್ದಾರೆ. ಆದಿಚುಂಚನಗಿರಿ ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿಗೆ 5 ಕೋಟಿ ಮತ್ತು ತುಮಕೂರು ಜಿಲ್ಲೆಯ ಯಡಿಯೂರು ಸಿದ್ಧಲಿಂಗೇಶ್ವರ ಕ್ಷೇತ್ರಕ್ಕೆ 10 ಕೋಟಿ ಅನುದಾನ ನೀಡಲಾಗಿತ್ತು. ಸಂತ ಸೇವಾಲಾಲ್ ಜನ್ಮಸ್ಥಳವಾದ ಸೂರಗೊಂಡನಕೊಪ್ಪದ ಅಭಿವೃದ್ಧಿಗೂ ವಿಶೇಷ ಆದ್ಯತೆ ನೀಡಿದ್ದರು.



ರಾಮಸೇತು ನಮ್ಮ ಅಸ್ಮಿತೆ



ಯುಪಿಎ ಸರ್ಕಾರದ ಅವಧಿಯಲ್ಲಿ ಸೇತುಸಮುದ್ರಂ ಹಡಗು ಕಾಲುವೆ ಯೋಜನೆ ಜಾರಿಗೆ ಬಂದಾಗ, ರಾಮಸೇತು ಉಳಿಸಬೇಕು ಎಂಬ ಹೋರಾಟದಲ್ಲಿ ಅವರು ಮುಂಚೂಣಿಯಲ್ಲಿದ್ದರು. ರಾಮಸೇತು ಕೇವಲ ನಂಬಿಕೆಯಲ್ಲ, ಅದು ಈ ದೇಶದ ಅಸ್ಮಿತೆ ಎಂದು ಘಂಟಾಘೋಷವಾಗಿ ನುಡಿದಿದ್ದರು. ರಾಮಸೇತು ಕೇವಲ ಭೌಗೋಳಿಕ ರಚನೆಯಲ್ಲ, ಬದಲಾಗಿ ಕೋಟ್ಯಂತರ ಹಿಂದೂಗಳ ಧಾರ್ಮಿಕ ಭಾವನೆಯ ಪ್ರತೀಕ ಎಂದು ಯಡಿಯೂರಪ್ಪ ಪ್ರತಿಪಾದಿಸಿದ್ದರು. ಸೇತುಸಮುದ್ರಂ ಯೋಜನೆಗಾಗಿ ರಾಮಸೇತುವನ್ನು ಧ್ವಂಸಗೊಳಿಸುವುದನ್ನು ವಿರೋಧಿಸಿ ಕರ್ನಾಟಕದಲ್ಲಿ ವಿವಿಧ ರ‍್ಯಾಲಿಗಳು ಮತ್ತು ಪ್ರತಿಭಟನೆಗಳಲ್ಲಿ ಅವರು ಸಕ್ರಿಯ ನೇತೃತ್ವ ವಹಿಸಿದ್ದರು. ರಾಮಸೇತು ಒಂದು ಪ್ರಾಚೀನ ಮಾನವ ನಿರ್ಮಿತ ಸೇತುವೆ ಎಂದು ನಂಬಿರುವ ಅವರು, ಅದನ್ನು ರಾಷ್ಟ್ರೀಯ ಪಾರಂಪರಿಕ ಸ್ಮಾರಕವೆಂದು ಘೋಷಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು. ವಿಶ್ವಹಿಂದೂ ಪರಿಷತ್ ಮತ್ತು ರಾಮಸೇತು ರಕ್ಷಣಾ ವೇದಿಕೆಗಳೊಂದಿಗೆ ಸೇರಿ ಅವರು ಅನೇಕ ಬಾರಿ ಧರಣಿ ನಡೆಸಿದ್ದರು. ರಾಮಸೇತುವಿಗೆ ಧಕ್ಕೆಯಾಗದಂತೆ ಪರ್ಯಾಯ ಮಾರ್ಗಗಳ ಮೂಲಕ ಯೋಜನೆಯನ್ನು ಕೈಗೊಳ್ಳಲು ಯಡಿಯೂರಪ್ಪ ಸಲಹೆ ನೀಡಿದ್ದರು.

ಕಾಶ್ಮೀರ ಭಾರತ ಮಾತೆಯ ಸಿಂಧೂರ

ಅಖಂಡ ಭಾರತದ ಪರಿಕಲ್ಪನೆ ಹೊಂದಿರುವ ಯಡಿಯೂರಪ್ಪನವರು ದೇಶ ವಿಭಜನೆಯ ಕೃತ್ಯವನ್ನು ಖಂಡಿಸುವವರು. ಮತ್ತು ಪಾಕ್ ಆಕ್ರಮಿತ ಕಾಶ್ಮೀರ ಭಾರತಕ್ಕೆ ಸೇರಬೇಕೆಂಬ ನಂಬಿಕೆ ಉಳ್ಳವರು. ಕಾಶ್ಮೀರದಲ್ಲಿನ ಹಿಂಸಾಚಾರ ಮತ್ತು ಕಾಶ್ಮೀರಿ ಪಂಡಿತರ ಮೇಲಾಗುತ್ತಿದ್ದ ನಿರಂತರ ದೌರ್ಜನ್ಯವನ್ನು ಸದನದ ಒಳಗೆ ಮತ್ತು ಹೊರಗೆ ಬಲವಾಗಿ ಖಂಡಿಸಿದ್ದಾರೆ.



1991ರಲ್ಲಿ ಮುರಳಿ ಮನೋಹರ ಜೋಶಿ ಅವರ ನೇತೃತ್ವದಲ್ಲಿ ನಡೆದ ಏಕತಾ ಯಾತ್ರೆಯಲ್ಲಿ ಯಡಿಯೂರಪ್ಪ ಅವರು ಕರ್ನಾಟಕದಿಂದ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಈ ಯಾತ್ರೆಯು ಕನ್ಯಾಕುಮಾರಿಯಿಂದ ಆರಂಭವಾಗಿ ಶ್ರೀನಗರದ ಲಾಲ್ ಚೌಕ್‌ನಲ್ಲಿ ರಾಷ್ಟ್ರಧ್ವಜ ಹಾರಿಸುವುದರೊಂದಿಗೆ ಮುಕ್ತಾಯಗೊಂಡಿತ್ತು. ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂಬ ಸಂದೇಶವನ್ನು ಸಾರುವಲ್ಲಿ ಈ ಯಾತ್ರೆ ಪ್ರಮುಖ ಪಾತ್ರ ವಹಿಸಿತ್ತು ಮತ್ತು ಉಗ್ರಗಾಮಿಗಳ ದಾಳಿಯ ಎಚ್ಚರಿಕೆಯನ್ನೂ ಮೀರಿ ಈ ಯಾತ್ರೆ ನಡೆದಿತ್ತು.

370ನೇ ವಿಧಿ ರದ್ದತಿಗೆ ಬೆಂಬಲ

2019ರಲ್ಲಿ ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುತ್ತಿದ್ದ 370ನೇ ವಿಧಿಯನ್ನು ರದ್ದುಗೊಳಿಸಿದಾಗ, ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಈ ನಿರ್ಧಾರವನ್ನು ಐತಿಹಾಸಿಕ ಎಂದು ಬಣ್ಣಿಸಿದ್ದರು. ಒಂದು ದೇಶ, ಒಂದು ಸಂವಿಧಾನ ಎಂಬ ಜನಸಂಘದ ಸಂಸ್ಥಾಪಕ ಶ್ಯಾಮ್‌ಪ್ರಸಾದ್ ಮುಖರ್ಜಿ ಅವರ ಕನಸು ನನಸಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದರು. ಜನಸಂಘದ ಕಾಲದಿಂದಲೂ ಕಾಶ್ಮೀರ ಸಮಸ್ಯೆಯ ಕುರಿತು ಜಾಗೃತಿ ಮೂಡಿಸಲು ಕರ್ನಾಟಕದಾದ್ಯಂತ ಹಮ್ಮಿಕೊಂಡಿದ್ದ ವಿವಿಧ ಪ್ರತಿಭಟನೆ ಮತ್ತು ಜಾಗೃತಿ ಸಭೆಗಳ ನೇತೃತ್ವವನ್ನು ಅವರು ವಹಿಸಿದ್ದರು. ಕಾಶ್ಮೀರದ ಅಭಿವೃದ್ಧಿ ಮತ್ತು ಅಲ್ಲಿನ ಭಯೋತ್ಪಾದನೆಯ ನಿರ್ಮೂಲನೆಗೆ ಕಠಿಣ ಕ್ರಮಗಳ ಅಗತ್ಯವಿದೆ ಎಂದು ಅವರು ಹಲವು ವೇದಿಕೆಗಳಲ್ಲಿ ಪ್ರತಿಪಾದಿಸಿದ್ದಾರೆ.



ವೀರಶೈವ ಲಿಂಗಾಯತರು ಹಿಂದುಗಳು..!

ಹಿಂದು ಸಿದ್ಧಾಂತವನ್ನು ಮತ್ತು ಆಚರಣೆಯನ್ನು ಸಮರ್ಥವಾಗಿ ಮುನ್ನಡೆಸಿದ್ದು ಯಡಿಯೂರಪ್ಪ ವಿಶೇಷತೆ. 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರ ತತ್ವಗಳನ್ನು ಆಡಳಿತದಲ್ಲಿ ಅಳವಡಿಸಿಕೊಳ್ಳಲು ಶ್ರಮಿಸಿದರು. ಬೆಂಗಳೂರಿನಲ್ಲಿ ಬಸವಣ್ಣನವರ ಪ್ರತಿಮೆ ಸ್ಥಾಪನೆ ಮತ್ತು ಲಂಡನ್‌ನಲ್ಲಿ ಅವರ ಪ್ರತಿಮೆ ಅನಾವರಣಕ್ಕೆ ಶ್ರಮಿಸಿದ್ದು ಇವರ ಸಾಧನೆಗಳಲ್ಲಿ ಒಂದು. ಆದರೆ ಪ್ರತ್ಯೇಕ ಲಿಂಗಾಯತ ಧರ್ಮ ಹೋರಾಟವನ್ನು ಬೆಂಬಲಿಸದ ಯಡಿಯೂರಪ್ಪನವರು ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಎಂದು ಪ್ರತಿಪಾದಿಸಿದ್ದರು. ಈ ಸಂಬಂಧ ಶಾಮನೂರು ಶಿವಶಂಕರಪ್ಪ ಅವರ ಬಳಿ ಅನೇಕ ಬಾರಿ ಮಾತುಕತೆ ನಡೆಸಿದ್ದರು. ಮತ್ತು ಈ ವಿಭಜನೆ ತಡೆವಲ್ಲಿ ಯಶಸ್ವಿಯಾಗಿದ್ದರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವೀರಶೈವ ಮತ್ತು ಲಿಂಗಾಯತ ಹಿಂದು ಧರ್ಮದ ಭಾಗ ಎಂದೇ ಅವರ ನಂಬಿಕೆಯಾಗಿದೆ. ಗಣತಿಯ ವೇಳೆ ಈ ಸಂಬಂಧ ಯಡಿಯೂರಪ್ಪನವರು ರಾಜ್ಯದಲ್ಲಿ ಉಂಟಾಗುತ್ತಿದ್ದ ಗೊಂದಲವನ್ನು ಸಮುದಾಯದ ನಾಯಕನಾಗಿ ನಿವಾರಿಸುವಲ್ಲಿ ಯಶಸ್ವಿಯಾಗಿದ್ದಾರೆ.





ದತ್ತಮಾಲೆ ಧರಿಸಿದ್ದ ಬಿಎಸ್‌ವೈ

ಯಡಿಯೂರಪ್ಪ ಅವರು ಚಿಕ್ಕಮಗಳೂರಿನ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ (ದತ್ತ ಪೀಠ) ವಿವಾದಕ್ಕೆ ಸಂಬಂಧಿಸಿ ಹಿಂದೂಗಳ ಪರವಾದ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಪೀಠದ ಸಂರಕ್ಷಣೆಗಾಗಿ ಹಲವು ದಶಕಗಳಿಂದ ಶ್ರಮಿಸಿದ್ದಾರೆ. ಜೊತೆಗೆ ದತ್ತಮಾಲೆಯನ್ನು ಸ್ವತಃ ಧರಿಸಿ ಈ ಹೋರಾಟದ ಬಗ್ಗೆ ತಮಗಿದ್ದ ಬದ್ಧತೆಯನ್ನು ಪ್ರದರ್ಶಿಸಿದ್ದರು. ದತ್ತ ಪೀಠದಲ್ಲಿ ಮುಜಾವರ್‌ಗಳ ಬದಲು ಹಿಂದೂ ಅರ್ಚಕರನ್ನು ನೇಮಿಸಬೇಕು ಎಂಬ ದೀರ್ಘಕಾಲದ ಬೇಡಿಕೆಗೆ ಅವರು ನಿರಂತರ ಬೆಂಬಲ ನೀಡುತ್ತಾ ಬಂದಿದ್ದಾರೆ. ಈ ವಿಷಯದಲ್ಲಿ ಹಿಂದೂಗಳ ಆರಾಧನಾ ಹಕ್ಕನ್ನು ಎತ್ತಿಹಿಡಿಯುವುದು ಬಿಎಸ್‌ವೈರ ಪ್ರಮುಖ ಗುರಿಯಾಗಿತ್ತು.

ಕಿರುಸುದ್ದಿ

ಜೆ.ಇ.ಇ. ಮೈನ್ಸ್-2 ಪರೀಕ್ಷೆ: ಇಂದ್ರಪ್ರಸ್ಥ ಕಾಲೇಜಿನ ಸಾಧನೆ



ಉಪ್ಪಿನಂಗಡಿ: ರಾಷ್ಟ್ರ ಮಟ್ಟದ ಜೆ.ಇ.ಇ. ಮೈನ್ಸ್-2 ಪರೀಕ್ಷೆಯಲ್ಲಿ ಇಂದ್ರಪ್ರಸ್ಥ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಕರಾಯ ನಿವಾಸಿ ಮುಹಮ್ಮದ್ ಅಬ್ದುಲ್ ಫತಾಹ್ 2637 ಹಾಗೂ ಕಡೇಶಿವಾಲಯ ನಿವಾಸಿ ರುಚಿತಾ 3504 ರ‍್ಯಾಂಕ್ ಗಳಿಸಿದ್ದಾರೆ.

ಪಿಕಪ್-ಬೈಕ್ ಡಿಕ್ಕಿ: ಸವಾರ ಸಾವು



ಬೆಳ್ತಂಗಡಿ: ಗುರುವಾಯನಕೆರೆ ಶಕ್ತಿನಗರದ ಬಳಿ ಪಿಕಪ್ ವಾಹನ ಮತ್ತು ಬೈಕ್ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಗಂಭೀರ ಗಾಯಗೊಂಡು ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದ ಬೈಕ್ ಸವಾರ ಚಿಕಿತ್ಸೆಗೆ ಸ್ಪಂದಿಸದೆ ಸಾವನ್ನಪ್ಪಿದ ಘಟನೆ ಗುರುವಾರ ನಡೆದಿದೆ. ಬೈಕ್ ಸವಾರ ಕಾರ್ಕಳದ ನಾಗರಾಜು (21) ಮೃತರು. ಇವರು ವೇಣೂರು ಕಡೆಯಿಂದ ಗುರುವಾಯನಕೆರೆ ಕಡೆಗೆ ಬರುತ್ತಿದ್ದ ಸಂದರ್ಭ ಗುರುವಾಯನಕೆರೆಯಿಂದ ಶಕ್ತಿನಗರದ ಬಳಿ ಪಿಕಪ್ ವಾಹನವನ್ನು ಅದರ ಚಾಲಕ ಯಾವುದೇ ಸೂಚನೆ ನೀಡದೆ ಡಿವೈಡರ್ ರಸ್ತೆಯ ಬಲಬಗೆ ಚಲಾಯಿಸಿದ ಪರಿಣಾಮ ಬೈಕ್ ಪಿಕಪ್ ವಾಹನದ ಹಿಂಬದಿಗೆ ಡಿಕ್ಕಿಯಾಗಿ ಈ ಅಪಘಾತ ಸಂಭವಿಸಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಪಿಕಪ್ ಸಹ ಪ್ರಯಾಣಿಕ ನಿಟ್ಟಡೆ ಗ್ರಾಮದ ಕೌಶಿಕ್ ಅವರು ನೀಡಿದಂತೆ ಬೆಳ್ತಂಗಡಿ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ರೂಪತಿಗೆ ಪಿ.ಎಚ್.ಡಿ. ಪದವಿ ಪ್ರದಾನ



ಸುಬ್ರಹ್ಮಣ್ಯ: ಕುವೆಂಪು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಹಾಗೂ ಸಂಶೋಧನಾ ದೈಹಿಕ ಶಿಕ್ಷಣ, ಕ್ರೀಡೆ ಮತ್ತು ಯೋಗ ವಿಭಾಗದ ನಿವೃತ್ತ ನಿರ್ದೇಶಕ ಡಾ.ಎಸ್.ಎಂ. ಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕಿ ರೂಪತಿ ಎಂ. ಅವರು ಸಿದ್ಧಪಡಿಸಿದ 'ಫಾಕ್ಟೋರಿಯಲ್ ಎಕ್ಸ್‌ಪ್ರೆಷನ್ಸ್ ಆಫ್ ಫಿಸಿಕಲ್ ಫಿಟ್‌ನೆಸ್ ಟೆಸ್ಟ್ ವೇರಿಯೇಬಲ್ಸ್ ಆಫ್ ಫಿಮೇಲ್ ಹ್ಯಾಂಡ್ ಬಾಲ್ ಪ್ಲೇಯರ್ಸ್' ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಕುವೆಂಪು ವಿ.ವಿ.ಯ 35ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಂದ ರೂಪತಿ ಪದವಿ ಪ್ರಮಾಣ ಪತ್ರ ಸ್ವೀಕರಿಸಿದರು. ಅವರು ಸುಬ್ರಹ್ಮಣ್ಯದ ಅರಂಪಾಡಿ ನಿವಾಸಿ ರಾಷ್ಟ್ರೀಯ ಕಬಡ್ಡಿ ಆಟಗಾರ ಹಾಗೂ ಕ್ರೀಡಾ ತರಬೇತುದಾರ ಕಿರಣ್ ಅರಂಪಾಡಿ ಅವರ ಪತ್ನಿ.



ಉಡುಪಿ ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ಮತ್ತು ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಜಿಲ್ಲಾ ನೋಡಲ್ ಅಧಿಕಾರಿ ಉದಯ ಕುಮಾರ್ ಶೆಟ್ಟಿ ಹಾಗೂ ಇತರ ಅಧಿಕಾರಿಗಳ ತಂಡವು ದ.ಕ. ಜಿಲ್ಲೆಯ ಮುಲ್ಕಿ ತಾಲೂಕಿನ ಕೆಮ್ರಾಲ್ ಗ್ರಾಮ ಪಂಚಾಯತ್‌ಗೆ ಗುರುವಾರ ಭೇಟಿ ನೀಡಿ ಒಣ ತ್ಯಾಜ್ಯದಿಂದ ಇಂಧನ ಪೆಲ್ಲೆಟ್ ಉತ್ಪಾದನಾ ಕೇಂದ್ರಕ್ಕೆ ಭೇಟಿ ನೀಡಿ ಯಂತ್ರೋಪಕರಣಗಳ ಬಗ್ಗೆ ಮಾಹಿತಿ ಪಡೆದರು. ದ.ಕ. ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಜಿಲ್ಲಾ ನೋಡಲ್ ಅಧಿಕಾರಿ ಜಯಲಕ್ಷ್ಮೀ ರಾಯಕೋಡ್, ಗ್ರಾಮ ಪಂಚಾಯತ್ ಪಿಡಿಒ ಅರುಣ್ ಕುಮಾರ್, ಕಾರ್ಯದರ್ಶಿ ಕೇಶವ್, ಸ್ವಚ್ಛ ಭಾರತ್ ಮಿಷನ್ ಜಿಲ್ಲಾ ಸಂಯೋಜಕರಾದ ನವೀನ್, ಡೊಂಬಯ್ಯ ಎಂ. ಉಪಸ್ಥಿತರಿದ್ದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ | ಪಕ್ಷಿಕೆರೆ ಶಾಖೆಯ ವಾರ್ಷಿಕೋತ್ಸವ

ಮೇ 10: ನೇತ್ರ ತಪಾಸಣಾ, ದಂತ ಚಿಕಿತ್ಸಾ ಶಿಬಿರ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಮಂಗಳೂರು ಇದರ ಪಕ್ಷಿಕೆರೆ ಶಾಖೆಯ ದ್ವಿತೀಯ ವಾರ್ಷಿಕೋತ್ಸವದ ಪ್ರಯುಕ್ತ ಉಚಿತ ಸಾಮಾನ್ಯ ವೈದ್ಯಕೀಯ, ನೇತ್ರ ತಪಾಸಣಾ ಮತ್ತು ದಂತ ಚಿಕಿತ್ಸಾ ಶಿಬಿರವನ್ನು ಮೇ 10ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 12.30 ರವರೆಗೆ ಪಕ್ಷಿಕೆರೆ ಕೋರ್ದಬ್ಬು ದೈವಸ್ಥಾನ ಬಳಿಯ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ.



ಶಿಬಿರದಲ್ಲಿ ಮಂಗಳೂರಿನ ಮಣಿಪಾಲ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್‌ನ ನುರಿತ ವೈದ್ಯರ ತಂಡದವರಿಂದ ದಂತ ತಪಾಸಣೆ ಮತ್ತು ಸಲಹೆ, ಹಲ್ಲುಗಳ ಶುಚಿ, ಹುಳುಕು ಹಲ್ಲುಗಳನ್ನು ಭರ್ತಿ ಮಾಡುವುದು ಹಾಗೂ ಕೆ.ಎಂ.ಸಿ. ಆಸ್ಪತ್ರೆ ಅತ್ತಾವರ ಇದರ ನುರಿತ ವೈದ್ಯರ ತಂಡದವರಿಂದ ಕಣ್ಣಿನ ತಪಾಸಣೆ, ಅಗತ್ಯವುಳ್ಳವರಿಗೆ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆ, ಮಧುಮೇಹ ತಪಾಸಣೆ, ಬಿ. ಪಿ ತಪಾಸಣೆ, ಸಾಮಾನ್ಯ ವೈದ್ಯಕೀಯ ಸಮಾಲೋಚನೆ, ಕಿವಿ, ಮೂಗು ಮತ್ತು ಗಂಟಲು ತಪಾಸಣೆ, ಹೆಚ್ಚಿನ ಚಿಕಿತ್ಸೆಗೆ ಹಸಿರು ಕಾರ್ಡನ್ನು ನೀಡುವುದು ಹಾಗೂ ಇತರ ವೈದ್ಯಕೀಯ ಸೇವೆಗಳು ಲಭ್ಯವಿರುತ್ತದೆ. ಅಗತ್ಯವುಳ್ಳವರಿಗೆ ಉಚಿತ ಕನ್ನಡಕ ವಿತರಣೆಯನ್ನು ಮಾಡಲಾಗುವುದು.

ಶಿಬಿರವನ್ನು ಎನ್. ಜಿ. ವರ್ಲ್ಡ್ ಚಾರಿಟೇಬಲ್ ಟ್ರಸ್ಟ್ ಮಂಗಳೂರು, ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘ ಎಸ್. ಕೋಡಿ ತೋಕೂರು, ವಿನಾಯಕ ಮಿತ್ರ ಮಂಡಳಿ ಹಾಗೂ ವಿನಾಯಕ ಮಹಿಳಾ ಮಂಡಳಿ ಪಕ್ಷಿಕೆರೆ, ಶ್ರೀ ಹರಿಪಾದ ಜಾರಂದಾಯ ಯುವಕ ಮಂಡಲ ಹಾಗೂ ಮಹಿಳಾ ಮಂಡಳಿ ಪಂಜ, ಕೊಯಿಕುಡೆ ಹಾಗೂ ಶ್ರೀ ಕೋರ್ದಬ್ಬು ದೈವಸ್ಥಾನ ಸೇವಾ ಸಮಿತಿ ಪಕ್ಷಿಕೆರೆ ಸಹಕಾರದೊಂದಿಗೆ ಆಯೋಜಿಸಲಾಗಿದೆ. ಸಂಘದ ಸದಸ್ಯರು ಮತ್ತು ಸಾರ್ವಜನಿಕರು ಸದುಪಯೋಗವನ್ನು ಪಡೆಯಬೇಕಾಗಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾಗಿರಿಯಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಹಲಸು ಹಬ್ಬ

ಹಲಸಿನ ಘಮ ಘಮ...!

ಮೂಡುಬಿದಿರೆ: ಅಬ್ಬಬ್ಬಾ...ಹೌದು, ಇಂದಿನಿಂದ ಘಮ ಘಮಿಸುವ ಹಲಸಿನ ಹಣ್ಣುಗಳ ಕಾರ್ಬಾರ್! ಮೂಡುಬಿದಿರೆಯ ವಿದ್ಯಾಗಿರಿಯಲ್ಲಿರುವ ಕೃಷಿ ಸಿರಿ ವೇದಿಕೆಯಲ್ಲಿ ಬೃಹತ್ ಹಲಸು ಮೇಳ ನಡೆಯಲಿದೆ. ಹಲವು ವರುಷಗಳಿಂದ ಆಳ್ವಾಸ್ ಸಮೂಹ ಸಂಸ್ಥೆ ಆಯೋಜಿಸುವ ಹಲಸು ಮೇಳಕ್ಕೆ ಎಲ್ಲಿಲ್ಲದ ಬೇಡಿಕೆ. ಆಳ್ವಾಸ್‌ನಲ್ಲಿ ಮೇಳ ಇದೆಯೆಂದರೆ ಇಡೀ ರಾಜ್ಯವ್ಯಾಪ್ತಿಯಿಂದ ಜನರಾಗಮಿಸುತ್ತಾರೆ. ಆ ರೀತಿಯಲ್ಲಿ ಮೇಳ ನಡೆಯುತ್ತದೆ. ಹಲವು ವೈವಿಧ್ಯತೆಗಳಿರುತ್ತವೆ, ವಿವಿಧ ತಳಿಯ ಹಲಸುಗಳು ಮೇಳಕ್ಕೆ ಬರುತ್ತವೆ, ನೋಡಲು ಸಾಕಷ್ಟು ವಸ್ತು ವಿಚಾರಗಳಿರುತ್ತವೆ. ಇವೆಲ್ಲವೂ ಈ ಮೇಳದ ವಿಶೇಷತೆ. ಈ ಕಾರಣಕ್ಕಾಗಿಯೇ ಸಹಜವಾಗಿ ಜನರು ಆಕರ್ಷಿತರಾಗುತ್ತಾರೆ.

ಮೂರು ದಿನಗಳ ಮೇಳ

ಮೂಡುಬಿದಿರೆಯ ಮುಂಡ್ರುದೆ ಗುತ್ತು ಕೆ.ಅಮರನಾಥ ಶೆಟ್ಟಿ ಸಭಾಂಗಣದ ಕೃಷಿಸಿರಿ ವೇದಿಕೆಯಲ್ಲಿ ಮೂರು ದಿನಗಳ ಕಾಲ ಈ ಮೇಳ ನಡೆಯಲಿದ್ದು, ಹಲಸಿನ ವೈವಿಧ್ಯಮಯ ಖಾದ್ಯಗಳು ಇಲ್ಲಿನ ಪ್ರಮುಖ ಆಕರ್ಷಣೆಯಾಗಿವೆ. ಮೇಳದ ಮೆರುಗನ್ನು ಹೆಚ್ಚಿಸಲು ರಾಜ್ಯದ ವಿವಿಧ ಭಾಗಗಳಿಂದ ನುರಿತ ಮಾರಾಟಗಾರರು ಆಗಮಿಸುತ್ತಿದ್ದು, ವಿಶೇಷ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಹಲಸಿನ ಹಣ್ಣಿನ ಸೋಳ್ಟೆ, ಜಾಮ್, ಉಪ್ಪಿನಕಾಯಿ, ಮಾವಿನ ಹಣ್ಣಿನ ಸ್ವೀಟ್ ಉಪ್ಪಿನಕಾಯಿ, ಹುಣಸೆಹುಳಿ ಚಟ್ನಿ ಸೇರಿದಂತೆ ಹತ್ತಾರು ಬಗೆಯ ತಿಂಡಿ ತಿನಿಸುಗಳು ಲಭ್ಯವಿವೆ.ಕೇರಳದಿಂದ ಹಲಸಿನ 70 ಖಾದ್ಯಗಳು ಮೇಳದ ವಿಶೇಷ ಆಕರ್ಷಣೆಯಾಗಿದೆ.

ಸಂಘಟನೆಗಳ ಸಹಕಾರ

ಬೃಹತ್ ಹಲಸು ಮೇಳದ ಯಶಸ್ಸಿಗಾಗಿ ಸ್ಥಳೀಯ ಹಲವಾರು ಪ್ರಮುಖ ಸಂಘ ಸಂಸ್ಥೆಗಳು ಕೈಜೋಡಿಸಿವೆ. ರೋಟರಿ ಕ್ಲಬ್ ಮೂಡುಬಿದಿರೆ, ರೋಟರಿ ಟೆಂಪಲ್ ಟೌನ್ ಮೂಡುಬಿದಿರೆ, ರೋಟರಿ ಮಿಡ್ ಟೌನ್ ಮೂಡುಬಿದಿರೆ, ಇನ್ನರ್ ವ್ಹೀಲ್ ಮೂಡುಬಿದಿರೆ ಹಾಗೂ ಲಯನ್ಸ್ ಕ್ಲಬ್ ಮೂಡುಬಿದಿರೆ ಈ ಕಾರ್ಯಕ್ರಮಕ್ಕೆ ಸಹಕಾರ ನೀಡುತ್ತಿವೆ. ಇದರೊಂದಿಗೆ ಯುವವಾಹಿನಿ ಮೂಡುಬಿದಿರೆ ಘಟಕ, ಜವನೆರ್ ಬೆದ್ರ ಫೌಂಡೇಶನ್ ಮೂಡುಬಿದಿರೆ, ನೇತಾಜಿ ಬ್ರಿಗೇಡ್ ಮೂಡುಬಿದಿರೆ ಹಾಗೂ ಬೆದ್ರ ಫ್ರೆಂಡ್ಸ್ ಮೂಡುಬಿದಿರೆ ಸಂಸ್ಥೆಗಳು ಕೂಡಾ ಸಾಥ್ ನೀಡಿವೆ.

ಸರ್ವೋದಯ ಫ್ರೆಂಡ್ಸ್ ಮೂಡುಬಿದಿರೆ, ತ್ರಿಶೂಲ್ ಫ್ರೆಂಡ್ಸ್ ಮೂಡುಬಿದಿರೆ, ಮಾರಿಗುಡಿ ಫ್ರೆಂಡ್ಸ್ ಮೂಡುಬಿದಿರೆ, ದೊಡ್ಡನೆ ಫ್ರೆಂಡ್ಸ್ ಮೂಡುಬಿದಿರೆ, ಪುತ್ತಿಗೆ ಫ್ರೆಂಡ್ಸ್ ಮೂಡುಬಿದಿರೆ ಹಾಗೂ ಬೆಟ್ಟೇರಿ ಫ್ರೆಂಡ್ಸ್ ಮೂಡುಬಿದಿರೆ ಸಂಘಟನೆಗಳು ಮೇಳದೊಂದಿಗೆ ಸಹಕರಿಸುತ್ತಿವೆ. ಕ್ರೀಡಾ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಎಂ ಬಿ ಇಲೆವೆನ್ ಮೂಡುಬಿದಿರೆ, ಫ್ರೆಂಡ್ಸ್ ಇಲೆವೆನ್ ಮೂಡುಬಿದಿರೆ ಹಾಗೂ ಬೋಲ್ಲು ಚಾರಿಟೇಬಲ್ ಟ್ರಸ್ಟ್ ಮೂಡುಬಿದಿರೆ ಸಂಘಟನೆಗಳ ಬೆಂಬಲವೂ ಈ ಮೇಳಕ್ಕಿದೆ.

ದಕ್ಷಿಣ ಕನ್ನಡ ಜಿಲ್ಲಾ ಶಾಮಿಯಾನ ಮಾಲಕರ ಸಂಘ ಮೂಡುಬಿದಿರೆ, ನವಚೇತನ ಸೇವಾ ಬಳಗ ಮೂಡುಬಿದಿರೆ, ಬಂಟರ ಸಂಘ ಮಹಿಳಾ ಘಟಕ ಮೂಡುಬಿದಿರೆ ಮತ್ತು ಪ್ರೆಸ್ ಕ್ಲಬ್ ಮೂಡುಬಿದಿರೆ ಸಂಸ್ಥೆಗಳು ಮೇಳಕ್ಕೆ ಅಗತ್ಯವಿರುವ ಸಹಕಾರ ಒದಗಿಸಿವೆ. ಇದಲ್ಲದೆ ಆಟೋ ಡ್ರೈವರ್ಸ್ ಅಸೋಸಿಯೇಷನ್ ಮೂಡುಬಿದಿರೆ, ಮೊಬೈಲ್ ರಿಟೇಲರ್ಸ್ ಮೂಡುಬಿದಿರೆ, ಲಾಡಿ ಫ್ರೆಂಡ್ಸ್ ಮೂಡುಬಿದಿರೆ, ಹೊಸಕನಸು ಸೇವಾ ಟ್ರಸ್ಟ್ ನೆಲ್ಲಿಂಗಾಡಿ ಹಾಗೂ ನಮೋ ಫ್ರೆಂಡ್ಸ್ ನೆಲ್ಲಿಂಗಾಡಿ ಸಂಸ್ಥೆಗಳು ಈ ಮೇಳದ ಯಶಸ್ಸಿಗೆ ಸಹಕಾರ ನೀಡುತ್ತಿವೆ.



ಸೀರೆಗಳು ಇವೆ

ಇಷ್ಟೇ ಅಲ್ಲದೆ ಮೇಳದಲ್ಲಿ ಪಾರಂಪರಿಕ ಇಳಕಲ್ ಮತ್ತು ಖಾದಿ ಸೀರೆಗಳು, ಮಣ್ಣಿನ ಆಭರಣಗಳು, ಬಿದಿರಿನ ಉತ್ಪನ್ನಗಳು ಹಾಗೂ ಕರಕುಶಲ ವಸ್ತುಗಳ ಮಳಿಗೆಗಳು ಗ್ರಾಹಕರನ್ನು ಸೆಳೆಯಲಿವೆ. ಕೃಷಿ ಆಸಕ್ತರಿಗಾಗಿ ಹಲಸು, ಮಾವು ಹಾಗೂ ಹೂವಿನ ಗಿಡಗಳ ಮಾರಾಟವೂ ಇರಲಿದೆ. ಮೇಳಕ್ಕೆ ಸಾಂಸ್ಕೃತಿಕ ಕಳೆ ನೀಡಲು ಭಜನಾ ಸಪ್ತಸ್ವರ ಭಜನಾ ಸ್ಪರ್ಧೆ, ವಾಯ್ಸ್ ಆಫ್ ಬೆದ್ರ ಸಂಗೀತ ಸ್ಪರ್ಧೆ ಹಾಗೂ ಅಡುಗೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸಣ್ಣ ಉದ್ಯಮಿಗಳಿಗೆ ಮತ್ತು ಗೃಹ ಉತ್ಪನ್ನ ತಯಾರಕರಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಡುವ ಉದ್ದೇಶದಿಂದ ಈ ಮೇಳವನ್ನು ಹಮ್ಮಿಕೊಳ್ಳಲಾಗಿದೆ.

ನೀವೂ ಬನ್ನಿ

ಈ ಮೇಳ ಎಲ್ಲ ಮೇಳಗಳಿಗಿಂತ ವಿಭಿನ್ನವಾಗಿದೆ. ಇಲ್ಲಿ ನೋಡಲು, ಕಲಿಯಲು, ಸವಿಯಲು ಅವಕಾಶವಿದೆ. ಹಾಗಾಗಿ ಎಲ್ಲರೂ ಮೇಳದಲ್ಲಿ ಪಾಲ್ಗೊಳ್ಳಬೇಕೆಂಬುದು ಸಂಘಟಕರ ಆಶಯ.

ಸಮಾಜದ ಶಾಂತಿ ಹಾಳುಮಾಡಲು ಮುಸ್ಲಿಂಲೀಗ್ ಷಡ್ಯಂತ್ರ: ಅಶ್ವಿನಿ



ಕಾಸರಗೋಡು: ಕೇರಳದಲ್ಲಿ 10 ವರ್ಷಗಳ ಬಳಿಕ ಅಧಿಕಾರಕ್ಕೇರುವ ಹೆಸರಿನಲ್ಲಿ ಮುಸ್ಲಿಂಲೀಗ್ ಪಕ್ಷವು ಬಿಜೆಪಿ ಕಾರ್ಯಕರ್ತರ ಮೇಲೆ ದಾಳಿ ನಡೆಸಿ ಸಮಾಜದಲ್ಲಿ ಶಾಂತಿಯುತ ವಾತಾವರಣವನ್ನು ಕದಡಲು ಷಡ್ಯಂತ್ರ ರೂಪಿಸಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಗಂಭೀರವಾಗಿ ಆರೋಪಿಸಿದ್ದಾರೆ.


ವಿಧಾನಸಭಾ ಚುನಾವಣೆಯ ಮತ ಎಣಿಕೆಯ ದಿನದಂದು ಮುಸ್ಲಿಂಲೀಗ್ ಕಾರ್ಯಕರ್ತರು ದಾಳಿ ನಡೆಸಿ ಧ್ವಂಸ ಮಾಡಿದ ಪೂಚಕ್ಕಾಡು ರಾಮನಗರ ಬಸ್ ನಿಲ್ದಾಣ ಮತ್ತು ಪಳ್ಳಿಕೆರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೀಕಾನದಲ್ಲಿರುವ ಅಂಗನವಾಡಿ ಬಾವಿಗೆ ಬಾಟಲಿಗಳು ಮತ್ತು ಪೈಪ್‌ಗಳನ್ನು ಸುರಿದು ನಿಷ್ಪ್ರಯೋಜಕವಾಗಿಸಿದ್ದ ಸ್ಥಳಕ್ಕೆ ಭೇಟಿ ನೀಡಿದ ನಂತರ ಅವರು ಮಾತನಾಡಿದರು.

ಕೋಮುವಾದಿ ಹಣೆಪಟ್ಟಿಯಿರುವ ಮುಸ್ಲಿಂಲೀಗ್‌ನ ಕಾರ್ಯಕರ್ತರು ಮಹಿಳೆಯರು ಮತ್ತು ಅಪ್ರಾಪ್ತ ವಯಸ್ಕರ ಮೇಲೂ ದೌರ್ಜನ್ಯ ಎಸಗಿದ್ದಾರೆ ಮತ್ತು ಹಲ್ಲೆ ನಡೆಸಿದ್ದಾರೆ. ಇಂತಹ ಸಮಾಜದ್ರೋಹಿಗಳ ವಿರುದ್ಧ ಪೊಲೀಸರು ಕಠಿಣ ಕ್ರಮ ಕೈಗೊಳ್ಳಲು ಸಿದ್ಧರಾಗಿರಬೇಕು ಎಂದು ಎಂ.ಎಲ್.ಅಶ್ವಿನಿ ಒತ್ತಾಯಿಸಿದರು. ಮುಸ್ಲಿಂಲೀಗ್ ಕಾರ್ಯಕರ್ತರು ಬಿಜೆಪಿ ಧ್ವಜವನ್ನು ನಾಶಪಡಿಸಿದ ಸ್ಥಳದಲ್ಲಿ ಹೊಸ ಧ್ವಜವನ್ನು ಸ್ಥಾಪಿಸಲಾಯಿತು.

ಬಿಜೆಪಿ ಕಾಸರಗೋಡು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ್ ಕುದ್ರೆಪ್ಪಾಡಿ, ಬಿಜೆಪಿ ಉದುಮ ಮಂಡಲ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕೂಟಕಣಿ, ಮಂಡಲ ಕಾರ್ಯದರ್ಶಿ ಸೌಮ್ಯಾ ಪದ್ಮನಾಭನ್, ಪ್ರಶಾಂತ್ ಚೇಟುಕುಂಡು, ಮಂಡಲ ಸಮಿತಿ ಸದಸ್ಯರಾದ ರಾಜೇಂದ್ರನ್ ಪಳ್ಳಿಕೆರೆ, ಬಾಲರಾಜ್ ಅರಳಿಕಟ್ಟೆ, ಪಳ್ಳಿಕೆರೆ ಪಂಚಾಯತ್ ಸಮಿತಿ ಕಾರ್ಯದರ್ಶಿ ರಂಜಿತ್ ಮುಂತಾದವರು ಈ ಸಂದರ್ಭ ಹಾಜರಿದ್ದರು.

ಜೆಇಇ ಮೈನ್ (ಬಿ.ಆರ್ಕ್ ಮತ್ತು ಬಿ.ಪ್ಲಾನಿಂಗ್) ಫಲಿತಾಂಶ ಪ್ರಕಟ

ಜ್ಞಾನಸುಧಾದ ವಿದ್ಯಾರ್ಥಿಗಳ ಅಮೋಘ ಸಾಧನೆ



ಕಾರ್ಕಳ: ನ್ಯಾಷನಲ್ ಟೆಸ್ಟಿಂಗ್ ಏಜನ್ಸಿ ನಡೆಸುವ ರಾಷ್ಟ್ರ ಮಟ್ಟದ ಇಂಜಿನಿಯರಿಂಗ್ ವಿಭಾಗದ ಬಿ.ಆರ್ಕ್ ಮತ್ತು ಬಿ. ಪ್ಲಾನಿಂಗ್‌ನ 2026ರ ಫಲಿತಾಂಶದಲ್ಲಿ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ 6 ವಿದ್ಯಾರ್ಥಿಗಳು ಬಿ.ಆರ್ಕ್‌ನಲ್ಲಿ ಹಾಗೂ ಹತ್ತು ವಿದ್ಯಾರ್ಥಿಗಳು ಬಿ. ಪ್ಲಾನಿಂಗ್‌ನಲ್ಲಿ 99ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿದ್ದಾರೆ.

ಬಿ ಆರ್ಕ್‌ನಲ್ಲಿ ಸಂಸ್ಥೆಯ ನಿಶಾನ್ ಎನ್. ಸಾಲಿಯಾನ್ ಅವರು 99.8526, ಕನಿಷ್ಕ್ ಎಸ್. ಅಮೀನ್ ಅವರು 99.6502 (ಗಣಿತದಲ್ಲಿ 100 ಪರ್ಸಂಟೈಲ್), ಅಶ್ವಿನ್ ವಿ.ಶೆಟ್ಟಿ 99.5991, ರಿಶಿತ್ ರಾಜ್ 99.2702, ಅನಿರುದ್ಧ್ ರವಿರಾಜ್ ಉಡುಪ 99.1045, ಕೇದಾರ್ ಮನೋಜ್ ರಾಯ್ಕರ್ 99.0492 ಗಳಿಸಿದ್ದಾರೆ. ಬಿ. ಪ್ಲಾನಿಂಗ್ ನಲ್ಲಿ 99 ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿದವರು: ಪ್ರಣವ್ ಎಂ. ಯು. 99.9297, ಅಶ್ವಿನ್ ವಿ. ಶೆಟ್ಟಿ 99.9297, ಅನಿರುದ್ಧ್ ರವಿರಾಜ್ ಉಡುಪ 99.7010, ಇಶಾಂತ್ ಪಾಟೀಲ್ 99.6630, ಕನಿಷ್ಕ್ ಎಸ್. ಅಮೀನ್ 99.5464, ಎನ್.ಎಸ್.ವಿವೇಕ್ 99.3740, ಪ್ರವಲ್ ಪಿ ಶೆಟ್ಟಿ 99.3165, ವಿದ್ವತ್ ವಿ.ಕಾಮತ್ 99.2643 (ಗಣಿತದಲ್ಲಿ 100 ಪರ್ಸಂಟೈಲ್), ಸಂಪತ್ ಪ್ರಭು 99.1504, ಶೋಧನ್ ಆರ್. ಹೆಗ್ಡೆ 99.1218 ಪರ್ಸಂಟೈಲ್ ಗಳಿಸಿದ್ದಾರೆ. ಸಾಧಕರನ್ನು ಜ್ಞಾನಸುಧಾ ಪರಿವಾರ ಅಭಿನಂದಿಸಿದೆ.

ಕೆನರಾ ಇಂಡಸ್ಟ್ರಿಯಲ್ ಟೆಕ್ ಎಕ್ಸ್‌ಪೋ-2026 ಗಮನ ಸೆಳೆದ ಕೆನರಾ ಕಾಲೇಜಿನ ಸ್ಟಾರ್ಟ್‌ಅಪ್



ಮಂಗಳೂರು: ನಗರದ ಕರಾವಳಿ ಪ್ರದರ್ಶನ ಮೈದಾನದಲ್ಲಿ ಇತ್ತೀಚೆಗೆ ನಡೆದ ಕೆನರಾ ಇಂಡಸ್ಟ್ರಿಯಲ್ ಟೆಕ್ ಎಕ್ಸ್‌ಪೋ 2026ರಲ್ಲಿ ಕೆನರಾ ಎಂಜಿನಿಯರಿಂಗ್ ಕಾಲೇಜಿನ ಇಂಕ್ಯುಬೇಷನ್ ಕೇಂದ್ರವಾದ ಕೆನರಾ ಇನೋವೇಷನ್ ಫೌಂಡೇಶನ್ ವತಿಯಿಂದ ವಿದ್ಯಾರ್ಥಿಗಳಿಂದ ರೂಪುಗೊಂಡ ಹಲವಾರು ಸ್ಟಾರ್ಟ್‌ಅಪ್‌ಗಳು ಪ್ರದರ್ಶನಕ್ಕಿಡಲಾಗಿದ್ದು, ವೀಕ್ಷಕರ ಗಮನಸೆಳೆದವು. ಕೃಷಿ, ಆರೋಗ್ಯ, ತಂತ್ರಜ್ಞಾನ ಹಾಗೂ ಪರಿಸರ ಸ್ನೇಹಿ ಕ್ಷೇತ್ರಗಳಲ್ಲಿ ಅಭಿವೃದ್ಧಿಪಡಿಸಲಾದ ಯೋಜನೆಗಳು ವಿಶೇಷ ಮೆಚ್ಚುಗೆ ಪಡೆದವು.

ಕೃಷಿ ಕ್ಷೇತ್ರಕ್ಕೆ ನವೀನ ಪರಿಹಾರಗಳನ್ನು ಒದಗಿಸುವ ವಿದ್ಯಾರ್ಥಿಗಳ ಅಗ್ರಿಟೆಕ್ ಸ್ಟಾರ್ಟ್‌ಅಪ್ ಸಮೃದ್ಧಿ ಆರ್ಗ್ಯಾನಿಕ್ಸ್ ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಿದ್ದು, ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿತು.

ಕೆನರಾ ಹೈಸ್ಕೂಲ್ ಅಸೋಸಿಯೇಷನ್‌ನ ಗೌರವ ಕಾರ್ಯದರ್ಶಿ ಎಂ. ರಂಗನಾಥ ಭಟ್, ಆಡಳಿತ ಮಂಡಳಿ ಸದಸ್ಯ ಬಸ್ತಿ ಪುರುಷೋತ್ತಮ ಶೆಣೈ ಅವರು ಪ್ರದರ್ಶನಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಪ್ರಯತ್ನವನ್ನು ಪ್ರಶಂಸಿಸಿ ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಕೆನರಾ ಇಂಜಿನಿಯರಿಂಗ್ ಕಾಲೇಜಿನ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಡಾ. ಉದಯ ಕುಮಾರ್ ಕೆ. ಶೆಣೈ ಅವರು ಸಿಐಎಫ್ ಇಂಕ್ಯುಬೇಷನ್ ಕೇಂದ್ರದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ಸ್ಟಾರ್ಟ್ ಅಪ್ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಕೆನರಾ ಹೈಸ್ಕೂಲ್ ಅಸೋಸಿಯೇಷನ್‌ನ ದೂರದೃಷ್ಟಿಯ ಫಲವಾಗಿ ಸ್ಥಾಪಿತವಾದ ಈ ಕೇಂದ್ರವು ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಮತ್ತು ನವೀನ ಚಿಂತನೆಗಳನ್ನು ಬೆಳೆಸುವ ಮಹತ್ವದ ವೇದಿಕೆಯಾಗುತ್ತಿದೆ ಎಂದರು.

ಕೆನರಾ ಇನೋವೇಷನ್ ಫೌಂಡೇಶನ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಶಾಂತ್ ಕುಮಾರ್ ಎ. ಅವರು ವಿದ್ಯಾರ್ಥಿಗಳ ಆಲೋಚನೆಗಳನ್ನು ಯಶಸ್ವಿ ಸ್ಟಾರ್ಟ್‌ಅಪ್‌ಗಳಾಗಿ ರೂಪಿಸುವ ದಿಸೆಯಲ್ಲಿ ಮಾರ್ಗದರ್ಶನ ನೀಡಿ, ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ.

ಮೂರು ದಿನಗಳ ಕಾಲ ನಡೆದ ಈ ಕಾರ್ಯಕ್ರಮವನ್ನು ಕೆನರಾ ಎಂಜಿನಿಯರಿಂಗ್ ಕಾಲೇಜಿನ ಪರವಾಗಿ, ಕಾಲೇಜಿನ ಎಂಟ್ರಪ್ರಿನರ್‌ಶಿಪ್ ಡೆವಲಪ್ಮೆಂಟ್ ಸೆಲ್ ಸದಸ್ಯ ಸೂರಜ್ ಪ್ರಸಾದ್ ಎಂ.ಎಚ್. ಸಂಯೋಜಿಸಿದರು.

ಕಣ್ಣೂರಿಗೆ ಮುಖ್ಯ ಪೈಪ್‌ಲೈನ್‌ನಿಂದ ದಿನದ 24 ಗಂಟೆಯೂ ನೀರು | ಈ ವಾರ್ಡ್‌ನಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ

ಕಣ್ಣೂರು ಪ್ರದೇಶ: ನೀರು ಪೂರೈಕೆ ಭರಪೂರ

ದಿಗಂತ ವಾಟರ್ ಚೆಕ್

ಹರೀಶ ಕುಲ್ಕುಂದ

ಮಂಗಳೂರು: ತುಂಬೆ ಡ್ಯಾಂನಿಂದ ಆಗಮಿಸುವ ನೀರಿನ ಮುಖ್ಯ ಕೊಳವೆ ನಗರಕ್ಕೆ ಹಾದುಬರುವಾಗ ಎದುರಾಗುವ ಮಂಗಳೂರು ಮಹಾನಗರ ಪಾಲಿಕೆಯ ಮೊದಲ ವಾರ್ಡ್ ಕಣ್ಣೂರಿನಲ್ಲಿ ನೀರು ಪೂರೈಕೆ ಭರಪೂರ ವಾಗಿದೆ. ತುಂಬೆ ಡ್ಯಾಂಗೆ ಸನಿಹದಲ್ಲಿ, ನೇತ್ರಾವತಿ ನದಿ ತಟದಲ್ಲಿ ಇರುವ ಕಣ್ಣೂರು ಪ್ರದೇಶದಲ್ಲಿ ನೀರಿನ ಸಮಸ್ಯೆಯಿಲ್ಲ. ವೀರನಗರದಿಂದ ಅಡ್ಯಾರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನವರೆಗೆ ಫೈಸಲ್‌ನಗರ ಒಂದು ಭಾಗ, ಪೆರ್ಲ, ಪಡೀಲ್ ಜಂಕ್ಷನ್ ಒಂದು ಭಾಗ, ಕೊಡಕ್ಕಲ್, ಬಳ್ಳೂರು, ಕಣ್ಣೂರು, ದಯಾಂಬು ಪ್ರದೇಶಗಳಲ್ಲಿ ವ್ಯಾಪಿಸಿರುವ ಕಣ್ಣೂರು ವಾರ್ಡ್‌ನಲ್ಲಿ ಈ ಬೇಸಿಗೆಯಲ್ಲಿ ಇದುವರೆಗೆ ನೀರಿನ ಸಮಸ್ಯೆ ಉಂಟಾಗಿಲ್ಲ.

ಈ ವಾರ್ಡ್‌ನ ಕಣ್ಣೂರು ಪ್ರದೇಶಕ್ಕೆ ತುಂಬೆಯಿಂದ ಆಗಮಿಸುವ ಮುಖ್ಯ ಪೈಪ್‌ಲೈನ್‌ನಿಂದ ದಿನದ 24 ಗಂಟೆಯೂ ನೀರು ಒದಗಿಸಲಾಗುತ್ತಿದೆ. ಮುಖ್ಯ ಪೈಪ್‌ಲೈನ್‌ಗೆ ಕಣ್ಣೂರು ಮೊದಲ ವಾರ್ಡ್ ಆಗಿರುವುದು ಇಲ್ಲಿನ ಜನತೆಗೆ ಅನುಕೂಲಕರ ಅಂಶವಾಗಿದೆ. ಪಡೀಲ್ ಟ್ಯಾಂಕ್‌ನಿಂದ ಪೆರ್ಲ, ಶಿವನಗರ, ಕೊಡಕ್ಕಲ್, ಬಳ್ಳೂರು ಪ್ರದೇಶಗಳಿಗೆ ನೀರು ಬರುತ್ತಿದೆ. ಇಲ್ಲಿ ಸಂಜೆಯಿಂದ ರಾತ್ರಿ 1 ಗಂಟೆವರೆಗೆ ನೀರು ಬಿಡಲಾಗುತ್ತಿದೆ. ಬಜಾಲ್ ಟ್ಯಾಂಕ್‌ನಿಂದ ವೀರನಗರ, ಫೈಸಲ್‌ನಗರದ ಭಾಗಕ್ಕೆ ನೀರು ಪೂರೈಕೆಯಾಗುತ್ತಿದೆ.

ತುಂಬೆಯಿಂದ ನೀರು ಪೂರೈಕೆ ಸ್ಥಗಿತಗೊಂಡಾಗ ಅಥವಾ ಇತರ ತಾಂತ್ರಿಕ ಸಮಸ್ಯೆ ಇದ್ದಲ್ಲಿ ಮಾತ್ರ ಈ ವಾರ್ಡ್‌ಗೆ ನೀರು ಪೂರೈಕೆ ನಿಲ್ಲುತ್ತದೆ. ಅದರ ಹೊರತಾಗಿ ಇಲ್ಲ ನೀರಿನ ಸಮಸ್ಯೆ ಇಲ್ಲ. ಆದರೆ, ಈ ವಾರ್ಡ್ ಎತ್ತರ ತಗ್ಗು ಪ್ರದೇಶಗಳನ್ನು ಒಳಗೊಂಡ ಕಾರಣ ಕೆಲವೊಮ್ಮೆ ಎತ್ತರದ ಸ್ಥಳಗಳಿಗೆ ಹಾಗೂ ಗುಡ್ಡ ಪ್ರದೇಶಗಳನ್ನು ಹಾದು ಹೋಗುವ ಪೈಪ್‌ಲೈನ್ ಇರುವ ಸ್ಥಳಗಳಿಗೆ ನೀರು ನಿಧಾನಕ್ಕೆ ಬರುತ್ತಿದೆ ಎನ್ನುತ್ತಾರೆ ಸ್ಥಳೀಯರು.

ಈ ವಾರ್ಡ್‌ಗೆ ಟ್ಯಾಂಕರ್ ಮೂಲಕ ನೀರು ಒದಗಿಸುವ ಸನ್ನಿವೇಶ ಇದುವರೆಗೆ ಸೃಷ್ಟಿಯಾಗಿಲ್ಲ. ವೈದ್ಯನಾಥ ದೈವಸ್ಥಾನ ಬಳಿ ಕೊಳವೆಬಾವಿ ಇದ್ದು, ಅಗತ್ಯ ಸಂದರ್ಭದಲ್ಲಿ ಇದರ ನೀರು ಉಪಯೋಗಿಸಬಹುದು. ವೀರನಗರದಲ್ಲಿ ಸರಕಾರಿ ಬಾವಿ ಇದ್ದು, ಜನತೆ ಬಾವಿ ನೀರು ಬಳಸುತ್ತಿದ್ದಾರೆ. ವಾರ್ಡ್‌ನ ಹೆಚ್ಚಿನ ಮನೆಗಳಲ್ಲಿ ಬಾವಿ ಇದೆ. ಕಣ್ಣೂರು ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ.



ಕಣ್ಣೂರು ವಾರ್ಡ್‌ನಲ್ಲಿ ರಾಜಕಾಲುವೆ ಹೂಳು ತೆಗೆಯಲಾಗುತ್ತಿದೆ

ಮಳೆಗಾಲದಲ್ಲಿ ಪ್ರವಾಹ ಸೃಷ್ಟಿ

ಈ ವಾರ್ಡ್‌ನಲ್ಲಿ ಪಡೀಲ್‌ನಿಂದ ಅಡ್ಯಾರ್ ವರೆಗೆ ರಾಜಕಾಲುವೆಯಿದೆ. ಮಳೆಗಾಲದಲ್ಲಿ ಭಾರಿ ಮಳೆ ಬಂದಾಗ ಕೊಡಕ್ಕಲ್, ಕಣ್ಣೂರು ಭಾಗದಲ್ಲಿ ಕೃತಕ ನೆರೆ ಸಾಮಾನ್ಯ ಎಂಬಂತಾಗಿದೆ. ಭಾರಿ ಮಳೆ ಸುರಿದಾಗ ಫಸ್ಟ್ ನ್ಯೂರೋ ಆಸ್ಪತ್ರೆ ಬಳಿ ರಾಷ್ಟ್ರೀಯ ಹೆದ್ದಾರಿ ಸಂಪೂರ್ಣ ಜಲಾವೃತಗೊಳ್ಳುತ್ತದೆ. ಈ ಪ್ರದೇಶಗಳು ಹಿಂದೆ ಗದ್ದೆಗಳಾಗಿದ್ದು, ಈಗ ಬಹುಮಹಡಿ ಕಟ್ಟಡಗಳು ಎದ್ದುನಿಂತಿವೆ. ಹಿಂದೆ ಗದ್ದೆಗಳಲ್ಲಿ ಶೇಖರಣೆಗೊಳ್ಳುತ್ತಿದ್ದ ಮಳೆ ನೀರು ಹರಿಯಲು ಈಗ ಜಾಗ ಇಲ್ಲದಾಗಿದೆ. ಸರಿಪಳ್ಳ ಪ್ರದೇಶದಿಂದ ಹರಿದು ಬರುವ ಮಳೆ ನೀರು ಇಲ್ಲಿನ ತೋಡುಗಳಲ್ಲಿ ಉಕ್ಕಿ ಹರಿಯುತ್ತದೆ. ಅಗಲ ಕಿರಿದಾದ ತೋಡುಗಳಲ್ಲಿ ಬೃಹತ್ ಪ್ರಮಾಣದಲ್ಲಿ ನೀರು ಹರಿಯುವುದು ಸಾಧ್ಯವಾಗುತ್ತಿಲ್ಲ. ಈ ಎಲ್ಲ ಕಾರಣದಿಂದ ಮಳೆಗಾಲದಲ್ಲಿ ಪ್ರವಾಹ ಸೃಷ್ಟಿಯಾಗುತ್ತದೆ.


ಒಳಚರಂಡಿ ವ್ಯವಸ್ಥೆಯೇ ಇಲ್ಲ

ಕಣ್ಣೂರು ಪ್ರದೇಶ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿದ್ದರೂ, ಇಲ್ಲಿ ಇದುವರೆಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿಲ್ಲ. ಗುಡ್ಡ, ಎತ್ತರ ತಗ್ಗು ಪ್ರದೇಶವಾಗಿರುವ ಕಾರಣ ನೀಡಿ ಇಲ್ಲಿಗೆ ಯುಜಿಡಿ ಲೈನ್ ಆಗಿಲ್ಲ. ಬಹುತೇಕ ಎಲ್ಲ ಕಡೆ ಟಾಯ್ಲೆಟ್ ಪಿಟ್‌ಗಳಿವೆ. ಡ್ರೈನೇಜ್ ಇಲ್ಲದಿರುವುದರಿಂದ ರಸ್ತೆ ಬಳಿಯ ಮಳೆ ನೀರು ಹರಿಯುವ ತೋಡು, ರಾಜಕಾಲುವೆಗಳಲ್ಲಿ ಕೊಳಚೆ ನೀರು ಹರಿಯುತ್ತಿದೆ. ಕೊಳಚೆ ನೀರು ಸೋರಿಕೆಯಾಗಿ ಕೆಲವಡೆ ಬಾವಿಗಳ ನೀರೂ ಕಲುಷಿತಗೊಂಡಿದೆ. ಕಣ್ಣೂರು ವಾರ್ಡ್‌ಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅಗತ್ಯವಾಗಿ ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕು ಎಂದು ಇಲ್ಲಿನ ನಿವಾಸಿಗಳು ಆಗ್ರಹಿಸಿದ್ದಾರೆ.



ಕಣ್ಣೂರು ವಾರ್ಡ್ ತುಂಬೆ ಅಣೆಕಟ್ಟೆಗೆ ಹತ್ತಿರದಲ್ಲಿರುವ ಕಾರಣ ಇಲ್ಲಿಗೆ ಉತ್ತಮ ಪ್ರೆಶರ್‌ನೊಂದಿಗೆ ಪ್ರತಿದಿನ ನೀರು ಪೂರೈಕೆ ಆಗುತ್ತಿದೆ. ಈ ವಾರದಲ್ಲಿ ನೀರಿನ ರೇಷನಿಂಗ್ ಆರಂಭಗೊಂಡ ಬಳಿಕ ಮಂಗಳವಾರ ಕೆಲ ಪ್ರದೇಶಗಳಿಗೆ ನೀರು ತಲುಪಿಲ್ಲ ಎಂಬ ದೂರುಗಳಿವೆ. ಬಳ್ಳೂರು ಕೆರೆ ಅಭಿವೃದ್ಧಿಪಡಿಸಲಾಗಿದ್ದು, ಅಗತ್ಯ ಸಂದರ್ಭ ದಲ್ಲಿ ಇದರ ನೀರನ್ನು ಉಪಯೋಗ ಮಾಡಬಹುದು. ಕಣ್ಣೂರು ವಾರ್ಡ್ ನಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವಂತೆ ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಕೃತಕ ನೆರೆ ತಡೆಗೆ ಶಾಸಕರ ಅನುದಾನದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಡೆಗಳಲ್ಲಿ ರಾಜಕಾಲುವೆ, ತೋಡುಗಳಿಗೆ ತಡೆಗೋಡೆ ನಿರ್ಮಿಸಲಾಗಿದೆ. ಇನ್ನಷ್ಟು ಕಡೆಗಳಲ್ಲಿ ತಡೆಗೋಡೆ ಆಗಬೇಕಿದೆ. ಈ ಬಾರಿ ರಾಜ ಕಾಲುವೆಗಳ ಹೂಳು ತೆಗೆಯಲಾಗುತ್ತಿದೆ. ವೀರನಗರ ಕಟ್ಟೆ ಬಳಿ ಶಾಸಕರ ನಿಧಿ 1.30 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ. ಬಳ್ಳೂರಿನಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ವೈದ್ಯನಾಥ ದೈವಸ್ಥಾನ ಬಳಿ 75 ಲಕ್ಷ ರೂ. ವೆಚ್ಚದಲ್ಲಿ ತಡೆಗೋಡೆ ಆಗಿದೆ. ನಮ್ಮಲ್ಲಿ ಮಳೆಗಾಲದಲ್ಲಿ ಗುಡ್ಡ ಕುಸಿಯುವ ಸಮಸ್ಯೆ ಹೆಚ್ಚಾಗಿದ್ದು, ಬಹುತೇಕ ಕಡೆಗಳಲ್ಲಿ ತಡೆಗೋಡೆ ನಿರ್ಮಿಸಲಾಗಿದೆ.

■ **ಚಂದ್ರಾವತಿ ವಿಶ್ವನಾಥ್,** ಕಣ್ಣೂರು ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್



ನಮ್ಮಲ್ಲಿ ಪ್ರತಿದಿನ ಮನಪಾ ಪೈಪ್‌ಲೈನ್ ಮೂಲಕ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿದೆ. ಪ್ರತಿ ದಿನ ಸಂಜೆ 5.30 ರಿಂದ ರಾತ್ರಿ 12ರವರೆಗೂ ನೀರು ಬರುತ್ತಿದೆ. ಉತ್ತಮ ಪ್ರೆಶರ್‌ನೊಂದಿಗೆ ನೀರು ಬರುತ್ತಿರುವುದರಿಂದ ನಮಗೆ ಇದುವರೆಗೆ ನೀರಿನ ಸಮಸ್ಯೆ ಉಂಟಾಗಿಲ್ಲ.

■ **ದೇವದಾಸ್ ಶೆಟ್ಟಿ,** ಕಂಬ್ಳಕೋಡಿ ಕೊಡಕ್ಕಲ್ ನಿವಾಸಿ



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	10	6	3	1	13	+0.571
ಹೈದರಾಬಾದ್	11	7	4	0	14	+0.737
ಆರ್‌ಸಿಬಿ	9	6	3	0	12	+1.420
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	10	5	5	0	10	+0.151
ದಿಲ್ಲಿ	10	4	6	0	8	-0.949
ಕೆಕೆಆರ್	9	3	5	1	7	-0.539
ಮುಂಬೈ	10	3	7	0	6	-0.649
ಲಖನೌ	9	2	7	0	4	-1.076

ಬೆಂಗಳೂರಿಗೆ 19 ಓವರ್‌ಗಳಲ್ಲಿ 210 ರನ್ ಗುರಿ | ಮಿಚೆಲ್ ಭರ್ಜರಿ ಶತಕ

ಮಾರ್ಷ್ ಸಿಕ್ಸರ್‌ಗಳ ಮಳೆ

ಲಖನೌ: ಮಳೆಯ ಅಡೆತಡೆಯ ನಡುವೆ ಸಿಡಿಲಂತೆ ಸಿಕ್ಸರ್ ಬಾರಿಸಿದ ಮಿಚೆಲ್ ಮಾರ್ಷ್ ದಾಖಲೆಯ ಶತಕ ಬಾರಿಸಿದ್ದು, ಲಖನೌ ಸೂಪರ್ ಜೇಂಟ್ಸ್ ಆರ್‌ಸಿಬಿಗೆ ದೊಡ್ಡ ಗುರಿ ನೀಡಿತು.

ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೊದಲ ಇನ್ನಿಂಗ್ಸ್‌ಗೆ ಮಳೆ ಮೂರು ಬಾರಿ ತಡೆಯೊಡ್ಡಿತು. ಪಂದ್ಯವನ್ನು ಮೊದಲ ಇನ್ನಿಂಗ್ಸ್ ಮಟ್ಟಿಗೆ 19 ಓವರ್‌ಗೆ ಇಳಿಸಲಾಗಿತ್ತು. ಆದರೆ ಮಾರ್ಷ್ ಬ್ಯಾಟಿಂಗ್ ಅಬ್ಬರಕ್ಕೆ ತಡೆಯೊಡ್ಡಲು ಯಾರಿಂದಲೂ ಸಾಧ್ಯವಾಗಲಿಲ್ಲ. 49 ಬಾಲ್‌ಗಳಲ್ಲಿ ಶತಕ ಬಾರಿಸಿದ ಮಾರ್ಷ್ ಒಟ್ಟು 111 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಪೂರನ್ 38 ರನ್ ಗಳಿಸಿದರು. ಪಂತ್ ಭರ್ಜರಿ ಬ್ಯಾಟಿಂಗ್‌ನೊಂದಿಗೆ 32 ರನ್ ಬಾರಿಸಿದ ನಂತರ ಲಖನೌ 209 ರನ್ ಬಾರಿಸಿದೆ.

ಅಬ್ಬರದ ಆರಂಭ: ಲಖನೌ ಸೂಪರ್ ಜೇಂಟ್‌ಗೆ ಅಬ್ಬರದ ಆರಂಭ ಸಿಕ್ಕಿತು. ಅರ್ಶಿನ್ ಕುಲಕರ್ಣಿ ಒಂದು ಬದಿಯಲ್ಲಿ ನಿಂತುಕೊಂಡರೆ, ಮಳೆಯ ನಡುವೆ ಮಿಚೆಲ್ ಮಾರ್ಷ್ ಸಿಕ್ಸರ್‌ಗಳ ಸುರಮಳೆಗೈದರು. ರನ್ ಹೊಳೆಯೇ ಹರಿಸಿದರು. ಹ್ಯಾಜೆಲ್ವುಡ್, ಭುವನೇಶ್ವರ್ ಸೇರಿದಂತೆ ಬಂದ ಬೌಲರ್‌ಗಳನ್ನು ದಂಡಿಸಿದ ಅವರು, 20 ಬಾಲ್‌ಗಳಲ್ಲೇ ಅರ್ಧಶತಕ ಬಾರಿಸಿದರು. ಪವರ್‌ಪ್ಲೇನಲ್ಲಿ ಅವರದ್ದೇ ಆಟ ನಡೆಯಿತು. ನಿಧಾನ ಬ್ಯಾಟಿಂಗ್ ಮಾಡುತ್ತಿದ್ದ ಅರ್ಶಿನ್ ಸ್ಟ್ರೈಕ್ ಪಡೆಯಲೇ ಇಲ್ಲ. ಪವರ್‌ಪ್ಲೇನಲ್ಲಿ ಲಖನೌ 68 ರನ್ ಗಳಿಸಿತು.

ಪವರ್‌ಪ್ಲೇ ಮುಗಿದ ನಂತರ ಸ್ವಲ್ಪ ಹೊತ್ತಿನ ಮಟ್ಟಿಗೆ ಆಟ ನಿಂತಿತು. ಆದರೆ ಆಟದಲ್ಲಿ ಮಾರ್ಷ್ ನಿಲ್ಲಲಿಲ್ಲ. ಬಂದ ಬೌಲರ್‌ಗಳಿಗೆ ಒಂದಾದರೂ ಬೌಂಡರಿಯೊಂದಿಗೆ ಕಳುಹಿಸಿಕೊಟ್ಟರು. ಮಳೆ ನಿಂತ ಮೇಲೆ ಅರ್ಶಿನ್ 24 ಬಾಲ್‌ಗಳಲ್ಲಿ 17 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮುಂದೆ ಕೂಡ ಮಾರ್ಷ್ ಸಿಕ್ಸರ್‌ಗಳ ಸುರಿಮಳೆಗೈದರು.



ಮಾರ್ಷ್ ದಾಖಲೆಯ ಶತಕ: ಮಿಚೆಲ್ ಮಾರ್ಷ್ ದಾಖಲೆಯ ಶತಕ ಬಾರಿಸಿದರು. 49 ಬಾಲ್ ಎದುರಿಸಿದ ಅವರು, 9 ಸಿಕ್ಸರ್, 9 ಬೌಂಡರಿ ಬಾರಿಸಿದ ಅವರು, ಲಖನೌ ತಂಡದ ಪರ ಅತಿ ವೇಗದ ಶತಕ ಬಾರಿಸಿದ ಬ್ಯಾಟರ್ ಅನಿಸಿಕೊಂಡರು. 14ನೇ ಓವರ್ ನಂತರ ಮತ್ತೊಮ್ಮೆ ಮಳೆ ಬಂದು ಪಂದ್ಯ ನಿಂತಿತು. ನಂತರವೂ ಮಾರ್ಷ್ 111 ರನ್‌ಗೆ ಔಟಾದರು. ಅವರೊಂದಿಗೆ ಪೂರನ್ ಕೂಡ ಮಿಂಚಿದರು. ಮಧ್ಯಮ ಓವರ್‌ಗಳಲ್ಲಿ ಲಖನೌ 97 ರನ್ ಗಳಿಸಿತು.

ಸಾಮಾನ್ಯವಾಗಿ ಸಿಕ್ಸರ್‌ಗಳೊಂದಿಗೆ ಮಿಂಚುವ ನಿಕೋಲಸ್ ಪೂರನ್ ಈ ಬಾರಿ ಬೌಂಡರಿಗಳೊಂದಿಗೆ ಮಿಂಚಿದರು. ಅಂತಿಮ ಓವರ್‌ಗಳಲ್ಲಿ ಪಂತ್ ಬಿರುಸಿನ ಬ್ಯಾಟಿಂಗ್ ಮಾಡಿ ಸ್ಕೋರ್ 209ಕ್ಕೆ ಹಿಗ್ಗಿಸಿದರು.

ಭುವಿಗೆ 200 ಪಂದ್ಯ: ಸ್ವಿಂಗ್ ಕಿಂಗ್, ಭರವಸೆಯ ವೇಗಿ ಭುವನೇಶ್ವರ್ ಕುಮಾರ್ ಅವರು ತಮ್ಮ 200ನೇ ಐಪಿಎಲ್ ಪಂದ್ಯವಾಡಿದರು. ಇದರೊಂದಿಗೆ ಈ ಸಾಧನೆ ಮಾಡಿದ ಏಕೈಕ ವೇಗಿ ಅನಿಸಿಕೊಂಡಿದ್ದಾರೆ. 2009ರಲ್ಲಿ ಭುವನೇಶ್ವರ್ ಕುಮಾರ್ ರಾಯಲ್ ಚಾಲೆಂಜರ್ಸ್ ತಂಡದಲ್ಲಿ ತಮ್ಮ ಮೊದಲ ಪಂದ್ಯವನ್ನಾಡಿದ್ದರು. ಅಲ್ಲಿಂದ ಇಲ್ಲಿಯವರೆಗೆ ಭುವಿ ಪುಣೆ ವಾರಿಯರ್ಸ್, ಸನ್‌ರೈಸರ್ಸ್ ಹೈದರಾಬಾದ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಪ್ರತಿನಿಧಿಸಿದ್ದಾರೆ. 2011ರಲ್ಲಿ ಪುಣೆ ತಂಡ ಸೇರಿಕೊಂಡ ಭುವಿ, 2014ರಲ್ಲಿ ಹೈದರಾಬಾದ್ ತಂಡ ಸೇರಿಕೊಂಡರು. 10 ವರ್ಷ ಸನ್ ತಂಡವನ್ನು ಪ್ರತಿನಿಧಿಸಿದ್ದ ಅವರು, 2016ರ ಐಪಿಎಲ್ ಗೆಲ್ಲುವಲ್ಲಿ ಕೂಡ ಪ್ರಮುಖ ಪಾತ್ರ ವಹಿಸಿದ್ದಾರೆ.

ಕ್ಯಾಪಿಟಲ್ಸ್‌ಗಿಂದು ಕೆಕೆಆರ್ ಸವಾಲು

ಹೊಸದಿಲ್ಲಿ: ಮಾಡು ಇಲ್ಲವೇ ಮಡಿ ಪಂದ್ಯದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ತಂಡವು ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು ಶುಕ್ರವಾರದಂದು ಎದುರಿಸಲಿದೆ. ಅಳಿವು-ಉಳಿವು ಪಂದ್ಯದಲ್ಲಿ ಕೆಕೆಆರ್ ಕೂಡ ಸಾಮರ್ಥ್ಯ ಪ್ರದರ್ಶಿಸಬೇಕಿದೆ. ಹಿಂದಿನ ಪಂದ್ಯಗಳಲ್ಲಿ ಎರಡೂ ತಂಡಗಳು ಭಾರೀ ಹಿನ್ನಡೆ ಅನುಭವಿಸಿವೆ. ದಿಲ್ಲಿ ಕ್ಯಾಪಿಟಲ್ಸ್ ಬೆಂಗಳೂರು ತಂಡದೊಂದಿಗೆ ಹೀನಾಯವಾಗಿ ಸೋತ ನಂತರ ಚೆನ್ನೈ ತಂಡದ ವಿರುದ್ಧವೂ ದಿಲ್ಲಿ ಭಾರೀ ಸೋಲನುಭವಿಸಿದೆ. ಹೀಗಿರುವಾಗ ಪಂದ್ಯಾವಳಿಯಲ್ಲಿ ಉಳಿಯಲು ಕೆಕೆಆರ್ ಕೂಡ ಗೆಲ್ಲಲೇಬೇಕಿದೆ.



ಕಳೆದ ಪಂದ್ಯಗಳಲ್ಲಿ ಕೆಕೆಆರ್ ಉತ್ತಮ ಪ್ರದರ್ಶನದೊಂದಿಗೆ ಹ್ಯಾಟ್ರಿಕ್ ಜಯ ಸಾಧಿಸಿದೆ. ಈ ನಡುವೆ ಪಂದ್ಯಾವಳಿಯಿಂದ ಇನ್ನೂ ಅಧಿಕೃತವಾಗಿ ಹೊರಬಿದ್ದಿಲ್ಲ. ಮುಖ್ಯವಾಗಿ ಮೇಲಿನ ತಂಡಗಳು ಸೋತ ನಂತರ ಅಂಕಪಟ್ಟಿ ವಿಚಾರದಲ್ಲಿ ಕುತೂಹಲ ಮೂಡಿದೆ. ರಿಂಕು ಸಿಂಗ್, ಅಜಿಂಕ್ಯ ರಹಾನೆ, ಕ್ಯಾಮರೂನ್ ಗ್ರೀನ್ ಸೇರಿದಂತೆ ಪ್ರಮುಖರ ಬ್ಯಾಟಿಂಗ್ ಬಲದೊಂದಿಗೆ ಕೆಕೆಆರ್ ಕಣಕ್ಕಿಳಿಯುತ್ತಿದೆ. ಇತ್ತ ದಿಲ್ಲಿ ರಾಹುಲ್, ನಿಸ್ಸಂಕ, ಸಮೀರ್, ಮಿಲ್ಲರ್ ಅವರ ಬಲದೊಂದಿಗೆ ಮೈದಾನಕ್ಕಿಳಿಯುತ್ತಿದೆ. ಬೌಲಿಂಗ್ ವಿಚಾರದಲ್ಲಿ ದಿಲ್ಲಿಯಲ್ಲಿ ಎನ್‌ಗಿಡಿ, ನಟರಾಜನ್, ಸ್ಟಾರ್ಕ್ ಇದ್ದರೆ, ಕೆಕೆಆರ್‌ನಲ್ಲಿ ಸುನಿಲ್ ನರೈನ್, ವರುಣ್, ವೈಭವ್ ಇದ್ದಾರೆ.

ಪಿಚ್: ದಿಲ್ಲಿಯಲ್ಲಿ ಪಂದ್ಯ ನಡೆಯಲಿದ್ದು, ಬೌಲರ್ ಹಾಗೂ ಬ್ಯಾಟರ್‌ಗಳು ಸಮಾನ ಪ್ರದರ್ಶನ ನೀಡುವ ಸಾಧ್ಯತೆಯಿದೆ.

ಪಂದ್ಯದ ವಿವರ:
- **ಯಾವಾಗ: ಶುಕ್ರವಾರ**
- **ಎಲ್ಲಿ: ಹೊಸದಿಲ್ಲಿ**
- **ಸಮಯ: ಸಂಜೆ 7:30**
- **ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್**

ಕಿರುಸುದ್ದಿ

ಆಸೀಸ್ ಸರಣಿಗೆ ಭಾರತ ಹಾಕಿ ತಂಡಗಳು ಪ್ರಕಟ

ಹೊಸದಿಲ್ಲಿ: ಮೇ 15 ರಿಂದ 20 ರವರೆಗೆ ಬೆಂಗಳೂರಿನ ಉಧಮ್ ದಾಸ್ ಮೆಹ್ತಾ ಸೆಂಟ್ರಲ್ ಸೆಂಟರ್‌ನಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ವಿರುದ್ಧದ ಮುಂಬರುವ ಸರಣಿಗೆ ಹಾಕಿ ಇಂಡಿಯಾ ಗುರುವಾರ 24 ಸದಸ್ಯರ ಭಾರತೀಯ ಅಂಡರ್-18 ಪುರುಷ ಮತ್ತು ಮಹಿಳಾ ತಂಡಗಳನ್ನು ಪ್ರಕಟಿಸಿದೆ. ರಾಷ್ಟ್ರೀಯ ತರಬೇತಿ ಶಿಬಿರದ ಸಮಯದಲ್ಲಿ ಒಂದು ವಾರದ ಮೌಲ್ಯಮಾಪನದ ನಂತರ ಅಂತಿಮ ತಂಡಗಳನ್ನು ಆಯ್ಕೆ ಮಾಡಲಾಯಿತು, ಅಲ್ಲಿ ಪಂದ್ಯದ ಫಿಟ್‌ನೆಸ್ ಆಧಾರದ ಮೇಲೆ 42 ಆಟಗಾರರ ಆರಂಭಿಕ ಗುಂಪನ್ನು ಕಡಿಮೆ ಮಾಡಲಾಯಿತು.



ಪುರುಷರ ತಂಡ: ಗೋಲ್‌ಕೀಪರ್‌ಗಳು: ಸಾವನ್ ಕುಮಾರ್, ಆಯುಷ್ ರಜಾಕ್, ವಿಶಾಲ್ ಬಡಾ **ಡಿಫೆಂಡರ್‌ಗಳು:** ಅಂಶ್ ಬಹುತ್ರಾ, ಆಶಿಶ್ ತಾನಿ ಪೂರ್ಣಿ, ಅರ್ಮಾನ್ ಸೊರೆಂಗ್, ದೀಪಕ್‌ಪ್ರಕಾಶ್ ಟೊಪ್ಪೊ, ಕರಣ್ ಗೌತಮ್, ಕರಣ್ ಧನುಶ್ **ಮಿಡ್‌ಫೀಲ್ಡರ್‌ಗಳು:** ಪ್ರೇಮ್‌ಚಂದ್, ರಾಹುಲ್, ವರೀಂದರ್, ರೋಮಿತ್, ಅರ್ಜುನ್‌ದೀಪ್, ಗುರ್‌ಮುನ್‌ಪ್ರೀತ್, ಅರ್ಷದೀಪ್, ಅಮ ಮಾಣಿಕಪುರ **ಫಾರ್ವರ್ಡ್‌ಗಳು:** ಆಕಾಶ್, ಕೇಶನ್ ಕುಜ್ಜಾರ್ (ನಾಯಕ), ಶಾರುಖ್ ಅಲಿ, ಗಜೀ ಖಾನ್, ಪ್ರಹ್ಲಾದ್ ರಾಜ್‌ಭರ್, ಸಿದ್ಧಾರ್ಥ್, ಜೆಲಿಸನ್

ಮಹಿಳಾ ತಂಡ: ಗೋಲ್‌ಕೀಪರ್‌ಗಳು: ಮಹಾಕ್ ಪಂಹಾರ್, ಹ್ಯಾರಿ, ಖಿಲಿ **ಡಿಫೆಂಡರ್ಸ್:** ಸುಗನ್, ನಿಲಮ್, ರುಬಿನಾ, ಕಿರಣ್ ಎಕ್ಕಾ, ದಿವ್ಯಾ, ಸುಲೋಚನ **ಮಿಡ್‌ಫೀಲ್ಡರ್‌ಗಳು:** ಶ್ರುತಿ ಕುಮಾರಿ, ದಿಯಾ, ಹರ್ಷಿತಾ, ರಶ್ಮೀನ್, ಲಮಿಂಗ್ಸ್ಟಿ, ನ್ಯಾನ್ಸಿ, ಟೋಂಗ್ಬ್ರಾಮ್ ಲಾಂಚ್ಪ್ಟಿ ದೇವಿ, ಸ್ನೇಹಾ ದಾವ್ಡೆ **ಫಾರ್ವರ್ಡ್‌ಗಳು:** ನೌಶೀನ್, ಸ್ವೇಟಿ ಕುಜೂರ್ (ನಾಯಕಿ), ಪ್ರಿಯಾಂಕಾ ಮಿಂಜ್, ಸಂದೀಪ ಕುಮಾರಿ, ನಮ್ಮಿ ಗೀತಾಶ್ರೀ, ರಾಜಕುಮಾರಿ ಪ್ರಿಯಾ, ಪುಷ್ಪಾ

ಕೊನೊಲಿ ಪರಾಕ್ರಮಕ್ಕಿಲ್ಲ ಜಯ

ಹೈದರಾಬಾದ್: ಇದೇ ಐಪಿಎಲ್‌ನಲ್ಲಿ 265 ರನ್ ಗುರಿ ಪೇರಿಸಿದ ಪಂಜಾಬ್ ತಂಡ ಹೈದರಾಬಾದ್ ನೀಡಿದ್ದ ದೊಡ್ಡ ಗುರಿ ಬೆನ್ನಟ್ಟಿದಾಗ ಆರಂಭಿಕ ವಿಕೆಟ್ ಕಳೆದುಕೊಂಡಿತ್ತು. 23 ರನ್ ಆಗುವಷ್ಟರಲ್ಲಿ 3 ವಿಕೆಟ್ ಬಿದ್ದವು. 63 ರನ್ ದಾಟುವಷ್ಟರಲ್ಲಿ 4, 110 ರನ ಆಗುವಷ್ಟರಲ್ಲಿ 5 ವಿಕೆಟ್ ಬಿದ್ದವು. ಇದೇ ವೇಳೆ ಅಬ್ಬರದ ಬ್ಯಾಟಿಂಗ್ ಮಾಡಿದ ಕೂಪರ್ ಕೊನೊಲಿ ಬೇರೊಂದು ಯೋಜನೆ ಹಾಕಿಕೊಂಡಂತಿತ್ತು. ಆದಾಗ್ಯೂ ಬಿಟ್ಟುಕೊಡದೆ ಭರ್ಜರಿ ಪ್ರದರ್ಶನ ನೀಡಿರುವ ಹೈದರಾಬಾದ್ 33 ರನ್‌ಗಳ ದೊಡ್ಡ ಗೆಲುವಿನೊಂದಿಗೆ ಅಗ್ರಸ್ಥಾನಕ್ಕೇರಿದೆ. ಬಲಿಷ್ಠ ಪಂಜಾಬ್ ತಂಡಕ್ಕೆ ಹ್ಯಾಟ್ರಿಕ್ ಸೋಲಿನಾಘಾತ ನೀಡಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ ಇಶಾನ್(55), ಕ್ಲಾಸೆನ್(69★) ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 234 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಪಂಜಾಬ್ ಕೂಪರ್ (107★) ರನ್‌ಗಳ ಬ್ಯಾಟಿಂಗ್‌ನೊಂದಿಗೆ 7 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿತು.

ಪಂಜಾಬ್ ಪಾಲಿಗೆ ಬಹುತೇಕ ಹೋಗಿದ್ದ ಪಂದ್ಯವನ್ನು ಜಗ್ಗಿದ ಕೂಪರ್ ಹೋರಾಡಿ ಸೋತ ದಾಂಡಿಗರ ಪಟ್ಟಿಯಲ್ಲಿ 22 ವಯಸ್ಸಿನ ಕೊನೊಲಿ ಸೇರಿಕೊಂಡರು. ಎರಡನೇ ಇನ್ನಿಂಗ್ಸ್ ಉದ್ದಕ್ಕೂ ಪಂಜಾಬ್‌ಗೆ ಅವಶ್ಯ ರನ್‌ರೇಟ್ 15 ಇತ್ತು. ಪಂದ್ಯವನ್ನು ಕನಿಷ್ಠ 50 ಕ್ಕೂ ಹೆಚ್ಚು ರನ್‌ಗಳಿಂದ ಸೋಲುವ ಆತಂಕದಲ್ಲಿತ್ತು. ಆದರೆ ಬರೋಬ್ಬರಿ 107 ರನ್ ಬಾರಿಸಿದ ಕೂಪರ್ ಸೋಲಲ್ಲೂ ಮಿಂಚಿದರು. ಆಶ್ಚರ್ಯವಾಗಿ ಪ್ಯಾಟ್ ಕಮ್ಮಿನ್ಸ್‌ಗೆ ಪಂದ್ಯ ಶ್ರೇಷ್ಠ ನೀಡಲಾಯಿತು. ಕ್ಲಾಸೆನ್, ಕಿಶನ್ ಗೆಲುವಿನಲ್ಲಿ ಮಿಂಚಿದರು. ಉಭಯ ತಂಡಗಳ ಫೀಲ್ಡಿಂಗ್ ಕಳಪೆಯಾಗಿತ್ತು.

ಕೊನೊಲಿಗೆ ಮೊದಲನೇ ಶತಕ: ಐಪಿಎಲ್‌ನಲ್ಲಿ ತಮ್ಮ ಮೊದಲ ಆವೃತ್ತಿಯಲ್ಲೇ ಶತಕ ಬಾರಿಸಿದ ಕೂಪರ್ ಕೊನೊಲಿ ವಿವಿಧ ದಾಖಲೆಗಳನ್ನು ಮಾಡಿದರು. ಹಿಂದಿನ ಪಂದ್ಯಗಳಲ್ಲೂ ಗಮನಾರ್ಹ ಪ್ರದರ್ಶನ ನೀಡಿದ್ದ ಅವರು, ನಿಧಾನಗತಿ ಆರಂಭ ಮಾಡಿದರು.

ಸಂಕ್ಷಿಪ್ತ ಸ್ಕೋರ್
- ಹೈದರಾಬಾದ್ 20 ಓವರ್‌ಗಳಲ್ಲಿ 234/4: ಕ್ಲಾಸೆನ್ 69, ಕಿಶನ್ 55; ಚಾಹಲ್ 32/1
- ಪಂಜಾಬ್ 20 ಓವರ್‌ಗಳಲ್ಲಿ 202/7: ಕೊನೊಲಿ 107★, ಸ್ಟೋಯಿನಿಸ್ 28; ಕಮ್ಮಿನ್ಸ್ 34/2

ಹೆಚ್ಚುವರಿ ಟಿಕೆಟ್ ಬೇಡಿಕೆಯಿಂದ ಫೈನಲ್ ಸ್ಥಳಾಂತರ: ಬಿಸಿಸಿಐ


ಹೊಸದಿಲ್ಲಿ: ಪ್ಲೇಆಫ್ ಹಾಗೂ ಫೈನಲ್ ಪಂದ್ಯಕ್ಕಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ 10 ಸಾವಿರ ಹೆಚ್ಚುವರಿ ಟಿಕೆಟ್ ಕೇಳಿತ್ತು, ಹಾಗಾಗಿಯೇ ಪ್ಲೇಆಫ್ ಹಾಗೂ ಫೈನಲ್ ಪಂದ್ಯಗಳನ್ನು ಬೆಂಗಳೂರಿನಿಂದ ಸ್ಥಳಾಂತರಿಸಲಾಗಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ದೇವಜೀತ್ ಸೈಕಿಯಾ ತಿಳಿಸಿದ್ದಾರೆ. ವಾಡಿಕೆಯ ಪ್ರಕಾರ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತವರಾದ ಬೆಂಗಳೂರಲ್ಲಿ ಒಂದು ಪ್ಲೇಆಫ್ ಹಾಗೂ ಫೈನಲ್ ಪಂದ್ಯ ನಡೆಯಬೇಕಿತ್ತು. ಇದಕ್ಕಾಗಿ ಎಲ್ಲಾ ತಯಾರಿಗಳು ನಡೆದಿದ್ದವು. ಆದರೆ ಬುಧವಾರದಂದು ಹಠಾತ್ ವೇಳಾಪಟ್ಟಿ ಪ್ರಕಟಿಸಿದ ಬಿಸಿಸಿಐ, ಪ್ಲೇಆಫ್ ಪಂದ್ಯಗಳಲ್ಲಿ ಎರಡು ಚಂಡೀಗಢ, ಧರ್ಮಶಾಲಾದಲ್ಲಿ ಪ್ಲೇಆಫ್ ಮತ್ತು ಫೈನಲ್ ಪಂದ್ಯವನ್ನು ಅಹಮದಾಬಾದ್‌ಕ್ಕೆ ಸ್ಥಳಾಂತರಿಸಿತ್ತು.

ಇದೇ ವಿಚಾರಕ್ಕೆ ಸಂಬಂಧಿಸಿ ಸುದ್ದಿ ಸಂಸ್ಥೆ ಎಎನ್ ಐಯೊಂದಿಗೆ ಮಾತನಾಡಿರುವ ದೇವಜೀತ್ ಸೈಕಿಯಾ, ಆ ಬೆಂಗಳೂರಲ್ಲೇ ಒಂದು ಪ್ಲೇಆಫ್ ಹಾಗೂ ಫೈನಲ್ ಪಂದ್ಯ ನಡೆಯಬೇಕಿತ್ತು. ಅದರಂತೆ ನಾವು ಮೇ 1ರಂದು ಕೆಎಸ್‌ಸಿಎಗೆ ಮೇಲ್ ಮೂಲಕ ಬೇಕಾದ ಕಾಂಪ್ಲಿಮೆಂಟರಿ ಟಿಕೆಟ್‌ಗಳ ವಿವರ ಕಳುಹಿಸಲು ತಿಳಿಸಿದ್ದೇವು. ಐಪಿಎಲ್ ಪ್ರೋಟೋಕಾಲ್ ಪ್ರಕಾರ ಮೈದಾನದ ಒಟ್ಟು ಸಾಮರ್ಥ್ಯದ ಶೇ. 15ರಷ್ಟು ಟಿಕೆಟ್‌ಗಳನ್ನು ಆಯೋಜನೆ ಮಾಡುವ ಸಂಸ್ಥೆಗಳಿಗೆ ನೀಡಲಾಗುತ್ತದೆ. ಅದರಂತೆ ನಾವು ಅಷ್ಟೇ ಟಿಕೆಟ್‌ಗಳನ್ನು ಕೊಡುತ್ತೇವೆ ಎಂಬ ಮಾಹಿತಿ ಕೊಟ್ಟಿದ್ದೇವು. ಆದರೆ ಕೆಎಸ್‌ಸಿಎ ಅದಕ್ಕಿಂತ ಹೆಚ್ಚು ಟಿಕೆಟ್‌ಗಳನ್ನು ಕೇಳಿತ್ತು ಎಂದು ಹೇಳಿದ್ದಾರೆ.

ಬೇಡಿಕೆ ಕೇಳಿ ಆಘಾತವಾಯಿತು: ಬಿಸಿಸಿಐ: ಮೇ 2ಕ್ಕೆ ಬಿಸಿಸಿಐಗೆ ಕೆಎಸ್‌ಸಿಎ ಮೂಲಕ ಮೇಲ್ ಒಂದು ಬಂದಿದ್ದು, ಅದರಲ್ಲಿ ಕೆಎಸ್‌ಸಿಎ ಇಟ್ಟ ಬೇಡಿಕೆ ಕೇಳಿ ನಮಗೆ ಆಘಾತವಾಯಿತು ಎಂದು ಸೈಕಿಯಾ ತಿಳಿಸಿದ್ದಾರೆ. ಈ ಮೊದಲೇ ನಮಗೆ ಕೆಎಸ್‌ಸಿಎ ಹೆಚ್ಚುವರಿ ಕಾಂಪ್ಲಿಮೆಂಟರಿ ಟಿಕೆಟ್ ತೆಗೆದುಕೊಳ್ಳುತ್ತಿರುವ ವಿಚಾರ ಮೂಲಗಳಿಂದ ಗೊತ್ತಾಗಿತ್ತು. ಅದಕ್ಕಾಗೇ ಈ ಪ್ರಶ್ನೆ ಕೇಳಿದ್ದೇವು.

ಆರ್ಚರಿ ವಿಶ್ವಕಪ್: ಮಹಿಳೆಯರಿಗೆ ಜಯ

ಹೊಸದಿಲ್ಲಿ: ಚೀನಾದ ಶಾಂಘೈನಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ಹಂತ-2 ನಲ್ಲಿ ಭಾರತಕ್ಕೆ ಮಿಶ್ರ ಫಲಿತಾಂಶ ದೊರಕಿದೆ. ಮಹಿಳಾ ರಿಕರ್ವ್ ತಂಡ ದಶಕಗಳಿಂದ ವಿಶ್ವ ಬಿಲ್ಲುಗಾರಿಕೆಯನ್ನು ಆಳುತ್ತಿರುವ ದಕ್ಷಿಣ ಕೊರಿಯಾವನ್ನು ಮಣಿಸಿ ದೇಶಕ್ಕೆ ಮೊದಲ ಪದಕ ಖಚಿತಪಡಿಸಿಕೊಳ್ಳುವಲ್ಲಿ ಯಶಸ್ವಿಯಾದರೆ, ಪುರುಷರ ತಂಡ ಬಾಂಗ್ಲಾದೇಶ ವಿರುದ್ಧ ಆಘಾತಕಾರಿ ಸೋಲು ಕಂಡು ನಿರಾಸೆ ಮೂಡಿಸಿತು.




ಮಹಿಳಾ ತಂಡಕ್ಕೆ ಜಯ: ಅನುಭವಿಗಳಾದ ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಕಿಶೋರಿಯರಾದ ಕುಂಕುಮ್ ಮೊಹೋಡ್ ಒಳಗೊಂಡ ಭಾರತೀಯ ಮಹಿಳಾ ತಂಡ, ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾವನ್ನು 5-1 ಅಂತರದಿಂದ ಮಣಿಸಿ ಚಿನ್ನದ ಪದಕದ ಸುತ್ತಿಗೆ ಪ್ರವೇಶಿಸಿತು. ಇದೀಗ ಭಾರತ, ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಆತಿಥೇಯ ಚೀನಾವನ್ನು ಎದುರಿಸಲಿದೆ. ಪಂದ್ಯದ ಆರಂಭದಿಂದಲೇ ಆತ್ಮವಿಶ್ವಾಸದಿಂದ ಆಡಿದ ಭಾರತೀಯರು ಮೊದಲ ಸೆಟ್‌ನಲ್ಲಿ 58 ಅಂಕ ಕಲೆಹಾಕಿ ಕೊರಿಯಾವನ್ನು 55ಕ್ಕೆ ಕಟ್ಟಿಹಾಕಿದರು. ಎರಡನೇ ಸೆಟ್ 56-56 ಸಮಬಲಗೊಂಡರೂ ಭಾರತ 3-1 ಮುನ್ನಡೆ ಸಾಧಿಸಿತು. ಮೂರನೇ ಸೆಟ್‌ನಲ್ಲೂ ಭಾರತ ಮತ್ತೊಮ್ಮೆ 58 ಅಂಕ ಗಳಿಸಿದರೆ, ಒತ್ತಡಕ್ಕೆ ತತ್ತರಿಸಿದ ಕೊರಿಯಾ 56 ಅಂಕಗಳಿಗೆ ಸೀಮಿತವಾಯಿತು.

ಆದರೆ ಈ ಬಾರಿ ಕೊರಿಯಾ ತನ್ನ ಪೂರ್ಣ ಬಲಿಷ್ಠ ತಂಡವನ್ನು ಕಣಕ್ಕಿಳಿಸಿರಲಿಲ್ಲ. ಹೊಸ ಆಟಗಾರ್ತಿಯರಾದ ಲೀ ಯುಂಜಿ ಮತ್ತು ಓ ಯೆಜಿನ್ ತಂಡದಲ್ಲಿದ್ದರೆ, ವಿಶ್ವ ಚಾಂಪಿಯನ್ ಕಾಂಗ್ ಚೆಯಾಂಗ್ ಮಾತ್ರ ಅನುಭವಿಯಾಗಿದ್ದರು. ಒಲಿಂಪಿಕ್ ಚಾಂಪಿಯನ್‌ಗಳಾದ ಆನ್ ಸಾನ್ ಮತ್ತು ಲಿಂ ಸಿಹ್ಯೋನ್ ಸೇರಿದಂತೆ ಕೆಲವು ಪ್ರಮುಖ ಆಟಗಾರ್ತಿಯರು ಗೈರಾಗಿದ್ದರು. ಇದಕ್ಕೂ ಮೊದಲು ಭಾರತ, ಆರಂಭಿಕ ಸುತ್ತಿನಲ್ಲಿ ಉಜ್ಬೇಕಿಸ್ತಾನ ವಿರುದ್ಧ 6-2 ಅಂತರದ ಜಯ ದಾಖಲಿಸಿತ್ತು. ಕ್ವಾರ್ಟರ್‌ಫೈನಲ್‌ನಲ್ಲಿ ವಿಯೆಟ್ನಾಂ ವಿರುದ್ಧ ತೀವ್ರ ಪೈಪೋಟಿಯ ಶೂಟ್‌ಆಫ್‌ನಲ್ಲಿ 28-25 ಅಂತರದಿಂದ ಗೆದ್ದು ಸೆಮಿಫೈನಲ್‌ಗೆ ಪ್ರವೇಶಿಸಿತು.

ಪುರುಷರಿಂದ ನಿರಾಸೆ: ಇನ್ನೊಂದೆಡೆ ಪುರುಷರ ತಂಡದ ಪ್ರದರ್ಶನ ಸಂಪೂರ್ಣ ನಿರಾಸೆ ಮೂಡಿಸಿತು. ಅನುಭವಿಗಳಾದ ತರುಣದೀಪ್ ರೈ, ಧೀರಜ್ ಬೊಮ್ಮದೇವರ ಮತ್ತು ಯಶದೀಪ್ ಭೋಗೆ ಒಳಗೊಂಡ ಭಾರತ ತಂಡ, ಬಾಂಗ್ಲಾದೇಶ ವಿರುದ್ಧ ಒಂದೂ ಸೆಟ್ ಗೆಲ್ಲದೆ 2-6 ಅಂತರದ ಸೋಲು ಕಂಡಿತು. ಮೊದಲ ಸೆಟ್‌ನಲ್ಲಿ ಭಾರತ ಕೇವಲ 52 ಅಂಕ ಗಳಿಸಿದರೆ, ಬಾಂಗ್ಲಾದೇಶ 55 ಅಂಕ ಪಡೆದು ಮುನ್ನಡೆ ಸಾಧಿಸಿತು. ಬಳಿಕವೂ ಭಾರತೀಯ ಆಟಗಾರರು ನಿರಂತರತೆಯನ್ನು ಕಾಯ್ದುಕೊಳ್ಳಲಿಲ್ಲ. ಅಂತಿಮ ಸೆಟ್‌ನಲ್ಲಿ ಬಾಂಗ್ಲಾದೇಶದ ಅಬ್ದುರ್ ರಹ್ಮಾನ್ ಅಲಿಫ್, ರಾಮ ಕೃಷ್ಣ ಸಾಹಾ ಮತ್ತು ಮೊಹಮ್ಮದ್ ಮಿಶಾದ್ ಪ್ರಧಾನ ಭರ್ಜರಿ ಪ್ರದರ್ಶನ ನೀಡಿ ಭಾರತವನ್ನು ಟೂರ್ನಿಯಿಂದ ಹೊರಹಾಕಿದರು. ಮಿಶ್ರ ತಂಡ ವಿಭಾಗದಲ್ಲೂ ಭಾರತಕ್ಕೆ ನಿರಾಸೆಯಾಯಿತು. ಧೀರಜ್ ಮತ್ತು ಅಂಕಿತಾ ಜೋಡಿ ಬ್ರೆಜಿಲ್ ವಿರುದ್ಧ ಶೂಟ್‌ಆಫ್‌ನಲ್ಲಿ 4-5 ಅಂತರದಿಂದ ಸೋತು ಹೊರ ನಡೆಯಿತು.

ಪದಬಂಧ 5977

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ವ್ಯಾಧಿಯಿಂದ ಬಳಲುತ್ತಿರುವ ಬೇಡ (2)
2.ಯಾವಾಗಲೂ ನೀರು ಒಸರುವ ಭೂಮಿ (3)
4.ಲೋಭಿಯು ಕಡೆ ತಿರುಗಿದಾಗ ಕಂಡ ವಿಶ್ವ (2)
6.ಗಣಿಯ ನಡುವೆ ಕುಳಿತ ಧೈರ್ಯಸ್ಥೆ (4)
8.ಕಸ ನಡುವೆ ತಿರುಗಿ ತಿಕ್ಕಾಟವಾಯ್ತು (4)
10.ಹಿಡಿಯುವುದು–ಮಂಕು ಕವಿದ ಸ್ಥಿತಿ (3)
11.ದತ್ತು ಈ ನಡುವೆ ಮಾಡಿದ ಸಹಿ (3)
13.ತುತ್ತಿಗಾಗಿ ದುಡಿಯುತ್ತಿರುವ ಸೇವಕ (3)
15.ನಡುಕ ಸೂಚಿಸುವ ಅನುಕರಣ ಶಬ್ದ (4)
16.ಸಮಯ ತಿಳಿಸುವ ಸಾಧನ (4)

ಮೇಲಿನಿಂದ ಕೆಳಕ್ಕೆ
1.ಅಧ್ಯಯನ–ಜ್ಞಾನ ಗಳಿಸುವ ಕ್ರಿಯೆ (3)
2.ಕಣಿ ಕೇಳಲು ಬಂದ ಹೆಣ್ಣು ಭೂತ (3)
3.ಬಿಡಾರ–ತಾತ್ಕಾಲಿಕ ವಸತಿಯಿದು (3)
5.ಕಸಿಯ ನಡುವೆ ಡೇರೆ ಹಾಕುವವನಿದ್ದಾನೆ (3)
7.ಹವಾಮಾನದ ಸಮಾನಪದ (4)
9.ಯಾವಾಗಲೂ ಸಂತೋಷದಿಂದಿರುವವನು (4)
10.ಆಕಾಶಕಾಯಗಳ ಚಲನೆಯಿಂದಾಗುವ ಪರಿಣಾಮ (4)
12.ಶಿವ–ಕುತ್ತಿಗೆ ಇರುವ ಆವಶ್ಯಕತೆ ತಲೆಕೆಳಗಾಗಿದೆ (4)
13.ಮಕ್ಕಳ ಮುದ್ದಾದ ಮಾತು (3)
14.ಗಾಯಕನಿಗೆ ಕಾಣುತ್ತಿರುವ ಆಕಾಶ (3)

5976 ಉತ್ತರ

ಎಡದಿಂದ ಬಲಕ್ಕೆ:
1.ಹಣ್ಣು 4.ಜಂಬ
6.ರಜನೀಶ 8.ಮಿಡಿಗಾಯಿ
10.ರಸಿಕ 11.ಕಂಸ
12.ನಮೂದು 14.ಗರಿ
16.ಹಾದಿಹೋಕ
17.ಧರಾಶಾಯಿ

ಮೇಲಿನಿಂದ ಕೆಳಕ್ಕೆ :
1.ಹಗುರ 2.ಪರಾಶರ
3.ಮಾಧ್ಯಮಿಕ
5.ಬಡಾಯಿ 7.ಜನವಾಸ
9.ಗಾರುಡಿಗ 11.ಕಂದಹಾರ
12.ನಡುಕಟ್ಟು
13.ದುರ್ಯೋಧನ
15.ರಿಯಾಯಿತಿ

ಸೋಮನಾಥ ಎಂಬ ಭಾರತದ ಅಜೇಯ ಚೈತನ್ಯ

ಪುಟ 9➡ನಮ್ಮ ಪುರಾತನ ಗ್ರಂಥಗಳು ಹೇಳುವಂತೆ: ಪ್ರಭಾಸಂ ಚ ಪರಿಕ್ರಮ್ಯ ಪೃಥಿವೀಕ್ರಮಸಂಭವಮ್. ಇದರರ್ಥ, ಪವಿತ್ರ ಪ್ರಭಾಸ ಕ್ಷೇತ್ರದ(ಸೋಮನಾಥ) ಪ್ರದಕ್ಷಿಣೆಯು ಇಡೀ ಭೂಮಂಡಲದ ಪ್ರದಕ್ಷಿಣೆಗೆ ಸಮಾನವಾದುದು! ಇಲ್ಲಿಗೆ ಜನರು ಪ್ರಾರ್ಥನೆ ಸಲ್ಲಿಸಲು ಬಂದಾಗಲೆಲ್ಲಾ, ಎಂದಿಗೂ ಆರಿಹೋಗದ ನಾಗರಿಕತೆಯ ಜ್ವಾಲೆಯ ನಿರಂತರತೆಯನ್ನು ಅನುಭವಿಸಿದ್ದಾರೆ. ಸಾಮ್ರಾಜ್ಯಗಳು ಉದಯಿಸಿದವು ಮತ್ತು ಪತನಗೊಂಡವು, ಕಾಲದ ಅಲೆಗಳು ಬದಲಾದವು, ಇತಿಹಾಸವು ಆಕ್ರಮಣ ಮತ್ತು ಏರುಪೇರುಗಳ ನಡುವೆ ಸಾಗಿತು ಆದರೂ, ಸೋಮನಾಥವು ನಮ್ಮ ಪ್ರಜ್ಞೆಯಲ್ಲಿ ಚಿರಸ್ಥಾಯಿಯಾಗಿ ಉಳಿದುಬಂದಿದೆ. ದಬ್ಬಾಳಿಕೆಯ ಮುಂದೆ ಎದೆಯುಬ್ಬಿಸಿ ನಿಂತ ಅಸಂಖ್ಯಾತ ಮಹನೀಯರನ್ನು ಸ್ಮರಿಸುವ ಸಮಯವಿದು. ಲಕುಲೀಶ ಮತ್ತು ಸೋಮ ಶರ್ಮನ್ ಅವರು ಪ್ರಭಾಸ ಕ್ಷೇತ್ರವನ್ನು ತತ್ವಶಾಸ್ತ್ರದ ಮಹಾನ್ ಕೇಂದ್ರವಾಗಿ ಪರಿವರ್ತಿಸಿ ದ್ದರು. ವಲ್ಲಭಿಯ ಚಕ್ರವರ್ತಿ ಮಹಾರಾಜ ನಾಲ್ಕನೇ ಧರಸೇನ ಶತಮಾನಗಳ ಹಿಂದೆ ಇಲ್ಲಿ ಎರಡನೇ ದೇವಾಲಯವನ್ನು ನಿರ್ಮಿಸಿದನು.

ಆಕ್ರಮಣಗಳ ವಿರುದ್ಧ ನಾಗರಿಕತೆಯ ಗೌರವವನ್ನು ರಕ್ಷಿಸಿದ್ದಕ್ಕಾಗಿ ಭೀಮ ದೇವ, ಜಯಪಾಲ ಮತ್ತು ಆನಂದಪಾಲರನ್ನು ಯಾವಾಗಲೂ ಸ್ಮರಿಸಲಾಗುತ್ತದೆ. ರಾಜ ಭೋಜ ಕೂಡ ಪುನರ್‌ನಿರ್ಮಾಣ ಕಾರ್ಯದಲ್ಲಿ ನೆರವಾಗಿದ್ದನೆಂದು ಹೇಳಲಾಗುತ್ತದೆ. ಗುಜರಾತ್‌ನ ರಾಜಕೀಯ ಮತ್ತು ಸಾಂಸ್ಕೃತಿಕ ಶಕ್ತಿಯನ್ನು ಮರುಸ್ಥಾಪಿಸುವಲ್ಲಿ ಕರ್ಣ ದೇವ ಮತ್ತು ಸಿದ್ಧರಾಜ ಜಯಸಿಂಹ ಪ್ರಮುಖ ಪಾತ್ರ ವಹಿಸಿದ್ದರು. ಭಾವ ಬೃಹಸ್ಪತಿ, ಕುಮಾರಪಾಲ ಸೋಲಂಕಿ ಮತ್ತು ಪಾಶುಪತ ಆಚಾರ್ಯರು ಈ ಕ್ಷೇತ್ರವನ್ನು ಮಹಾನ್ ಆರಾಧನಾ ಮತ್ತು ಕಲಿಕಾ ಕೇಂದ್ರವಾಗಿ ಮರುನಿರ್ಮಿಸಿ, ಪೋಷಿಸಿದರು. ವಿಶಾಲದೇವ ವಘೇಲಾ ಮತ್ತು ತ್ರಿಪುರಾಂತಕರು ಇದರ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸಂಪ್ರದಾಯಗಳನ್ನು ರಕ್ಷಿಸಿದರು. ವಿನಾಶದ ನಂತರ ಪೂಜಾ ಕೈಂಕರ್ಯಗಳನ್ನು ಪುನಶ್ಚೇತನಗೊಳಿಸುವಲ್ಲಿ ಮಹಿಪಾಲದೇವ ಮತ್ತು ರಾ ಖಿಂಗಾರ್ ಅವರು ಕಾರಣಕರ್ತರಾದರು. ಕಠಿಣ ಸಂದರ್ಭಗಳಲ್ಲೂ ಭಕ್ತಿಯ ನಿರಂತರತೆಯನ್ನು ಖಚಿತಪಡಿಸಿದ ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳ್ಕರ್ ಅವರ 300ನೇ ಜನ್ಮ ಶತಮಾನೋತ್ಸವವನ್ನು ಈಗ ಆಚರಿಸಲಾಗುತ್ತಿದೆ. ಯಾತ್ರಾರ್ಥಿಗಳ ಹಕ್ಕುಗಳನ್ನು ರಕ್ಷಿಸಿದ ಬರೋಡಾದ ಗಾಯಕ್ವಾಡ್‌ಗಳೂ ಇದ್ದರು ಮತ್ತು ಮುಖ್ಯವಾಗಿ, ಸೋಮನಾಥದ ಜೀವಂತ ಸ್ಮೃತಿಯ ಭಾಗವಾಗಿರುವ ತಮ್ಮ ತ್ಯಾಗ ಮತ್ತು ಸಾಹಸಕ್ಕಾಗಿ ವೀರ ಹಮೀರ್ಜಿ ಗೋಹಿಲ್ ಮತ್ತು ವೀರ ವೆಗ್ಡಾಜಿ ಭೀಲ್ ಅವರಂತಹ ಶೂರ ವ್ಯಕ್ತಿಗಳನ್ನು ಪೋಷಿಸಿದ ನಮ್ಮ ಮಣ್ಣು ಧನ್ಯವಾದುದು.

1940ರ ದಶಕದಲ್ಲಿ, ಭಾರತದಾದ್ಯಂತ ಸ್ವಾತಂತ್ರ್ಯದ ಕಿಚ್ಚು ಹರಡಿದ್ದಾಗ ಮತ್ತು ಸರ್ದಾರ್ ಪಟೇಲರಂತಹ ಮಹೋನ್ನತ ನಾಯಕರ ನೇತೃತ್ವದಲ್ಲಿ ಹೊಸ ಗಣರಾಜ್ಯಕ್ಕೆ ಅಡಿಪಾಯ ಹಾಕುವಾಗ, ಒಂದು ವಿಷಯವು ಅವರನ್ನು ಗಾಢವಾಗಿ ಕಾಡುತ್ತಲೇ ಇತ್ತು... ಅದು ಸೋಮನಾಥದ ಸ್ಥಿತಿ. 1947ರ ನವೆಂಬರ್ 13ರಂದು, ದೀಪಾವಳಿಯ ಸಮಯದಲ್ಲಿ, ಅವರು ದೇವಾಲಯದ ಶಿಥಿಲಗೊಂಡ ಅವಶೇಷಗಳ ಪಕ್ಕದಲ್ಲಿ ನಿಂತು, ಕೈಯಲ್ಲಿ ಸಮುದ್ರದ ನೀರನ್ನು ಹಿಡಿದು ಹೀಗೆ ಹೇಳಿದರು, (ಗುಜರಾತಿ) ಹೊಸ ವರ್ಷದ ಈ ಶುಭ ದಿನದಂದು, ಸೋಮನಾಥವನ್ನು ಪುನರ್‌ನಿರ್ಮಿಸಬೇಕೆಂದು ನಾವು ನಿರ್ಧರಿಸಿದ್ದೇವೆ. ಸೌರಾಷ್ಟ್ರದ ಜನರೇ, ನೀವು ನಿಮ್ಮ ಕೈಲಾದಷ್ಟು ಶ್ರಮಿಸಬೇಕು. ಇದು ಎಲ್ಲರೂ ಪಾಲ್ಗೊಳ್ಳಬೇಕಾದ ಪವಿತ್ರ ಕಾರ್ಯವಾಗಿದೆ. ಸರ್ದಾರ್ ಪಟೇಲರ ಈ ಒಂದು ಸ್ಪಷ್ಟ ಕರೆಗೆ, ಕೇವಲ ಗುಜರಾತ್‌ನ ಜನತೆ ಮಾತ್ರವಲ್ಲದೆ ಇಡೀ ಭಾರತದ ಜನತೆಯೂ ಉತ್ಸಾಹದಿಂದ ಸ್ಪಂದಿಸಿದರು.

ದುರದೃಷ್ಟವಶಾತ್, ಸರ್ದಾರ್ ಪಟೇಲರು ಅತೀವ ಆಸಕ್ತಿಯಿಂದ ಕಂಡ ಕನಸಿನ ಸಾಕಾರವನ್ನು ಕಣ್ಣಾರೆ ಕಾಣಲು ವಿಧಿ ಅವರಿಗೆ ಅವಕಾಶ ನೀಡಲಿಲ್ಲ. ಪುನರ್‌ನಿರ್ಮಿತ ಸೋಮನಾಥ ದೇವಾಲಯವು ಭಕ್ತರಿಗಾಗಿ ತನ್ನ ಬಾಗಿಲುಗಳನ್ನು ತೆರೆಯುವ ಮೊದಲೇ ಅವರು ಈ ಲೋಕವನ್ನು ಅಗಲಿದ್ದರು. ಆದರೂ, ಅವರ ಪ್ರಭಾವವು ಪ್ರಭಾಸ ಪಟ್ಟಣದ ಪವಿತ್ರ ತೀರಗಳಲ್ಲಿ ಅನುರಣಿಸುತ್ತಲೇ ಇತ್ತು. ಅವರ ದೃಷ್ಟಿಕೋನವನ್ನು ಶ್ರೀ ಕೆ.ಎಂ. ಮುನ್ಷಿಯವರು ಮುಂದುವರಿಸಿದರು ಮತ್ತು ಅವರಿಗೆ ನವನಗರದ ಜಾಮ್ಸಾಹೇಬರು ಸಮರ್ಥ ಬೆಂಬಲ ನೀಡಿದರು. 1951ರಲ್ಲಿ ದೇವಾಲಯದ ನಿರ್ಮಾಣ ಪೂರ್ಣಗೊಂಡಾಗ, ಉದ್ಘಾಟನಾ ಸಮಾರಂಭಕ್ಕೆ ಭಾರತದ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್ ಅವರನ್ನು ಆಹ್ವಾನಿಸಲು ನಿರ್ಧರಿಸಲಾಯಿತು. ಅಂದಿನ ಪ್ರಧಾನಮಂತ್ರಿ ಪಂಡಿತ್ ನೆಹರೂ ಅವರ ತೀವ್ರ ವಿರೋಧವನ್ನೂ ಮೀರಿ, ಡಾ. ಪ್ರಸಾದ್ ಅವರು ಸಮಾರಂಭದಲ್ಲಿ ಭಾಗವಹಿಸಿದರು, ತನ್ಮೂಲಕ ಆ ಕ್ಷಣವನ್ನು ಮತ್ತಷ್ಟು ವಿಶೇಷ ಮತ್ತು ಐತಿಹಾಸಿಕವಾಗಿಸಿದರು.

ನನ್ನ ಮನಸ್ಸು 2001ರ ಅಕ್ಟೋಬರ್ ತಿಂಗಳಿಗೂ ಮರಳುತ್ತಿದೆ, ಆಗಷ್ಟೇ ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದೆ. 2001ರ ಅಕ್ಟೋಬರ್ 31, ಸರ್ದಾರ್ ಪಟೇಲರ ಜಯಂತಿಯ ದಿನದಂದು, ಸೋಮನಾಥ ದೇವಾಲಯವು ತನ್ನ ಬಾಗಿಲುಗಳನ್ನು ತೆರೆದು 50 ವರ್ಷಗಳಾದ ಸವಿನೆನಪಿಗಾಗಿ ಕಾರ್ಯಕ್ರಮವೊಂದನ್ನು ಆಯೋಜಿಸುವ ಗೌರವ ಗುಜರಾತ್ ಸರ್ಕಾರಕ್ಕೆ ಲಭಿಸಿತ್ತು. ಇದು ಸರ್ದಾರ್ ಪಟೇಲರ 125ನೇ ಜನ್ಮ ಜಯಂತಿಯ ಆಚರಣೆಯ ಸಮಯವೂ ಆಗಿತ್ತು. ಅಂದಿನ ಪ್ರಧಾನಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿ ಮತ್ತು ಅಂದಿನ ಗೃಹ ಸಚಿವರಾದ ಎಲ್.ಕೆ. ಆಡ್ವಾಣಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

1951ರ ಮೇ 11 ರಂದು ನೀಡಿದ ತಮ್ಮ ಭಾಷಣದಲ್ಲಿ, ಡಾ. ರಾಜೇಂದ್ರ ಪ್ರಸಾದ್ ಅವರು ಸೋಮನಾಥ ದೇವಾಲಯವು ಜಗತ್ತಿಗೆ ಸಾರುವುದೇನೆಂದರೆ, ಅಪ್ರತಿಮ ನಂಬಿಕೆ ಮತ್ತು ಪ್ರೀತಿಯನ್ನು ಹೊಂದಿರುವ ಯಾವುದನ್ನೇ ಆಗಲಿ ನಾಶಪಡಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಈ ದೇವಾಲಯವು ಜನರ ಹೃದಯಗಳಲ್ಲಿ ನೆಲೆಸಲಿದೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು. ದೇವಾಲಯದ ಪುನರ್‌ನಿರ್ಮಾಣವು ಸರ್ದಾರ್ ಪಟೇಲರ ಕನಸಿನ ಸಾಕಾರವಾಗಿದೆ. ಆದರೆ, ಅದೇ ಸ್ಫೂರ್ತಿಯನ್ನು ಮುಂದಕ್ಕೆ ಕೊಂಡೊಯ್ಯುತ್ತಾ, ಜನರ ಜೀವನದಲ್ಲಿ ಸಮೃದ್ಧಿಯನ್ನು ಮರಳಿ ತರುವುದು ಮುಖ್ಯ ಎಂದು ಅವರು ಹೇಳಿದರು. ಇವು ಅವರು ನೀಡಿದ ಪ್ರಮುಖ ಮತ್ತು ಸ್ಫೂರ್ತಿದಾಯಕ ಸಂದೇಶಗಳಾಗಿವೆ.

ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ನಾವು ಇದೇ ಹಾದಿಯಲ್ಲಿ ಸಾಗುತ್ತಿದ್ದೇವೆ. ವಿಕಾಸದ ಜತೆಗೆ ಪರಂಪರೆ (ವಿಕಾಸ್ ಭಿ, ವಿರಾಸತ್ ಭಿ) ಎಂಬ ತತ್ವದಿಂದ ಸ್ಫೂರ್ತಿ ಪಡೆದು, ಸೋಮನಾಥದಿಂದ ಕಾಶಿಯವರೆಗೆ, ಕಾಮಾಖ್ಯದಿಂದ ಕೇದಾರನಾಥದವರೆಗೆ, ಅಯೋಧ್ಯೆಯಿಂದ ಉಜ್ಜಯಿನಿಯವರೆಗೆ ಹಾಗೂ ತ್ರಯಂಬಕೇಶ್ವರದಿಂದ ಶ್ರೀಶೈಲದವರೆಗೆ, ನಮ್ಮ ಆಧ್ಯಾತ್ಮಿಕ ಕೇಂದ್ರಗಳ ಸಾಂಪ್ರದಾಯಿಕ ಸ್ವರೂಪವನ್ನು ಸಂರಕ್ಷಿಸುತ್ತಲೇ ಅವುಗಳನ್ನು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಸಜ್ಜುಗೊಳಿಸುವ ಅವಕಾಶ ನಮ್ಮ ತಂಡಕ್ಕೆ ಲಭಿಸಿರುವುದನ್ನು ನಾನು ನನ್ನ ಸೌಭಾಗ್ಯವೆಂದು ಪರಿಗಣಿಸುತ್ತೇನೆ. ಇದರೊಂದಿಗೆ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನಗಳು ಹೆಚ್ಚಿನ ಜನರು ಈ ಸ್ಥಳಗಳಿಗೆ ಭೇಟಿ ನೀಡುವುದನ್ನು ಖಚಿತಪಡಿಸುತ್ತವೆ. ಇದು ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸುತ್ತದೆ, ಜೀವನೋಪಾಯವನ್ನು ಭದ್ರಪಡಿಸುತ್ತದೆ ಮತ್ತು ಏಕ್ ಭಾರತ, ಶ್ರೇಷ್ಠ ಭಾರತದ ಸ್ಫೂರ್ತಿಯನ್ನು ಗಾಢವಾಗಿಸುತ್ತದೆ.

ಸೋಮನಾಥವನ್ನು ರಕ್ಷಿಸಲು ಪ್ರಾಣ ಅರ್ಪಿಸಿದವರ ಮತ್ತು ಅದನ್ನು ಪದೇ ಪದೇ ಪುನರ್‌ನಿರ್ಮಿಸಿದವರ ಹೋರಾಟಗಳು ಮತ್ತು ತ್ಯಾಗಗಳನ್ನು ಎಂದಿಗೂ ಮರೆಯಲಾಗುವುದಿಲ್ಲ. ಭಾರತದ ವಿವಿಧ ಮೂಲೆಗಳಿಂದ ಬಂದ ಅಸಂಖ್ಯಾತ ವ್ಯಕ್ತಿಗಳು ಅದರ ವೈಭವವನ್ನು ಮರುಸ್ಥಾಪಿಸಲು ಕೊಡುಗೆ ನೀಡಿದ್ದಾರೆ. ಅವರು ಭಾರತದ ಪ್ರತಿಯೊಂದು ಭಾಗವನ್ನೂ ಪವಿತ್ರವೆಂದು ಕಂಡರು, ಭೌಗೋಳಿಕತೆಯನ್ನು ಮೀರಿದ ಏಕತೆಯ ಭಾವನೆಯಿಂದ ಅವರು ಒಂದಾಗಿದ್ದರು. ವಿಭಜನೆಗಳಿಂದ ಕೂಡಿದ ಇಂದಿನ ಜಗತ್ತಿನಲ್ಲಿ, ಈ ಏಕತೆಯ ಮನೋಭಾವವು ಎಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ. ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಏಕತೆಯ ಭಾವನೆ ಮತ್ತು ಸಾಮೂಹಿಕ ನಾಗರಿಕ ಪ್ರಜ್ಞೆ ಜೀವಂತವಾಗಿರುವುದರಿಂದ, ಸೋಮನಾಥವು ತನ್ನೆಲ್ಲಾ ವೈಭವದೊಂದಿಗೆ ಅಚಲವಾಗಿ ನಿಲ್ಲುವುದನ್ನು ಮುಂದುವರಿಸುತ್ತದೆ. ಇದಕ್ಕೆ ಗೌರವ ಸಲ್ಲಿಸುವ ಸಲುವಾಗಿ, ಸಾವಿರ ವರ್ಷಗಳ ಅಸಾಧಾರಣ ಶೌರ್ಯವನ್ನು ಸ್ಮರಿಸುತ್ತಾ, ಮುಂದಿನ ಸಾವಿರ ದಿನಗಳ ಕಾಲ ಸೋಮನಾಥದಲ್ಲಿ ವಿಶೇಷ ಪೂಜೆಗಳು ನಡೆಯಲಿವೆ. ಈ ಪೂಜೆಗಳಿಗಾಗಿ ಅನೇಕ ಜನರು ದೇಣಿಗೆ ನೀಡುತ್ತಿರುವುದು ಸಂತಸ ತಂದಿದೆ. ಈ ವಿಶೇಷ ಸಮಯದಲ್ಲಿ ಸೋಮನಾಥಕ್ಕೆ ಪ್ರಯಾಣಿಸಬೇಕೆಂದು ನಾನು ಭಾರತೀಯರಲ್ಲಿ ವಿನಂತಿಸುತ್ತೇನೆ. ನೀವು ಸೋಮನಾಥದ ತೀರದಲ್ಲಿ ನಿಂತಾಗ, ಅಲ್ಲಿನ ಪ್ರಾಚೀನ ಪ್ರತಿಧ್ವನಿಗಳು ನಿಮ್ಮೊಂದಿಗೆ ಮಾತನಾಡಲು ಅವಕಾಶ ಮಾಡಿಕೊಡಿ. ನೀವು ಕೇವಲ ಭಕ್ತಿಪರವಶರಾಗುವುದು ಮಾತ್ರವಲ್ಲದೆ, ಎಂದಿಗೂ ಮಾಸದ, ಅಖಂಡವಾದ ಮತ್ತು ಅಚಲವಾದ ನಾಗರಿಕತೆಯ ಚೇತನದ ಬಲಿಷ್ಠ ನಾಡಿಮಿಡಿತವನ್ನು ಅನುಭವಿಸುವಿರಿ. ನೀವು ಭಾರತದ ಅಜೇಯ ಚೇತನವನ್ನು ಅನುಭವಿಸುವಿರಿ ಮತ್ತು ಎಷ್ಟೇ ಪ್ರಯತ್ನಗಳ ಹೊರತಾಗಿಯೂ ನಮ್ಮ ಸಂಸ್ಕೃತಿಯು ಏಕೆ ಪರಾಜಯಗೊಳ್ಳದೆ ಉಳಿಯಿತು ಎಂಬುದನ್ನು ಅರ್ಥಮಾಡಿಕೊಳ್ಳುವಿರಿ; ಅಷ್ಟೇ ಅಲ್ಲದೆ, ಶಾಶ್ವತ ವಿಜಯದ ದರ್ಶನವನ್ನು ಪಡೆಯುವ ಅವಕಾಶ ನಿಮ್ಮದಾಗಲಿದೆ. ಇದು ಖಂಡಿತವಾಗಿಯೂ ಮರೆಯಲಾಗದ ಅನುಭವವಾಗಲಿದೆ.

ಜೈ ಸೋಮನಾಥ.

(ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀ ಸೋಮನಾಥ ಟ್ರಸ್ಟ್‌ನ ಅಧ್ಯಕ್ಷರೂ ಆಗಿದ್ದಾರೆ)





Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಶುಕ್ರವಾರ 08, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ
ದಕ್ಷಿಣ ಕನ್ನಡ 34⁰ 26⁰ | ಉಡುಪಿ 34⁰ 27⁰


ಪುಟ 2
ಮರಳು ಅಭಾವದಿಂದ ಅರ್ಧಕ್ಕೆ ನಿಂತ ಅಜ್ಜಾವರದ ಗ್ರಾಮೀಣ ರಸ್ತೆ ಕೆಲಸ


ಪುಟ 6
ಬೀಗ ಹಾಕಿದ ಮನೆಯ ಸುರಕ್ಷತೆ ಹೊಣೆ ಪೊಲೀಸ್ ಇಲಾಖೆಗೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಗೋಡೆಯಲ್ಲಿ ಬರೋಬ್ಬರಿ ನಾಗರ ಹಾವಿನ 26 ಮರಿಗಳ ಮೊಕ್ಕಾಂ!


ನೆರಿಯ ಗ್ರಾಮದ ಕುಡುಮಡ್ಕದಲ್ಲಿ ಅಚ್ಚರಿಯ ವಿದ್ಯಮಾನ | ಕಳೆದ ಹತ್ತು ದಿನಗಳಿಂದ ಸಾಗಿತ್ತು ತಾಯಿಯ ಬಾಣಂತನ

ಬೆಳ್ತಂಗಡಿ ತಾಲೂಕಿನ ನೆರಿಯ ಗ್ರಾಮದ ಕುಡುಮಡ್ಕದಲ್ಲಿ ಮನೆಯ ಗೋಡೆಯೊಳಗೆ ಅಡಗಿದ್ದ ತಾಯಿ ನಾಗರಹಾವು ಮತ್ತು ಅದರ 26 ಮರಿಗಳನ್ನು ಸಾಹಸಮಯವಾಗಿ ರಕ್ಷಿಸಿ ಚಾರ್ಮಾಡಿ ಘಾಟಿ ಅರಣ್ಯ ಪ್ರದೇಶದಲ್ಲಿ ಬಿಡಲಾಗಿದೆ. ಕಳೆದ ಕೆಲವು ದಿನಗಳಿಂದ ಮನೆಯ ಬಳಿ ನಾಗರಹಾವು ಸಂಚರಿಸುತ್ತಿದ್ದುದನ್ನು ಗಮನಿಸಿದ ಸ್ಥಳೀಯರು ಮಾಹಿತಿ ನೀಡಿದ ಬಳಿಕ ನಡೆದ ಕಾರ್ಯಾಚರಣೆಯಲ್ಲಿ ಗೋಡೆಯೊಳಗೆ ಮರಿಗಳು ಪತ್ತೆಯಾಗಿ ಶಾಕ್ ನೀಡಿತ್ತು. ಸುಮಾರು 10 ದಿನಗಳ ಹಿಂದೆ ಮೊಟ್ಟೆಯಿಂದ ಹೊರಬಂದಿರಬಹುದಾದ ಎಲ್ಲಾ ಮರಿಗಳೂ ಆರೋಗ್ಯವಾಗಿವೆ ಎಂದು ಸ್ನೇಕ್ ಅನಿಲ್ ತಿಳಿಸಿದ್ದಾರೆ. ಇತ್ತೀಚೆಗಷ್ಟೇ ಇದೇ ಭಾಗದಲ್ಲಿ ಪತ್ತೆಯಾಗಿದ್ದ 16 ನಾಗರಹಾವಿನ ಮೊಟ್ಟೆಗಳನ್ನು ಕೂಡ ಅವರು ರಕ್ಷಿಸಿ ಕೃತಕ ಕಾವು ನೀಡಿ ಮರಿಗಳನ್ನು ಅರಣ್ಯಕ್ಕೆ ಬಿಟ್ಟಿದ್ದಾರೆ.

ಬೆಳ್ತಂಗಡಿ: ಇಲ್ಲಿನ ನೆರಿಯ ಗ್ರಾಮದ ಕುಡುಮಡ್ಕದ ಮನೆಯೊಂದರ ಗೋಡೆಯಲ್ಲಿ ನಾಗರಹಾವಿನ ಬರೋಬ್ಬರಿ 26 ಮರಿಗಳು ಪತ್ತೆಯಾಗಿದ್ದು, ತಾಯಿ ಹಾವು ಹಾಗೂ ಮರಿಗಳನ್ನು ರಕ್ಷಿಸಿ ಅರಣ್ಯ ಪ್ರದೇಶಕ್ಕೆ ಸುರಕ್ಷಿತವಾಗಿ ಬಿಡಲಾಗಿದೆ.

ಮನೆಯಲ್ಲಿ ಅಡ್ಡಾಡುತ್ತಿದ್ದ ತಾಯಿ ನಾಗರ!

ಇಲ್ಲಿನ ಮನೆಯ ಗೋಡೆಯಲ್ಲಿ ಕಳೆದ ಕೆಲವು ದಿನಗಳಿಂದ ನಾಗರಹಾವೊಂದು ಆಗಾಗ ಸುಳಿದಾಡುತ್ತಿರುವುದನ್ನು ಕಂಡ ಶ್ರೀನಿವಾಸಗೌಡ ಎಂಬವರು ಈ ಬಗ್ಗೆ ಕಕ್ಕಿಂಜೆಯ ಉರಗ ಮಿತ್ರ, ಶ್ರೀ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ತಂಡದ ಸದಸ್ಯ ಸ್ನೇಕ್ ಅನಿಲ್ ಅವರಿಗೆ ಬುಧವಾರ ಮಾಹಿತಿ ನೀಡಿದ್ದರು. ಈ ವೇಳೆ ಮನೆಗೆ ಆಗಮಿಸಿದ ಅವರು, ಭಾರೀ ಸಾಹಸಪಟ್ಟು ತಾಯಿ ನಾಗರಹಾವನ್ನು ಹಿಡಿದಿದ್ದಾರೆ.





ಗೋಡೆಯಲ್ಲಿ ಕಂಡಿತು ಮರಿಗಳ ಸೈನ್ಯ!

ಅಚ್ಚರಿ ಎಂಬಂತೆ ಈ ವೇಳೆ ಗೋಡೆಯಲ್ಲಿ ಮರಿಗಳು ಕಂಡು ಬಂದವು. ಗೋಡೆಯಲ್ಲಿದ್ದ 26 ಮರಿಗಳನ್ನು ಹಿಡಿದು ಅವುಗಳನ್ನು ತಾಯಿ ಸಹಿತ ಚಾರ್ಮಾಡಿ ಘಾಟಿ ಅರಣ್ಯ ಪ್ರದೇಶದ ಸುರಕ್ಷಿತ ಜಾಗದಲ್ಲಿ ಗುರುವಾರ ಬಿಡಲಾಗಿದೆ. ಈ ವೇಳೆ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಸ್ಥಳೀಯರು ಸಹಕರಿಸಿದರು. ಕಳೆದ ಕೆಲವು ದಿನಗಳ ಹಿಂದೆ ಗುಂಡಿಕಂಡ ಎಂಬಲ್ಲಿ ಮನೆ ಗೋಡೆಯೊಂದರಲ್ಲಿ ಪತ್ತೆಯಾಗಿದ್ದ ನಾಗರಹಾವಿನ 16 ಮೊಟ್ಟೆಗಳನ್ನು ಅನಿಲ್ ಅವರು ರಕ್ಷಿಸಿ ಅವುಗಳಿಗೆ ಕೃತಕ ಕಾವು ನೀಡಿ ರಕ್ಷಿಸಿ ಕಾಡಿಗೆ ಬಿಟ್ಟಿದ್ದರು.

ಆರೋಗ್ಯವಾಗಿವೆ ಮರಿಗಳು

ಕುಡುಮಡ್ಕದ ಮನೆಯೊಂದರ ಗೋಡೆಯಲ್ಲಿ ಪತ್ತೆಯಾದ ಈ ಮರಿಗಳು ಸುಮಾರು 10 ದಿನಗಳ ಹಿಂದೆ ಮೊಟ್ಟೆಯಿಂದ ಹೊರಬಂದಿರಬಹುದು ಎಂದು ಅಂದಾಜಿಸಲಾಗಿದ್ದು ಎಲ್ಲವೂ ಆರೋಗ್ಯ ಪೂರ್ಣವಾಗಿ ಇರುವುದಾಗಿ ಅನಿಲ್ ಅವರು ತಿಳಿಸಿದ್ದಾರೆ.

- ನೆರಿಯ ಗ್ರಾಮದ ಮನೆ ಗೋಡೆಯಲ್ಲಿ ತಾಯಿ ನಾಗರಹಾವು ಹಾಗೂ 26 ಮರಿಗಳು ಪತ್ತೆ
- ಸ್ಥಳೀಯರ ಮಾಹಿತಿ ಮೇರೆಗೆ ಉರಗಮಿತ್ರ ಸ್ನೇಕ್ ಅನಿಲ್ ಭೇಟಿ
- ತಾಯಿ ಹಾವು ಹಿಡಿಯುವ ವೇಳೆ ಗೋಡೆಯೊಳಗೆ ಕಂಡ ಮರಿ ಸೈನ್ಯ
- ಆರೋಗ್ಯವಾಗಿರುವ ಮರಿಗಳು, ಹತ್ತು ದಿನಗಳ ಹಿಂದೆ ಮೊಟ್ಟೆಯಿಂದ ಹೊರಬಂದಿರಬಹುದಾದ ಶಂಕೆ

ಸುತ್ತಮುತ್ತ

ಧರ್ಮಸ್ಥಳ ಪ್ರಕರಣ: ಎಸ್‌ಐಟಿ ಕಚೇರಿಗೆ ಗಿರೀಶ್ ಮಟ್ಟಣ್ಣನವರ್

ಬೆಳ್ತಂಗಡಿ: ಧರ್ಮಸ್ಥಳ ಪ್ರಕರಣ ಸಂಬಂಧ ವಿಚಾರಣೆಗಾಗಿ ಸೌಜನ್ಯ ಪರ ಹೋರಾಟಗಾರ ಗಿರೀಶ್ ಮಟ್ಟಣ್ಣನವರ್ ಇಂದು ಬೆಳ್ತಂಗಡಿ ಎಸ್‌ಐಟಿ ಮುಂದೆ ಹಾಜರಾಗಿದ್ದಾರೆ. ಪ್ರಕರಣದಲ್ಲಿ ಹಳೆಯ ಆಂಡ್ರಾಯ್ಡ್ ಮೊಬೈಲ್ ಉಪಯೋಗಿಸಿದ್ದನ್ನು ತನಿಖೆಗಾಗಿ ಎಸ್‌ಐಟಿ ಗೆ ನೀಡಲು ಅವರಿಗೆ ನೋಟೀಸ್ ಜಾರಿ ಮಾಡಲಾಗಿತ್ತು. ಅದರಂತೆ ಮಟ್ಟಣ್ಣನವರ್ ಮೊಬೈಲ್ ಅನ್ನು ಎಸ್‌ಐಟಿ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ.

ತೋಡಿನ ಬದಿಯಲ್ಲಿ ದಾಸ್ತಾನಿಟ್ಟಿದ್ದ 100 ಟನ್ ಮರಳು ಸ್ವಾಧೀನ

ಬಂಟ್ವಾಳ: ಉಳಿ ಗ್ರಾಮದ ಬರ್ಕಜಾಲು ಎಂಬಲ್ಲಿ ತೋಡಿನ ಬದಿ ಸರಕಾರಿ ಜಾಗದಲ್ಲಿ ಅಕ್ರಮ ಮರಳು ದಾಸ್ತಾನು ಇರಿಸಿದ್ದ ಸ್ಥಳಕ್ಕೆ ದಾಳಿ ನಡೆಸಿದ ಪೂಂಜಾಲಕಟ್ಟೆ ಪೊಲೀಸರು 100 ಟನ್ ಮರಳನ್ನು ವಶಪಡಿಸಿಕೊಂಡು ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ನದಿಯ ಬದಿಯಲ್ಲಿ ಮೂರು ಕಡೆ ಖಾಲಿ ಜಾಗದಲ್ಲಿ ಸುಮಾರು 10 ಟಿಪ್ಪರ್ ನಷ್ಟು ಮರಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವುದು ಕಂಡು ಬಂದಿದೆ.

ಕೆಎಸ್ಸಾರ್ಟಿಸಿ ಚಾಲಕಗೆ ಕಾರು ಚಾಲಕ ಹಲ್ಲೆ: ಪ್ರಕರಣ ದಾಖಲು

ಮಂಗಳೂರು: ಕಾರು ಚಾಲಕನೊಬ್ಬ ಕೆಎಸ್‌ಆರ್‌ಟಿಸಿ ಬಸ್ಸು ಚಾಲಕನ ಕರ್ತವ್ಯಕ್ಕೆ ಅಡ್ಡಿ ಪಡಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ ಬಗ್ಗೆ ಕಂಕನಾಡಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಂಗಳೂರಿನಿಂದ ಪುತ್ತೂರಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸಿನ ಚಾಲಕ ಪಿ. ಜಯರಾಮ ಹಲ್ಲೆಗೊಳಗಾದವರು. ಬುಧವಾರ ಬೆಳಗ್ಗೆ 10 ಗಂಟೆ ವೇಳೆಗೆ ರಾ.ಹೆ. 73ರ ವಳಚ್ಚಿಲ್ ಜಂಕ್ಷನ್‌ನಲ್ಲಿ ಘಟನೆ ನಡೆದಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಹಳೇ ಆರೋಪಿಯ ಬಂಧನ

ಬಂಟ್ವಾಳ: ಇಲ್ಲಿನ ಗ್ರಾಮಾಂತರ ಠಾಣೆಯಲ್ಲಿ ದಾಖಲಾದ ಪ್ರಕರಣವೊಂದಕ್ಕೆ ಸಂಬಂಧಿಸಿ ಆರೋಪಿ ತಾಲೂಕಿನ ಕರಿಯಂಗಳ ಗ್ರಾಮದ ನಿವಾಸಿ ದುನಿಯಾ ಶರೀಫ್ ಯಾನೆ ಮಹಮ್ಮದ್ ಶರೀಫ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ನಿಜವಾದ ಹವಾಮಾನ ಇಲಾಖೆ ಭವಿಷ್ಯ

ಮತ್ತೆ ಮಳೆಯ ಕಳೆ!

ರಸ್ತೆಗೆ ಉರುಳಿದ ಗೆಲ್ಲು | ಸಂಚಾರಕ್ಕೆ ಅಡ್ಡಿ

ಮಂಗಳೂರು/ಮುಲ್ಕಿ: ನೆತ್ತಿ ಸುಡುವ ಬಿಸಿಲ ಬೇಗೆಯಿಂದ ತತ್ತರಿಸಿದ್ದ ಜನತೆಗೆ ವಿವಿಧ ಕಡೆಗಳಲ್ಲಿ ಗುರುವಾರ ಸುರಿದ ಭಾರೀ ಮಳೆ ತಂಪನ್ನು ನೀಡಿದೆ.

ಮುಲ್ಕಿ ಪರಿಸರದಲ್ಲಿ ಬೆಳಿಗ್ಗೆ ಸುಮಾರು 9 ಗಂಟೆಗೆ ಸುರಿದ ಭಾರೀ ಮಳೆಗೆ ವಾಹನ ಸವಾರರು ಹಾಗೂ ಜನತೆ ತತ್ತರಿಸಿದರು. ಭಾರೀ ಮಳೆಗೆ ಗ್ರಾಮೀಣ ಭಾಗದ ರಸ್ತೆಗಳು ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ಕೆಸರುಮಯವಾಗಿ ಪರಿಣಮಿಸಿದ್ದು ಸಭೆ ಸಮಾರಂಭಗಳಿಗೆ ಹೋಗುವ ಜನರಿಗೆ ತೀವ್ರ ತೊಂದರೆ ಉಂಟಾಯಿತು.

ರಾಜ್ಯ ಹೆದ್ದಾರಿಗೆ ಉರುಳಿದ ಗೆಲ್ಲು

ಭಾರೀ ಮಳೆ ಗಾಳಿಗೆ ಕುಬೆವೂರು ರೈಲ್ವೆ ಮೇಲ್ಸೇತುವೆ ಬಳಿ ಬೃಹದಾಕಾರದ ಮರದ ಗೆಲ್ಲು ಕಿನ್ನಿಗೋಳಿ – ಮುಲ್ಕಿ ರಾಜ್ಯ ಹೆದ್ದಾರಿಗೆ ಬಿದ್ದು ವಾಹನ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಯಿತು. ಬಳಿಕ ರಾಜ್ಯ ಹೆದ್ದಾರಿಗೆ ಬಿದ್ದ ಮರದ ಭಾರೀ ಗೆಲ್ಲನ್ನು ಸ್ಥಳೀಯರ ನೆರವಿನೊಂದಿಗೆ ತೆರವುಗೊಳಿಸಲಾಯಿತು.



ಲೋಟಸ್ ಪಾರ್ಕ್ ಹೊಸಬೆಟ್ಟು ಪ್ರದೇಶದಲ್ಲಿ ಸಂಕಷ್ಟ

ಸುರತ್ಕಲ್: ಇಲ್ಲಿನ ಲೋಟಸ್ ಪಾರ್ಕ್, ಹೊಸಬೆಟ್ಟು ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿಯಿಂದ ಹರಿದು ಬರುವ ಮಳೆ ನೀರು ನೇರವಾಗಿ ಜನವಸತಿ ಪ್ರದೇಶದ ಮನೆಗಳಿಗೆ ನುಗ್ಗುತ್ತಿರುವ ಸಮಸ್ಯೆ ಕಳೆದ ಸುಮಾರು 25 ವರ್ಷಗಳಿಂದ ಮುಂದುವರಿದಿದ್ದರೂ ಇದುವರೆಗೆ ಯಾವುದೇ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಸ್ಥಳೀಯ ಜನತೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. »ಪುಟ 6



ಮಳೆ ಪೂರ್ವ ಸಿದ್ಧತೆ, ಚರಂಡಿ ಸ್ವಚ್ಛತೆಗೆ ಆಗ್ರಹ

ಗ್ರಾಮೀಣ ಭಾಗದ ಅತಿಕಾರಿಬೆಟ್ಟು,ಕಿಲ್ಪಾಡಿ, ಪಡುಪಣಂಬೂರು, ಕೆಮ್ರಾಲ್, ಐಕಳ, ಬಳ್ಕುಂಜೆ, ಹಳೆಯಂಗಡಿ ಪಂಚಾಯತ್ ಆಡಳಿತ ಅಧಿಕಾರಿಗಳು ಎಚ್ಚೆತ್ತು ಮಳೆಗಾಲದ ಪೂರ್ವ ಸಿದ್ಧತೆಗಳನ್ನು ನಡೆಸಿ ಚರಂಡಿ ಸ್ವಚ್ಛಗೊಳಿಸಿ, ಮಳೆ ನೀರು ಹರಿದು ಹೋಗುವ ವ್ಯವಸ್ಥೆ ಮಾಡಲು ಸಾಮಾಜಿಕ ಕಾರ್ಯಕರ್ತ ಶರತ್ ಕಾರ್ನಾಡ್ ಆಗ್ರಹಿಸಿದ್ದಾರೆ.

ಪ್ರಯಾಣಕ್ಕೆ ಪರದಾಟ

ಮಳೆ ನೀರಿನಿಂದಾಗಿ ಅಲ್ಲಲ್ಲಿ ರಸ್ತೆಯಲ್ಲೇ ನೀರು ನಿಂತು ವಾಹನ ಚಾಲಕರು ಪ್ರಯಾಣಕ್ಕೆ ಸಾಕಷ್ಟು ಪ್ರಯಾಸ ಪಡಬೇಕಾಯಿತು.

ಬಿರುಗಾಳಿ, ಗುಡುಗಿನ ಸಾಥ್

ಉಡುಪಿ ಜಿಲ್ಲೆಗೆ ತಂಪೆರೆದ ಮಳೆ

ತಗ್ಗು ಪ್ರದೇಶಗಳಲ್ಲಿ ಕೃತಕ ನೆರೆ

ಉಡುಪಿ: ಜಿಲ್ಲೆಯಲ್ಲಿ ಗುರುವಾರ ಭಾರೀ ಮಳೆಯಾಗಿದ್ದು, ಬಿಸಿಲ ಬೇಗೆಗೆ ಬೆಂದ ಜನರು ಒಂದಿಷ್ಟು ನಿಟ್ಟುಸಿರು ಬಿಟ್ಟಿದ್ದಾರೆ.

ಉಡುಪಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಿರುಗಾಳಿ ಹಾಗೂ ಗುಡುಗು ಸಹಿತ ಭಾರೀ ಮಳೆಯಾಗಿದೆ.

ಬೆಳಗ್ಗಿನಿಂದ ಮೋಡ ಕವಿದ ವಾತಾವರಣವಿತ್ತು. ಉಡುಪಿ ನಗರ ಸಂತೆಕಟ್ಟೆ, ಹಿರಿಯಡ್ಕ, ಆಲೆವೂರು, ಕೋಟ, ಕಾರ್ಕಳ, ಬೈಲೂರು, ಕಾಪು, ಶಿರ್ವ, ದೆಂದೂರ ಕಟ್ಟೆ ಮಣಿಪಾಲ, ಕಟಪಾಡಿಯಲ್ಲಿ ಉತ್ತಮ ಮಳೆ ಸುರಿದಿದೆ.

ತಗ್ಗು ಪ್ರದೇಶಗಳಲ್ಲಿ ತಾತ್ಕಾಲಿಕ ನೆರೆ ಸೃಷ್ಟಿ

ಕಳೆದ ಕೆಲವು ವಾರಗಳಿಂದ ಬಿಸಿಲಿನ ತಾಪಮಾನದಿಂದ ಬಳಲುತ್ತಿದ್ದ ಜನರಿಗೆ ಕೊಂಚ ವಿಶ್ರಾಂತಿ ಸಿಕ್ಕಿದಂತಾಗಿದೆ. ಭಾರೀ ಮಳೆಯಿಂದ ನಗರದ ಕೆಲವು ಭಾಗದ ತಗ್ಗು ಪ್ರದೇಶಗಳಲ್ಲಿ ಕೃತಕ ಕೆರೆ ಸೃಷ್ಟಿಯಾಗಿದ್ದು, ಚಾಲಕರು, ಪಾದಾಚಾರಿಗಳು ಪರದಾಡುವಂತಾಯಿತು. ಮುಂದಿನ ಏಳು ದಿನ ಅಲ್ಲಲ್ಲಿ ಗುಡುಗು ಸಿಡಿಲು, ಬಲವಾದ ಗಾಳಿಯೊಂದಿಗೆ ಮಳೆಯ ಸಾಧ್ಯತೆ ಇದೆ.



ಶಿರ್ವ ಪರಿಸರದಲ್ಲಿ ಸುರಿದ ಮಳೆಗೆ ತಂಪಾಯಿತು ಇಳೆ

ಬೆಳಗ್ಗೆ 10 ಗಂಟೆ ಸುಮಾರಿಗೆ ತಂಪಾದ ಗಾಳಿ ಬೀಸುತ್ತಿದ್ದಂತೆ ಸಾಧಾರಣ ಗುಡುಗು ಸಹಿತ ಎರಡು ತಾಸು ಸುರಿದ ಮಳೆಗೆ ವಾತಾವರಣ ತಂಪಾಯಿತು. ಮಲ್ಲಿಗೆ ಕೃಷಿಕರಿಗಂತೂ ಒಂದು ವಾರ ನೀರು ಹಾಕುವ ಪ್ರಮೇಯ ಇಲ್ಲ. ಬಿರುಸಾಗಿ ಸುರಿದ ಮಳೆಯಿಂದ ಇಳೆಯಿಲ್ಲ ತಂಪಾಯಿತು. ಅದೃಷ್ಟವಶಾತ್ ಎಲ್ಲೂ ಯಾವುದೇ ಮಳೆಹಾನಿ ಸಂಭವಿಸಿಲ್ಲ.

ಮಾಧ್ಯಮಗಳ ಸಚಿತ್ರ ವರದಿ ಬೆನ್ನಲ್ಲೇ ಎಚ್ಚೆತ್ತ ಬಂಟ್ವಾಳ ಪುರಸಭೆ

ನದಿಗೆ ತ್ಯಾಜ್ಯ ಎಸೆದಾತಗೆ ಕಾನೂನು ಕುಣಿಕೆ

ಬಂಟ್ವಾಳ: ನೇತ್ರಾವತಿ ನದಿಗೆ ತ್ಯಾಜ್ಯ ಎಸೆದು ನೀರು ಕಲುಷಿತಗೊಳಿಸಲು ಯತ್ನಿಸಿದ ವ್ಯಕ್ತಿಯ ವಿರುದ್ಧ ಬಂಟ್ವಾಳ ಪುರಸಭೆ ಕೊನೆಗೂ ನಗರ ಪೊಲೀಸ್ ಠಾಣೆಯಲ್ಲಿ ದೂರುದಾಖಲಿಸಿದೆ ಪಾಣೆಮಂಗಳೂರು ನಿವಾಸಿ ಸಿ.ಪಿ. ಇಕ್ಬಾಲ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈತ ವಿವಿದೆಡೆಯಿಂದ ಸಂಗ್ರಹಿಸಿದ ತ್ಯಾಜ್ಯ ವಸ್ತುಗಳನ್ನು ನೇತ್ರಾವತಿ ನದಿ ತೀರದಲ್ಲಿ ಎಸೆದು ವಿಕೃತಿ ಮೆರೆದಿದ್ದ. ಈ ತ್ಯಾಜ್ಯವಸ್ತು ನೇರ ನೇತ್ರಾವತಿ ನದಿ ನೀರಿನ ಒಡಲಿಗೆ ಸೇರುತ್ತಿತ್ತು. ಇದನ್ನು ಸ್ಥಳೀಯ ನಿವಾಸಿ ಗಣೇಶ್ ನಾಯಕ್ ಎಂಬವರು ಆಕ್ಷೇಪಿಸಿ ಪುರಸಭೆಗೂ ದೂರು ನೀಡಿದ್ದರು. ಇಕ್ಬಾಲ್ ತ್ಯಾಜ್ಯ ನದಿ ತೀರದಲ್ಲಿ ರಾಶಿ ಹಾಕುವ ದೃಶ್ಯ ಕೂಡ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಆದರೂ ಪುರಸಭೆ ಈ ಕುರಿತು ಕ್ರಮ ಕೈಗೊಂಡಿರಲಿಲ್ಲ. 'ಹೊಸದಿಗಂತ' ಸೇರಿದಂತೆ ಮಾಧ್ಯಮಗಳಲ್ಲಿ ಸಚಿತ್ರ ಸುದ್ದಿ ಪ್ರಕಟವಾದ ಬೆನ್ನಲ್ಲೇ ಎಚ್ಚೆತ್ತ ಪುರಸಭೆ ತ್ಯಾಜ್ಯ ಎಸೆದ ಇಕ್ಬಾಲ್ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಧೈರ್ಯ ತೋರಿದೆ.



ತೋರಿಕೆಗಾಗಿ ನೋಟೀಸ್ ಕೊಟ್ಟಿದ್ದು ಬಿಟ್ಟರೆ ಬೇರೇನಿಲ್ಲ

ಪುರಸಭಾ ವ್ಯಾಪ್ತಿಯಲ್ಲಿರುವ ಕೆಲ ವಸತಿ ಸಂಕೀರ್ಣ, ಮಾಂಸದ ಅಂಗಡಿಯ ಕೊಳಚೆ ನೀರು ನೇರವಾಗಿ ನೇತ್ರಾವತಿ ನದಿನೀರಿನ ಒಡಲಿಗೆ ಸೇರುತ್ತಿದೆ. ಈ ಬಗ್ಗೆ ಪುರಸಭೆ ಯಾವುದೇ ಕ್ರಮ ಕೈಗೊಂಡ ಉದಾಹರಣೆಯೇ ಇಲ್ಲ, ಸಂಬಂಧಿಸಿದವರಿಗೆ ತೋರಿಕೆಗಾಗಿ ನೋಟೀಸ್ ಕೊಟ್ಟಿದ್ದು ಬಿಟ್ಟರೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡಿಲ್ಲ, ಹಾಗಾಗಿ ಯಾರ ಭಯವಿಲ್ಲದೆ ವಸತಿ ಸಂಕೀರ್ಣ ಮತ್ತು ಮಾಂಸದಂಗಡಿಯ ಕೊಳಚೆನೀರು ನೇತ್ರಾವತಿಗೆ ಸೇರುತ್ತಿದೆ. ಆ ಕಲುಷಿತ ನೀರನ್ನೇ ಜನ ಕುಡಿಯಲು ಬಳಸುತ್ತಾರೆ.

ಗುಡುಗು ಸಹಿತ ಗಾಳಿ ಮಳೆ ಸಾಧ್ಯತೆ: ಇಲಾಖೆ ಎಚ್ಚರಿಕೆ

ಕಾಸರಗೋಡು: ಜಿಲ್ಲೆಯ ಕೆಲವು ಕಡೆ ಮೇ 10ರ ವರೆಗೆ ಗುಡುಗು ಮಿಂಚು ಸಹಿತದ ಮಳೆ ಹಾಗೂ ಗಂಟೆಗೆ 40 ರಿಂದ 50 ಕಿಲೋ ಮೀಟರ್ ವೇಗದಲ್ಲಿ ಗಾಳಿಗೂ ಬೀಸುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ತಿಳಿಸಿದೆ. ಆದ್ದರಿಂದ ಜನರು ಜಾಗ್ರತೆ ವಹಿಸಲು ಕರೆ ನೀಡಲಾಗಿದೆ. ಇದರಿಂದ ವಿದ್ಯುತ್ ಹಾನಿಗೊಳ್ಳುವ ಸಾಧ್ಯತೆಯೂ ಇದೆ. ಆದ್ದರಿಂದ ಸಾರ್ವಜನಿಕರು ಕೆಲವೊಂದು ಎಚ್ಚರಿಕೆ ಪಾಲಿಸಬೇಕಾಗಿದೆ. ಎಲ್ಲಾ ಜಲಾಶಯಗಳಲ್ಲಿ ಮೀನುಗಾರಿಕೆ, ಬೋಟಿಂಗ್ ಮೊದಲಾದ ಕೆಲಸಗಳನ್ನು ನಿಲ್ಲಿಸಿ ದಡಕ್ಕೆ ವಾಪಸ್ ಹಿಂತಿರುಗುವುದು ಉತ್ತಮ ಎಂದು ಸೂಚಿಸಲಾಗಿದೆ.

ಅರಂತೋಡು ಮರ್ಕಂಜ ಗ್ರಾಮ ಸಂಪರ್ಕಿಸುವ ಸೇತುವೆ ಉದ್ಘಾಟನೆಗೆ ದಿನಗಣನೆ ಶುರು

50 ವರ್ಷಗಳ ಬೇಡಿಕೆ 180 ದಿನಗಳಲ್ಲಿ ಪೂರ್ಣ!

ಸಂಗಮ ವಿಶೇಷ

ಸುಳ್ಯ: ಸ್ಥಳೀಯ ನಾಗರಿಕರ ಬಹು ಬೇಡಿಕೆಯ ಅರಂತೋಡು ಮರ್ಕಂಜ ಗ್ರಾಮ ಸಂಪರ್ಕದ ಅರಮನೆಗಯ ಸೇತುವೆ ಕಾಮಗಾರಿ ಪೂರ್ಣಗೊಂಡಿದ್ದು ಲೋಕಾರ್ಪಣೆ ಸಿದ್ಧತೆಯಲ್ಲಿದೆ. ವಿಶೇಷವೆಂದರೆ ಈ ಸೇತುವೆ ಗುದ್ದಲಿ ಪೂಜೆ ನಡೆದ ಕೇವಲ 180 ದಿನಗಳಲ್ಲಿ ಪೂರ್ಣಗೊಂಡಿದೆ!

ಸ್ಥಳೀಯರ 50 ವರ್ಷಗಳ ಕನಸಿದು

ಇಲ್ಲೊಂದು ಸೇತುವೆ ನಿರ್ಮಾಣವಾಗಬೇಕು ಎಂದು ಸ್ಥಳೀಯರು ಕಳೆದ ಸುಮಾರು 50 ಕ್ಕೂ ವರ್ಷಗಳಿಗಿಂತ ಆಗ್ರಹಿಸುತ್ತಾ ಬಂದಿದ್ದರು. ಇದೀಗ ಕನಸು ನನಸಾಗಿದೆ. 2025 ನ.12 ರಂದು ಶಾಸಕಿ ಭಾಗೀರಥಿ ಮುರುಳ್ಯರಿಂದ ಸೇತುವೆಗೆ ಗುದ್ದಲಿ ಪೂಜೆ ನೆರವೇರಿತ್ತು. »ಪುಟ 6





ಕನಸು ನನಸಾಗಿಸಿತು ಸುಳ್ಯ ಶಾಸಕಿ ಮುರುಳ್ಯ ಶಿಫಾರಸು

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಶಿಫಾರಸ್ಸು ಮೇರೆಗೆ ಪ್ರಾಕೃತಿಕ ವಿಕೋಪ ಉಪಶಮನ ನಿಧಿಯಡಿ ಸುಳ್ಯ ತಾಲೂಕು ಅರಂತೋಡು ಗ್ರಾಮದ ಅರಮನೆಗಯ ಎಂಬಲ್ಲಿನ ಈ ಸೇತುವೆ ರಚನೆಗೆ ರೂ.175 ಲಕ್ಷ ಮೊತ್ತದಲ್ಲಿ ಅಭಿವೃದ್ಧಿಗೆ 2025ರ ಮೇ ತಿಂಗಳಿನಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆಕಿತ್ತು. ಆ ಬಳಿಕ ಸೇತುವೆ ನಿರ್ಮಾಣ ಕಾರ್ಯ ಭರದಿಂದ ಸಾಗಿತ್ತು.

ಅಂತೂ ಇಂತೂ ಅಡಿಕೆ ಮರದ ಪಾಲಕ್ಕೆ ಸಿಕ್ಕು ಮುಕ್ತಿ

ಈ ಪ್ರದೇಶದಲ್ಲಿ ಸುಮಾರು 30ಕ್ಕೂ ಹೆಚ್ಚಿನ ಕುಟುಂಬಗಳು ವಾಸಿಸುತ್ತಿವೆ. ಇಲ್ಲಿನ ಜನತೆ ಸಣ್ಣದಾದ ಅಡಿಕೆ ಮರದ ಸಹಾಯದಿಂದ ತೂಗು ಸೇತುವೆಗಳ ಮಾದರಿಯಲ್ಲಿ ಪಾಲವನ್ನು ರಚಿಸಿ ಅಪಾಯಕಾರಿಯಾಗಿ ಸಂಚರಿಸುತ್ತಿದ್ದು ಈ ಕುರಿತು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿಯು ಸಮಸ್ಯೆ ವಿಷಯಗಳು ಚರ್ಚೆಗೆ ಗ್ರಾಸವಾಗಿದ್ದವು. ಸೇತುವೆ ಬೇಕು ಎಂಬ ಬೇಡಿಕೆ, ಹೋರಾಟ, ಬಹಿಷ್ಕಾರ ಎಲ್ಲವೂ ನಡೆದಿದೆ. ಇದೀಗ ಸುಳ್ಯ ಶಾಸಕಿಯ ಮುತುವರ್ಜಿಯಿಂದ ಸೇತುವೆ ನಿರ್ಮಾಣವಾಗಿದ್ದು, ಸಂಕಷ್ಟಕ್ಕೆ ಮುಕ್ತಿ ಸಿಕ್ಕಿದೆ.

ಪುತ್ತೂರು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವ ಸಮಾರೋಪ | ಗುರು ವಂದನೆ

ಧರ್ಮದ ತಿರುಳನ್ನು ಪ್ರಾಜ್ಞರಿಂದ ಅರಿಯಿರಿ: ವಿಧುಶೇಖರ ಶ್ರೀ

ಪುತ್ತೂರು: ಎಲ್ಲ ಮತಗಳಲ್ಲೂ ಒಳ್ಳೆಯವರಿದ್ದಾರೆಂಬುದು ಸತ್ಯ. ಆದರೆ, ಒಳ್ಳೆಯವರನ್ನುಮುಂದೆ ತೋರಿಸಿ, ಇರುವವರೆಲ್ಲರೂ ಒಳ್ಳೆಯ ವರೆಂಬ ಭಾವ ಮೂಡಿಸಿ, ಹಿಂದಿನಿಂದ ತಮ್ಮ ಕೆಟ್ಟ ಕೆಲಸಗಳನ್ನು ಮಾಡಿಕೊಳ್ಳುವ ಮಂದಿ ಹಲವರಿದ್ದಾರೆ. ಅಂತಹವರ ಬಗೆಗೆ ಎಲ್ಲರೂ ಜಾಗರೂಕರಾಗಿರಬೇಕು. ಅಂತಹವರಿಂದ ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳುವ ಮೂಲಕ ಹಿಂದೂ ಧರ್ಮವನ್ನು ಉಳಿಸಿಕೊಳ್ಳಬೇಕಿದೆ ಎಂದು ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಹೇಳಿದರು.

ನಗರದ ಬಪ್ಪಳಿಗೆಯ ಶ್ರೀ ಶಂಕರ ಸಭಾಭವನದಲ್ಲಿ ಗುರುವಾರ ಏರ್ಪಡಿಸಲಾಗಿದ್ದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವ ಸಂಭ್ರಮದ ಸಮಾರೋಪ ಹಾಗೂ ಗುರು ವಂದನಾ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಆಶೀರ್ವಚನ ನೀಡಿದರು.

ಸನಾತನ ಧರ್ಮದ ಉತ್ಕೃಷ್ಟತೆಯನ್ನು ಧರ್ಮದ ತಿರುಳನ್ನು ಪ್ರಾಜ್ಞರಿಂದ ಅಂತರ್ಗತಗೊಳಿಸಿಕೊಳ್ಳಬೇಕೇ ವಿನಃ ಅರೆಬರೆ ತಿಳಿದವರಿಂದಲ್ಲ. ನಮ್ಮ ಧರ್ಮ ನಮಗೆ ಅತ್ಯುತ್ತಮ ಸಂಸ್ಕಾರವನ್ನು ಒದಗಿಸಿ ಕೊಡುತ್ತಿದೆ. ಧಾರ್ಮಿಕ ಸಂಸ್ಕಾರವನ್ನು ಮಕ್ಕಳಿಗೆ ಕೊಟ್ಟಾಗ ಅವರು ಸದಾ ಒಳ್ಳೆಯ ಹಾದಿಯಲ್ಲಿರುತ್ತಾರೆ ಮತ್ತು ಎತ್ತರಕ್ಕೆ ಬೆಳೆಯುತ್ತಾರೆ. ಸಂಸ್ಕಾರಹೀನರನ್ನು ಪ್ರಪಂಚ ಒಪ್ಪುವುದಿಲ್ಲ ಎಂದು ಅವರು ತಿಳಿಸಿದರು.

ನಾಸ್ತಿಕರು ಹಾಗೂ ನಾಸ್ತಿಕರೆಂದು ಹೆಸರಿಟ್ಟುಕೊಂಡವರೆಂಬ ಎರಡು ಪ್ರಭೇದಗಳಿವೆ. ನಿಜವಾದ ನಾಸ್ತಿಕರಿಗೆ ನಮ್ಮ ಧರ್ಮದಲ್ಲೇ ಸ್ಥಾನವಿದೆ. ನೈಜ ನಾಸ್ತಿಕರು ಎಲ್ಲಾ ಮತ ಧರ್ಮಗಳ ನ್ಯೂನತೆಗಳನ್ನೂ ಎತ್ತಿ ತೋರಿಸುತ್ತಾ ಬಂದರೆ ನಾಸ್ತಿಕರೆಂದು ಹೆಸರಿಟ್ಟುಕೊಂಡವರು ಹಿಂದೂ ಧರ್ಮದ ಬಗೆಗೆ ಟೀಕಿಸುವುದಕ್ಕೆ ತೊಡಗುತ್ತಾರೆ. ಅವರಿಗೆ ಕೇವಲ ಹಿಂದೂ ಧರ್ಮದಲ್ಲಿ ಮಾತ್ರ ಅನ್ಯಾಯಗಳು ಕಾಣುತ್ತವೆ. ಬೇರೆ ಧರ್ಮದ ಯಾವುದೇ ಹುಳುಕುಗಳು ಅವರಿಗೆ ಕಾಣಿಸುವುದಿಲ್ಲ ಇಂತಹವರ ಬಗೆಗೆ ಗಮನ ಇಡಬೇಕು ಎಂದರು.



ಚಂಡಿಕಾ ಹೋಮ

ಇದಕ್ಕೂ ಪೂರ್ವದಲ್ಲಿ ಗುರುವಾರ ಬೆಳಗ್ಗೆ 8 ಗಂಟೆಯ ಸುಮಾರಿಗೆ ಬಲ್ನಾಡು ಶ್ರೀ ಉಳ್ಳಾಲ್ತಿಯ ಮೂಲಸ್ಥಾನವಾದ ಕೊಟ್ಟಿಲಕಟ್ಟದ ಶ್ರೀ ಉಳ್ಳಾಲ್ತಿ ಅಮ್ಮನವರ ಸ್ಥಾನದಲ್ಲಿ ಚಂಡಿಕಾ ಹೋಮ ಸಂಪನ್ನಗೊಂಡಿತು. ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಪೂರ್ಣಾಹುತಿಯನ್ನು ನಡೆಸಿಕೊಟ್ಟರು.

ಅಭಿವಂದನಾ ಪತ್ರ, ಸ್ಮರಣಿಕೆ

ಗುರುವಂದನಾ ಸಮಿತಿ ಹಾಗೂ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಅಭಿವಂದನಾ ಪತ್ರ, ಸ್ಮರಣಿಕೆಗಳನ್ನು ಜಗದ್ಗುರುಗಳಿಗೆ ಸಮರ್ಪಿಸಲಾಯಿತು. ಸುಬ್ರಮಣ್ಯ ನಟ್ಟೋಜ ಹಾಗೂ ಕುಟುಂಬಸ್ಥರು ಶಾರದಾ ಮಾತೆಯ ಪುತ್ಥಳಿಯನ್ನು ಗುರುಚರಣಗಳಿಗೆ ಅರ್ಪಿಸಿದರು.

ಶಂಖನಾದ ಹಾಗೂ ವೇದ ಘೋಷವನ್ನು ನಡೆಸಿ ಕೊಡಲಾಯಿತು. ವಿದ್ಯಾರ್ಥಿನಿಯರಿಂದ ಪ್ರಾರ್ಥನೆ ನಡೆಯಿತು. ಗುರುವಂದನಾ ಸಮಿತಿ ಅಧ್ಯಕ್ಷ ಚಿದಾನಂದ ಬೈಲಾಡಿ ಸ್ವಾಗತಿಸಿದರು. ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ಪ್ರಸ್ತಾವನೆಗೈದರು. ವಿದ್ವಾನ್ ಉಮಾಕಾಂತ ಭಟ್ ಕೆರೆಕೈ ಅಭಿವಂದನಾ ನುಡಿಗಳನ್ನಾಡಿದರು. ತಾಲೂಕು ಧರ್ಮ ಶಿಕ್ಷಣ ಧರ್ಮಾಧ್ಯಕ್ಷರ

> ದೇಶ-ಧರ್ಮಗಳೆರಡೂ ಸದಾ ಉತ್ತಮ ಸ್ಥಿತಿಯಲ್ಲಿರುವಂತೆ ನಾವು ನೋಡಿಕೊಳ್ಳಬೇಕು. ಹಿಂದೂ ಸಮಾಜ ಸದಾ ಜಾಗೃತ ಸ್ಥಿತಿಯಲ್ಲಿರಬೇಕು. ಹಿಂದೂ ಧರ್ಮದ ಬಗೆಗೆ ಸುಳ್ಳುಗಳನ್ನು ಹಬ್ಬಿಸಲಾಗುತ್ತಿದೆ. ಆದರೆ, ಆ ಸುಳ್ಳುಗಳು ಸುಳ್ಳು ಎಂದು ಹಿಂದೂಗಳಿಗೇ ಅರಿವಾಗುತ್ತಿಲ್ಲ. ಇಲ್ಲಿಯವರೆಗೆ ನಮ್ಮ ಧರ್ಮಕ್ಕಾದ ಹಾನಿಯೇ ಸಾಕು. ಇನ್ನು ಮುಂದೆಯೂ ಅದು ಮುಂದುವರೆಯದಂತೆ ಪ್ರತಿಯೊಬ್ಬರೂ ಕೈಜೋಡಿಸಬೇಕು.
> ● ವಿಧುಶೇಖರ ಭಾರತೀ ಶ್ರೀ

ವಿದ್ಯಾರ್ಥಿಗಳಿಂದ ಸಮರ್ಪಣಂ ಕಾರ್ಯಕ್ರಮ ನಡೆಯಿತು. ಬಪ್ಪಳಿಗೆ ಅಂಬಿಕಾ ಆವರಣದಲ್ಲಿ ರೂಪಿಸಲಾದ ಭಾರತ ಮಾತೆಯ ಉಬ್ಬುಶಿಲ್ಪವನ್ನು ಜಗದ್ಗುರುಗಳು ಅನಾವರಣಗೊಳಿಸಿದರು. ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವ ಸ್ಮರಣ ಸಂಚಿಕೆ ಹಾಗೂ ಶೃಂಗೇರಿಯ ಬಗೆಗೆ ಮಾಹಿತಿಯುಳ್ಳ ಶೃಂಗೇರಿಯ ಹಿಮವೆ ಕೃತಿಯನ್ನು ಜಗದ್ಗುರುಗಳು ಅನಾವರಣಗೊಳಿಸಿದರು. ಅಂಬಿಕಾ ನಡೆದು ಬಂದ ಹಾದಿಯ ಬಗೆಗಿನ ಕಿರುಚಿತ್ರವನ್ನು ಪ್ರದರ್ಶಿಸಲಾಯಿತು. ಅಂಬಿಕಾ ವತಿಯಿಂದ ರೂಪಿಸಲಾದ ನಾವಿಕ-ಹಿಂದೂ ಸರ್ಪಣ ಸಾರಿಗೆ ಎಂಬ ಮೊಬೈಲ್ ಆ್ಯಪ್ ಅನ್ನು ಶ್ರೀಗಳು ಲೋಕಾರ್ಪಣೆಗೊಳಿಸಿದರು. ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ರಾಜಶ್ರೀ ಎಸ್. ನಟ್ಟೋಜ, ಆಡಳಿತ ಮಂಡಳಿ ಸದಸ್ಯ ಬಾಲಕೃಷ್ಣ ಬೋರ್ಕರ್, ಡಾ.ಎಂ.ಎಸ್. ಶೆಣೈ, ಇನ್ನಿತರ ಸದಸ್ಯರು, ಗುರುವಂದನಾ ಸಮಿತಿಯ ಗೌರವಾಧ್ಯಕ್ಷ ಮೊಗೆರೋಡಿ ಬಾಲಕೃಷ್ಣ ರೈ, ಪ್ರಧಾನ ಕಾರ್ಯದರ್ಶಿ ಆರ್.ಸಿ. ನಾರಾಯಣ, ಖಜಾಂಚಿ ಕಾವು ಹೇಮನಾಥ ಶೆಟ್ಟಿ, ಕಾರ್ಯಾಧ್ಯಕ್ಷ ಶಿವರಾಮ ಆಳ್ವ, ಸಂಚಾಲಕ ಡಾ. ಸುರೇಶ್ ಪುತ್ತೂರಾಯ, ಕಾರ್ಯದರ್ಶಿ ಸಾಜ ರಾಧಾಕೃಷ್ಣ ಆಳ್ವ, ಸಂಘಟನಾ ಕಾರ್ಯದರ್ಶಿ ದಿನೇಶ್ ಜೈನ್, ಸಂಯೋಜಕ ಮಾಧವ ಸ್ವಾಮಿ, ಜತೆ ಕಾರ್ಯದರ್ಶಿ ಸುರೇಶ್ ಕಮ್ಮಿಂಜೆ ಹಾಗೂ ನವೀನ್ ಕುಲಾಲ್, ಸಹಸಂಚಾಲಕ ಗಿರಿಶಂಕರ ಸುಲಾಯ, ಗೌರವ ಸಲಹೆಗಾರ ಎನ್.ಕೆ. ಜಗನ್ನಿವಾಸ ರಾವ್, ಧರ್ಮಾಭ್ಯುದಯದ ಅಧ್ಯಕ್ಷ ದಂಬೆಕಾನ ಸದಾಶಿವ ರೈ, ಮಾಜಿ ಶಾಸಕರಾದ ಶಕುಂತಲಾ ಶೆಟ್ಟಿ ಹಾಗೂ ಸಂಜೀವ ಮಠಂದೂರು ಮತ್ತಿತರರು ಉಪಸ್ಥಿತರಿದ್ದರು. ಶ್ರೀ ಶಂಕರ ಜಯಂತಿ ಪ್ರಯುಕ್ತ ಪುತ್ತೂರು ಹಾಗೂ ಸುತ್ತಮುತ್ತಲಿನ ಆರು ತಾಲೂಕುಗಳ ವಿದ್ಯಾರ್ಥಿಗಳಿಗಾಗಿ ಶೃಂಗೇರಿ ಪೀಠದಿಂದ ಇತ್ತೀಚೆಗೆ ಆಯೋಜಿಸಲಾದ ಶಂಕರ ವಿಜಯ ಸ್ಪರ್ಧೆಗಳಲ್ಲಿ ಗೆಲುವು ಪಡೆದವರಿಗೆ ಹಾಗೂ ಅತ್ಯುತ್ತಮ ಪ್ರದರ್ಶನ ತೋರಿದವರಿಗೆ ಶ್ರೀಗಳು ಬಹುಮಾನ ವಿತರಿಸಿದರು. ಅಂಬಿಕಾ ವತಿಯಿಂದ ಆಯೋಜಿಸಲಾಗಿದ್ದ ಶ್ಲೋಕಭಾರತೀ ಸ್ಪರ್ಧೆಯ ವಿಜೇತರಿಗೆ ಬಾಲ್ಯಾರತಿ ಪ್ರಶಸ್ತಿ ವಿತರಿಸಲಾಯಿತು. ಉಪನ್ಯಾಸಕ ಆದರ್ಶ ಗೋಖಲೆ ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು. ಶೃಂಗೇರಿ ಮಠದ ಶಂಕರ ತತ್ವ ಪ್ರಸಾರ ಅಭಿಯಾನದ ರಾಜ್ಯ ಸಂಚಾಲಕ ವಿದ್ವಾನ್ ತೇಜಶಂಕರ ಸೋಮಯಾಜಿ ಅಭಿವಂದನಾ ಪತ್ರ ವಾಚಿಸಿದರು. 2 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು.

ಸುತ್ತಮುತ್ತ

ಮೇ 10ರಂದು 'ಸ್ವಚ್ಛ-ಹಸಿರು ಕರಂಗಲಪಾಡಿ'

ಮಂಗಳೂರು: ಕರಂಗಲಪಾಡಿ ನಾಗರಿಕ ಸಮಿತಿ ವತಿಯಿಂದ ಮೇ 10ರಂದು ಬೆಳಗ್ಗೆ 6.30ರಿಂದ 7.30ರವರೆಗೆ 'ಸ್ವಚ್ಛ-ಹಸಿರು ಕರಂಗಲಪಾಡಿ' ಅಭಿಯಾನ ನಡೆಯಲಿದೆ. ಕಾರ್ಯಕ್ರಮವನ್ನು ಮಂಗಳೂರಿನ ಜಿಲ್ಲಾ ಕಾರಾಗೃಹದ ಅಧೀಕ್ಷಕ ಶರಣ ಬಸಪ್ಪ ಅವರು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕರಂಗಲಪಾಡಿ ಪರಿಸರ, ರಕ್ತಂ ಆರ್ಯುಧಾಮ, ಸಿ.ಜಿ. ಕಾಮತ್ ರಸ್ತೆ ಸೇರಿದಂತೆ ಮತ್ತಿತರ ಕಡೆಗಳಲ್ಲಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದ್ದು ಅಲ್ಲದೇ ನಾಗರಿಕರಿಗೆ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದು ಕರಂಗಲಪಾಡಿ ನಾಗರಿಕ ಸಮಿತಿಯು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ವೇಟ್ ಲಿಫ್ಟಿಂಗ್‌ನಲ್ಲಿ ಫಿಲೋಮಿನಾ ವಿದ್ಯಾರ್ಥಿಗಳ ಸಾಧನೆ





ಪುತ್ತೂರು: ಮೂಡಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜ್ ಕ್ರೀಡಾಕೂಟದ ಮಹಿಳೆಯರ ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ ತೃತೀಯ ಬಿಎಸ್ಸಿ ವಿದ್ಯಾರ್ಥಿನಿ ಸ್ಪಂದನಾ ಕೆ. 48 ಕೆ.ಜಿ. ವಿಭಾಗದಲ್ಲಿ ಪ್ರಥಮ, ದೃಶ್ಯ ಕೆ.ಎ. 58 ಕೆ.ಜಿ. ವಿಭಾಗದಲ್ಲಿ ದ್ವಿತೀಯ, ಸಿಂಚನ ಬಿ. 77 ಕೆ.ಜಿ. ವಿಭಾಗದಲ್ಲಿ ತೃತೀಯ, ಚಮೀಶ ಯು. 63 ಕೆ.ಜಿ. ವಿಭಾಗದಲ್ಲಿ ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಪುರುಷರ ವಿಭಾಗದಲ್ಲಿ ರಿತೇಶ್ ಕೆ.ಐ. 71 ಕೆಜಿ ವಿಭಾಗದಲ್ಲಿ ಪ್ರಥಮ, ತೃತೀಯ ಬಿಎ ವಿದ್ಯಾರ್ಥಿ ರಂಜಿತ್ ಕುಮಾರ್ 110 ಕೆ.ಜಿ. ವಿಭಾಗದಲ್ಲಿ ದ್ವಿತೀಯ ಹಾಗೂ ಅಭಿಜಿತ್ 79 ಕೆ.ಜಿ. ವಿಭಾಗದಲ್ಲಿ ತೃತೀಯ ಸ್ಥಾನವನ್ನು ಪಡೆದಿದ್ದಾರೆ.

ಮೆಡಿಕಲ್ ಕಾಲೇಜಿಗೆ ಡಿ.ಪಿ.ಆರ್. ತಯಾರಿಸಲು ಅನುಮತಿಗೆ ಮನವಿ

ಪುತ್ತೂರು: ಪುತ್ತೂರಿಗೆ ಮಂಜೂರಾಗಿರುವ ಮೆಡಿಕಲ್ ಕಾಲೇಜಿನ ಯೋಜನಾ ವರದಿಗೆ ಇಲಾಖೆಗೆ ಅನುಮತಿ ನೀಡುವಂತೆ ಶಾಸಕ ಅಶೋಕ್ ರೈ ಅವರು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್‌ಗೆ ಮನವಿ ಸಲ್ಲಿಸಿದ್ದಾರೆ.



ಈಗಾಗಲೇ ಪುತ್ತೂರು ತಾಲೂಕಿನಲ್ಲಿ ವೈದ್ಯಕೀಯ ಕಾಲೇಜ್ ಪ್ರಾರಂಭಿಸಲು ಹಲವಾರು ವರ್ಷಗಳಿಂದ ಬೇಡಿಕೆಯಿದ್ದು ತಾಲೂಕಿನ ಬನ್ನೂರು ಗ್ರಾಮದ ಸರ್ವೆ ನಂ. 84ರಲ್ಲಿ ಸುಮಾರು 40 ಎಕರೆ ಜಮೀನನ್ನು ವೈದ್ಯಕೀಯ ಕಾಲೇಜ್ ಪ್ರಾರಂಭಿಸಲು ಕಾಯ್ದಿರಿಸಿ ಈಗಾಗಲೇ ಸದರಿ ಜಮೀನಿನಲ್ಲಿ 300 ಹಾಸಿಗೆಗಳ ಸರಕಾರಿ ಆಸ್ಪತ್ರೆ ನಿರ್ಮಾಣ ಮಾಡುವ ಬಗ್ಗೆ 189 ಕೋಟಿ ಮೊತ್ತ ಮಂಜೂರುಗೊಂಡು ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿರುತ್ತದೆ. ಸದರಿ ಜಾಗದಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣದ ಬಗ್ಗೆ ಮಂಜೂರಾತಿ ನೀಡಲಾಗಿದೆ. ಆದ್ದರಿಂದ ಸದರಿ ಜಮೀನಿನಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣ ಮಾಡುವ ಬಗ್ಗೆ ಪ್ರಥಮ ಹಂತದ ಯೋಜನಾ ವರದಿ (ಡಿ.ಪಿ.ಆರ್) ತಯಾರಿಸಲು ಇಲಾಖೆಗೆ ನಿರ್ದೇಶನ ನೀಡುವಂತೆ ಮನವಿಯಲ್ಲಿ ತಿಳಿಸಲಾಗಿದೆ.

ವಿಟ್ಲ: ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ ಹೆಚ್ಚುವರಿ ಶುಲ್ಕ ವಾಪಸ್‌ಗೆ ಆಗ್ರಹ

ವಿಟ್ಲ: ಪಟ್ಟಣ ಪಂಚಾಯತ್‌ನ ಬಿಜೆಪಿ ಬೆಂಬಲಿತ ಆಡಳಿತ ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ ಕಳೆದ 3 ತಿಂಗಳಿಂದ ಹೆಚ್ಚುವರಿ ಶುಲ್ಕ ವಿಸುವ ಬಗ್ಗೆ ಏ.29ರ ಸಾಮಾನ್ಯ ಸಭೆಯಲ್ಲಿ ಧರಣಿ ಕೂರಲಾಗಿತ್ತು. ಈ ಸಂಬಂಧ ಮೇ 6ರಂದು ವಿಶೇಷ ಸಾಮಾನ್ಯ ಸಭೆ ನಡೆಸಿ ಸೂಕ್ತ ನಿರ್ಣಯ ಕೈಗೊಳ್ಳುವ ಭರವಸೆ ನೀಡಿದ್ದರು. ಇನ್ನು 1 ವಾರ ಕಾಲಾವಕಾಶ ನೀಡುತ್ತಿದ್ದು ಅಗತ್ಯ ಕ್ರಮ ತೆಗೆದುಕೊಳ್ಳದಿದ್ದರೆ ಮೇ 14ಕ್ಕೆ ಉಗ್ರ ಪ್ರತಿಭಟನೆಯನ್ನು ನಡೆಸಲಾಗುವುದು ಎಂದು ವಿರೋಧ ಪಕ್ಷದ ಸದಸ್ಯ ವಿ.ಕೆ.ಎಂ. ಅಶ್ರಫ್ ಹೇಳಿದರು.

ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಏಕ ನಿವೇಶನ ನಕ್ಷೆ ಅನುಮೋದನೆಗೆ ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ ಜನರನ್ನು ಲೂಟುವ ಕಾರ್ಯವಾಗುತ್ತಿದೆ. ಕಳೆದ ಮೂರು ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ವಿರೋಧ ವ್ಯಕ್ತ ಪಡಿಸಲಾಗಿತ್ತು. ಈ ಬಗ್ಗೆ ಬೈಲಾ ಮಾಡಲಾಗಿದ್ದು, ಇದನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಸದಸ್ಯ ಅಬ್ದುಲ್ ರಹಿಮಾನ್ ಹನ್ನೈನಾರ್ ನೆಲ್ಲಿಗುಡ್ಡೆ ಮಾತನಾಡಿ, ಬಿಜೆಪಿಯ ಒಳ ಜಗಳದಿಂದ ನಾಗರಿಕರಿಗೆ ಅನ್ಯಾಯವಾಗುತ್ತಿದೆ. ಸಾರ್ವಜನಿಕರಲ್ಲಿ ಗೊಂದಲ ಏರ್ಪಡಿಸುವುದನ್ನು ನಿಲ್ಲಿಸಿ, ತೆರಿಗೆ ಸಮಸ್ಯೆಯನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದರು. ಕಾಂಗ್ರೆಸ್ ಬೆಂಬಲಿತ ಸದಸ್ಯರಾದ ಲತಾ ಅಶೋಕ್, ಪದ್ಮಿನಿ, ನಾಮ ನಿರ್ದೇಶಿತ ಸದಸ್ಯ ಶ್ರೀನಿವಾಸ ಶೆಟ್ಟಿ ಕೊಲ್ಯ ಇದ್ದರು.

ಗೇರುಕಟ್ಟೆಯಲ್ಲಿ ಭಾರವಿ ಬೇಸಿಗೆ ಶಿಬಿರ ಸಂಪನ್ನ, ಮಕ್ಕಳಿಂದ ಪ್ರತಿಭಾ ಪ್ರದರ್ಶನ



ಬೆಳ್ತಂಗಡಿ: ಗೇರುಕಟ್ಟೆಯ ಎಂ.ವಿ ಪ್ರತಿಷ್ಠಾನ ಆಯೋಜಿಸಿದ 'ಭಾರವಿ ಬೇಸಿಗೆ ಶಿಬಿರ'ದ ಸಮಾರೋಪ ಸಮಾರಂಭವು ಸಂಚಾಲಕ ದಿವಾಕರ ಆಚಾರ್ಯ ಗೇರು ಕಟ್ಟೆ ಅಧ್ಯಕ್ಷತೆಯಲ್ಲಿ ಜರಗಿತು.

ಇದೇ ಸಂದರ್ಭ ನಿವೃತ್ತ ಶಿಕ್ಷಕಿ ಗುಣರತ್ನ ಆಚಾರ್ಯ ಕಾವೂರು ಅವರನ್ನು ಗೌರವಿಸಲಾಯಿತು. ಯೋಗಪಟು ಸತೀಶ್ ಭಂಡಾರಿ, ಪೋಷಕ ಹರೀಶ್ ಆಚಾರ್ಯ ಕಣಿಯೂರು ಮತ್ತು ರೇವತಿ, ಪ್ರತಿಷ್ಠಾನದ ಸದಸ್ಯ ಪ್ರಭಾಕರ ಆಚಾರ್ಯ,ರಾಜೇಶ ಆಚಾರ್ಯ,ಹರೀಶ ಆಚಾರ್ಯ,ರಂಜೀತ್ ಮೂಡಬಿದಿರೆ, ವಸಂತ ಆಚಾರ್ಯ ಉಪಸ್ಥಿತರಿದ್ದರು. ಶರ್ಮಿಳಾ ರಾಜೇಶ್ ಮಂಗಳೂರು, ರೇವತಿ ಮೇಗರವಳ್ಳಿ, ದಿವಾಕರ ಆಚಾರ್ಯ ಗೇರುಕಟ್ಟೆ, ಭಾರತಿ ಎಂ.ಎಲ್., ಪ್ರೇಕ್ಷಿತ ,ವಾಣಿ , ಗೀತಾ.ಡಿ, ಸ್ವಾತಿ ಮೂಡಬಿದಿರೆ ಸಂಪನ್ಮೂಲ ವ್ಯಕ್ತಿಗಳಾಗಿ ಶಿಬಿರ ನಡೆಸಿಕೊಟ್ಟರು. ಶಿಬಿರದಲ್ಲಿ ಮನೆ ಬಳಕೆಯ ಪುರಾತನ ವಸ್ತುಗಳು, ವಿವಿಧ ದೇಶದ ನೋಟುಗಳು ಮತ್ತು ನಾಣ್ಯಗಳ ಪ್ರದರ್ಶನ, ಸ್ಮರಣಶಕ್ತಿ ಪರೀಕ್ಷೆ, ಶ್ರೀ ಮಹಾಭಾರತ ರಸಪ್ರಶ್ನೆ, ಶಿಬಿರಾರ್ಥಿ ಗಳಿಂದ ವೈಯಕ್ತಿಕ ಪ್ರತಿಭಾ ಪ್ರದರ್ಶನ ನಡೆಸಲಾಯಿತು. ಗೇರುಕಟ್ಟೆ ಕೊರಿಂಜ ಪರಿಸರದ 20 ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದರು. ಪೋಷಕರಿಗೂ ಸಂಸ್ಕಾರ ಬಿಂದು ಪುಸ್ತಕವನ್ನು ನೀಡಲಾಯಿತು ವಾಣಿ ಹರೀಶ ಆಚಾರ್ಯ ಸ್ವಾಗತಿಸಿ, ಪ್ರೇಕ್ಷಿತ ರಾಜೇಶ್ ವಂದಿಸಿದರು. ಪ್ರತಿಷ್ಠಾನದ ಸಂಚಾಲಕಿ ಭಾರತಿ ಎಂ.ಎಲ್. ಕಾರ್ಯಕ್ರಮ ನಿರೂಪಿಸಿದರು.

ಪುತ್ತೂರು ಮಹಿಳಾ ಕಾಲೇಜಿನಲ್ಲಿ ಈ ವರ್ಷದಿಂದಲೇ ಸೈನ್ಸ್ ವಿಭಾಗ ಆರಂಭ



ಪುತ್ತೂರು: ಬೊಳುವಾರಿನಲ್ಲಿರುವ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಈ ವರ್ಷದಿಂದಲೇ ಸೈನ್ಸ್ (ಪದವಿ ವಿಜ್ಞಾನ) ವಿಭಾಗ ಪ್ರಾರಂಭವಾಗಲಿದೆ ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ.

ಬುಧವಾರ ಬೆಂಗಳೂರಿನಲ್ಲಿ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ ಶಾಸಕರು ಪುತ್ತೂರಿನಲ್ಲಿ ಕಾರ್ಯಚರಿಸುತ್ತಿರುವ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗವಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಹೊಸ ಕಾಲೇಜು ಕಟ್ಟಡ ನಿರ್ಮಾಣವಾಗಿದ್ದು ಕೊಠಡಿ ಕೊರತೆಯನ್ನು ನೀಗಿಸಲಾಗುತ್ತಿದೆ. ಮುಂದೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿಜ್ಞಾನ ವಿಭಾಗ ಪ್ರಾರಂಭ ಮಾಡುವಂತೆ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಸಚಿವರು ಈ ವರ್ಷದಿಂದಲೇ ವಿಜ್ಞಾನ ವಿಭಾಗ ಪ್ರಾರಂಭಕ್ಕೆ ಸೂಚನೆ ನೀಡಿದ್ದಾರೆ.

1 ಕೋಟಿ ಅನುದಾನಕ್ಕೆ ಮನವಿ

ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ಪೀಠೋಪಕರಣಕ್ಕೆ ರೂ.1 ಕೋಟಿ ಅನುದಾನ ನೀಡುವಂತೆಯೂ ಈ ಸಂದರ್ಭ ಶಾಸಕರು ಸಚಿವರಿಗೆ ಮನವಿ ಮಾಡಿದರು. ವಿಜ್ಞಾನ ವಿಭಾಗ ಪ್ರಾರಂಭ ಗೊಂಡಲ್ಲಿ ಪ್ರಯೋಗಾಲಯದ ಅಗತ್ಯವಿದ್ದು ಅದಕ್ಕೆ ಬೇಕಾದ ಅಗತ್ಯ ಪರಿಕರಗಳನ್ನು ಒದಗಿಸುವಂತೆ ಶಾಸಕರು ಮನವಿ ಮಾಡಿದ್ದು ಸಚಿವರು ಅನುದಾನದ ಭರವಸೆ ನೀಡಿದ್ದಾರೆ ಎಂದು ಶಾಸಕರು ತಿಳಿಸಿದ್ದಾರೆ. ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೈನ್ಸ್ ವಿಭಾಗವನ್ನು ಪ್ರಾರಂಭ ಮಾಡುವಂತೆ ವಿದ್ಯಾರ್ಥಿಗಳು, ಪೋಷಕರು ಈ ಹಿಂದೆ ನನಗೆ ಮನವಿ ಮಾಡಿದ್ದರು. ಹೆಚ್ಚಾಗಿ ಬಡವರ ಮಕ್ಕಳು ಈ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು ಅವರಿಗೆ ಪೂರಕ ವ್ಯವಸ್ಥೆ ಮಾಡಿಕೊಡಬೇಕಾದ್ದು ನನ್ನ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಸರಕಾರಕ್ಕೆ ಒತ್ತಡ ತಂದು ಸೈನ್ಸ್ ವಿಭಾಗ ಪ್ರಾರಂಭಕ್ಕೆ ಅನುಮತಿ ದೊರಕಿದ್ದು ಸಂತೋಷದ ವಿಚಾರವಾಗಿದೆ ಎಂದು ಶಾಸಕ ಅಶೋಕ್ ರೈ ಹೇಳಿದ್ದಾರೆ.

ಸಂಘಟನೆಯಿಂದ ಬಿಜೆಪಿಗೆ ಗೆಲುವು: ಪ್ರಭಾಕರ ಪ್ರಭು ಬಣ್ಣನೆ



ಬಂಟ್ವಾಳ: ಪಶ್ಚಿಮ ಬಂಗಾಳದಲ್ಲಿ ಆರ್‌ಎಸ್‌ಎಸ್ ಹಾಗೂ ಬಿಜೆಪಿಯ ಸಂಘಟನಾ ಶಕ್ತಿಯಿಂದ ಚುನಾವಣೆಯಲ್ಲಿ ಬಿಜೆಪಿ ಅಭೂತ ಪೂರ್ವ ಗೆಲುವು ಸಾಧಿಸಿರುವುದು ಹಿಂದೂಗಳಲ್ಲಿ ಸಂತಸ ಮನೆ ಮಾಡಿದೆ ಎಂದು ಬಿಜೆಪಿ ಮುಖಂಡ ಪ್ರಭಾಕರ ಪ್ರಭು ಹೇಳಿದ್ದಾರೆ.

ಅವರು ಬಿಜೆಪಿ ಬಂಟ್ವಾಳ ಮಂಡಲ ವ್ಯಾಪ್ತಿಯ ಸಂಗಬೆಟ್ಟು ಗ್ರಾಮದ ಮಾಜಿ ಪಂಚಾಯತ್ ಸದಸ್ಯ ಸುನೀಲ್ ಶೆಟ್ಟಿಗಾರ್ ಮನೆಯಲ್ಲಿ ಆಯೋಜಿಸಿದ್ದ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವಿನ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಭಾರತ ಮಾತೆ ಹಾಗೂ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಅವರು ಮಾತನಾಡಿದರು.

ಸಂಗಬೆಟ್ಟು ಮಹಾಶಕ್ತಿ ಕೇಂದ್ರ ಬಿಜೆಪಿ ಅಧ್ಯಕ್ಷ ಸತೀಶ್ ಪೂಜಾರಿ ಹಾಗೂ ಸಂಗಬೆಟ್ಟು ಶಕ್ತಿ ಕೇಂದ್ರ ಪ್ರಮುಖ್ ನವೀನ ಹೆಗ್ಡೆ ಶ್ಯಾಮ್ ಪ್ರಸಾದ್ ರವರ ರಾಷ್ಟ್ರ ಭಕ್ತಿ ಹಾಗೂ ಪಕ್ಷ ಸಂಘಟನೆ ಕುರಿತು ಮಾತನಾಡಿದರು. ಬೂತ್ ಅಧ್ಯಕ್ಷ ವಿನೋದ್ ಅಡಪ, ಗ್ರಾ.ಪಂ. ಮಾಜಿ ಸದಸ್ಯರಾದ ಸುನೀಲ್ ಶೆಟ್ಟಿಗಾರ್, ಮಾಧವ ಶೆಟ್ಟಿಗಾರ್ , ಬಿಜೆಪಿ ಬಂಟ್ವಾಳ ಮಂಡಲದ ಪರಿಶಿಷ್ಟ ಜಾತಿ ಮೋರ್ಚಾ ಕಾರ್ಯದರ್ಶಿ ರಾಜೇಶ್ ಸಂಗಬೆಟ್ಟು,ಸಿ. ಎ. ಬ್ಯಾಂಕ್ ನಿರ್ದೇಶಕ ವಿಶ್ವನಾಥ್ ಶೆಟ್ಟಿಗಾರ್, ಮಾಜಿ ನಿರ್ದೇಶಕ ದೇವರಾಜ್ ಸಾಲಿಯಾನ್ ಪಕ್ಷದ ಪ್ರಮುಖರಾದ ದೇವಪ್ಪ ಗೌಡ, ಭೋಜ ಶೆಟ್ಟಿಗಾರ್, ಜಯವರ್ಮ ಸಂಗಬೆಟ್ಟು, ಬಸವರಾಜ್ ಆಚಾರ್ಯ ಸಿದ್ದಕಟ್ಟೆ, ಶ್ರೀನಿವಾಸ ಕರ್ಕೇರ ಮಂಚಕಲ್ಲು, ಗಣೇಶ್ ಶೆಟ್ಟಿಗಾರ್ ಸಿದ್ದಕಟ್ಟೆ ಮತ್ತಿತರರು ಉಪಸ್ಥಿತರಿದ್ದರು. ಸುಂದರ ಶೆಟ್ಟಿಗಾರ್ ಸ್ವಾಗತಿಸಿ, ಕಾರ್ಯಕ್ರಮ ವಂದಿಸಿದರು.

ಮಹಾನಗರ ಪಾಲಿಕೆ ವ್ಯಾಪ್ತಿಯ ಮುಂಗಾರು ಪೂರ್ವ ಸಿದ್ಧತಾ ಸಭೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ ಮುಂಗಾರು ಪೂರ್ವ ಸಿದ್ಧತಾ ಸಭೆಯು ಪಾಲಿಕೆಯ ಮಂಗಳ ಸಭಾಂಗಣದಲ್ಲಿ ನಡೆಯಿತು.

ಇನ್ಸಿಡೆಂಟ್ ಕಮಾಂಡರ್ ಆಗಿ ನೇಮಕಗೊಂಡಿರುವ ಅಧಿಕಾರಿಗಳಿಗೆ ಹೂಳೆತ್ತುವುದು, ರಸ್ತೆ ತಡೆಗೋಡೆ ಕಾಮಗಾರಿಗಳು ಮತ್ತು ಆರೋಗ್ಯ ಸಂಬಂಧಿತ ಮುನ್ನೆಚ್ಚರಿಕೆ ಕ್ರಮಗಳಂತಹ ಎಲ್ಲಾ ಅಗತ್ಯ ಕಾರ್ಯಗಳನ್ನು ಕೈಗೊಳ್ಳಲು ಪಾಲಿಕೆ ಆಯುಕ್ತ ರವಿಚಂದ್ರ ನಾಯ್ಕ್ ಅವರು ನಿರ್ದೇಶನ ನೀಡಿದರು. ಮುಂಗಾರು ಆರಂಭವಾಗುವ ಮೊದಲು ಜಾರಿಗೆ ತರಬೇಕಾದ ಅಗತ್ಯ ಆವಶ್ಯಕತೆಗಳ ಬಗ್ಗೆ ಯಾವುದೇ ವಿಫಲತೆಯಿಲ್ಲದೆ ವರದಿ ಮಾಡಲು ಮತ್ತು ಯಾವುದೇ ಪ್ರಾಣಹಾನಿ ಸಂಭವಿಸದಂತೆ ಜಾಗರೂಕತೆ ವಹಿಸಲು ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದರು. ನಿಯಂತ್ರಣ ಕೊಠಡಿಗಳು ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿವೆ ಎಂದು ಮಾಹಿತಿ ನೀಡಿದ ಆಯುಕ್ತರು, ತುರ್ತು ಕರೆಗಳಿಗೆ ಸ್ಪಂದಿಸಲು ಮತ್ತು ಕ್ಷಿಪ್ರ ಕ್ರಮ ಕೈಗೊಳ್ಳಲು ಅಧಿಕಾರಿಗಳು ತಮ್ಮ ಮೊಬೈಲ್ ಫೋನ್‌ಗಳನ್ನು ದಿನದ 24 ಗಂಟೆ ಅವಧಿಯಲ್ಲೂ ಚಾಲನೆಯಲ್ಲಿಟ್ಟುಕೊಳ್ಳಲು ತಿಳಿಸಿದರು. ಸಭೆಯಲ್ಲಿ ಸಭೆಯಲ್ಲಿ ಉಪ ಆಯುಕ್ತ (ಅಭಿವೃದ್ಧಿ) ನರೇಶ್ ಪಿ. ಶೆಣೈ, ಮಂಗಳೂರು ಮಹಾನಗರ ಪಾಲಿಕೆಯ ವಿವಿಧ ವಿಭಾಗಗಳ ಅಧಿಕಾರಿಗಳು, ಮೆಸ್ಕಾಂ, ಅರಣ್ಯ ಇಲಾಖೆ ಹಾಗೂ ಅಗ್ನಿಶಾಮಕ ದಳದ ಅಧಿಕಾರಿಗಳು ಉಪಸ್ಥಿತರಿದ್ದರು.


ಮಳಲಿ: ಮೇ 9,10ಕ್ಕೆ ಪ್ರತಿಷ್ಠಾ ಕಾರ್ಯ

ಕೈಕಂಬ: ಮಂಗಳೂರು ತಾಲೂಕಿನ ಗಂಜಿಮಠ ಸಮೀಪದ ಮಳಲಿ ಶ್ರೀ ಸೂರ್ಯನಾರಾಯಣ ದೇವಸ್ಥಾನದ ಪುನರ್ ನಿರ್ಮಾಣದ ಅಂಗವಾಗಿ ಕ್ಷೇತ್ರದ ನಾಗಾಲಯದಲ್ಲಿ ಪೊಳಲಿ ಸುಬ್ರಮಣ್ಯ ತಂತ್ರಿಗಳ ಮಾರ್ಗದರ್ಶನದಲ್ಲಿ ಶ್ರೀ ನಾಗಬ್ರಹ್ಮ, ರಕ್ತೇಶ್ವರಿ, ನಂದಿಗೋಣ, ಕ್ಷೇತ್ರಪಾಲ ಸಾನಿಧ್ಯಗಳ ಪುನಃಪ್ರತಿಷ್ಠಾ ಬ್ರಹ್ಮಕಲಶ ಮಹೋತ್ಸವವು ಮೇ 9ರ ಶನಿವಾರ ಮತ್ತು 10ರ ಭಾನುವಾರ ನಡೆಯಲಿದೆ.

ಧಾರ್ಮಿಕ ಕಾರ್ಯಕ್ರಮಗಳು

ಮೇ 9ರಂದು ಸಂಜೆ 5:30 ರಿಂದ ಪ್ರಾಸಾದ ಪರಿಗ್ರಹ, ಪ್ರಾರ್ಥನೆ, ಪುಣ್ಯಾಹ, ಸಪ್ತಶುದ್ಧಿ ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಪೂಜೆ, ದಿಶಾ ಬಲಿ, ಬಿಂಬ ಶುದ್ಧಿ, ಬಿಂಬಾವಾಸ. ಮೇ 10ರಂದು ಬೆಳಿಗ್ಗೆ ಗಂಟೆ 6:30ರಿಂದ ಪುಣ್ಯಾಹ, ಗಣಪತಿ ಹೋಮ, ಸಾನಿಧ್ಯಗಳ ಪ್ರತಿಷ್ಠಾ ಹೋಮ, ಕಲಶ ಪೂಜೆ, ಅದಿವಾಸ ಹೋಮ, ಪವಮಾನ ಹೋಮ, ತಿಲ ಹೋಮ, ಆಶ್ಲೇಷ ಬಲಿ, ಬೆಳಿಗ್ಗೆ ಗಂಟೆ 9:43ರ ಮಿಥುನ ಲಗ್ನ ಸುಮೂಹೂರ್ತದಲ್ಲಿ ಪ್ರತಿಷ್ಠಾ ಕಲಶಾಭಿಷೇಕ, ಪ್ರತಿಷ್ಠಾ ಪೂಜೆ, ಪಂಚಾಮೃತ ಅಭಿಷೇಕ ಪ್ರಾಯಶ್ಚಿತ್ತ ಹೋಮಗಳ ಕಲಶಾಭಿಷೇಕ, ಪರಿಕಲಶಾಭಿಷೇಕ ಬ್ರಹ್ಮಕಲಶಾಭಿಷೇಕ ಪೂಜೆ ಮಧ್ಯಾಹ್ನ ಗಂಟೆ 12:30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆಯ ಬಳಿಕ ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಲಿದೆ ಎಂದು ಮಳಲಿ ಶ್ರೀ ಸೂರ್ಯನಾರಾಯಣ ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಕುಕ್ಕೆ: ಗ್ಯಾರಂಟಿ ಪ್ರಾಧಿಕಾರ ಅಧ್ಯಕ್ಷರ ಭೇಟಿ



ಸುಬ್ರಹ್ಮಣ್ಯ: ಕರ್ನಾಟಕ ರಾಜ್ಯ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ರಾಜ್ಯಾಧ್ಯಕ್ಷ ರೇವಣ್ಣ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭೇಟಿ ನೀಡಿದರು. ಕ್ಷೇತ್ರಕ್ಕೆ ಭೇಟಿ ನೀಡಿದ ಅವರನ್ನು ಶ್ರೀ ದೇವಳದ ವತಿಯಿಂದ ಸ್ವಾಗತಿಸಿ ಗೌರವಿಸಲಾಯಿತು.

ಕರ್ನಾಟಕ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ದ.ಕ. ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ, ಕಡಬ ತಾಲೂಕು ಅಧ್ಯಕ್ಷ ಸುಧೀರ್ ಕುಮಾರ್ ಶೆಟ್ಟಿ ಪುತ್ತೂರು ತಾಲೂಕು ಅಧ್ಯಕ್ಷ ಉಮಾನಾಥ ಶೆಟ್ಟಿ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ, ಸಿಇಒ ಅರವಿಂದ ಅಯ್ಯಪ್ಪ ಸುತಗುಂಡಿ, ವ್ಯವಸ್ಥಾಪನಾ ಸಮಿತಿ ಸದಸ್ಯ ಸೌಮ್ಯ ಭರತ್, ಪ್ರವೀಣ ರೈ ಮರುವಂಜ, ಲೀಲಾ ಮನಮೋಹನ್, ಮಾಜಿ ಸದಸ್ಯರಾದ ಮಾಧವ ಡಿ. ದೇವರಗದ್ದೆ, ಕೃಷ್ಣಮೂರ್ತಿ ಭಟ್ ಉಪಸ್ಥಿತರಿದ್ದರು. ಬುಧವಾರ ರಾತ್ರಿ ಕ್ಷೇತ್ರಕ್ಕೆ ಭೇಟಿ ನೀಡಿ ದೇವಳದಲ್ಲಿ ಆಶ್ಲೇಷ ಬಲಿ ಸೇವೆ ನೆರವೇರಿಸಿದರು.

ಮಳೆಗೆ ಕೆಸರುಮಯವಾದ ಸಂಪರ್ಕ ಕೊಂಡಿ | ನಿತ್ಯವೂ ವಾಹನ ಸವಾರರ ಪರದಾಟ | ಗುತ್ತಿಗೆದಾರರ ಕೈಬಿಡಲು ಚಿಂತನೆ

ಮರಳು ಅಭಾವದಿಂದ ಅರ್ಧಕ್ಕೆ ನಿಂತ ಅಜ್ಜಾವರದ ಗ್ರಾಮೀಣ ರಸ್ತೆ ಕಾಮಗಾರಿ

ಸುಳ್ಯ: ತಾಲೂಕಿನ ಅಜ್ಜಾವರ ಗ್ರಾಮದ ಪಡ್ಡಂಬೈಲು ಕರ್ಲಪ್ಪಾಡಿ ಸಂಪರ್ಕ ರಸ್ತೆ ಕಾಮಗಾರಿಯು ನನೆಗುದಿಗೆ ಬಿದ್ದಿದ್ದು, ಇದರ ಪರಿಣಾಮ ಮಳೆಗೆ ರಸ್ತೆ ಸಂಪೂರ್ಣ ಕೆಸರುಮಯಗೊಂಡು ಅಸ್ತವ್ಯಸ್ತಗೊಂಡಿದ್ದು, ವಾಹನ ಸವಾರರು ಪರದಾಡುವಂತಾಗಿದೆ.

2024-25ನೇ ಆರ್ಥಿಕ ವರ್ಷದಲ್ಲಿ ಗ್ರಾ.ಪಂ. ರೂ.1.45 ಲಕ್ಷ ಮೊತ್ತದಲ್ಲಿ ಈ ರಸ್ತೆಗೆ ಕಾಂಕ್ರೀಟೀಕರಣಕ್ಕೆ ಅನುದಾನವಿರಿಸಿ ಆ ಬಳಿಕ ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಳಿಸಿತ್ತು. ಈ ನಡುವೆ ಗುತ್ತಿಗೆದಾರರು ಸ್ಥಳೀಯರು ಕೆಂಪು ಕಲ್ಲುಗಳನ್ನು ಹಾಕಿ ಸಿದ್ಧಗೊಳಿಸಿದ್ದ ರಸ್ತೆಯನ್ನು ತೆರವುಗೊಳಿಸಿ ಕೇವಲ ಜಲ್ಲಿಗಳನ್ನು ತಂದು ಸುರಿದಿದ್ದರು. ಇದೀಗ ಆ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲು 'ಮರಳು ಅಭಾವ' ಎಂಬ ಕಾರಣ ನೀಡಿ ಕಾಮಗಾರಿಯನ್ನು ಅರ್ಧಕ್ಕೆ



ನಿಲ್ಲಿಸಲಾಗಿದೆ. ಈ ರಸ್ತೆಯಲ್ಲಿ ದಿನನಿತ್ಯ ತೆರಳುವ ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು, ಪ್ರಯಾಣಿಕರ ವಾಹನಗಳು ಜೊತೆಗೆ ಕೆಎಫ್‌ಡಿಸಿ ರಬ್ಬರ್ ಹಾಲು ಕೊಂಡೊಯ್ಯುವ ಟ್ಯಾಂಕರ್ ಸಹಿತ ಹಲವು ವಾಹನಗಳು ಪರದಾಡುವಂತಾಗಿದೆ. ಸ್ಥಳೀಯ 1 ವರ್ಷದಿಂದ ನನೆಗುದಿಗೆ ಬಿದ್ದಿದೆ ಎಂಬ ಆರೋಪವು ಇದೀಗ ಕೇಳಿ ಬಂದಿದೆ. ಟೆಂಡರ್‌ದಾರರು ಮತ್ತು ಅಭಿವೃದ್ಧಿ ಅಧಿಕಾರಿಗಳು ಕೂಡಲೇ ಸ್ಪಂದಿಸುಂತೆ ನಾಗರಿಕರು ಒತ್ತಾಯಿಸುತ್ತಿದ್ದಾರೆ.

> **ಹೊಸ ಟೆಂಡರ್**
> ಚಂದ್ರಕಾಂತ ಎಂಬ ಗುತ್ತಿಗೆದಾರರಿಗೆ ನಾವು 2025ರ ಜೂನ್‌18ಕ್ಕೆ ರೂ.1.45 ಲಕ್ಷಕ್ಕೆ ಕಾಮಗಾರಿ ಗುತ್ತಿಗೆಯನ್ನು ನೀಡಿಲಾಗಿದೆ. ಆ ಬಳಿಕ ಜಲ್ಲಿಗಳನ್ನು ಹಾಕಲಾಗಿ ಬಳಿಕ ಮರಳು ಅಭಾವದ ಕಾರಣ ನೀಡುತ್ತಿದ್ದು ಅವರು ಕೂಡಲೇ ಕೆಲಸ ಮುಗಿಸದೇ ಇದ್ದಲ್ಲಿ ಗುತ್ತಿಗೆ ರದ್ದುಪಡಿಸಿ ಹೊಸ ಟೆಂಡರ್ ಕರೆದು ಕಾಮಗಾರಿ ಮುಗಿಸಲಾಗುವುದು.
> ● ಜಯಮಾಲ ಎ.ಕೆ., ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ

> **25 ಸಾವಿರ ಬಾಕಿ**
> ರಸ್ತೆ ತೋಡಿಗೆ ತಡೆಗೋಡೆ ಹಾಗೂ ಇತರೆ ಕಾಮಗಾರಿ ನಡೆಸಿದ್ದು, ಪಂಚಾಯತ್ ರಸ್ತೆಯ ಕಾಮಗಾರಿ ಮರಳಿಗೆ ರೂ.25 ಸಾವಿರ ನೀಡಬೇಕಿರುವುದರಿಂದ ಅದು ಹೊರೆಯಾಗುತ್ತಿದೆ. ಜೊತೆಗೆ ಜಲ್ಲಿ ಹುಡಿಗಳನ್ನು ಹಾಕದಂತೆ ಇಂಜಿನಿಯರಿಂಗ್ ವಿಭಾಗ ತಿಳಿಸಿದ್ದು, ನಾವು ನಾಲ್ವರ ತಂಡ ಕಾಮಗಾರಿ ಮಾಡುತ್ತಿದ್ದು, ಮರಳು ಅಭಾವ ಹಿನ್ನಲೆಯಲ್ಲಿ ಕಾಮಗಾರಿ ವಿಳಂಬವಾಗಿದೆ.
> ● ಗೌತಮ್, ಗುತ್ತಿಗೆದಾರ

ಮರಳು ಅಭಾವ ಕಾರಣ

ತಾಲೂಕಿನಾದ್ಯಂತ ಮರಳು ಅಭಾವ ಸೃಷ್ಟಿಯಾಗುತ್ತಿದ್ದು, ಈ ಹಿಂದೆ ಗುತ್ತಿಗೆದಾರರಿಗೆ ಕಡಿಮೆ ಬೆಲೆಗೆ ಮರಳು ಸ್ಥಳೀಯವಾಗಿ ಪೂರೈಕೆಯಾಗುತ್ತಿತ್ತು. ಕಠಿಣ ನಿಯಮದ ಹಿನ್ನಲೆಯಲ್ಲಿ ಮರಳು ಅಭಾವ ಸೃಷ್ಟಿಯಾಗಿದೆ. 1 ಲೋಡ್ ಮರಳಿಗೆ ರೂ.25 ಸಾವಿರ ಪಾವತಿಸಬೇಕಿದೆಎಂದುಗುತ್ತಿಗೆದಾರರುಹೇಳುತ್ತಿದ್ದಾರೆ. ಒಟ್ಟಿನಲ್ಲಿ ಸಮಸ್ಯೆ ಬಗೆಹರಿಸಿ ರಸ್ತೆ ಪೂರ್ಣಗೊಳಿಸಲು ಸಹಕರಿಸುವಂತೆ ಜಿಲ್ಲಾಡಳಿತಕ್ಕೆ ಹಾಗೂ ಸಂಬಂಧಿಸಿದವರಿಗೆ ಜನತೆ ಆಗ್ರಹಿಸುತ್ತಿದ್ದಾರೆ.

ಸುತ್ತಮುತ್ತ

ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕಾಸರಗೋಡು: ಪರವನಡ್ಕ ಸರ್ಕಾರಿ ಮಕ್ಕಳ ಗೃಹದಲ್ಲಿ ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಶಿಕ್ಷಕ, ಬೋಧನಾ ಶಿಕ್ಷಕರು (ಇಂಗ್ಲಿಷ್, ಗಣಿತ, ಹಿಂದಿ, ಮಲೆಯಾಳ, ವಿಜ್ಞಾನ), ಯೋಗ ಮತ್ತು ಪಿಟಿ ಬೋಧಕ, ಸಂಗೀತ ಶಿಕ್ಷಕರು, ಕ್ಲಿನಿಕಲ್ ಮನಶಾಸ್ತ್ರಜ್ಞ ಹುದ್ದೆಗಳ ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹತಾ ಪ್ರಮಾಣಪತ್ರಗಳ ಪ್ರತಿಗಳೊಂದಿಗೆ ಅರ್ಜಿಗಳನ್ನು ಖುದ್ದಾಗಿ ಅಥವಾ ಸೂಪರಿಂಟೆಂಡೆಂಟ್, ಸರ್ಕಾರಿ ಮಕ್ಕಳ ಗೃಹ, ಪರವನಡ್ಕ ಅಂಚೆ, ಕಾಸರಗೋಡು – 671317 ಈ ವಿಳಾಸಕ್ಕೆ ಕಳುಹಿಸಬೇಕು. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ ಮೇ 14 ರಂದು ಸಂಜೆ 5 ಗಂಟೆ ಆಗಿದೆ. ಹೆಚ್ಚಿನ ಮಾಹಿತಿಗೆ 04994 238490 ಸಂಪರ್ಕಿಸಬಹುದು.

ನಾಳೆ ಭಜನಾ ಮಂದಿರದ ಶಿಲಾನ್ಯಾಸ ಕಾರ್ಯಕ್ರಮ

ಬಂಟ್ವಾಳ: ಶ್ರೀ ದುರ್ಗಾಪರಮೇಶ್ವರೀ ಭಜನಾ ಮಂದಿರ ಸೇವಾ ಟ್ರಸ್ಟ್ ಮೆಲ್ಕಾರ್ ಇದರ ನೂತನವಾಗಿ ಪುನರ್ ನಿರ್ಮಾಣಗೊಳ್ಳಲಿರುವ ಭಜನಾ ಮಂದಿರದ ಶಿಲಾನ್ಯಾಸ ಕಾರ್ಯಕ್ರಮ ಮೇ 9 ರಂದು ಬೆಳಿಗ್ಗೆ 9.30ಕ್ಕೆ ನಡೆಯಲಿದೆ. ಉಳ್ಳಾಲ ಉಳಿಯ ಶ್ರೀ ಧರ್ಮಅರಸರ ಕ್ಷೇತ್ರದ ಧರ್ಮದರ್ಶಿ ಶ್ರೀ ದೇವು ಮೂಲ್ಯಣ್ಣ ಶಿಲಾನ್ಯಾಸ ನೆರವೇರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಕೋರ್ಸ್‌ಗಳಿಗೆ ಅರ್ಜಿಗಳ ಆಹ್ವಾನ

ಕಾಸರಗೋಡು: ಕೆಲ್ಟ್ರಾನ್ ಟೂಲ್ ರೂಮ್ ಕಮ್ ಟ್ರೈನಿಂಗ್ ಸೆಂಟರ್ ಕುಟ್ಟಿಪುರಂ ಸಂಸ್ಥೆಯು ನಡೆಸುವ ವಿವಿಧ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಿಎನ್‌ಸಿ ಮಿಲ್ಲಿಂಗ್ ಆಪರೇಟರ್ ಕೋರ್ಸ್ (25 ದಿನಗಳು), ಸಿಎನ್‌ಸಿ ಲೇಥ್ ಆಪರೇಟರ್ ಕೋರ್ಸ್ (25 ದಿನಗಳು) ಗಳಿಗೆ ಐಟಿಐ, ಪ್ಲಸ್ ಟು, ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 0494 2697188 ಅಥವಾ 9895106748 ಸಂಪರ್ಕಿಸಬಹುದು.

ಸಮೀಕ್ಷೆಯಲ್ಲಿ ಬಿಟ್ಟು ಹೋದ ಫಲಾನುಭವಿಗಳ ಸೇರ್ಪಡೆಗೆ ಅವಕಾಶ

ಉಡುಪಿ: ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ 2018 ರ ವಸತಿ ರಹಿತ ಮತ್ತು ನಿವೇಶನ ರಹಿತರ ಸಮೀಕ್ಷೆಯ ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಅರ್ಹ ಫಲಾನುಭವಿಗಳನ್ನು ಸೇರ್ಪಡೆ ಗೊಳಿಸಲು ಮೇ 15 ರ ವರೆಗೆ ಅಂತಿಮ ಅವಕಾಶ ನೀಡಲಾಗಿರುತ್ತದೆ. ಅರ್ಹ ಫಲಾನುಭವಿಗಳು ಭಾವಚಿತ್ರ, ಆಧಾರ್ ಕಾರ್ಡ್ ಪ್ರತಿ, ರೇಷನ್ ಕಾರ್ಡ್ ಪ್ರತಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿ ಹಾಗೂ ಆರ್.ಟಿ.ಸಿ (ವಸತಿ ಯೋಜನೆಗೆ ಮಾತ್ರ) ಪ್ರತಿಗಳೊಂದಿಗೆ ಸಮೀಪದ ಗ್ರಾಮ ಪಂಚಾಯತ್ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿ ಕಾರಿಗಳ ಕಛೇರಿ ಪ್ರಕಟಣೆ ತಿಳಿಸಿದೆ.

ಬಜಪೆ: ಅವಧಿ ಮೀರಿದ ಬ್ಯಾನರ್ ತೆರವು ಮಾಡಿದ ಪಂಚಾಯತ್!

ಕೈಕಂಬ: ಬಜಪೆ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಅವಧಿ ಮೀರಿದರೂ ತೆರವು ಮಾಡದೇ ಉಳಿದಿದ್ದ ಬ್ಯಾನರ್, ಫ್ಲೆಕ್ಸ್ ಗಳನ್ನು ಪ.ಪಂ. ಬುಧವಾರ



ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದೆ. ಬ್ಯಾನರ್, ಫ್ಲೆಕ್ಸ್ ಅಳವಡಿಕೆ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿರುವ ಪ.ಪಂ.ಬುಧವಾರ ಮರಾವೂರಿನಿಂದ ಭಟ್ರಕೆರೆಯವರೆಗೆ ರಾಜ್ಯ ಹೆದ್ದಾರಿ ಬದಿಯಲ್ಲಿ ಅಳವಡಿಸಿದ್ದ ಅವಧಿ ಮೀರಿದ ನೂರಾರು ಬ್ಯಾನರ್ ಗಳನ್ನು ತೆರವುಗೊಳಿ ಸಿದೆ. ಪರವಾನಗಿ ಪಡೆದು ಹಾಕಿದ್ದ ಬ್ಯಾನರ್‌ಗಳ ಅವಧಿ ಮುಗಿದಿದ್ದರೂ ಸಂಬಂಧಪಟ್ಟವರು ಅವುಗಳನ್ನು ತೆರವು ಮಾಡಿರಲಿಲ್ಲ, ಈ ಬಗ್ಗೆ ಹಲವರಿಗೆ ನೋಟೀಸ್ ನೀಡಲಾಗಿದ್ದು, ಪರವಾನಗಿ ಇಲ್ಲದೇ ಪ.ಪಂ. ವ್ಯಾಪ್ತಿಯಲ್ಲಿ ಯಾವುದೇ ಬ್ಯಾನರ್, ಫ್ಲೆಕ್ಸ್ ಕಟ್ಟುವಂತಿಲ್ಲ, ಒಂದು ವೇಳೆ ಅಂತಹ ಬ್ಯಾನರ್ ಗಳನ್ನು ಅಳವಡಿಸಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಪ.ಪಂ. ಅಧ್ಯಕ್ಷ ಲೋಕೇಶ್ ಪೂಜಾರಿ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

ಪುದುಕೋಳಿಯಲ್ಲಿ ಧರ್ಮನೇಮ

ಬದಿಯಡ್ಕ: ನೀರ್ಚಾಲು ಸಮೀಪದ



ಪುದುಕೋಳಿಯಲ್ಲಿ ವಾರ್ಷಿಕ ಧರ್ಮನೇಮ ಮಂಗಳವಾರ ಮತ್ತು ಬುಧವಾರ ವಿವಿಧ ಕಾರ್ಯಕ್ರಮ ಗಳೊಂದಿಗೆ ನೆರವೇರಿತು. ಮಂಗಳವಾರ ರಾತ್ರಿ ಶ್ರೀ ದೇವರ ಪೂಜೆ, ಪ್ರಾರ್ಥನೆ, ಪ್ರಸಾದ ವಿತರಣೆ, ದೈವಗಳ ತೊಡಂಙಲ್, ಧರ್ಮನೇಮ, ಬುಧವಾರ ಮುಂಜಾನೆ ಈರ್ವರು ಉಳ್ಳಾಕ್ಲು ದೈವಗಳ ನೇಮ, ಒಂಜಿ ಕುಂದು ನಲ್ಪತ್ತೊಂಭತ್ತು ದೈವಗಳ ಕೋಲ, ಶ್ರೀ ಧೂಮಾವತಿ ದೈವಕೋಲ, ಪ್ರಸಾದ ವಿತರಣೆ ಬಳಿಕ ಧರ್ಮದೈವ ಪಂಜುರ್ಲಿ ದೈವಗಳ ಕೋಲ, ಪ್ರಸಾದ ವಿತರಣೆ ಇತ್ಯಾದಿ ಕಾರ್ಯಕ್ರಮ ನಡೆಯಿತು. ಪ್ರಮುಖರಾದ ಶ್ರೀಕೃಷ್ಣ ಭಟ್ ಪುದುಕೋಳಿ, ಗಣೇಶ್ ಭಟ್ ಪುದುಕೋಳಿ, ಶಂಕರ ಭಟ್ ಪರಕ್ಕಾಲು, ಗೋವಿಂದ ಭಟ್ ಪರಕ್ಕಾಲು, ಕೃಷ್ಣಮೂರ್ತಿ ಪುದುಕೋಳಿ ನೇತೃತ್ವ ವಹಿಸಿದ್ದರು.

ಪರ್ಮಿಟ್ ಇದ್ದರೂ ಬಸ್ ಟ್ರಿಪ್ ಕಡಿತ | ಆರ್‌ಟಿಒ ಕಚೇರಿಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಆಕ್ಷೇಪ

15 ದಿನದೊಳಗೆ ನಿಗದಿತ ರೂಟ್‌ಗಳಲ್ಲಿ ಬಸ್ ಸಂಚಾರಕ್ಕೆ ಕ್ರಮ



ಮಂಗಳೂರು: ಮಂಗಳೂರು ನಗರ ವ್ಯಾಪ್ತಿಯಲ್ಲಿ ಕೆಲವೆಡೆ ಖಾಸಗಿ ಸಿಟಿ ಬಸ್‌ಗಳು ಸೇರಿದಂತೆ ಕೆ.ಎಸ್.ಆರ್.ಟಿ.ಸಿ ಬಸ್‌ಗಳು ನಿಗದಿತ ಸ್ಥಳಕ್ಕೆ ಹೋಗದಿರುವುದು ಹಾಗೂ ಟ್ರಿಪ್ ಕಡಿತಗೊಳಿಸುತ್ತಿರುವುದರಿಂದ ಸಾರ್ವಜನಿಕರು ತೀವ್ರ ಸಮಸ್ಯೆ ಅನುಭವಿಸುತ್ತಿರುವ ಕುರಿತು ಹಲವು ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಶಾಸಕ ವೇದವ್ಯಾಸ ಕಾಮತ್ ಅವರು ಆರ್.ಟಿ.ಒ ಕಚೇರಿಯಲ್ಲಿ ಗುರುವಾರ ಹಿರಿಯ ಅಧಿಕಾರಿಗಳು, ಬಸ್ ಮಾಲಕರ ಸಂಘದ ಪ್ರತಿನಿಧಿಗಳು ಹಾಗೂ ಸಾರ್ವಜನಿಕರ ವಿಶೇಷ ಸಭೆ ನಡೆಸಿದರು.

ಬಸ್ ಸಂಚಾರ ಕಡಿತದಿಂದ ಸಂಕಷ್ಟ

ಈ ವೇಳೆ ಮಾತನಾಡಿದ ಶಾಸಕರು, ಹಲವಾರು ವರ್ಷಗಳಿಂದ ಇಲ್ಲಿನ ಖಾಸಗಿ ಹಾಗೂ ಕೆ.ಎಸ್.ಆರ್. ಟಿ.ಸಿ ಬಸ್ಸುಗಳು ಉತ್ತಮ ರೀತಿಯಲ್ಲಿ ಸಾರ್ವಜನಿಕ ಸೇವೆ ನೀಡುತ್ತಿವೆ. ಆದರ ನಡುವೆ ಮನಪಾ ವಾರ್ಡ್ ಸಂಖ್ಯೆ 51ರ ಸರಿಪಲ್ಲ–ಕನ್ನಗುಡ್ಡೆ, ವಾರ್ಡ್ ಸಂಖ್ಯೆ 53ರ ಬಜಾಲ್ ಪಡ್ಪು ವಳ್ಳಕೆರೆ ಹಾಗೂ ಶಕ್ತಿನಗರ, ಮರೋಳಿ ಭಾಗದಲ್ಲಿ ಪರ್ಮಿಟ್ ಇದ್ದರೂ ಬಸ್‌ಗಳು ಸರಿಯಾಗಿ ಕಾರ್ಯನಿರ್ವಹಿಸದಿರುವುದು ಸಮಸ್ಯೆಗೆ ಕಾರಣವಾಗಿದೆ. ಇಲ್ಲಿನ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಶಾಲಾ ಕಾಲೇಜು, ಆಸ್ಪತ್ರೆ, ಕಚೇರಿ, ಸೇರಿದಂತೆ ಅಗತ್ಯ ಸಂದರ್ಭಗಳಲ್ಲಿ ಬಸ್ ಸಂಚಾರವೇ ಆಧಾರವಾಗಿರುವುದರಿಂದ ಬಸ್ ಸಂಘದವರು, ಅಧಿಕಾರಿಗಳು ಅತ್ಯಂತ ಮುತುವರ್ಜಿಯಿಂದ ಕಾರ್ಯ ನಿರ್ವಹಿಸಬೇಕಾದ ಅಗತ್ಯವಿದೆ ಎಂದು ಅವರು ಹೇಳಿದರು.

ಈ ಬಗ್ಗೆ ದ.ಕ ಬಸ್ ಮಾಲಕರ ಸಂಘ, ಆರ್.ಟಿ.ಒ, ಸೇರಿದಂತೆ ಹಾಗೂ ವಿಧಾನಸಭೆ ಅಧಿವೇಶನದಲ್ಲಿಯೂ ವಿಷಯ ಪ್ರಸ್ತಾಪಿಸಿದ್ದೆ. ಇದೀಗ ಸಾರಿಗೆ ಸಚಿವರಾದ ರಾಮಲಿಂಗಾ ರೆಡ್ಡಿಯವರೇ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಸಭೆ ನಡೆಸುವಂತೆ ಆರ್‌ಟಿಒ ಹಿರಿಯ ಅಧಿಕಾರಿಗಳಿಗೆ ಆದೇಶಿಸಿದ್ದು, ಅದರಂತೆ ಮಹತ್ವದ ಸಭೆ ನಡೆದಿದೆ. ಮುಂದಿನ 15 ದಿನಗಳ ಒಳಗಾಗಿ ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳು ನಿಗದಿಪಡಿಸಿರುವ ರೂಟ್‌ಗಳಲ್ಲಿ ಕಡ್ಡಾಯವಾಗಿ ಸಂಚರಿಸುವಂತೆ ಕ್ರಮ ಕೈಗೊಳ್ಳಲಾಗುವುದು. ಇಲ್ಲದಿದ್ದಲ್ಲಿ ಅಂತಹ ಪರ್ಮಿಟ್‌ಗಳನ್ನು ಹಸ್ತಾಂತರ ಮಾಡುವ ಪ್ರಕ್ರಿಯೆ ನಡೆಸಲಾಗುವುದು ಎಂಬ ಆರ್‌ಟಿಒ ಅಧಿಕಾರಿಗಳ ಹೇಳಿಕೆಗೆ ಎಲ್ಲರೂ ಸಹಮತ ವ್ಯಕ್ತಪಡಿಸಿರುವುದು ಸ್ವಾಗತಾರ್ಹ ಎಂದರು.

- **ಮನಪಾ ವಾರ್ಡ್ ಸಂಖ್ಯೆ ಕೆಲವು ಕಡೆ ಪರ್ಮಿಟ್ ಇದ್ದರೂ ಬಸ್‌ಗಳು ಸರಿಯಾಗಿ ಕಾರ್ಯನಿರ್ವ ಹಿಸದಿರುವುದೇ ಸಮಸ್ಯೆಗೆ ಕಾರಣ**
- **ಮುಂದಿನ 15 ದಿನದೊಳಗೆ ಕೆಎಸ್ಆರ್ಟಿಸಿ ಹಾಗೂ ಖಾಸಗಿ ಬಸ್‌ಗಳು ನಿಗದಿಪಡಿಸಿರುವ ರೂಟ್‌ಗಳಲ್ಲಿ ಕಡ್ಡಾಯ ಬಸ್ ಸಂಚರಾಕ್ಕೆ ಕ್ರಮ , ಇಲ್ಲದಿದ್ದಲ್ಲಿ ಅಂತಹ ಪರ್ಮಿಟ್‌ಗಳ ಹಸ್ತಾಂತರ ಮಾಡುವ ಪ್ರಕ್ರಿಯೆ ನಡೆಸಲಾಗುವುದು**

ಅದರ ಜೊತೆಗೆ ಮಂಗಳಾದೇವಿ ಸರ್ಕಲ್ ಬಳಿ ಸ್ಮಾರ್ಟ್ ಸಿಟಿ ವತಿಯಿಂದ ನಿರ್ಮಿಸಲಾಗಿರುವ ಬಸ್ ಬೇನಲ್ಲೇ ಎಲ್ಲಾ ಬಸ್‌ಗಳು ನಿಲುಗಡೆ ಮಾಡಬೇಕು, ಆರ್‌ಟಿಒದಲ್ಲಿ ಜನಸಾಮಾನ್ಯರು ಅನುಭವಿಸುತ್ತಿರುವ ತೊಂದರೆಗೆ ಮುಕ್ತಿ ನೀಡಬೇಕು, ನಾಗರಿಕ ಹಿತರಕ್ಷಣಾ ಸಮಿತಿಯ ಹನುಮಂತ ಕಾಮತ್ ಅವರು ಪ್ರಸ್ತಾಪಿಸಿದ ಜನಪರ ವಿಚಾರಗಳ ಬಗ್ಗೆ ಆದ್ಯತೆಯ ಮೇರೆಗೆ ಗಮನಹರಿಸ ಬೇಕು ಎಂದು ಸಾರಿಗೆ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು.

ಕೆ.ಎಸ್.ಆರ್.ಟಿ.ಸಿ ಡಿ.ಸಿ ರಾಜೇಶ್ ಶೆಟ್ಟಿ, ಆರ್. ಟಿ.ಒ ಹಿರಿಯ ಅಧಿಕಾರಿಗಳು, ಬಸ್ ಸಂಘದ ಪ್ರಮುಖರಾದ ಅಜೀಜ್ ಪರ್ತಿಪಾಡಿ, ರಾಜೇಂದ್ರ ವರ್ಮ ಬಲ್ಲಾಳ್, ರಾಮಚಂದ್ರ, ನವನೀತ, ಮೊಹಮ್ಮದ್ ವಾಸೀಮ್, ಸಾರ್ವಜನಿಕರ ಪರವಾಗಿ ಪ್ರವೀಣ್ ನಿಡ್ಡೆಲ್, ದೀಪಕ್ ಮರೋಳಿ, ಚಂದ್ರಶೇಖರ ಬಜಾಲ್, ಪ್ರಶಾಂತ್ ಆಳ್ವ ರವಿಚಂದ್ರ, ಪ್ರಸಾದ್, ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅಕ್ಕರ ಫೌಂಡೇಶನ್‌ನ ಮಕ್ಕಳಿಗೆ ಕನ್ನಡಕ ವಿತರಣೆ, ಸ್ವಚ್ಛತಾ ಜಾಗೃತಿ ಕಾರ್ಯಕ್ರಮ



ಕಾಸರಗೋಡು: ಆಸ್ಟರ್ ಮಿಮ್ಸ್ ಕಾಸರಗೋಡು ಮತ್ತು ಕ್ಲಿಯರ್ ಸೈಟ್ ಸಂಯುಕ್ತವಾಗಿ ಅಕ್ಕರ ಫೌಂಡೇಶನ್ನ ಮಕ್ಕಳಿಗೆ ಉಚಿತ ಕನ್ನಡಕಗಳನ್ನು ವಿತರಿಸಲಾಯಿತು.

ಕಾಸರಗೋಡಿನ ಅಕ್ಕರ ಫೌಂಡೇಶನ್‌ನಲ್ಲಿ ನಡೆದ ಕಾರ್ಯಕ್ರಮವನ್ನು ಆಸ್ಟರ್ ಮಿಮ್ಸ್ ಸಿಇಒ ಸುಧೀರ್ ಬಾಸೂರಿ ಉದ್ಘಾಟಿಸಿ ಮಾತನಾಡಿದರು.

30 ಮಂದಿ ಮಕ್ಕಳಿಕೆ ಕನ್ನಡಕ ವಿತರಣೆ

ಜಿಲ್ಲೆಯ ಆರೋಗ್ಯ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಆಸ್ಟರ್ ಮಿಮ್ಸ್ ಸಂಸ್ಥೆಯ ಸಾಮಾಜಿಕ ಸೇವಾ ಯೋಜನೆಯ ಭಾಗವಾಗಿ ದೃಷ್ಟಿದೋಷವಿರುವ ಸುಮಾರು 30 ಮಂದಿ ಮಕ್ಕಳಿಗೆ ಕನ್ನಡಕಗಳನ್ನು ನೀಡಲಾಯಿತು. ಡಿಎಂ ಫೌಂಡೇಶನ್‌ನ ಸಿಎಸ್‌ಆರ್ ಯೋಜನೆಯಾದ ಕ್ಲಿಯರ್ ಸೈಟ್ ಮೂಲಕ ಜಿಲ್ಲೆಯ ಮಕ್ಕಳಿಗೆ ದೃಷ್ಟಿ ಪರೀಕ್ಷೆ ನಡೆಸಿ ಅಗತ್ಯವಿರುವವರಿಗೆ ಕನ್ನಡಕಗಳನ್ನು ವಿತರಿಸಲಾಗಿದೆ.

ಸ್ವಚ್ಛತೆಯ ಜಾಗೃತಿ

ಈ ಸಂದರ್ಭದಲ್ಲಿ ವಿಶ್ವ ಹ್ಯಾಂಡ್ ಹೈಜೀನ್ ದಿನಾಚರಣೆಯ ಅಂಗವಾಗಿ ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ಜಾಗೃತಿ ತರಗತಿಯನ್ನು ಸಹ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಗಿ ಅಕ್ಕರ ಫೌಂಡೇಶನ್ ಸಿಇಒ ಮುಹಮ್ಮದ್ ಯಾಸಿರ್, ಪ್ರೋಗ್ರಾಂ ಮೆನೇಜರ್ ಮಿಸಬ್, ಆಸ್ಟರ್ ವಾಲಂಟಿಯರ್ ಮಲಬಾರ್ ಲೀಡ್ ಮುಹಮ್ಮದ್ ಹಸೀಮ್, ನರ್ಸಿಂಗ್ ಮೆನೇಜರ್ ಶೀಬಾ, ಐಸಿಎನ್ ಅಶ್ವಂತ್, ಫೀಲ್ಡ್ ಕೋ ಓರ್ಡಿನೇಟರ್ ಹರಿತ, ಆಸ್ಟರ್ ಮಿಮ್ಸ್ ಕ್ಲಿಯರ್ ಸೈಟ್ ಪ್ರಾಜೆಕ್ಟ್ ಕೋ ಓರ್ಡಿನೇಟರ್ ಗೋಪಿಕಾ, ಅಕ್ಕರ ಫೌಂಡೇಶನ್ ಕ್ಲಿನಿಕಲ್ ಅಸಿಸ್ಟೆಂಟ್ ಡೈರೆಕ್ಟರ್ ಜಿನಿಲ್ ರಾಜ್ ಮತ್ತು ಟೆಕ್ನಿಕಲ್ ಹೆಡ್ ಎಲಿಜಬೆತ್ ಪಿ.ಪೌಲ್ ಮ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಜನಜಾಗೃತಿ ವೇದಿಕೆ ಟ್ರಸ್ಟ್ ಕಡಬ ತಾಲೂಕು ಪದಾಧಿಕಾರಿಗಳ ಸಭೆ



ಕಡಬ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಂಗ ಸಂಸ್ಥೆಯಾದ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಕಡಬ ತಾಲೂಕು ಇದರ ತಾಲೂಕು ಪದಾಧಿಕಾರಿಗಳ ಸಭೆ ಕಡಬ ಶ್ರೀ ಜಯ ದುರ್ಗಾಪರ ಮೇಶ್ವರಿ ದೇವಳ ಸಭಾಂಗಣದಲ್ಲಿ ತಾ.ಅಧ್ಯಕ್ಷ ಮಹೇಶ್ ಕೆ. ಸವಣೂರು ಅಧ್ಯಕ್ಷತೆಯಲ್ಲಿ ನಡೆಯಿತು.

ದ.ಕ. ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಪದ್ಮನಾಭ ಶೆಟ್ಟಿ ಸಭೆಯನ್ನು ಉದ್ಘಾಟಿಸಿ ದರು.

ದ.ಕ. ಜಿಲ್ಲೆ–2 ನಿರ್ದೇಶಕ ಬಾಬು ನಾಯ್ಕ ಮಾತನಾಡಿ, ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಇನ್ನಷ್ಟು ಪರಿಣಾಮಕಾರಿಯಾಗಿ ನಡೆಸುವ ಅಗತ್ಯವಿದೆ ಎಂದರು.

ಜನಜಾಗೃತಿ ವಿಭಾಗ ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ , 2026–27ನೇ ಸಾಲಿನ ಕ್ರಿಯಾ ಯೋಜನೆ ಹಾಗೂ ಗುರಿ ಸಾಧನೆಯ ಮಾಹಿತಿ ನೀಡಿದರು.

ಕಡಬ ಯೋಜನಾ ಕಚೇರಿ ವ್ಯಾಪ್ತಿಯ ವಲಯವಾರು ಸಾಧನ ವರದಿ ಮಂಡಿಸಲಾಯಿತು. ಕಡಬ ತಾಲೂಕಿನ 20 ಶಾಲಾ–ಕಾಲೇಜ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಆಗಸ್ಟ್ ತಿಂಗಳಲ್ಲಿ ಮದ್ಯವರ್ಜನ ಶಿಬಿರ ಆಯೋಜಿಸುವ ಬಗ್ಗೆ ತೀರ್ಮಾನಿಸಲಾಯಿತು. ಈ ಸಂದರ್ಭ ನೂತನ ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷರಾಗಿ ಇಂದು ಶೇಖರ್ ಶೆಟ್ಟಿ ಅವರನ್ನು ಸರ್ವಾನುಮತದಿಂದ ಆರಿಸಲಾಯಿತು.

ಸೀತಾರಾಮ ಗೌಡ ಪೊಸವಲಿಕೆ, ಜಯಾನಂದ ಬಂಟ್ರಿಯಾಲ್, ಕರುಣಾಕರ ಗೋಗಟೆ, ವರ್ಗೀಸ್, ಗಿರಿಶಂಕರ ಸುಲಾಯ, ಪಿ.ವೈ. ಕುಸುಮ, ಸರೋಜಿನಿ ಆಚಾರ್ಯ, ಶಿವಪ್ರಸಾದ್ ಮೈಲೇರಿ, ಮಹಮದ್ ಅಲಿ, ಗಣೇಶ್ ಕೈಕುರೆ, ಶಾರದಾ, ಮಮತಾ, ಮೀನಾಕ್ಷಿ ಉಪಸ್ಥಿತರಿದ್ದರು. ಮೇಲ್ವಿಚಾರಕ ವಿಜೇಶ್ ಜೈನ್ ಸ್ವಾಗತಿಸಿ, ಕಡಬ ಯೋಜನಾಧಿಕಾರಿ ಪ್ರಕಾಶ್ ಕುಮಾರ್ ವರದಿ ಮಂಡಿಸಿ, ರವಿಪ್ರಸಾದ್ ಆಲಾಜೆ ನಿರ್ವಹಿಸಿದರು.

ಮುಲ್ಕಿ ವಿಶ್ವ ಬ್ರಾಹ್ಮಣ ಸಭಾದಲ್ಲಿ ಸ್ವ –ಉದ್ಯೋಗ ತರಬೇತಿ ಶಿಬಿರ



ಮುಲ್ಕಿ: ಮಂಗಳೂರಿನ ವಿಜಯ ಗ್ರಾಮೀಣ ಪ್ರದೇಶ ಅಭಿವೃದ್ಧಿ ಪ್ರತಿಷ್ಠಾನ ಮತ್ತು ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ ಆಶ್ರಯದಲ್ಲಿ ಮುಲ್ಕಿ ವಿಶ್ವಬ್ರಾಹ್ಮಣ ಮಹಿಳಾ ಬಳಗ ಸಹಯೋಗದೊಂದಿಗೆ ಉಚಿತ ಸ್ವ–ಉದ್ಯೋಗ ತರಬೇತಿ ಶಿಬಿರ ಮುಲ್ಕಿ ವಿಶ್ವ ಬ್ರಾಹ್ಮಣ ಸಭಾದ ಸಭಾಂಗಣದಲ್ಲಿ ನಡೆಯಿತು

ಮುಲ್ಕಿ ಬ್ಯಾಂಕ್ ಆಫ್ ಬರೋಡ ಪ್ರಬಂಧಕ ಸಚಿನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಹಿಳೆಯರು ತರಬೇತಿ ಮೂಲಕ ಸ್ವಾವಲಂಬಿ ಸಾಧಕರಾಗಬೇಕು ಎಂದರು.

ಮಣಿಪಾಲ ಭಾರತೀಯ ವಿಕಾಸ ಟ್ರಸ್ಟ್‌ನ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಬಿ.ಆರ್.ಡಿ.ಎಫ್. ಮಂಗಳೂರು ಸಿಇಒ ಜ್ಯೋತಿರಾಜ್, ವಿಶ್ವಬ್ರಾಹ್ಮಣಸಮಾಜಸಭಾ ಉಪಾಧ್ಯಕ್ಷ ಯೋಗೀಶ್ ಬಿ. ಆಚಾರ್ಯ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಸುಧಾ ಎಚ್., ಆಶಾ ಶಂಕರ್ ಉಪಸ್ಥಿತರಿದ್ದರು

ತೇಜಸ್ವಿನಿ ಪ್ರಾರ್ಥಿಸಿದರು. ವಿಶ್ವ ಬ್ರಾಹ್ಮಣ ಮಹಿಳಾ ಬಳಗದ ಅಧ್ಯಕ್ಷ ಪೂರ್ಣಿಮಾ ಎಚ್. ಸ್ವಾಗತಿಸಿ, ಶಶಿಕಲಾ ವಂದಿಸಿದರು. ಸಂಧ್ಯಾ ಯು. ನಿರೂಪಿಸಿದರು.

ಮೇ 25: ಶಿಕ್ಷಕರ ಹುದ್ದೆಗೆ ಸಂದರ್ಶನ

ಕಾಸರಗೋಡು: ಅಂಗಡಿಮೊಗರು ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ತಾತ್ಕಾಲಿಕ ಶಿಕ್ಷಕರ ನೇಮಕಾತಿಗೆ ಸಂದರ್ಶನವು ಮೇ 25 ರಂದು ಬೆಳಿಗ್ಗೆ 10 ಗಂಟೆಗೆ ಹೈಯರ್ ಸೆಕೆಂಡರಿ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಎಚ್‌ಎಸ್ ಎಸ್‌ಟಿ ವಾಣಿಜ್ಯ, ಭೂಗೋಳ, ಮಲೆಯಾಳ, ಅರೇಬಿಕ್, ರಾಜ್ಯಶಾಸ್ತ್ರ–ಜೂನಿಯರ್ ವಿಭಾಗ, ಎಚ್‌ಎಸ್‌ಎಸ್‌ಟಿ ಇತಿಹಾಸ – ಹಿರಿಯ ವಿಭಾಗಗಳಿಗೆ ನೇಮಕಾತಿ ನಡೆಸಲಾಗುತ್ತಿದೆ. ಮಾಹಿತಿಗೆ 9446461450 ಕರೆ ಮಾಡಬಹುದು.

ಪೈವಳಿಕೆಯ ಕಾಯಾರ್‌ಕಟ್ಟೆ ಶಾಲೆಯಲ್ಲಿ ಪುನರ್ಮಿಲನ, ಗುರುವಂದನೆ ಕಾರ್ಯಕ್ರಮ



ಮಂಜೇಶ್ವರ: ಸರಕಾರಿ ಪ್ರೌಢ ಶಾಲೆ ಪೈವಳಿಕೆ ಕಾಯಾರ್‌ಕಟ್ಟೆ ಆವರಣವು ಶನಿವಾರ ಹಳೆ ವಿದ್ಯಾರ್ಥಿಗಳ 30 ವರುಷಗಳ ನಂತರದ ಪುನರ್ಮಿಲನಕ್ಕೆ ಹಾಗೂ ಗುರುವಂದನೆಗೆ ಸಾಕ್ಷಿಯಾಯಿತು.

1995–96ನೆಯ ಬ್ಯಾಚ್‌ನ 65ಕ್ಕೂ ಅಧಿಕ ವಿದ್ಯಾರ್ಥಿ ವಿದ್ಯಾರ್ಥಿನಿಯರು 30 ವರುಷಗಳ ನಂತರ ತಾವು ಕಲಿತ ಶಾಲೆ ನೆಲದಲ್ಲಿ ಹಳೆ ನೆನಪುಗಳನ್ನು ಮತ್ತೆ ಒಂದು ಗೂಡಿಸಲು ದೂರ ದೂರದೂರದಿಂದ ಆಗಮಿಸಿದ್ದರು.

ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಶಾಲಾ ಗೇಟು ತೆರೆದು 65ಕ್ಕಿಂತಲೂ ಹೆಚ್ಚು ಮಂದಿ ಹಳೆ ವಿದ್ಯಾರ್ಥಿಗಳು ಒಳ ಬಂದು ಅಸೆಂಬ್ಲಿಯಲ್ಲಿ ಸಾಲಾಗಿ ನಿಂತು ವಂದೇ ಮಾತರಂ ಪ್ರಾರ್ಥನಾ ಗೀತೆಯನ್ನು ಹಾಡಿ ನಂತರ ತಮ್ಮ ತಮ್ಮ ತರಗತಿಗಳಿಗೆ ತೆರಳುವ ಮೂಲಕ ಹಳೆಯ ತಮ್ಮ ಶಾಲಾ ದಿನದ ಶೈಲಿಯನ್ನು ಪುನರ್ ಸೃಷ್ಟಿಸಿದರು. ತಮಗೆ ಕಲಿಸಿದ ಇಪ್ಪತ್ತಕ್ಕೂ ಅಧಿಕ ಗುರುಗಳನ್ನು ವೇದಿಕೆಗೆ ಹೂಹಾಕಿ ಬರಮಾಡಿಕೊಂಡರು. ಗುರುಗಳೆಲ್ಲರೂ ಸೇರಿ ದೀಪ ಪ್ರಜ್ವಲನ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯರು ಗುರುಗಳೆಲ್ಲರ ಪಾದ ಮುಟ್ಟಿ ನಮಸ್ಕಾರ ಮಾಡಿ ಆಶೀರ್ವಾದ ಪಡೆದರು. ನೆನಪಿನ ಕಾಣಿಕೆಯೊಂದಿಗೆ ಗುರುದಕ್ಷಿಣೆ ಸಮರ್ಪಣೆ ಮಾಡಿದ್ದು ವಿಶೇಷವಾಗಿತ್ತು. ಗುರುಗಳೆಲ್ಲರೂ ಆಶೀರ್ವಾದದ ನುಡಿಗಳನ್ನಾಡಿ ಹಳೆಯ ಅವರ ನೆನಪುಗಳನ್ನು ಬಿಚ್ಚಿಟ್ಟರು.

ತಮ್ಮ ತಮ್ಮ ಅನಿಸಿಕೆಗಳ ಮೂಲಕ ಕೆಲವು ವಿದ್ಯಾರ್ಥಿಗಳು ತಮ್ಮ ಬಾಲ್ಯದ ದಿನಗಳಿಗೆ ಮತ್ತೊಮ್ಮೆ ಎಲ್ಲರನ್ನೂ ಕರೆದೊಯ್ದರು. ಕೊನೆಯಲ್ಲಿ ಅಧ್ಯಾಪಿಕೆಯರಿಗೆ ಬಾಗಿನ ಅರಸಿನ ಕುಂಕುಮಗಳನ್ನು ನೀಡುವುದರ ಮೂಲಕ ಗುರುವಂದನೆ ಕಾರ್ಯಕ್ರಮಕ್ಕೆ ಔಪಚಾರಿಕ ತೆರೆ ಎಳೆದರು.

ಮಧ್ಯಾಹ್ನದ ಭೋಜನದ ನಂತರ ಆಟ, ಹಾಡು, ಹರಟೆ ಹಮ್ಮಿಕೊಳ್ಳಲಾಗಿತ್ತು.

ರಾಜ್ಯ ಸರಕಾರದ ಸರ್ವಾಧಿಕಾರಿ ಧೋರಣೆ: ಪೊಲೀಸರ ಕ್ರಮಕ್ಕೆ ಬಿಜೆಪಿ ಅಸಮಾಧಾನ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಿತಿ ಮೀರಿರುವ ವನ್ಯಜೀವಿಗಳ ಉಪಟಳ ಹಾಗೂ ಸಿ ಮತ್ತು ಡಿ ಭೂಮಿಯ ಸಮಸ್ಯೆಯ ಕುರಿತು ಅರಣ್ಯ ಸಚಿವರ ಗಮನ ಸೆಳೆಯಲು ಗುಡ್ಡೆಹೊಸೂರು ವೃತ್ತದಲ್ಲಿ ನಿಂತಿದ್ದ ಬಿಜೆಪಿ ಪ್ರಮುಖರನ್ನು ಪೊಲೀಸರು ವಶಕ್ಕೆ ಪಡೆದಿರುವ ಕ್ರಮ ಖಂಡನೀಯವೆಂದು ಸೋಮವಾರಪೇಟೆ ಬಿಜೆಪಿ ಮಂಡಲದ ವಕ್ತಾರ ಬಲ್ಲಾರಂಡ ಕಂಠಿ ಕಾರ್ಯಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಜಿಲ್ಲೆಯಲ್ಲಿ ವನ್ಯಜೀವಿ ದಾಳಿ ಮತ್ತು ಭೂಮಿ ಸಮಸ್ಯೆ ಜನರ ನಿದ್ದೆಗೆಡಿಸಿದೆ. ತಲೆತಲಾಂತರಗಳಿಂದ ಕೃಷಿ ಮಾಡಿಕೊಂಡು ಬಂದಿರುವ ರೈತರು ಭೂಮಿ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ವನ್ಯಜೀವಿಗಳ ದಾಳಿಯಿಂದ ಅಮಾಯಕ ಮಾನವ ಜೀವಗಳು ಹಾಗೂ ಜಾನುವಾರುಗಳು ಬಲಿಯಾಗುತ್ತಿವೆ. ಪರಿಸ್ಥಿತಿ ಗಂಭೀರವಾಗಿದ್ದರೂ ಮತ್ತು ನಿರಂತರ ಪ್ರತಿಭಟನೆಗಳು ನಡೆಯುತ್ತಿದ್ದರೂ ಅರಣ್ಯ ಇಲಾಖೆ ಯಾವುದೇ ಸ್ಪಂದನೆಯನ್ನು ನೀಡುತ್ತಿಲ್ಲ.

ಈ ಕಾರಣದಿಂದ ಅರಣ್ಯ ಸಚಿವರನ್ನು ಖುದ್ದಾಗಿ ಭೇಟಿಯಾಗಿ ಜಿಲ್ಲೆಯನ್ನು ಕಾಡುತ್ತಿರುವ ಅರಣ್ಯ ಇಲಾಖೆ ವ್ಯಾಪ್ತಿಯ ಸಮಸ್ಯೆ ಗುಡ್ಡೆಹೊಸೂರಿನಲ್ಲಿ ವಿವರಿಸುವ ಪ್ರಯತ್ನವನ್ನು ಸೋಮವಾರಪೇಟೆ ಬಿಜೆಪಿ ಮಾಡಿತ್ತು. ಆದರೆ ಸಚಿವರು ಆಗಮಿಸುವ ಮೊದಲೇ ಪೊಲೀಸರು ಬಿಜೆಪಿ ಪ್ರಮುಖರನ್ನು ಹಾಗೂ ಕಾರ್ಯಕರ್ತರನ್ನು ವಶಕ್ಕೆ ಪಡೆದು ಮಡಿಕೇರಿಗೆ ಕರೆ ತಂದಿರುವುದು ಖಂಡನೀಯವೆಂದು ತಿಳಿಸಿದ್ದಾರೆ.

ಪ್ರಶ್ನೆ ಮಾಡುವವರನ್ನು ಹತ್ತಿಕ್ಕುವ ಪ್ರಯತ್ನ

ರಾಜ್ಯ ಕಾಂಗ್ರೆಸ್ ಸರಕಾರ ಪೊಲೀಸರನ್ನು ಕೈಗೊಂಬೆಯಂತೆ ಬಳಸಿಕೊಳ್ಳುತ್ತಿದ್ದು ಪ್ರಶ್ನೆ ಮಾಡುವ ವರನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ. ವಿರೋಧ ಪಕ್ಷವಾಗಿ ಸಮಸ್ಯೆ ಮಂಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಜನಪರ ಕಾಳಜಿಯಿಂದ ಬಿಜೆಪಿ ತೆಗೆದುಕೊಂಡ ನಿರ್ಧಾರಕ್ಕೆ ವಿರುದ್ಧವಾಗಿ ನಡೆದುಕೊಂಡ ಪೊಲೀಸರ ಕ್ರಮ ಪ್ರಜಾಪ್ರಭುತ್ವ ವಿರೋಧಿ ನಿಲುವಾಗಿದೆ ಮತ್ತು ಪ್ರಶ್ನಿಸುವ ಹಕ್ಕನ್ನು ಕಸಿದುಕೊಳ್ಳುವ ಯತ್ನವಾಗಿದೆ. ಇದು ರಾಜ್ಯ ಸರಕಾರದ ಸರ್ವಾಧಿಕಾರಿ ಧೋರಣೆಯಾಗಿದೆ.

● ಕಂಠಿ ಕಾರ್ಯಪ್ಪ

ಬಿಜೆಪಿಗೆ ಗೆಲುವು: ಪೊನ್ನಂಪೇಟೆಯಲ್ಲಿ ಕಾರ್ಯಕರ್ತರಿಂದ ವಿಜಯೋತ್ಸವ ಆಚರಣೆ



ಮಡಿಕೇರಿ: ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪೊನ್ನಂಪೇಟೆಯಲ್ಲಿ ಬಿಜೆಪಿ ಪ್ರಮುಖರು ಹಾಗೂ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಎಲ್ಲಾ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ

ಪಟ್ಟಣದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದ ಕಾರ್ಯಕರ್ತರು ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಬಿಜೆಪಿ ಪರ ಘೋಷಣೆಗಳನ್ನು ಕೂಗಿದರು. ಮುಂದಿನ ದಿನಗಳಲ್ಲಿ ದೇಶದ ಎಲ್ಲಾ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನೆಲ್ಲಿರ ಚಲನ್ ಕುಮಾರ್, ತಾಲ್ಲೂಕು ಕಾರ್ಯದರ್ಶಿ ಕೋಟೇರ ಕಿಶನ್ ಉತ್ತಪ್ಪ, ವೀರಾಜಪೇಟೆ ಮಂಡಲ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ, ಪ್ರಧಾನ ಕಾರ್ಯದರ್ಶಿ ಆಲೇಮಾಡ ಸುದೀಪ್, ಪ್ರಮುಖರಾದ ಚಿರಿಯಪಂಡ ರಾಜಾ ನಂಜಪ್ಪ, ಚೆಂಡಮಾಡ ರಕ್ಷಿತ್, ಮೂಕಳೇರ ಲಕ್ಷ್ಮಣ್, ಮೂಕಳೇರ ರಮೇಶ್, ಅಡ್ಡಂಡ ಪ್ರಕಾಶ್, ಎಸ್‌ಸಿ ಮೋರ್ಚಾದ ರಮೇಶ್, ಮಧು, ಕೊಟ್ಟಂಗಡ ಸಜನ್ ಪೂವಣ್ಣ, ರೇಖಾ ಶ್ರೀಧರ್, ಗಾಂಡಂಗಡ ಕೌಶಿಕ್ ದೇವಯ್ಯ, ಕೋಳೇರ ರಾಜ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮೇ 9 ರಂದು ಚಿತ್ರದುರ್ಗದಲ್ಲಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪರ ಅಭಿಮಾನೋತ್ಸವ ಕಾರ್ಯಕ್ರಮ

ಉಳ್ಳಾಲ ಮಂಡಲದಿಂದ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ



ಉಳ್ಳಾಲ: ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ರಾಜಕೀಯ ಜೀವನದ ಐವತ್ತು ಸಂವತ್ಸರ ಪೂರೈಕೆಯ ಸಲುವಾಗಿ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಜಿಲ್ಲೆಯಿಂದ ಭಾರೀ ಸಂಖ್ಯೆಯ ಅಭಿಮಾನಿಗಳು ಪಾಲ್ಗೊಳ್ಳಲಿದ್ದು, ಬಿಜೆಪಿ ಮಂಗಳೂರು(ಉಳ್ಳಾಲ) ಮಂಡಲದಿಂದಲೂ ಅಭಿಮಾನಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್ ಕರೆ ನೀಡಿದರು.

ತೊಕ್ಕೊಟ್ಟಿನ ಉಳ್ಳಾಲ ಪ್ರೆಸ್ ಕ್ಲಬ್ ನಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಬಿಎಸ್‌ವೈ ಅವರು ಕರ್ನಾಟಕ ಬಿಜೆಪಿಯಲ್ಲೇ ಅತ್ಯಂತ ಮೇರು ವ್ಯಕ್ತಿಯಾಗಿದ್ದಾರೆ. ಪಕ್ಷ ಸಂಘಟನೆಗಾಗಿ ಅವರು ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು.ಅವರ ನಾಯಕತ್ವದಲ್ಲಿ ಕರ್ನಾಟಕದಲ್ಲಿ ಬಿಜೆಪಿ ಬೆಳೆದು ಬಂದದ್ದೇ ವಿಸ್ಮಯ.ಪಕ್ಷವನ್ನ ಅಧಿಕಾರಕ್ಕೆ ತಂದದ್ದಲ್ಲದೆ, ಅನೇಕ ಜನಪರ ಯೋಜನೆಗಳನ್ನ ಕೊಟ್ಟ ಕೀರ್ತಿ ಯಡಿಯೂರಪ್ಪಗೆ ಸಲ್ಲುತ್ತದೆ. ಅವರು ರಾಜ್ಯದಲ್ಲಿ ಜಾರಿಗೊಳಿಸಿದ್ದ ಯೋಜನೆಗಳನ್ನು ಬೇರೆ ಯಾವುದೇ ಮುಖ್ಯಮಂತ್ರಿಗಳು ತರಲು ಸಾಧ್ಯವಾಗಿಲ್ಲ. ಯಡಿಯೂರಪ್ಪರು ಜಾರಿಗೊಳಿಸಿದ್ದ ವಿವಿಧ ಯೋಜನೆಗಳ ಫಲಾನುಭವಿಗಳು ಮಂಗಳೂರು ಮಂಡಲದಲ್ಲೂ ಬಹಳಷ್ಟು ಜನ ಇದ್ದಾರೆ. ಅವರೆಲ್ಲರೂ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯುವ ಬಿಎಸ್‌ವೈ ಅಭಿಮಾನೋತ್ಸಕ್ಕೆ ಬಂದು ಯಡಿಯೂರಪ್ಪ ಅವರಿಗೆ ಕೃತಜ್ಞತೆ ಸಲ್ಲಿಸಬೇಕೆಂದು ಕರೆ ನೀಡಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು ಮಾತನಾಡಿ, ಯಡಿಯೂರಪ್ಪ ಅವರು ಬಿಜೆಪಿಯನ್ನು ನಗರ ಪ್ರದೇಶದಿಂದ ಗ್ರಾಮೀಣ ಪ್ರದೇಶಕ್ಕೆ ಕೊಂಡೊಯ್ದು ರೈತಾಪಿ ಮತ್ತು ಶೋಷಿತ ವರ್ಗದ ಧ್ವನಿಯಾಗಿ ಕೆಲಸ ಮಾಡಿದ್ದರು. ಬಗರ್ ಹುಕುಂ ಹೋರಾಟದಲ್ಲಿ ವಿಪಕ್ಷದಲ್ಲಿದ್ದ ಯಡಿಯೂರಪ್ಪ ಅವರು ಆಡಳಿತ ಕಾಂಗ್ರೆಸ್ ಪಕ್ಷದ ವಿರುದ್ಧ ವಿದಾನಸಭೆ ಕಲಾಪದಲ್ಲಿ ಬಾವಿಗಿಳಿದು ಒಂಟಿ ಕಾಲಲ್ಲಿ ಪ್ರತಿಭಟನೆ ನಡೆಸಿ ಸರಕಾರದ ಕಣ್ಣು ತೆರೆಸಿದ್ದರು.ಬಿಎಸ್‌ವೈ ಅವರು ಆರಂಭದಲ್ಲಿ ಏಕಾಂಗಿಯಾಗಿ ಪಕ್ಷ ಕಟ್ಟಿ ನಂತರದ ದಿನಗಳಲ್ಲಿ ಎಲ್ಲಾ ನಾಯಕರನ್ನ ಒಟ್ಟುಗೂಡಿಸಿ ರಾಜ್ಯದಲ್ಲಿ ಬಿಜೆಪಿಯನ್ನ ಸದೃಢವಾಗಿ ಕಟ್ಟಿದ ಅಜಾತ ಶತ್ರುವಾಗಿದ್ದಾರೆ. ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ ಜಾರಿಗೊಳಿಸಿದ್ದ ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಎಷ್ಟೋ ಮಂದಿ ಫಲಾನುಭವಿಗಳ ಬಾಳು ಬೆಳಗಿದೆ. ಅಲೆಮಾರಿ ಜನಾಂಗದ ಕಡೆ ಯಾರೂ ಗಮನ ಕೊಟ್ಟಿರಲಿಲ್ಲ, ಆದರೆ ಯಡಿಯೂರಪ್ಪ ಅವರು ಅಲೆಮಾರಿ ಜನಾಂಗಕ್ಕೂ ಅಭಿವೃದ್ಧಿ ನಿಗಮ ಕೊಡುವುದರ ಮೂಲಕ ನುಡಿದಂತೆ ನಡೆದ ಧೀಮಂತ ರಾಜಕಾರಣಿ ಯಾಗಿದ್ದರು. ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೂ ಕ್ಯಾಬಿನೆಟ್ ಸ್ಥಾನಮಾನ ನೀಡಿದ್ದಲ್ಲದೆ, ಮಂಗಳೂರು ನಗರ ಪಾಲಿಕೆ ಅಭಿವೃದ್ಧಿಗೆ ಬೃಹತ್ ಮೊತ್ತದ ಅನುದಾನ ನೀಡಿ ದ.ಕ. ಜಿಲ್ಲೆಯ ಅಭಿವೃದ್ಧಿಗೆ ಕೊಡುಗೆ ನೀಡಿದ್ದರು.

ಬಿಜೆಪಿ ಜಿಲ್ಲಾಕಾರ್ಯದರ್ಶಿ ಧನಲಕ್ಷ್ಮಿ ಗಟ್ಟಿ ಮಂಗಳೂರು ಮಂಡಲ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್ ಕೆ.ಆರ್., ದಯಾನಂದ ತೊಕ್ಕೊಟ್ಟು ಗೋಷ್ಠಿಯಲ್ಲಿದ್ದರು.

ಸುತ್ತಮುತ್ತ

ಪರಿಸರ ಮಾಲಿನ್ಯ ತಡೆಗೆ ಕಟ್ಟಡ ಮಾಲೀಕರಿಗೆ ಮುಲ್ಕಿ ನಗರಸಭೆ ಸೂಚನೆ

ಮುಲ್ಕಿ: ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಕಟ್ಟಡ ಮಾಲೀಕರು ಕಟ್ಟಡ ನಿರ್ಮಾಣ ಮಾಡುತ್ತಿರುವ ಸಂದರ್ಭದಲ್ಲಿ ತಮ್ಮ ಕಟ್ಟಡದಿಂದ ಬರುವ ಧೂಳು ಹಾಗೂ ಇನ್ನಿತರೆ ತ್ಯಾಜ್ಯದಿಂದ ಪರಿಸರ ಮಾಲಿನ್ಯ ಹಾಗೂ ಸಾರ್ವಜನಿಕರಿಗೆ ಉಂಟಾಗುವ ತೊಂದರೆಯಿಂದ ಕಾಪಾಡಲು ನಿರ್ಮಾಣವಾಗುತ್ತಿರುವ ಕಟ್ಟಡ ಸುತ್ತ ಸೂಕ್ತವಾದ ಪರದೆಯಿಂದ ಮುಚ್ಚಲು ನಗರ ಪಂಚಾಯತ್ ವತಿಯಿಂದ ಸೂಚನೆ ನೀಡಲಾಗಿದೆ ಒಂದು ವೇಳೆ ನಿರ್ಮಾಣವಾಗುತ್ತಿರುವ ಕಟ್ಟಡದ ಸುತ್ತ ಪರದೆಯ ಮೂಲಕ ಸಂರಕ್ಷಿಸದಿದ್ದಲ್ಲಿ ಮುಲ್ಕಿ ನಗರ ಪಂಚಾಯತ್ ಉಪ ನಿಯಮಗಳು 2026-27 ರ ಪ್ರಕರಣ ಪಿ(3)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸದರಿ ಕಟ್ಟಡ ಮಾಲೀಕರಿಗೆ ರೂ. 5000 ದಂಡನೆ ವಿಧಿಸಲಾಗುವುದು ಎಂದು ಮುಲ್ಕಿ ನಗರ ಪಂಚಾಯತ್ ಮುಖ್ಯಾಧಿಕಾರಿಗಳು ಪ್ರಕಟಣೆ ಹೊರಡಿಸಿದ್ದಾರೆ.

ಕುಬೆವೂರು ದೈವಸ್ಥಾನ: ದೀಪಾರಾಧನೆ, ತುಡಾರ ಬಲಿ ಉತ್ಸವ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಇತಿಹಾಸ ಪ್ರಸಿದ್ಧ ಕುಬೆವೂರು ಶ್ರೀ ಧಾರಂದಾಯ ದೈವಸ್ಥಾನದಲ್ಲಿ ತುಡಾರ ಬಲಿ ಉತ್ಸವ ಮಂಗಳವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕುಬೇರಗುತ್ತು ವಿನಿಂದ ಭಂಡಾರ ಆಗಮನ, ಶ್ರೀ ಮಹಾಗಣಪತಿ ದೇವರ ಅಂಗಾರಕ ಸಂಕಷ್ಟಹರ ಚತುರ್ಥಿ ಪ್ರಯುಕ್ತ ಭಜನಾ ಕಾರ್ಯಕ್ರಮ, ಪೂಜಾ ಸೇವೆ, ಬಳಿಕ ದೀಪಾರಾಧನೆ ತುಡಾರ ಬಲಿ ಉತ್ಸವ, ಸಾರ್ವಜನಿಕ ಅನ್ನ ಸಂತರ್ಪಣೆ ದೈವದ ಭಂಡಾರ ನಿರ್ಗಮನ ನಡೆಯಿತು. ಈ ಸಂದರ್ಭದಲ್ಲಿ ವ್ಯಾಸ ಶ್ರೀಮಂತರಾಯ, ಮುರಳೀಧರ ಭಂಡಾರಿ, ಕುಡಾಣಾರ್ ಶೆಟ್ಟಿ ಬಾಳದ ಗುತ್ತು, ಸುಕುಮಾರ ಶೆಟ್ಟಿ ತಾಳ ಪಾಡಿಗುತ್ತು, ಸತೀಶ್ ಶೆಟ್ಟಿ ಕೆಂಚನಕೆರೆ, ಶ್ರೀಕಾಂತ್ ಶೆಟ್ಟಿ ಮೋಹನ್ ದಾಸ್ ಶೆಟ್ಟಿ ಯೋಗ ಗುರು ಜಯ ಮುದ್ದು ಶೆಟ್ಟಿ ವಿಜಯಕುಮಾರ್, ಕೃಷ್ಣ ಶೆಟ್ಟಿ ಅಶ್ವಿನ್ ಆಳ್ವ ಕುಬೆವೂರು, ಶಮೀನ ಆಳ್ವ ವಿಕಾಸ್ ಶೆಟ್ಟಿ ಜಯಕುಮಾರ್, ಚಂದ್ರಶೇಖರ ಶೆಟ್ಟಿ ದಿವಾಕರ ಶೆಟ್ಟಿ ಪ್ರಕಾಶ್ ಶೆಟ್ಟಿ ಶರತ್ ಕುಬೆವೂರು, ಗೌರೀಶ್ ಶೆಟ್ಟಿ ನಾರಾಯಣ ರೈ, ನಾಗೇಂದ್ರ, ರಾಜೇಶ್ ಮತ್ತಿತರರು ಉಪಸ್ಥಿತರಿದ್ದರು

ಮೂಡುಬಿದಿರೆ ಮಂಡಲದಿಂದ ಸಂಭ್ರಮಾಚರಣೆ

ಮೂಡುಬಿದಿರೆ: ಭಾರತೀಯ ಜನತಾ ಪಾರ್ಟಿ ಮುಲ್ಕಿ ಮೂಡುಬಿದಿರೆ ಮಂಡಲದ ವತಿಯಿಂದ ಸಂಭ್ರಮಾಚರಣೆ ನಡೆಯಿತು. ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ನಲ್ಲಿ ಬಿಜೆಪಿ ಅಭೂತಪೂರ್ವ ವಿಜಯಶಾಲಿಯಾದ ಹಿನ್ನಲೆಯಲ್ಲಿ ಭಾರತೀಯ ಜನತಾ ಪಾರ್ಟಿ ಮುಲ್ಕಿ ಮೂಡಬಿದ್ರೆ ಮಂಡಲ ವತಿಯಿಂದ ಮೂಡುಬಿದಿರೆ ಬಸ್ಸು ನಿಲ್ದಾಣ ಬಳಿ ಸಂಭ್ರಮಾಚರಣೆ ನಡೆಯಿತು ಪಕ್ಷದ ಮುಖಂಡರು, ಪದಾಧಿಕಾರಿಗಳು, ಜನಪ್ರತಿನಿಧಿಗಳು, ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಮೇ 12ರಂದು ಜನಸಂಪರ್ಕ ಸಭೆ

ಪುತ್ತೂರು: ಪುತ್ತೂರು ನಗರ ಮತ್ತು ಪುತ್ತೂರು ಗ್ರಾಮಾಂತರ ಉಪವಿಭಾಗಗಳಿಗೆ ಸಂಬಂಧಿಸಿದ ಜನಸಂಪರ್ಕ ಸಭೆಯು ಪುತ್ತೂರು ನಗರ ಉಪ ವಿಭಾಗ ಕಚೇರಿಯಲ್ಲಿ ಮೇ.12ರಂದು ಬೆಳಿಗ್ಗೆ 11ರಿಂದ 12ರವರೆಗೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ ಈ ಅವಕಾಶವನ್ನು ಗ್ರಾಹಕರುಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ದೂರವಾಣಿ ಕರೆಯ ಮುಖಾಂತರವೂ ಸಂಪರ್ಕಿಸಿ, ಅಹವಾಲು ಸಲ್ಲಿಸಬಹುದಾಗಿದೆ. ದೂರವಾಣಿಸಂಖ್ಯೆ: 08251-230393 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಉಳಿಯ ಶ್ರೀ ಸೋಮನಾಥ ಕೇತ್ರದ ಪುನರ್ ಪ್ರತಿಷ್ಠೆ ಬ್ರಹ್ಮಕಲಶದಲ್ಲಿ ಅದಮಾರು ಶ್ರೀ ಸಂದೇಶ

ಮಠ-ಶಿಷ್ಯ ವರ್ಗ ನಡುವಿನ ಬಾಂಧವ್ಯ ಮತ್ತಷ್ಟು ಗಟ್ಟಿಯಾಗಲಿ



ಬಂಟ್ವಾಳ: ದೇವಸ್ಥಾನ ಗ್ರಾಮದ ಒಂದು ಅಂಗವಾಗಿದ್ದು, ಸಂಧ್ಯಾ ಕಾಲದಲ್ಲಿ ನಿತ್ಯವು ಒಂದಷ್ಟು ಹೊತ್ತು ಶಾಂತಚಿತ್ತರಾಗಿ ದೇವರ ನಾಮಸ್ಮರಣೆ, ಜಪದಲ್ಲಿ ತೊಡಗಿಸಿಕೊಂಡರೆ ಜೀವನದಲ್ಲಿ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ಉಡುಪಿ ಅದಮಾರು ಮಠದ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು ಅವರು ನುಡಿದರು.

ಮುನ್ನೂರು ಗ್ರಾಮದ ಶ್ರೀ ಕೇತ್ರ ಸೋಮನಾಥ ಉಳಿಯದ ಶ್ರೀ ಸೋಮೇಶ್ವರೀ ದೇವಸ್ಥಾನ, ಶ್ರೀ ನಾಗದೇವರು ಹಾಗೂ ಶ್ರೀ ಅರಸು, ಧೂಮಾವತಿ ಬಂಟ ಮತ್ತು ಪರಿವಾರ ದೈವಸ್ಥಾನದ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವ, ಜಾತ್ರೆ, ನೇಮೋತ್ಸವದ ಪ್ರಯುಕ್ತ ಬುಧವಾರ ರಾತ್ರಿ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಅವರು ಆಶೀರ್ವಚನಗೈದರು.

ನಿತ್ಯಜಪ, ನಾಮಸ್ಮರಣೆ ಮಾಡಿ

ದೇವಸ್ಥಾನದ ಸಾನಿಧ್ಯ ವೃದ್ಧಿಗಾಗಿ ಭಕ್ತಿ, ಶ್ರದ್ಧೆಯಿಂದ ಮಾಡುವಂತ ಉತ್ಕೃಷ್ಟವಾದ ಉತ್ಸವ ಬ್ರಹ್ಮಕಲಶ, ಗರ್ಭಗುಡಿಯೊಳಗೆ ದೇವರ ಪ್ರತಿಷ್ಠೆಯಾದಾಗ ನಮ್ಮ ದೇಹದಲ್ಲಿ ದೇವರನ್ನು ಒಲಿಸಿಕೊಳ್ಳಲು ನಿತ್ಯಜಪ, ನಾಮಸ್ಮರಣೆ ಮಾಡಬೇಕು. ಈ ನಿಟ್ಟಿನಲ್ಲಿ ಮಕ್ಕಳಿಗೆ ಎಳೆಯ ಪ್ರಾಯದಲ್ಲೇ ಸಂಸ್ಕಾರ ಕಲಿಸಿಕೊಡುವ ಕೆಲಸ ಹೆತ್ತವರಿಂದಾಗಬೇಕು ಎಂದರು.

ಭವಿಷ್ಯದಲ್ಲಿ ಮಠ ಮತ್ತು ಶಿಷ್ಯವರ್ಗದ ಸಂಬಂಧ ಇನ್ನಷ್ಟು ಗಟ್ಟಿಯಾಗಬೇಕು. ಈ ದೆಸೆಯಲ್ಲಿ ಗಾಳದ ಕೊಂಕಣಿ ಸಮುದಾಯದ ಶಿಷ್ಯವರ್ಗ ನಡೆಸುವಂತ ಧರ್ಮಕಾರ್ಯಕ್ಕೆ ಮಠದ ವತಿಯಿಂದ ಪ್ರೋತ್ಸಾಹ ನೀಡಲಾಗುವುದು, ಎಂದ ಶ್ರೀಗಳು ಸಂಸ್ಕಾರ ಶಿಬಿರ ಆಯೋಜಿಸಲು ಮುಂದಾದರೆ ವಿದ್ವಾಂಸರನ್ನು ಒದಗಿಸಲಾಗುವುದು ಎಂದರು.

ಟೀಕೆಗಳನ್ನು ಎದುರಿಸಿ

ಉಳ್ಳಾಲ ಉಳಿಯ ಶ್ರೀ ಧರ್ಮರಸು ಕ್ಷೇತ್ರದ ಅಂತ ಗುರಿಕಾರ ಮಾತನಾಡಿ, ಸಮಾಜದಲ್ಲಿ ಒಳ್ಳೆಯ ಕೆಲಸ ಮಾಡಿದಾಗ ಟೀಕೆಗಳು ಸಹಜ,ಇದಕ್ಕೆ ಅಂಜದೆ ತಮ್ಮ ಕಾರ್ಯಗಳನ್ನು ಮುಂದುವರಿಸಿದಾಗ ದೇವರ ಅಭಯವು ಇರುತ್ತದೆ.ನಮ್ಮ ಸಮಾಜಕ್ಕೆ ಒಳಿತಾಗುವ ಎಲ್ಲಾ ಕಾರ್ಯಗಳಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು.

> **ದೇವಳಗಳಿಂದ ಸಂಸ್ಕೃತಿ ರಕ್ಷಣೆ**
>
> ದೇವಸ್ಥಾನಗಳು ಸಂಸ್ಕೃತಿಯ ಪುನರುಜ್ಜೀವನದ ಕೇಂದ್ರ. ಇಲ್ಲಿ ಸಿಗುವ ಮೌಲ್ಯಯುತ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದೇವಳದಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮದಲ್ಲಿ ಊರಿನ ಮಂದಿ ಶ್ರದ್ಧಾ ಭಕ್ತಿಯಿಂದ ಭಾಗವಹಿಸಬೇಕು.
>
> ● ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಾಶಿವ ಉಳ್ಳಾಲ್, ಹರೇಕಳ ಸಂಪಿಗೆದಡಿ ಶ್ರೀ ಅರ್ಧನಾರೀಶ್ವರದೇವಸ್ಥಾನದಅಧ್ಯಕ್ಷಮೋಹನದಾಸ ರೈ, ಇಂಟಕ್ ಮುಖಂಡ ಸದಾಶಿವ ಶೆಟ್ಟಿ ಬೇರಿಕೆ ಕುತ್ತಾರ್ ಮಾತನಾಡಿದರು. ಗಾಳದಕೊಂಕಣಿ ಅಭ್ಯುದಯ ಸಂಘದ ಅಧ್ಯಕ್ಷ ನರಸಿಂಹ ನಾಯಕ್ ಹರೇಕಳ ಸಭಾಧ್ಯಕ್ಷತೆ ವಹಿಸಿದ್ದರು.

ಆಧ್ಯಾತ್ಮಿಕ ಚಿಂತಕ ಜಯಂತ ಕೊಡಕಲ್,ಕಲ್ಲಾಪು ಬುರ್ದುಗೋಳಿ ಕೊರಗಜ್ಜ ದೈವಗಳ ಉದ್ಭವ ಶಿಲೆಯ ಪ್ರಧಾನ ಆದಿಸ್ಥಳ ಸೇವಾ ಟ್ರಸ್ಟ್ ಅಧ್ಯಕ್ಷ ವಿಶ್ವನಾಥ ನಾಯಕ್ ಕಲ್ಲಾಪು, ಯುವ ಉದ್ಯಮಿ ವಿಶಾಲ್ ಕೊಲ್ಯ, ಶ್ರೀ ಸೋಮೇಶ್ವರೀ ಮಹಿಳಾ ಮಂಡಳಿ ಅಧ್ಯಕ್ಷೆ ಜಯಶೀಲ ಯು.ನಾಯಕ್, ಕ್ಷೇತ್ರದ ಗಡಿಪ್ರದಾನರಾದ ಬಸಪ್ಪಯಾನೆ ಜೆ.ರವೀಂದ್ರ ನಾಯಕ್, ಆಡಳಿತ ಸಮಿತಿ ಅಧ್ಯಕ್ಷ ಉಮಾನಾಥ ನಾಯಕ್ ಉಳ್ಳಾಲ,ಮುಂಬೈ ಸಜ್ಜನ್ ಸೇವಾ ಸಂಘದ ಸದಸ್ಯ ಜೀತೇಶ್ ನಾಯಕ್ ಮೊದಲಾದವರು ಉಪಸ್ಥಿತರಿದ್ದರು. ಕ್ಷೇತ್ರದ ಗುರಿಕಾರ ಯು.ದಯಾನಂದ ನಾಯಕ್ ಪ್ರಸ್ತಾವಿಸಿದರು. ಆಡಳಿತ ಸಮಿತಿ ಪ್ರ.ಕಾರ್ಯದರ್ಶಿ ವೆಂಕಟೇಶ್ ಬಂಟ್ವಾಳ ಸ್ವಾಗತಿಸಿ, ವಂದಿಸಿದರು. ಪ್ರಕಾಶ್ ಪುತ್ತೂರು, ವಿಜೇತಾ ಸಿ.ಕಲ್ಲಾಪು ನಿರೂಪಿಸಿದರು. ಜತೆ ಕಾರ್ಯದರ್ಶಿ ಆಶಾ ಎಸ್. ನಾಯಕ್ ಸಹಕರಿಸಿದರು.

ಪುತ್ತೂರು: ಮುರುವ-ದರ್ಬೆತ್ತಡ್ಕ ಸಂಪರ್ಕ ರಸ್ತೆ ಸೇತುವೆ ನಿರ್ಮಾಣ

2 ಕೋ.ರೂ. ಅನುದಾನ ಮಂಜೂರು: ಅಶೋಕ್



ಪುತ್ತೂರು: ಚುನಾವಣೆಯ ಸಂದರ್ಭದಲ್ಲಿ ನಾನು ನೀಡಿದ್ದ ಭರವಸೆಯಲ್ಲಿ ಒಳಮೊಗ್ರು ಗ್ರಾಮದ ಮುರುವ-ದರ್ಬೆತ್ತಡ್ಕ ಸಂಪರ್ಕ ಸೇತುವೆಯೂ ಸೇರಿದ್ದು ಕೊಟ್ಟ ಮಾತಿನಂತೆ ಇಲ್ಲಿನ ಸೇತುವೆ ನಿರ್ಮಾಣಕ್ಕೆ ರೂ.2 ಕೋಟಿ ಅನುದಾನ ನೀಡಿದ್ದೇನೆ. ನಾನು ಕ್ಷೇತ್ರದ ಅಭಿವೃದ್ದಿಗಾಗಿ ಮಾಡುತ್ತಿರುವ ಕೆಲಸಗಳು ನಿಮಗೆ ಒಳ್ಳೆಯದು ಎಂಬ ಭಾವನೆ ಇದ್ದರೆ ಮುಂದಿನ ಚುನಾವಣೆಯಲ್ಲಿ ನನಗೆ ಆಶೀರ್ವಾದ ಮಾಡಿ ಎಂದು ಶಾಸಕ ಅಶೋಕ್ ರೈ ವಿನಂತಿಸಿದರು.

ಅವರು ಒಳಮೊಗ್ರು ಗ್ರಾಮದ ಕುಟಿನೋಪಿನಡ್ಕ ಸಮೀಪದ ಮುರುವ ದಿಂದ ಕಲ್ಲಡ್ಕ ಮೂಲಕ ದರ್ಬೆತ್ತಡ್ಕ ರಸ್ತೆಗೆ ನೂತನ ಸೇತುವೆಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.

ಬೇಡಿಕೆ ಈಡೇರಿದೆ

ಕಾಂಗ್ರೆಸ್ ಪಕ್ಷ, ಕಾಂಗ್ರೆಸ್ ಶಾಸಕರು ಅಭಿವೃದ್ಧಿ ಕೆಲಸವನ್ನು ಮಾಡುತ್ತಾರೆ ಎಂಬುದಕ್ಕೆ ಈ ಸೇತುವೆಯೇ ಸಾಕ್ಷಿ. ಅಂದು ಸೊರಕೆ ಸೇತುವೆ ಮಾಡಿದ್ದರು. ಇಂದು ಇದೇ ಸೇತುವೆಗೆ ಅಶೋಕ್ ರೈ ರೂ.2 ಕೋಟಿ ಅನುದಾನ ನೀಡಿ 40 ವರ್ಷದ ಬೇಡಿಕೆ ಈಡೇರಿಸಿದ್ದಾರೆ ಎಂದು ನ್ಯಾಯವಾದಿ ಕುಂಬ್ರ ದುರ್ಗಾಪ್ರಸಾದ್ ರೈ ಹೇಳಿದರು.

ಕಾರ್ಯಕ್ರಮದಲ್ಲಿ ಸೇತುವೆಗೆ ಅನುದಾನ ಮಂಜೂರು ಮಾಡಿದ ಶಾಸಕರನ್ನು ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು. ಒಳಮೊಗ್ರು ವಲಯ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಪೂಜಾರಿ ಬೊಳ್ಳಾಡಿ, ಗ್ರಾ.ಪಂ. ನಿಕಟಪೂರ್ವ ಉಪಾಧ್ಯಕ್ಷ ಅಶ್ರಫ್ ಉಜಿರೋಡಿ, ವಿನೋದ್ ಶೆಟ್ಟಿ ಮುಡಾಲ, ಯುವ ಕಾಂಗ್ರೆಸ್ ಮುಖಂಡ ರಕ್ಷಿತ್ ರೈ ಮುಗೇರು, ಬೂತ್ ಅಧ್ಯಕ್ಷ ಅಯ್ಯೂಬ್ ನೀರ್ಪಾಡಿ, ಗೋವಿಂದ ನಾಯ್ಕ ಹಂಡ್ಯು ಉಜಿರೋಡಿ, ಸ್ಥಳೀಯ ಮುಖಂಡರಾದ ಅಳ್ವ ಸುಧಾಕರ ಆಳ್ವ ತ್ಯಾಂಪಣ್ಣ ಆಳ್ವ ವಸಂತ ಶೆಟ್ಟಿ ಹಾರಿಸ್ ಮುಲಾಯತ್ರ ರಮೇಶ್ ಆಳ್ವ ಕಲ್ಲಡ್ಕ ಸುಧಾಕರ ಆಳ್ವ ಕಲ್ಲಡ್ಕ, ಜಯರಾಮ ರೈ, ಮೋಹನ ರೈ ಕಲ್ಲಡ್ಕ ಚಿದಾನಂದ ರೈ, ರಾಧಾಕೃಷ್ಣ ರೈ, ರಾಜೇಶ್ ರೈ, ಜನಾರ್ದನ ರೈ, ಮಂಜುನಾಥ, ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಬದ್ರು ಪರ್ಪುಂಜ, ರಝಾಕ್ ಪರ್ಪುಂಜ, ಮಹಮ್ಮದ್ ಅಡ್ಕ ಪ್ರವೀಣ್ ಅಡ್ಕ ಮೊದಲಾದವರು ಉಪಸ್ಥಿತರಿದ್ದರು,. ಬಾಲಕೃಷ್ಣ ಪೊರ್ದಾಳ್ ಕಾರ್ಯಕ್ರಮ ಸ್ವಾಗತಿಸಿ, ವಂದಿಸಿದರು.

> **6 ತಿಂಗಳಲ್ಲಿ ಮುಕ್ತ**
>
> ಈಗಿರುವ ಸೇತುವೆ ಕಿರಿದಾಗಿದ್ದು ಅಗಲ ಕಡಿಮೆ ಇದೆ. ಮಾಜಿ ಶಾಸಕ ವಿನಯ ಕುಮಾರ್ ಸೊರಕೆ ಕಾಲದಲ್ಲಿ ಈ ಸೇತುವೆ ನಿರ್ಮಾಣವಾಗಿತ್ತು. ಇಲ್ಲಿನ ಸೇತುವೆಯನ್ನು ಮುಂದಿನ 6 ತಿಂಗಳಲ್ಲಿ ಸಂಚಾರ ಮುಕ್ತವಾಗಿಸಲಾಗುವುದು.
>
> ● ಅಶೋಕ್ ರೈ, ಶಾಸಕ

ರಾಜ್ಯ ವಿಕೇಂದ್ರೀಕರಣ ಯೋಜನೆ ಸಮಿತಿ ಉಪಾಧ್ಯಕ್ಷ ಭೋಸರಾಜು ಸಲಹೆ

ಸ್ಥಳೀಯ ಸಂಸ್ಥೆಗಳಿಗೆ ಸ್ಥಳೀಯರ ಸಹಭಾಗಿತ್ವ ಅಗತ್ಯ



ಮಡಿಕೇರಿ: ಸ್ಥಳೀಯ ಸಂಸ್ಥೆಗಳ ಬಲವರ್ಧನೆ ಮತ್ತು ಜನರ ಪಾಲ್ಗೊಳ್ಳುವಿಕೆ ಕುರಿತ ಸಭೆ ಸೋಮವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರು, ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಿ ಅಭಿವೃದ್ಧಿಯತ್ತ ಕೊಂಡೊಯ್ಯುವಲ್ಲಿ ಜನಪ್ರತಿನಿಧಿಗಳ ಜೊತೆಗೆ ಜನರ ಸಹಭಾಗಿತ್ವವೂ ಮುಖ್ಯ ಎಂದರು.

ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಯೋಜನೆ ರೂಪಿಸಿ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಆ ದಿಸೆಯಲ್ಲಿ ಎಲ್ಲರ ಜೊತೆ ಚರ್ಚಿಸಬೇಕು ಎಂದು ಸಲಹೆ ಮಾಡಿದರು. ಯೋಜನೆಯ ಅನುಷ್ಠಾನ ವ್ಯವಸ್ಥಿತ ರೀತಿಯಲ್ಲಿ ನಡೆಯಬೇಕು ಎನ್ನುವುದು ಸರ್ಕಾರದ ಆಶಯವಾಗಿದ್ದು ಇದನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತಂದಲ್ಲಿ ಸ್ಥಳೀಯ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲರ ಸಹಕಾರ ಅಗತ್ಯ ಎಂದರು.

ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆಯ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್. ಪಾಟೀಲ ಮಾತನಾಡಿ, ಜನರ ಪಾಲ್ಗೊಳ್ಳುವಿಕೆಯಿಂದ ಮಾತ್ರ ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗುತ್ತವೆ. ಈ ನಿಟ್ಟಿನಲ್ಲಿ ಅಕಾರಿಗಳು ಜನರ ಬೇಡಿಕೆಗಳಿಗನುಗುಣವಾಗಿ ಜನರ ಶ್ರೇಯೋಭಿವೃದ್ಧಿಯ ಕ್ರಿಯಾಯೋಜನೆ ರೂಪಿಸಿ ಜನರ ಜೀವನಮಟ್ಟ ಸುಧಾರಣೆಗೆ ಕ್ರಮವಹಿಸಬೇಕು ಎಂದು ಹೇಳಿದರು.

ಗ್ರಾಮ ಪಂಚಾಯತ್ ಅಭಿವೃದ್ಧಿಗೆ ಕಾನೂನಿನ ಪ್ರಕಾರ ಅಕಾರ ಚಲಾಯಿಸಬೇಕು. ಸಂವಿಧಾನದ ಆಶಯದಂತೆ ನಡೆದುಕೊಳ್ಳಬೇಕು. ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಚುನಾಯಿತ ಸರ್ಕಾರ ಇರಬೇಕು ಎಂಬುದು ಸರ್ಕಾರದ ಆಶಯ. ಆ ನಿಟ್ಟಿನಲ್ಲಿ ಸ್ಥಳೀಯ ಆಡಳಿತಕ್ಕೆ ವಿಶೇಷವಾದ ಅಧಿಕಾರ ನೀಡಲಾಗಿದೆ ಎಂದರು.

ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಮಾತನಾಡಿ, ವಿಕೇಂದ್ರೀಕರಣ ವ್ಯವಸ್ಥೆ ಜಾರಿಯಲ್ಲಿ ಕೊಡಗು ಜಿಲ್ಲೆ ಇತರ ಜಿಲ್ಲೆಗಳಿಗೆ ಮಾದರಿಯಾಗಬೇಕು. ಗ್ರಾಮ ಮಟ್ಟದಲ್ಲೇ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮೂಲಕ ವಿಕೇಂದ್ರೀಕರಣ ವ್ಯವಸ್ಥೆ ಸಮರ್ಥವಾಗಿ ಜಾರಿಗೊಳ್ಳುವಂತಾಗಲಿ ಎಂದರು.

ನಗರಸಭೆ ಸದಸ್ಯ ಅರುಣ್ ಶೆಟ್ಟಿ, ನಗರಸಭೆ ಪೌರಾಯುಕ್ತ ಎಚ್.ಆರ್.ರಮೇಶ್, ಸದಸ್ಯ ಮನ್ಸೂರ್, ಜಿ.ಪಂ.ಯೋಜನಾ ನಿರ್ದೇಶಕ ಅಬ್ದುಲ್ ನಬಿ ಅವರು ಮಾತನಾಡಿದರು. ಸಭೆಯಲ್ಲಿ ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಜ ಉತ್ತಪ್ಪ ರಾಜ್ಯ ವಿಕೇಂದ್ರೀಕರಣ ಸಲಹೆಗಾರ ಡಾ.ಕೆಂಪೇಗೌಡ, ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಎನ್.ಬಿಂದುಮಣಿ, ನಗರಸಭೆ ಸದಸ್ಯರು, ಗ್ರಾ.ಪಂ.ಅಧ್ಯಕ್ಷರು, ಸದಸ್ಯರು, ಜಿಲ್ಲಾ, ತಾಲೂಕು ಮಟ್ಟದ ಅಕಾರಿಗಳು ಇತರರು ಪಾಲ್ಗೊಂಡಿದ್ದರು. ಜಿ.ಪಂ.ಸಿಬ್ಬಂದಿಗಳಾದ ಹರ್ಷಿತಾ ತಂಡದವರು ನಾಡಗೀತೆ ಹಾಡಿದರೆ, ಸಹಾಯಕ ಸಾಂಖ್ಯಿಕ ಅಧಿಕಾರಿ ನಂದೀಶ್ ಸ್ವಾಗತಿಸಿದರು. ಪವನ್ ಕುಮಾರ್ ನಿರೂಪಿಸಿ, ವಂದಿಸಿದರು.

ಜನಜಾಗೃತಿ ವೇದಿಕೆಯಿಂದ ಸಹಾಯಧನ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ವಿಭಾಗದಿಂದ ಇತ್ತೀಚೆಗೆ ವಿದ್ಯುತ್ ಅವಘಡದಿಂದ ಮನೆ ಹೊತ್ತಿ ಉರಿದು ನಷ್ಟ ಸಂಭವಿಸಿದ ಬಂಟ್ವಾಳ ತಾಲೂಕು ವೀರಕಂಭ ಗ್ರಾಮದ ಗಣೇಶಕೋಡಿ ರಾಜೇಶ್ವರಿ ರವರಿಗೆ ಮಂಜೂರಾದ 10 ಸಾವಿರ ರೂ. ಸಹಾಯಧನವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಟ್ಲ ತಾಲೂಕು ಯೋಜನಾಧಿಕಾರಿ ಸುರೇಶ್ ಗೌಡ, ಹಸ್ತಾಂತರಿಸಿದರು.

ಬಂಟ್ವಾಳ ತಾಲೂಕು ಜನಜಾಗೃತಿ ವೇದಿಕೆಯ ಸದಸ್ಯರಾದ ವೀರಪ್ಪ ಮೂಲ್ಯ ಬೆತಸರವ್ ಮನೆಯ ದುರಸ್ತಿಯ ವಿದ್ಯುತ್ ವ್ಯವಸ್ಥೆಯನ್ನು ತನ್ನ ವತಿಯಿಂದ ಉಚಿತವಾಗಿ ಮಾಡುವುದಾಗಿ ತಿಳಿಸಿದರು. ಕಲ್ಲಡ್ಕ ವಲಯದ ಮೇಲ್ವಿಚಾರಕ ಸುಖರಾಜ್, ಶೌರ್ಯ ವಿಪತು ನಿರ್ವಹಣಾ ಘಟಕ ಕಲ್ಲಡ್ಕ ಅಧ್ಯಕ್ಷ ಮಾಧವ ಸಾಲಿಯಾನ್ ಕುದ್ರೆಬೆಟ್ಟು, ನಿಯೋಜಿತ ಅಧ್ಯಕ್ಷ ಗಣೇಶ್, ಸದಸ್ಯರಾದ ಚಿನ್ನಾ ಕಲ್ಲಡ್ಕ, ಕಲ್ಲಡ್ಕ ವಲಯದ ಮಾಜಿ ಅಧ್ಯಕ್ಷ ಶೇಖರ ಕಾಣೆಕೋಡಿ, ವೀರ ಕಂಭ ಒಕ್ಕೂಟ ಅಧ್ಯಕ್ಷೆ ಶಾಂಭವಿ ಆಚಾರ್ಯ, ಪದಾಧಿಕಾರಿ ಪ್ರೇಮ ಆಚಾರ್ಯ ಮೊದಲಾದವರಿದ್ದರು.

ಮಣಿಪಾಲ: ಮೇ 13ಕ್ಕೆ ಜನಸಂಪರ್ಕ ಸಭೆ

ಉಡುಪಿ: ಮೆಸ್ಕಾಂ ಮಣಿಪಾಲ ಉಪ ವಿಭಾಗ ಕಚೇರಿಯಲ್ಲಿ ಮೇ 13ಕ್ಕೆ ಬೆಳಿಗ್ಗೆ 10.30ರಿಂದ 12ರವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲು ಸ್ವೀಕರಿಸುವುದರಿಂದ, ಈ ಅವಕಾಶ ಗ್ರಾಹಕರುಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ಸಂಪರ್ಕಿಸಬಹುದಾದ ದೂ.ಸಂ. – 0820-2573699.

ಕರಾವಳಿ ಕರ್ನಾಟಕಕ್ಕೆ ಪ್ರವಾಸೋದ್ಯಮ ನೀತಿ ಜಾರಿಗೊಳಿಸಲು ಎಎಪಿ ಒತ್ತಾಯ

ಮಂಗಳೂರು: ಕರಾವಳಿ ಕರ್ನಾಟಕಕ್ಕೆ ಸುಸ್ಥಿರ, ಸುರಕ್ಷಿತ ಮತ್ತು ಪರಿಸರ ಸ್ನೇಹಿ ಪ್ರವಾಸೋದ್ಯಮ ನೀತಿಯನ್ನು ತುರ್ತಾಗಿ ರೂಪಿಸಿ ಜಾರಿಗೆ ತರಬೇಕು ಎಂದು ಆಮ್ ಆದ್ಮಿ ಪಾರ್ಟಿ ದಕ್ಷಿಣ ಕನ್ನಡ ಘಟಕವು ಉಪಮುಖ್ಯಮಂತ್ರಿ ಹಾಗೂ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕಳೆದ ಜ. 10ಕ್ಕೆ ಮಂಗಳೂರಿನಲ್ಲಿ ಹೂಡಿಕೆದಾರರ ಸಭೆಯಲ್ಲಿ ಭಾಗವಹಿಸಿ, ಕರಾವಳಿ ಕರ್ನಾ ಟಕಕ್ಕಾಗಿ ಹೊಸ ಪ್ರವಾಸೋದ್ಯಮ ನೀತಿಯನ್ನು ರೂಪಿಸುವುದಾಗಿ ಹಾಗೂ ಸಮಗ್ರ ಅಭಿವೃದ್ಧಿಗೆ ಬದ್ಧರಾಗಿರುವುದಾಗಿ ಭರವಸೆ ನೀಡಿದ್ದರು. ಐಟಿ ಮತ್ತು ಇತರ ಕೈಗಾರಿಕೆಗಳಿಗೆ ಅಗತ್ಯವಾದ ಬೃಹತ್ ಮೂಲಸೌಕರ್ಯವನ್ನು ಒದಗಿಸುವುದಾಗಿ ಹೇಳಿದ್ದರು. ಆದರೆ, ಇದುವರೆಗೆ ಪ್ರವಾಸೋದ್ಯಮ ನೀತಿಯ ಯಾವುದೇ ಕರಡು ವಿಧಾನಸಭೆಯಲ್ಲಿ ಪ್ರಸ್ತಾಪವಾಗಿಲ್ಲ ಎಂಬುದು ವಿಷಾದನೀಯ ಎಂದು ಎಎಪಿ ರಾಜ್ಯ ಉಪಾಧ್ಯಕ್ಷ ವಿವೇಕಾನಂದ ಸಾಲಿನ್ಸ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಉಪಮುಖ್ಯಮಂತ್ರಿ ಅವರ ಪ್ರಕಾರ ಪ್ರವಾಸೋದ್ಯಮ ಕ್ಷೇತ್ರವು ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸಲಿದೆ. ಆದರೆ ವಾಸ್ತವದಲ್ಲಿ ಇದು ರಿಯಲ್ ಎಸ್ಟೇಟ್ ಲಾಬಿಗಳಿಗೆ ಪರೋಕ್ಷವಾಗಿ ಉತ್ತೇಜನ ನೀಡುತ್ತಿರುವುದಾಗಿ ಕಾಣುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಕಾಂಡ್ಲಾ ಪ್ರದೇಶಗಳು ಮತ್ತು ಹಸಿರು ಹೊದಿಕೆ ದೊಡ್ಡ ಪ್ರಮಾಣದಲ್ಲಿ ನಾಶವಾಗುತ್ತಿರುವುದು ಕಳವಳಕಾರಿ. ಮೀನು ಸಂಸ್ಕರಣಾ ಘಟಕಗಳಿಂದ ರಾಸಾಯನಿಕಯುಕ್ತ ತ್ಯಾಜ್ಯ ನೀರನ್ನು ಸಮುದ್ರಕ್ಕೆ ನೇರವಾಗಿ ಬಿಡಲಾಗುತ್ತಿದೆ. ಸಿಆರ್‌ಝಡ್ ನಿಯಮಗಳ ಉಲ್ಲಂಘನೆಯೂ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ಪರಿಸರವಾದಿಗಳು ಮತ್ತು ಪ್ರಕೃತಿ ಪ್ರೇಮಿಗಳು ತೀವ್ರ ಚಿಂತೆ ವ್ಯಕ್ತಪಡಿಸುತ್ತಿದ್ದಾರೆ. ಸ್ಥಳೀಯ ಪುರಸಭೆಗಳು ಮತ್ತು ಪಂಚಾಯತ್‌ಗಳು ಘನತ್ಯಾಜ್ಯ ನಿರ್ವಹಣೆಯಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದ್ದು, ಇದು ಪ್ರವಾಸೋದ್ಯಮದ ಬೆಳವಣಿಗೆಗೆ ಗಂಭೀರ ಧಕ್ಕೆಯಾಗಿದೆ ಎಂದು ಅವರು ಹೇಳಿದರು. ಹೋಂಸ್ಟೇಗಳಿಗೆ ಪರವಾನಗಿ ನೀಡುವಲ್ಲಿ ಮತ್ತು ಅವುಗಳ ನವೀಕರಣ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬವು ಸ್ಥಳೀಯ ಉದ್ಯಮಿಗಳಿಗೆ ತೊಂದರೆಯನ್ನು ಉಂಟುಮಾಡುತ್ತಿದೆ. ಈ ಸಮಸ್ಯೆಯನ್ನು ಜಿಲ್ಲಾಡಳಿತ ತ್ವರಿತವಾಗಿ ಮತ್ತು ಸಕಾರಾತ್ಮಕವಾಗಿ ಪರಿಹರಿಸಬೇಕಾಗಿದೆ ಎಂದರು. ಎಎಪಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಎಸ್.ಎಲ್. ಪಿಂಟೊ, ಪ್ರಮುಖರಾದ ಸುಜಾತ ಸತೀಶ್, ವಾಸುದೇವ್, ಶಾಲೆಟ್ ಪಿಂಟೊ, ಕಬೀರ್ ಕಾಟಿಪಳ್ಳ ಉಪಸ್ಥಿತರಿದ್ದರು.



ಮಹಾಬಲ ಲಲಿತ ಕಲಾ ಸಭಾ ಪ್ರಾಯೋಜಕತ್ವದಲ್ಲಿ ವಿದುಷಿ ಜೆ.ಬಿ. ಕೀರ್ತನಾ ಶ್ರೀರಾಮ್ ಚೆನ್ನೈ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಚೇರಿ ಪುತ್ತೂರು ಜೈನ ಭವನದಲ್ಲಿ ಜರುಗಿತು. ವಿದ್ವಾನ್ ಕೇಶವ ಎಂ.(ವಯೋಲಿನ್), ವಿದ್ವಾನ್ ಪ್ರವೀಣ್ ಸ್ಪರ್ಶ ಚೆನ್ನೈ (ಮೃದಂಗ), ವಿದ್ವಾನ್ ಪ್ರವೀಣ್ ಆತ್ರೇಯ ಚೆನ್ನೈ (ಖಂಜೀರಾ) ಸಹಕರಿಸಿದರು. ಸಂಗೀತ ಸಭಾದ ಅಧ್ಯಕ್ಷ ಡಾ. ಶ್ರೀಪ್ರಕಾಶ್ ಬಿ., ಸ್ಯಾಕ್ಸೋಫೋನ್ ವಾದಕ ಡಾ.ಪಿ.ಕೆ. ಗಣೇಶ್ ಕಲಾವಿದರನ್ನು ಗೌರವಿಸಿದರು. ಸತತ 4 ಗಂಟೆ ವಿವಿಧ ರಾಗಗಳಲ್ಲಿ ವಿದುಷಿ ಕೀರ್ತನಾ ಶ್ರೀರಾಮ್ ಹಾಡಿ, ಶ್ರೋತೃಗಳ ಮನ ಗೆದ್ದರು.



ಕುಂದಾಪುರದ ಭಾಗ್ಯವಂತೆ ರೋಜರಿ ಮಾತಾ ಚರ್ಚಿನಲ್ಲಿ ಪ್ರಥಮ ಪರಮ ಪ್ರಸಾದದ ಸಂಸ್ಕಾರ ಕಾರ್ಯಕ್ರಮ ಶುಕ್ರವಾರ ನಡೆಯಿತು. ಇಗರ್ಜಿಯ ಪ್ರಧಾನ ಗುರು ಪೌಲ್ ರೇಗೊ ಧಾರ್ಮಿಕ ವಿಧಿ ನೆರವೇರಿಸಿದರು. ಸಂತ ಮೇರಿ ಪಿ.ಯು. ಕಾಲೇಜಿನ ಪ್ರಾಂಶುಪಾಲ ರೊಲ್ವಿನ್ ಫೆರ್ನಾಂಡಿಸ್, ತ್ರಾಸಿ ಡಾನ್ ಬಾಸ್ಕೊ ಶಾಲೆಯ ಪ್ರಾಂಶುಪಾಲ ಮ್ಯಾಕ್ಸಿಮ್ ಡಿಸೋಜಾ, ಮಕ್ಕಳಿಗೆ ಶಿಕ್ಷಣ ನೀಡಿದ ಧರ್ಮಭಗಿನಿ ಇವ್ವಾ, ಶಿಕ್ಷಕಿ ಜೂಲಿಯೆಟ್ ಪಾಯ್ಸ್ ಮತ್ತು ಮಕ್ಕಳ ಬಂಧು ಮಿತ್ರರು ಭಾಗಿಯಾದರು.

ಭಾರತ ಸೇವಾದಳದಿಂದ ಡಾ. ನಾ.ಸು. ಹರ್ಡಿಕರ್ ಜನ್ಮದಿನಾಚರಣೆ

ದೇಶಕ್ಕೆ ಹರ್ಡಿಕರ್ ಕೊಡುಗೆ ಅಪಾರ: ಪ್ರಭಾಕರ್



ಮಂಗಳೂರು: ಭಾರತ ಸೇವಾದಳ ವತಿಯಿಂದ ಸೇವಾದಳದ ಸಂಸ್ಥಾಪಕರಾದ ಡಾ. ನಾರಾಯಣ ಸುಬ್ಬರಾವ್ ಹರ್ಡಿಕರ್ ಅವರ 137ನೇ ಜನ್ಮದಿನಾಚರಣೆ ಕಾರ್ಯಕ್ರಮ ನಗರದ ಬಾವುಟಗುಡ್ಡೆಯಲ್ಲಿರುವ ಭಾರತ ಸೇವಾದಳ ಕಚೇರಿಯಲ್ಲಿ ಗುರುವಾರ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಂಗಳೂರು ತಾಲೂಕು ಸೇವಾದಳ ಅಧ್ಯಕ್ಷ ಪ್ರಭಾಕರ್ ಶ್ರೀಯಾನ್, ದೇಶದ ಸ್ವಾತಂತ್ರ್ಯ ಹೋರಾಟದ ವೇಳೆಯಲ್ಲಿ ಲಕ್ಷಾಂತರ ಯುವಕರು ಭಾಗವಹಿಸಿದ್ದ ಸಂದರ್ಭದಲ್ಲಿ ಶಿಸ್ತಿನ ಕೊರತೆ ಕಂಡು ಬಂದಾಗ ಹರ್ಡಿಕರ್ ಅವರು ಸೇವಾದಳವನ್ನು ಪ್ರಾರಂಭ ಮಾಡಿದ್ದರು. ಇದಕ್ಕೆ ಮಹಾತ್ಮಾ ಗಾಂಧೀಜಿ ಹಾಗೂ ಜವಾಹರ್ ಲಾಲ್ ನೆಹರೂ ಅವರು ಸಮ್ಮತಿ ನೀಡಿದ್ದರು. 1923ರಲ್ಲಿ ಪ್ರಾರಂಭವಾದ ಸೇವಾದಳಕ್ಕೆ ಇಂದಿಗೆ 102 ವರ್ಷ ಸಂದಿದೆ. ಹರ್ಡಿಕರ್ ಅವರ ಜೀವನದ ಶೈಲಿ, ಶಿಸ್ತು ಹಾಗೂ ದೇಶದ ಸ್ವಾತಂತ್ರ್ಯಕ್ಕೆ ನೀಡಿದ ಕೊಡುಗೆ ಎಲ್ಲರಿಗೂ ಪ್ರೇರಣೆಯಾಗಲಿ ಎಂದರು. ಜಿಲ್ಲಾ ಸೇವಾದಳ ಪ್ರಧಾನ ಕಾರ್ಯದರ್ಶಿ ಟಿ. ಕೆ. ಸುಧೀರ್, ತಾಲೂಕು ಉಪಾಧ್ಯಕ್ಷ ಪ್ರೇಮ್ ಚಂದ್, ತಾಲೂಕು ಪ್ರಧಾನ ಕಾರ್ಯದರ್ಶಿ ಉದಯ ಕುಂದರ್, ಖಜಾಂಜಿ ಕೃತಿನ್ ಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯ ಸುನಿಲ್ ದೇವಾಡಿಗ ಉಪಸ್ಥಿತರಿದ್ದರು.

ಬಿ.ಪಿ.ಸಿ.ಎಲ್. ಕ್ರೀಡೋತ್ಸವ-2026 ಸಂಪನ್ನ



ಮಂಗಳೂರು: ಪಿ.ಸಿ.ಡಬ್ಲ್ಯು. ಯೂನಿಯನ್ ಮತ್ತು ಬಿ.ಪಿ.ಸಿ.ಎಲ್ ಎಲ್.ಪಿ.ಜಿ ಬಾಟ್ಲಿಂಗ್ ಪ್ಲಾಂಟ್ ಮಂಗಳೂರು ಜಂಟಿ ಸಹಯೋಗದೊಂದಿಗೆ ಕ್ರೀಡೋತ್ಸವ -2026 ಎನ್‌ಎಂಪಿಎ ಮೈದಾನದಲ್ಲಿ ಸಂಪನ್ನಗೊಂಡಿತು.

ಸಮಾರೋಪ ಸಮಾರಂಭದಲ್ಲಿ ಕಾರ್ಮಿಕರಿಗೆ 'ಶ್ರೇಷ್ಠಕರ್ಮಚಾರಿ' ಎಂಬ ಸ್ಮರಣಿಕೆ ಕೊಡಲಾಯಿತು. ಇದೇ ಸಂದರ್ಭ ಭಾರತ್ ಪೆಟ್ರೋಲಿಯಂ ಕಾರ್ಪೋರೇಶನ್ ಲಿಮಿಟೆಡ್, ಮಂಗಳೂರು ಎಲ್ಪಿಜಿ ಘಟಕದ ಪ್ರಾದೇಶಿಕ ವ್ಯವಸ್ಥಾಪಕ ಸಂದೀಪ್ ಕುಮಾರ್ ರೈನಾ, ವ್ಯವಸ್ಥಾಪಕರಾದ ರೂಪಾ. ಆರ್. ಆಡಳಿತ ಮಂಡಳಿಯ ವಿಗ್ನೇಶ್, ಸಯ್ಯದ್ ಇರ್ಷಾದ್ ಅಲಿ, ಕಿಶೋರ್ ಕುಮಾರ್, ಶ್ರೀನಿವಾಸ್ ರಾಜು, ವಿಶ್ರಾಂತ ಕಾರ್ಮಿಕ ದೇವದಾಸ್ ಕರ್ಕೇರ, ಸದಾನಂದ ಶೇರಿಗಾರ್, ಸ್ಟಾರ್ ಇಲೆಕ್ಟ್ರಿಕಲ್ ಮಾಲಕ ಕೆ. ಐ. ಮ್ಯಾಥ್ಯು, ಎಸ್ಸಾರ್ ಇಂಜಿನಿಯರಿಂಗ್ ಮಾಲಕರು ಸುನಿಲ್, ಪಿ. ಸಿ.ಡಬ್ಲ್ಯು ಯೂನಿಯನ್ ಕ್ರೀಡಾ ಕಾರ್ಯದರ್ಶಿ ರಂಜಿತ್ ಕುಮಾರ್, ಕೀರ್ತನ್ ಕುಮಾರ್, ಭೀಮನ ಗೌಡ, ಪ್ರವೀಣ್ ಸನಿಲ್, ತೇಜಸ್ ಯೂನಿಯನ್ ಕಾರ್ಯದರ್ಶಿ ಕಿಶೋರ್ ಕುಮಾರ್ ಶೆಟ್ಟಿ ಕೋಶಾಧಿಕಾರಿ ಪ್ರವೀಣ್ ಬಂಗೇರ, ಗಣೇಶ್ ಪಂಜಿಮೊಗರು, ಉಪಾಧ್ಯಕ್ಷ ಪ್ರಶಾಂತ್ ಕುಮಾರ್, ನವೀನ್ ಕುಮಾರ್ ಕರ್ಕೇರ, ಮತ್ತು ಇತರ ಕಮಿಟಿ ಸದಸ್ಯರು ಇದ್ದರು. ಘಟಕದ ಅಧ್ಯಕ್ಷ ಚಂದ್ರಕುಮಾರ್ ಪ್ರಭು ನಿರೂಪಿಸಿದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

ನಮ್ಮ ಕಾಸರಗೋಡು

ಹೊಸದಿಗಂತ ಸಂಗಮ 5

ಶುಕ್ರವಾರ 08, ಮೇ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

ಸುತ್ತ ಮುತ್ತ

ಇಂದು ಯಕ್ಷಗಾನ ಬಯಲಾಟ

ಬದಿಯಡ್ಕ: ನೀರ್ಚಾಲು ಸಮೀಪದ ಮಾನ್ಯ ಶಾಲಾ ವಠಾರದ ನಿತ್ಯಾನಂದ ನಗರದಲ್ಲಿ ಶ್ರೀ ಧರ್ಮಸ್ಥಳ ಮೇಳದವರಿಂದ ಮೇ 8ರಂದು ರಾತ್ರಿ 7ರಿಂದ 12ಗಂಟೆಯ ವರೆಗೆ 'ಶ್ರೀ ಕ್ಷೇತ್ರ ಧರ್ಮಸ್ಥಳ ಮಹಾತ್ಮೆ' ಪ್ರಸಂಗದ ಯಕ್ಷಗಾನ ಬಯಲಾಟ ಪ್ರದರ್ಶನ ಗೊಳ್ಳಲಿದೆ. ದಿ.ಮಾನ್ಯ ವೆಂಕಟ ರಾವ್ –ದಿ. ರತ್ನಾವತಿ ಅವರ ಸ್ಮರಣಾರ್ಥ ಬಯಲಾಟ ಹಮ್ಮಿಕೊಳ್ಳಲಾಗಿದೆ.

ಮೇ 10: ಉಪ್ಪಳ ಶ್ರೀ ಅಯ್ಯಪ್ಪ ಮಂದಿರದಲ್ಲಿ ನೇತ್ರ ತಪಾಸಣಾ ಶಿಬಿರ

ಉಪ್ಪಳ: ಶ್ರೀ ಅಯ್ಯಪ್ಪ ಸೇವಾ ಸಮಿತಿ ಅಯ್ಯಪ್ಪ ಮಂದಿರ ಉಪ್ಪಳ, ಜಗದ್ಗುರು ಶ್ರೀ ನಿತ್ಯಾನಂದ ಮಹಾಪೀಠಮ್ ಚಾರಿಟೇಬಲ್ ಟ್ರಸ್ಟ್ ಕೊಂಡೆವೂರು, ಶ್ರೀ ಭಗವತೀ ಕೃಪಾ ವೀರಾಂಜನೇಯ ವ್ಯಾಯಾಮ ಶಾಲೆ ಐಲ, ಹನುಮಾನ್‌ನಗರ ಮತ್ತು ವನ್‌ಸೈಟ್ ಎಸ್ಸಿಲೋರ್ ಲಕ್ಸೋಟಿಕ ಫೌಂಡೇಶನ್ ಬೆಂಗಳೂರು, ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಗಳೂರು, ಡಾ.ದಯಾನಂದ ಪೈ ಮತ್ತು ಪಿ.ಸತೀಶ್ ಪೈ ಚಾರಿಟೇಬಲ್ ಟ್ರಸ್ಟ್ ಇವುಗಳ ಸಹಯೋಗದಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ ಹಾಗೂ ಶ್ರೀ ಶಾರದಾ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ತಲಪಾಡಿ ಮಂಗಳೂರು ಇದರ ಸಹಯೋಗದಲ್ಲಿ ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ ಮೇ 10ರಂದು ಬೆಳಿಗ್ಗೆ 9 ರಿಂದ ಉಪ್ಪಳ ಶ್ರೀ ಅಯ್ಯಪ್ಪ ಮಂದಿರದ ಸಭಾ ಭವನದಲ್ಲಿ ಜರಗಲಿದೆ. ಕೊಂಡೆವೂರು ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಆಶೀರ್ವಚನ ನೀಡುವರು. ಶಿಬಿರವನ್ನು ಡಾ.ಕೃಷ್ಣ ಪ್ರಸಾದ್ ಕೂಡ್ಲು ಉದ್ಘಾಟಿಸುವರು. ಡಾ.ರಾಧಾಕೃಷ್ಣ ಶೆಟ್ಟಿ ಅಧ್ಯಕ್ಷತೆ ವಹಿಸುವರು. ಡಾ.ಸಂದೀಪ್ ಬೇಕಲ್, ಯು.ಎಂ.ಭಾಸ್ಕರ, ಕೆ.ಮೋನಪ್ಪ ಭಂಡಾರಿ ಉಪಸ್ಥಿತರಿರುವರು.

ಮೇ 15ರ ವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ

ಕಾಸರಗೋಡು: ಪೋಕ್ಸೋ ಕಾಯ್ದೆಯ ವ್ಯಾಪ್ತಿಗೆ ಬರುವ ಮಕ್ಕಳ ಪ್ರಕರಣಕ್ಕೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಯಲ್ಲಿ ಅವರಿಗೆ ಸಹಾಯ ಮಾಡಲು ಮತ್ತು ಪ್ರಕರಣಕ್ಕೆ ಒಳಗಾದ ಮಕ್ಕಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಪೋಕ್ಸೋ ಬೆಂಬಲಿತ ವ್ಯಕ್ತಿಗಳ ಸೇವೆಗಳನ್ನು ಒದಗಿಸಲು ಒಂದು ಸಮಿತಿಯನ್ನು ರಚಿಸಲಾಗುತ್ತಿದೆ. ಬೆಂಬಲ ವ್ಯಕ್ತಿಗಳ ಸಮಿತಿಯಲ್ಲಿ ಸೇರ್ಪಡೆಗಾಗಿ ಸೂಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಮಾಜ ಕಾರ್ಯ, ಸಮಾಜಶಾಸ್ತ್ರ ಮನೋವಿಜ್ಞಾನ, ಮಕ್ಕಳ ಅಭಿವೃದ್ಧಿಯಲ್ಲಿ ಸ್ನಾತಕೋತ್ತರ ಪದವಿ ಅಥವಾ ಮಕ್ಕಳ ಶಿಕ್ಷಣ ಮತ್ತು ಅಭಿವೃದ್ಧಿ ಅಥವಾ ರಕ್ಷಣೆಗೆ ಸಂಬಂಧಿಸಿದ ವಿಷಯಗಳಲ್ಲಿ ಕನಿಷ್ಠ 3 ವರ್ಷಗಳ ಕೆಲಸದ ಅನುಭವ ಹೊಂದಿರುವ ಪದವಿ ವಿದ್ಯಾರ್ಹತೆಯಾಗಿದೆ. ಮಕ್ಕಳ ಹಕ್ಕುಗಳು ಅಥವಾ ಮಕ್ಕಳ ರಕ್ಷಣಾ ಕ್ಷೇತ್ರದಲ್ಲಿ ಸಕ್ರಿಯರಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ಆದ್ಯತೆ ನೀಡಲಾಗುವುದು. ಮಕ್ಕಳ ರಕ್ಷಣೆ ಜವಾಬ್ದಾರಿ ಹೊಂದಿರುವ ಮಕ್ಕಳ ಮನೆಗಳು –ಆಶ್ರಯ ಮನೆಗಳೊಂದಿಗೆ ಸಂಬಂಧಿಸಿದ ಅಧಿಕಾರಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಗಳನ್ನು ವೈಯಕ್ತಿಕ ಅಥವಾ ಅಂಚೆ ಮೂಲಕ ಸಲ್ಲಿಸ ಬಹುದು. ಕೊನೆ ದಿನಾಂಕ ಮೇ 15 ರಂದು ಸಂಜೆ 5 ಗಂಟೆ. ಮಾಹಿತಿಗೆ 04994 256990 ಕರೆ ಮಾಡಬಹುದು.

ಶಿಕ್ಷಕರ ಹುದ್ದೆಗೆ ನೇಮಕಾತಿ

ಕಾಸರಗೋಡು: ಆಲಂಪಾಡಿ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದ ಶಿಕ್ಷಕರ ನೇಮಕಾತಿಗೆ ಮೇ 21 ರಂದು ಬೆಳಗ್ಗೆ 10 ರಿಂದ ಶಾಲಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. ಇಂಗ್ಲಿಷ್, ಅರೇಬಿಕ್ ಸಮಾಜಶಾಸ್ತ್ರ ವಿಷಯಗಳಲ್ಲಿ ಹಿರಿಯ ಶಿಕ್ಷಕರ ಹುದ್ದೆಗಳಿಗೆ ಮತ್ತು ಮಲೆಯಾಳ, ವಾಣಿಜ್ಯ, ಸಮಾಜಶಾಸ್ತ್ರ ವಿಷಯಗಳಲ್ಲಿ ಕಿರಿಯ ಶಿಕ್ಷಕರ ಹುದ್ದೆಗಳಿಗೆ ಹಾಗೂ ಅರ್ಥಶಾಸ್ತ್ರ–(ಹಿರಿಯ), ರಾಜ್ಯಶಾಸ್ತ್ರ ಇತಿಹಾಸ (ಹಿರಿಯ ಮತ್ತು ಕಿರಿಯ) ವಿಷಯಗಳ ಹುದ್ದೆಗಳಿಗೆ ಸಂದರ್ಶನ ಏರ್ಪಡಿಸಲಾಗಿದೆ. ವಿವರಗಳಿಗೆ 9446252983 ಅಥವಾ 7907762094 ಕರೆ ಮಾಡಬಹುದು.

ಕ್ಯಾಶುಯಲ್ ಕಾರ್ಮಿಕರ ನೇಮಕಾತಿ

ಕಾಸರಗೋಡು: ಕೇರಳ ರಾಜ್ಯ ಬೀಜ ಫಾರ್ಮ್‌ನಲ್ಲಿ ಕ್ಯಾಶುಯಲ್ ಕಾರ್ಮಿಕರ ನೇಮಕಾತಿಗೆ ಕಾಸರಗೋಡು ಉದ್ಯೋಗ ವಿನಿಮಯ ಕೇಂದ್ರ ಶಿಫಾರಸು ಮಾಡಿದ ಅಭ್ಯರ್ಥಿಗಳ ದೈಹಿಕ ಸದೃಢತಾ ಪರೀಕ್ಷೆ ಮತ್ತು ಸಂದರ್ಶನವು ಜೂನ್ 1, 2 ರಂದು ಕಾಸರಗೋಡಿನ ಕರಂದಕ್ಕಾಡಿನಲ್ಲಿರುವ ರಾಜ್ಯ ಬೀಜ ಫಾರ್ಮ್ ಕಚೇರಿಯಲ್ಲಿ ನಡೆಯಲಿದೆ. ವಿವರಗಳಿಗೆ 04994 230510 ಸಂಪರ್ಕಿಸಬಹುದು.

ಉಪನ್ಯಾಸಕರ ಹುದ್ದೆಗಳಿಗೆ ಸಂದರ್ಶನ

ಕಾಸರಗೋಡು: ಉದುಮ ಸರಕಾರಿ ಕಲಾ – ವಿಜ್ಞಾನ ಕಾಲೇಜಿನಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವನ್ನು ಏರ್ಪಡಿಸಲಾಗಿದೆ. ಕಾಲೇಜು ಶಿಕ್ಷಣ ಉಪ ನಿರ್ದೇಶಕರ ಪ್ರಾದೇಶಿಕ ಕಚೇರಿಯಲ್ಲಿ ನೋಂದಾಯಿಸಲಾದ ನಿಗದಿತ ಅರ್ಹತೆ ಪೂರೈಸಿದ ಅಭ್ಯರ್ಥಿಗಳು ಮತ್ತು ಸಂಬಂಧಿತ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಶೇ.55 ಅಂಕಗಳೊಂದಿಗೆ ಉತ್ತೀರ್ಣರಾದ, ನೆಟ್ ಅಥವಾ ಪಿಎಚ್‌ಡಿ ಅರ್ಹತೆ ಪಡೆದ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಬಹುದು. ರಾಜ್ಯಶಾಸ್ತ್ರ ವಿಭಾಗ ಮೇ 14ರಂದು ಬೆಳಿಗ್ಗೆ 10 ಕ್ಕೆ ಇಂಗ್ಲಿಷ್ ವಿಭಾಗ ಮೇ 14ರಂದು ಮಧ್ಯಾಹ್ನ 12 ಗಂಟೆಗೆ, ಅಂಕಿ ಅಂಶಗಳು ವಿಭಾಗ ಮೇ 15ರಂದು ಬೆಳಿಗ್ಗೆ 10ಕ್ಕೆ, ವಾಣಿಜ್ಯ ವಿಭಾಗ ಮೇ 16ರಂದು ಬೆಳಿಗ್ಗೆ 10ಕ್ಕೆ, ಮಾನವಶಾಸ್ತ್ರ ವಿಭಾಗ ಮೇ 18ರಂದು ಬೆಳಿಗ್ಗೆ 10 ಕ್ಕೆ, ಅರ್ಥಶಾಸ್ತ್ರ ವಿಭಾಗ ಮೇ 18ರಂದು ಮಧ್ಯಾಹ್ನ 1 ಗಂಟೆಗೆ, ಇತಿಹಾಸ ವಿಭಾಗ ಮೇ 19ರಂದು ಬೆಳಿಗ್ಗೆ 10ಕ್ಕೆ, ಮಲೆಯಾಳ ವಿಭಾಗ ಮೇ 20ರಂದು ಬೆಳಿಗ್ಗೆ 10 ಕ್ಕೆ, ಹಿಂದಿ ವಿಭಾಗ ಮೇ 21ರಂದು ಬೆಳಿಗ್ಗೆ 10 ಗಂಟೆಗೆ ಸಂದರ್ಶನ ನಡೆಯಲಿದೆ. ಮಾಹಿತಿಗೆ 0467 2232478 ಸಂಪರ್ಕಿಸಬಹುದು.

ಕಾಸರಗೋಡು ನಗರದ ಅಂದವನ್ನು ಹೆಚ್ಚಿಸಲು ಜಿಲ್ಲಾಡಳಿತದಿಂದ ಕ್ರಮ

ಏಕ ಕಂಬದ ಮೇಲ್ಸೇತುವೆ ಕೆಳಗೆ ರಂಗೇರಲಿದೆ ಸಾಂಸ್ಕೃತಿಕ ವೈಭವ!



ಕಾಸರಗೋಡು: ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ–66ನ್ನು ಸಮಗ್ರವಾಗಿ ಹಾಗೂ ಸಮರ್ಪಕವಾಗಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಈ ನಿಟ್ಟಿನಲ್ಲಿ ತಲಪಾಡಿ – ಚೆಂಗಳ ಪ್ರಥಮ ರೀಚ್‌ನ ಕಾಮಗಾರಿ ಈಗಾಗಲೇ ಮುಕ್ತಾಯವಾಗಿದೆ. ಹೈವೇ ಅಭಿವೃದ್ಧಿಯ ಭಾಗವಾಗಿ ಕಾಸರಗೋಡು ನಗರ ಪ್ರದೇಶದಲ್ಲಿ ನಿರ್ಮಿಸಲಾದ ಸಿಂಗಲ್ ಫಿಲ್ಲರ್ ಫ್ಲೈಓವರ್ (ಏಕ ಕಂಬದ ಮೇಲ್ಸೇತುವೆ) ಅಡಿಭಾಗದಲ್ಲಿ ಮುಂಬರುವ ದಿನಗಳಲ್ಲಿ ಬಹುದೊಡ್ಡ ಅಭಿವೃದ್ಧಿ ಯೋಜನೆ ಸಾಕಾರಗೊಳಿಸಲು ನಿರ್ಧರಿಸಲಾಗಿದೆ.

ಕರಂದಕ್ಕಾಡಿನಿಂದ ಹೊಸ ಬಸ್ ನಿಲ್ದಾಣ ಮೂಲಕ ನುಳ್ಳಿಪ್ಪಾಡಿವರೆಗಿನ 1.2 ಕಿಲೋ ಮೀಟರ್ ಉದ್ದದ ಅತ್ಯಾಧುನಿಕ ಮಾದರಿಯ ಏಕ ಕಂಬದ ಮೇಲ್ಸೇತುವೆ ಕೆಳಗಿರುವ ವಿಶಾಲ ಜಾಗವನ್ನು ಬಳಸಿಕೊಳ್ಳುವ ಗುರಿ ಹೊಂದಲಾಗಿದೆ. ಈ ಮೇಲ್ಸೇತುವೆಯು 29 ಸ್ಪಾನ್‌ಗಳು 28.5 ಮೀಟರ್ ಅಗಲದಲ್ಲಿ ಹರಡಿಕೊಂಡಿದೆ. ಫ್ಲೈಓವರ್‌ನ ಅಡಿಭಾಗದ ಪ್ರದೇಶವು ಇದೀಗ ಪಾಳುಬಿದ್ದಂತೆ ಕಂಡುಬರುತ್ತಿದ್ದು ಅದನ್ನು ಸಮರ್ಪಕವಾಗಿ ಬಳಸಿಕೊಂಡು ಜನರನ್ನು ಹೆಚ್ಚೆಚ್ಚು ಆಕರ್ಷಿಸಲು ಮತ್ತು ಕಾಸರಗೋಡು ನಗರದ ಪ್ರಗತಿಗೆ ಪೂರಕವಾಗಿಸಲು ಜಿಲ್ಲಾಡಳಿತ ಮತ್ತು ನಗರಸಭಾ ಆಡಳಿತವು ಕ್ರಮ ಕೈಗೊಳ್ಳುತ್ತಿದೆ.

ಸಾಂಸ್ಕೃತಿಕ ಮತ್ತು ಮನೋರಂಜನಾ ಸೌಲಭ್ಯಗಳು ಬಹುಭಾಷಾ ಸಂಗಮ ಭೂಮಿಯಾದ ಕಾಸರಗೋಡಿನ ಶ್ರೀಮಂತ ಕಲೆ ಮತ್ತು ಸಾಂಸ್ಕೃತಿಕ ಪರಂಪರೆ ಉಲ್ಲೇಖಿಸುವ ತೈಲವರ್ಣ ಚಿತ್ರವನ್ನು ಚಿತ್ರಿಸುವ ಮೂಲಕ ಮೇಲ್ಸೇತುವೆಯ ಕಂಬಗಳನ್ನು ಆಕರ್ಷಿಸುವಂತೆ ಮಾಡಲು ತೀರ್ಮಾನಿಸಲಾಗಿದೆ. ಈ ನಿಟ್ಟಿನಲ್ಲಿ ನಗರಸಭೆಯು ಯೋಜನೆಯೊಂದನ್ನು ಪ್ರಸ್ತಾಪಿಸಿದೆ. ಇದರ ಜೊತೆಗೆ ನಗರದ ನಿವಾಸಿಗಳಿಗೆ ಹಲವಾರು ಸೌಕರ್ಯಗಳನ್ನು ಏರ್ಪಡಿಸುವ ಉದ್ದೇಶ ಕೈಗೆತ್ತಿಕೊಳ್ಳಲಾಗುವುದು ಎಂದು ನಗರಸಭಾ ಆಡಳಿತದ ಮಾಹಿತಿಯಲ್ಲಿ ಉಲ್ಲೇಖಿಸಲಾಗಿದೆ.

ವಿವಿಧ ಸೌಲಭ್ಯ

ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಮುಕ್ತ ಜಿಮ್, ಶಟಲ್ ಕೋರ್ಟ್, ನಿರ್ಮಾಣವಾಗಲಿದೆ. ಏಕಕಾಲದಲ್ಲಿ 500 ಮಂದಿ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಾಮರ್ಥ್ಯವಿರುವ ಮುಕ್ತ ವೇದಿಕೆ ಎಲ್‌ಇಡಿ ಪರದೆ ವ್ಯವಸ್ಥೆ ಮತ್ತು ಆಂಫಿ ಥಿಯೇಟರ್ ಕೂಡಾ ಸ್ಥಾಪನೆಯಾಗಲಿದೆ. ಮಾತ್ರವಲ್ಲದೆ ಮನೋರಂಜನೆಗಾಗಿ ಹಿರಿಯ ನಾಗರಿಕರಿಗೆ ಕುಳಿತುಕೊಳ್ಳಲು, ಓದಲು ಮತ್ತು ವಿಶ್ರಾಂತಿ ಪಡೆಯಲು ಸೌಲಭ್ಯಗಳನ್ನು ಹೊಂದಿರುವ ಉದ್ಯಾನವನ ನಿರ್ಮಾಣವಾಗಲಿದೆ. ಸುರಕ್ಷತೆ ಮತ್ತು ನೈರ್ಮಲ್ಯಕ್ಕಾಗಿ ದಿವ್ಯಾಂಗರ ಸ್ನೇಹಿ ಶೌಚಾಲಯಗಳು, ಸಿಸಿಟಿವಿ ಕ್ಯಾಮರಾ ಕಣ್ಗಾವಲು ವ್ಯವಸ್ಥೆ ಅಲ್ಲದೆ ಮೇಲ್ಸೇತುವೆಯ ಎರಡೂ ಬದಿಗಳಲ್ಲಿ ಪಾರ್ಕಿಂಗ್ ಸೌಲಭ್ಯಗಳನ್ನು ಒದಗಿಸುವ ಅಂಗವಾಗಿ ನಕ್ಷೆಯನ್ನು ತಯಾರಿಸಲು ಸಂಬಂಧಪಟ್ಟವರಿಗೆ ನಿರ್ದೇಶಿಸಲಾಗಿದೆ.

ಸಮಗ್ರ ಯೋಜನೆ

ಕಾಸರಗೋಡಿನ ನಿಕಟಪೂರ್ವ ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಅವರ ಆದೇಶದ ಮೇರೆಗೆ ರೂಪಿಸಲಾದ ಈ ಅಭಿವೃದ್ಧಿ ಯೋಜನೆಗಳ ರೂಪುರೇಷೆ ಪ್ರಸ್ತುತ ಕೇರಳ ಸರಕಾರದ ಪರಿಗಣನೆಯಲ್ಲಿದೆ. ಕಾಸರಗೋಡು ನಗರಸಭೆ ಮತ್ತು ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ ಜಂಟಿಯಾಗಿ ಈ ಯೋಜನೆಯನ್ನು ಕಾರ್ಯಗತ ಗೊಳಿಸಲು ಉದ್ದೇಶಿಸಿದೆ.

ಯೋಜನೆ ತ್ವರಿತಗೊಳಿಸಬೇಕು

ಮಹತ್ವಾಕಾಂಕ್ಷೆಯ ಈ ಯೋಜನೆ ಜಾರಿಗೊಂಡರೆ ಕಾಸರಗೋಡು ನಗರದ ಮುಖಛಾಯೆಯೇ ಬದಲಾಗುವುದು ಅಲ್ಲದೆ ಪ್ರವಾಸೋದ್ಯಮ ಕ್ಷೇತ್ರ, ಸ್ಥಳೀಯ ವ್ಯಾಪಾರಿ ಗಳಿಗೆ ದೊಡ್ಡ ಆಸ್ತಿಯಾಗಲಿದೆ ಎಂದು ನಗರ ಪ್ರದೇಶ ನಿವಾಸಿಗಳು ಆಶಯ ವ್ಯಕ್ತಿ ಹೊಂದಿದ್ದಾರೆ. ಹೊಸ ಸರಕಾರ ಮತ್ತು ಜನಪ್ರತಿನಿಧಿಗಳು ಯೋಜನೆ ಯನ್ನು ತ್ವರಿತಗೊಳಿಸಬೇಕು, ಆಡಳಿತಾತ್ಮಕ ಅನುಮೋದನೆ ಖಚಿತಪಡಿಸಿ ಕೊಳ್ಳಬೇಕು ಎಂದು ಸಾಮಾನ್ಯ ಜನರ ಬೇಡಿಕೆಯಾಗಿದೆ.

ಚೇವಾರು ಮಿತ್ತಡ್ಕ: ಶ್ರೀ ವನಶಾಸ್ತ ನಾಗ ರಕ್ತೇಶ್ವರಿ ಗುಳಿಗ ದೈವ ದೇವರ ಪ್ರತಿಷ್ಠಾ ವಾರ್ಷಿಕೋತ್ಸವ



ಉಪ್ಪಳ: ಚೇವಾರು ಮಿತ್ತಡ್ಕ ಶ್ರೀ ವನಶಾಸ್ತ ವನದುರ್ಗಾ ನಾಗ ರಕ್ತೇಶ್ವರಿ ಗುಳಿಗ ದೈವ ದೇವರ ಪ್ರತಿಷ್ಠಾ ವಾರ್ಷಿಕೋತ್ಸವ ಮತ್ತು ಮಿತ್ತಡ್ಕ ಗುಳಿಗ ದೈವದ ಕೋಲೋತ್ಸವವು ಜರಗಿತು. ಧಾರ್ಮಿಕ ವಿಧಿವಿಧಾನಗಳನ್ನು ಬ್ರಹ್ಮಶ್ರೀ ವೇ.ಮೂ. ತಂತ್ರಿವರ್ಯ ಉರ್ಮಿ ರಾಮ್‌ಪ್ರಸಾದ್ ನಲ್ಲೂರಾಯರ ನೇತೃತ್ವದಲ್ಲಿ ಜರಗಿತು. ಸಂಜೆ ಸ್ಥಳೀಯ ಮಕ್ಕಳಿಂದ ನೃತ್ಯ ವೈಭವ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿ ಪುರಸ್ಕೃತ ಡಾ. ಹರೀಶ್ ಬೊಟ್ಟಾರಿ ಅಧ್ಯಕ್ಷತೆ ವಹಿಸಿದ್ದರು.

ಅತಿಥಿಗಳಾಗಿ ಎಡಕಾನ ಶಾಂಭವಿ ಫ್ಯಾಮಿಲಿ ಟ್ರಸ್ಟ್‌ನ ಮೆನೇಜಿಂಗ್ ಟ್ರಸ್ಟಿ ಇ.ಎಸ್. ಮಹಾಬಲೇಶ್ವರ ಭಟ್ ಎಡಕಾನ , ಪರಪ್ಪು ಶ್ರೀ ಧೂಮವತಿ ಮತ್ತು ಪರಿವಾರ ದೈವಗಳ ವನ ಸಾನಿಧ್ಯ ಅಧ್ಯಕ್ಷ ಇ.ಪರಮೇಶ್ವರ ಭಟ್ ಮೇರ್ಕಳ, ನಿವೃತ್ತ ಯೋಧ, ಶಾಲಾ ಮುಖ್ಯೋಪಾಧ್ಯಾಯ ಶ್ರೀನಿವಾಸ ಮಾಸ್ಟರ್ ಓಡಗದ್ದೆ, ಪುತ್ತಿಗೆ ವಿಕಾಸನಗರ ಕಲ್ಲುರ್ಟಿ ಶ್ರೀ ಕೊರಗಜ್ಜ ಗುಳಿಗ ಸಾನಿಧ್ಯ ಧರ್ಮದರ್ಶಿ ನವೀನ್ ಕಾಶಿ, ಚೇವಾರು ಶ್ರೀ ಶಾರದಾ ಎಯುಪಿ ಶಾಲಾ ಮುಖ್ಯೋಪಾಧ್ಯಾಯ ಶ್ಯಾಮ್ ಭಟ್, ಮಕ್ಕಳ ಸಹಾಯ ವಾಣಿ ಕೇಂದ್ರದ ಮುಖ್ಯಸ್ಥೆ, ದುರ್ಗಾ ಶಕ್ತಿ ಕುಣಿತ ಭಜನಾ ತಂಡ ಪರಂಬಳ ಕಯ್ಯಾರು ಗೌರವ ಮಾರ್ಗದರ್ಶಕಿ ರಮ್ಯಾ ಎನ್. ಧರ್ಬೆತಡ್ಕ ಮಿತ್ತಡ್ಕ ವನದುರ್ಗಾ ವನಶಾಸ್ತ ನಾಗ ರಕ್ತೇಶ್ವರಿ ಇದರ ಗೌರವಾಧ್ಯಕ್ಷ ಶ್ರೀ ಕುಮಾರ ಸುಬ್ರಹ್ಮಣ್ಯ ಕೊಂದಾಲಕಾಡು, ಚೇವಾರು ಪಟ್ಲ ಶ್ರೀ ಅಯ್ಯಪ್ಪ ಸ್ವಾಮಿ ಭಜನಾ ಮಂದಿರದ ಪ್ರಧಾನ ಅರ್ಚಕ, ಗುರುಸ್ವಾಮಿ, ಉಪೇಂದ್ರ ಆಚಾರ್ಯ ಚೇವಾರು ಅತಿಥಿಗಳಾಗಿದ್ದರು.

ಶ್ರೀ ವನಶಾಸ್ತ ವನದುರ್ಗಾ ನಾಗ ರಕ್ತೇಶ್ವರಿ ಸಾನಿಧ್ಯ ಮಿತ್ತಡ್ಕ ಚೇವಾರು ಇದರ ಅಧ್ಯಕ್ಷ ಚೆನ್ನಪ್ಪ ಏರುಗಲ್ಲು ಸ್ವಾಗತಿಸಿ, ಮಿತ್ತಡ್ಕ ಶ್ರೀ ವನಶಾಸ್ತ ವನದುರ್ಗ ನಾಗ ರಕ್ತೇಶ್ವರಿ ಸಾನಿಧ್ಯದ ಕೋಶಾಧಿಕಾರಿ ಸುಜಿತ್ ಮಿತ್ತಡ್ಕ ವಂದಿಸಿದರು. ಸಮಿತಿ ಸದಸ್ಯ ಸತೀಶ್ ಕುಮಾರ್ ಕಾಪು ನಿರೂಪಿಸಿದರು. ರಾತ್ರಿ ಮಿತ್ತಡ್ಕ ಗುಳಿಗ ದೈವದ ಕೋಲ ನಡೆಯಿತು.

ಪೆರಿಯ ಗೋಕುಲಂ ಗೋಶಾಲೆಯಲ್ಲಿ ಮನಸೆಳೆದ ಮಾನಸಿಕ ನೃತ್ಯ ಪ್ರದರ್ಶನ



ಕಾಸರಗೋಡು: ಪೆರಿಯ ಬೇಕಲ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ಆಯೋಜಿಸಲಾಗಿರುವ 3ನೇ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಬೆಂಗಳೂರಿನ ವೈಷ್ಣವಿ ನಾಟ್ಯಶಾಲೆಯ ಸಂಸ್ಥಾಪಕರು, ನಿರ್ದೇಶಕರಾದ ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಶಿಷ್ಯೆ ಮಾನಸಿಕ ಡಿ. ನೃತ್ಯ ಪ್ರದರ್ಶನ ಜರಗಿತು. ವೈಷ್ಣವಿ ನಾಟ್ಯಶಾಲೆಯ ಪ್ರಾಮಾಣಿಕ ಮತ್ತು ಉತ್ಸಾಹಿ ವಿದ್ಯಾರ್ಥಿನಿ ಆಗಿರುವ ಮಾನಸಿಕ ಅವರು ಕಳೆದ ಏಳು ವರ್ಷಗಳಿಂದ ಭರತನಾಟ್ಯವನ್ನು ಕಲಿಯುತ್ತಿದ್ದಾರೆ. ಕರ್ನಾಟಕ, ತಮಿಳುನಾಡು ಮತ್ತು ಕೇರಳದಾದ್ಯಂತ ಅನೇಕ ದೇವಾಲಯಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸ್ಪರ್ಧಾತ್ಮಕ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗಿ ಭಾಗವಹಿಸಿ ನೃತ್ಯ ಪ್ರದರ್ಶನ ನೀಡಿದ್ದಾರೆ. ಅಲ್ಲದೆ ಅವರು ಹೊಸೂರು ನಾಟ್ಯಾಂಜಲಿ ಕಾರ್ಯಕ್ರಮದಲ್ಲಿ ನಾಟ್ಯಮಣಿ ಪ್ರಶಸಿ ಪಡೆದಿದ್ದಾರೆ. ಹಾಗೆಯೇ ಸಂಗೀತ ಕಲಾ ಉತ್ಸವದಲ್ಲಿ ಪ್ರಶಸ್ತಿ ವಿಜೇತೆಯಾಗಿದ್ದು ಪ್ರತಿಷ್ಠಿತ ಸಂಗೀತ ಕಲಾ ಚೂಡಾಮಣಿ ಪ್ರಶಸ್ತಿಯನ್ನು ಸಹ ಪಡೆದುಕೊಂಡಿದ್ದಾರೆ.

ಸನ್ಮಾನ

ಗೋಶಾಲೆಯ ಸಂಸ್ಥಾಪಕರು ಹಾಗೂ ಪರಂಪರಾ ವಿದ್ಯಾಪೀಠದ ಆಚಾರ್ಯರಾದ ವಿಷ್ಣು ಹೆಬ್ಬಾರ್ ದಂಪತಿಗಳು ಮಾನಸಿಕ ಅವರನ್ನು ಸನ್ಮಾನಿಸಿ ಗೌರವಿಸಿದರು.

ಸಾಧನೆಯ ಮೈಲುಗಲ್ಲು

ಮಾನಸಿಕ ಅವರು 2026ನೇ ಫೆಬ್ರವರಿಯಲ್ಲಿ ವಿದ್ವಾನ್ ಮಿಥುನ್ ಶ್ಯಾಮ್ ಅವರ ಮಾರ್ಗದರ್ಶನದಲ್ಲಿ, ಕಾವ್ಯ ಕಾಶಿನಾಥನ್ ಅವರ ತರಬೇತಿ ಬೆಂಬಲದೊಂದಿಗೆ ರಂಗಪ್ರವೇಶವನ್ನು (ಅರಂಗೇಟ್ರಂ) ಪೂರ್ಣಗೊಳಿಸುವ ಮೂಲಕ ತಮ್ಮ ಕಲಾತ್ಮಕ ಪಯಣದಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿದ್ದಾರೆ.

ವಿದ್ಯಾನಗರ ಸಿವಿಲ್ ಸ್ಟೇಷನ್: ಮಳೆಗಾಲ ಪೂರ್ವ ಸ್ವಚ್ಛತಾ ಕಾರ್ಯಕ್ಕೆ ಡೀಸಿ ಚಾಲನೆ



ಕಾಸರಗೋಡು: ಮಳೆಗಾಲ ಪೂರ್ವ ಸ್ವಚ್ಛತೆಯ ಅಂಗವಾಗಿ ಕಾಸರಗೋಡು ವಿದ್ಯಾನಗರ ಸಿವಿಲ್ ಸ್ಟೇಷನ್‌ನಲ್ಲಿ ವ್ಯಾಪಕ ಸ್ವಚ್ಛತಾ ಕಾರ್ಯಗಳನ್ನು ಆರಂಭಿಸಲಾಗಿದೆ. ಸಿವಿಲ್ ಸ್ಟೇಷನ್‌ನಲ್ಲಿ ವಿವಿಧ ಇಲಾಖೆಗಳ ಕಚೇರಿಗಳು ಮತ್ತು ಆವರಣಗಳ ಸ್ವಚ್ಛತಾ ಕಾರ್ಯಗಳಿಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಚಾಲನೆ ನೀಡಿದರು.

ಮಳೆಗಾಲ ಆರಂಭವಾಗುವ ಮುನ್ನ ಸಿವಿಲ್ ಸ್ಟೇಷನ್ ಕಾಂಪೌಂಡ್‌ನ ಸ್ವಚ್ಛತಾ ಕಾರ್ಯಕ್ಕೆ ಮುಂದಾಳುತ್ವ ವಹಿಸಿದ್ದಕ್ಕಾಗಿ ಚೆಂಗಳ ಗ್ರಾ.ಪಂ.ನ್ನು ಜಿಲ್ಲಾಧಿಕಾರಿ ಅಭಿನಂದಿಸಿದರು. ಹೆಚ್ಚುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯವು ಪರಿಸರಕ್ಕೆ ಬಹುದೊಡ್ಡ ಅಪಾಯ ಉಂಟುಮಾಡುತ್ತದೆ ಮತ್ತು ಪ್ರತಿಯೊಬ್ಬರೂ ಸ್ವಚ್ಛತಾ ಕಾರ್ಯಗಳಲ್ಲಿ ಸಕ್ರಿಯರಾಗಿ ಭಾಗವಹಿಸಬೇಕು ಎಂದು ಅವರು ಹೇಳಿದರು.

ಇಂದು ಹಸ್ತಾಂತರ

ಚೆಂಗಳ ಗ್ರಾ.ಪಂ., ಜಿಲ್ಲಾ ಸ್ವಚ್ಛತಾ ಮಿಷನ್ ಮತ್ತು ಹಸಿರು ಕ್ರಿಯಾ ಸೇನೆಯ ಸದಸ್ಯರ ಸಹಯೋಗದೊಂದಿಗೆ ಸ್ವಚ್ಛತಾ ಚಟುವಟಿಕೆ ಗಳನ್ನು ನಡೆಸಲಾಗುತ್ತಿದೆ. ಇದರ ಭಾಗವಾಗಿ ಮೇ 8 ರಂದು ಸಿವಿಲ್ ಸ್ಟೇಷನ್‌ನ ಎಲ್ಲಾ ಕಚೇರಿಗಳಿಂದ ಇಲೆಕ್ಟ್ರಾನಿಕ್ಸ್ ತ್ಯಾಜ್ಯವನ್ನು ಸಂಗ್ರಹಿಸಿ ಕ್ಲೀನ್ ಕೇರಳ ಕಂಪೆನಿಗೆ (ಸಿಕೆಸಿಎಲ್) ಹಸ್ತಾಂತರಿಸಲಾಗುವುದು. ಇಲೆಕ್ಟ್ರಾನಿಕ್ಸ್, ಕಾಗದದ ತ್ಯಾಜ್ಯದ ಜೊತೆಗೆ ಆರೋಗ್ಯ ಹಾಗೂ ಪರಿಸರಕ್ಕೆ ಅಪಾಯ ಉಂಟುಮಾಡುವ ಪಾದರಸ ಮತ್ತು ಸೀಸದಂತಹ ಅಪಾಯಕಾರಿ ತ್ಯಾಜ್ಯವನ್ನು ಸರಿಯಾಗಿ ವಿಂಗಡಿಸಿ ಹಸ್ತಾಂತರಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನಡೆದ ಸ್ವಚ್ಛತಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚೆಂಗಳ ಗ್ರಾ.ಪಂ.ಅಧ್ಯಕ್ಷ ವಸಂತ ಅಜಕ್ಕೋಡು ವಹಿಸಿದ್ದರು. ಎಡಿಎಂ ಕೆ.ವಿ.ಶ್ರುತಿ, ಉಪ ಜಿಲ್ಲಾಧಿಕಾರಿ ಲಿಪು ಎಸ್.ಲಾರೆನ್ಸ್, ವಿ.ಪಿ.ರಘುಮಣಿ, ಹುಸೂರು ಶಿರಸ್ತೇದಾರ್ ಸತೀಶ್ ಕುಮಾರ್, ಸ್ವಚ್ಛತಾ ಮಿಷನ್ ಜಿಲ್ಲಾ ಸಂಯೋಜಕ ಪಿ.ಜಯನ್, ಚೆಂಗಳ ಪಂ.ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಶಾಂತಕುಮಾರಿ ಟೀಚರ್, ವಾರ್ಡ್ ಸದಸ್ಯರಾದ ಮಾಹಿನ್ ಆಲಂಪಾಡಿ, ಇ.ಎ. ಮಹಮ್ಮದ್, ವಿ.ಎ.ಮಹಮ್ಮದ್ ಹನೀಫ ಮಾತನಾಡಿದರು. ಆರೋಗ್ಯ ಅಧಿಕಾರಿಗಳಾದ ಕೆ.ವಿ.ಗೋಪಿನಾಥ್, ಕೆ.ರಶ್ಮಿ, ಎಂ.ಸಿ.ಬಶೀರ್ ಮತ್ತಿತರರಿದ್ದರು.

ಹಸಿರು ಕ್ರಿಯಾ ಸೇನೆಗೆ ಹಸ್ತಾಂತರಿಸಬೇಕು

ಜಿಲ್ಲಾ ಶುಚಿತ್ವ ಮಿಷನ್ ಕಚೇರಿ ಸಮೀಪದ ಜೈವಿಕ ಅನಿಲ ಸ್ಥಾವರ, ಅಕ್ಷರ ಗ್ರಂಥಾಲಯ ಬಳಿಯಿರುವ ತ್ಯಾಜ್ಯ ವಿಲೇವಾರಿ ವ್ಯವಸ್ಥೆ ಮತ್ತು ರಿಂಗ್ ಕಾಂಪೋಸ್ಟ್ ಇತ್ಯಾದಿಗಳನ್ನು ಸಾವಯವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ಬಳಸಿಕೊಳ್ಳಲಾಗುವುದು. ಅಜೈವಿಕ ತ್ಯಾಜ್ಯ ವಿಂಗಡಿಸಿ ಎಸೆಯುವ ಬದಲು ಹಸಿರು ಕ್ರಿಯಾ ಸೇನೆಗೆ ಹಸ್ತಾಂತರಿಸಬೇಕು.

● ಅರ್ಜುನ್ ಪಾಂಡ್ಯನ್, ಜಿಲ್ಲಾಧಿಕಾರಿ

ಅಮ್ಮೆ ಶ್ರೀಕೃಷ್ಣ ಭಜನಾ ಮಂದಿರ ರಜತ ಮಹೋತ್ಸವದ ಸಂಭ್ರಮ, ಗೌರವ



ಕಾಸರಗೋಡು: ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಏಕತೆಗೆ ದೊಡ್ಡ ಯೋಗದಾನ ನೀಡಿರುವ ನಗರದ ಅಮ್ಮೆ ಶ್ರೀಕೃಷ್ಣ ಭಜನಾ ಮಂದಿರದ ರಜತ ಮಹೋತ್ಸವ ಜರಗಿತು.

ಸಮಾಜಮುಖಿ ವ್ಯಕ್ತಿತ್ವದ ಅನೇಕ ಮಂದಿ ಮಹನೀಯರ, ತಾಯಂದಿರ ನೇತೃತ್ವದ ರಜತ ಮಹೋತ್ಸವ ಸಮಿತಿ , ಶ್ರೀಕೃಷ್ಣ ಭಜನಾ ಮಂದಿರ ಸಮಿತಿ ಜಂಟಿ ನೇತೃತ್ವ ಈ ಕಾರ್ಯಕ್ರಮ ಜರಗಿತು.

ತಂತ್ರಿವರ್ಯ ಬ್ರಹ್ಮಶ್ರೀ ಉಳಿಯ ತ್ತಾಯ ವಿಷ್ಣು ಆಸ್ರ ನೇತೃತ್ವದಲ್ಲಿ ವಿವಿಧ ವೈದಿಕ ಕಾರ್ಯಕ್ರಮಗಳು ನಡೆದವು. ಹಿರಿಯ ಧಾರ್ಮಿಕ ಮುಂದಾಳು ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ, ಮಂದಿರ ಸಮಿತಿ ಅಧ್ಯಕ್ಷ ಗುಣಪಾಲ ಅಮ್ಮೆ, ಉಪಾಧ್ಯಕ್ಷೆ ಪುಷ್ಪಾ, ರಜತ ಮಹೋತ್ಸವ ಸಮಿತಿ ಪ್ರಧಾನ ಸಲಹೆಗಾರ ದೇವದಾಸ್ ನುಳ್ಳಿಪ್ಪಾಡಿ, ಸಾಂಸ್ಕೃತಿಕ ಸಮಿತಿ ಸಂಚಾಲಕ ರಾಜೇಶ್ ಅಮ್ಮೆ, ಅಧ್ಯಕ್ಷ ಕಿಶೋರ್‌ಕುಮಾರ್ ಸಹಿತ ಮಂದಿಯ ಸಹಭಾಗಿತ್ವದಲ್ಲಿ ಸಮಾರಂಭ ಪ್ರಸ್ತುತಗೊಂಡಿತು.

ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿಗೆ ಪೂರ್ಣಕುಂಭ ಸ್ವಾಗತ ನಡೆಯಿತು. ಬಳಿಕ ನಡೆದ ಧಾರ್ಮಿಕ ಸಭೆಯಲ್ಲಿ ಸ್ವಾಮೀಜಿ ಆಶೀರ್ವಚನ ನೀಡಿದರು. ಮೈತ್ರೇಯ ಗುರುಕುಲದ ಪ್ರತಿನಿಧಿ ಮತ್ತು ರಜತಮಹೋತ್ಸವ ಸಮಿತಿ ಗೌರವಾಧ್ಯಕ್ಷ ಜಗನ್ನಾಥ ವಿಟ್ಲ ಅಧ್ಯಕ್ಷತೆ ವಹಿಸಿದ್ದರು. ಹಿಂದೂ ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ ಶೆಟ್ಟಿ ಕಾರ್ಕಳ ಧಾರ್ಮಿಕ ಭಾಷಣ ಮಾಡಿದರು.

ಗೌರವ

ಈ ಸಂದರ್ಭ ಮಂದಿರ ಸ್ಥಾಪನೆ ಹಾಗೂ ಅಭಿವೃದ್ಧಿಯಲ್ಲಿ ದೊಡ್ಡ ಯೋಗದಾನ ನೀಡಿದ ಕುಟುಂಬಗಳ ಪ್ರತಿನಿಧಿಗಳಾದ ಮತ್ತು ಸಾಧಕರಾದ ನಾರಾಯಣ ಅಮ್ಮೆ, ಗಂಗಾಧರ ಅಮ್ಮೆ, ಲಲಿತಾ ಅಮ್ಮೆ, ಪದ್ಮಾವತಿ ಅಮ್ಮೆ ಅವರನ್ನು ಗೌರವಿಸಲಾಯಿತು.

ಮಾರ್ಪನಡ್ಕದಲ್ಲಿ ಆರೋಗ್ಯ ವಿಚಾರ ಸಂಕಿರಣ, ಪೇಟೆ ಸ್ವಚ್ಛತಾ ಕಾರ್ಯಕ್ರಮ



ಮುಳ್ಳೇರಿಯ: ಆರೋಗ್ಯ ಜಾಗೃತಿ 2026ರ ಭಾಗವಾಗಿ ಕುಂಬ್ಡಾಜೆ ಗ್ರಾ.ಪಂ. ಮತ್ತು ಕುಟುಂಬ ಆರೋಗ್ಯ ಕೇಂದ್ರ ಇವುಗಳ ಜಂಟಿ ಆಶ್ರಯದಲ್ಲಿ ಗುರುವಾರ ಮಾರ್ಪನಡ್ಕ ಪಾಂಚಜನ್ಯ ಸಭಾಂಗಣದಲ್ಲಿ ಆರೋಗ್ಯ ವಿಚಾರ ಸಂಕಿರಣ ಮತ್ತು ಪೇಟೆ ಶುಚೀಕರಣ ಕಾರ್ಯಕ್ರಮ ನಡೆಯಿತು.

ಕುಂಬ್ಡಾಜೆ ಗ್ರಾ.ಪಂ. ವ್ಯಾಪ್ತಿಯ 14 ವಾರ್ಡ್‌ಗಳಲ್ಲಿ ಮೇ 8 ರಿಂದ 14ರ ವರೆಗೆ ವಾರ್ಡ್ ಮಟ್ಟದಲ್ಲಿ ಜನಪ್ರತಿನಿಧಿಗಳ ನೇತೃತ್ವದಲ್ಲಿ ಸ್ವಚ್ಛತಾ ಸಪ್ತಾಹ ಆಚರಿಸಲು ನಿರ್ಧರಿಸಲಾಗಿದೆ. ಇದರ ಅಂಗವಾಗಿ ಜರಗಿದ ವಿಚಾರ ಸಂಕಿರಣ, ಸಭೆ–ಗುಂಪು ಚರ್ಚೆಯಲ್ಲಿ 200ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಗ್ರಾ.ಪಂ.ಅಧ್ಯಕ್ಷೆ ಯಶೋದಾ ಎನ್. ಉದ್ಘಾಟಿಸಿ ಮಾತನಾಡಿದರು. ಗ್ರಾ.ಪಂ. ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷೆ ಪ್ರಿಯಾಂಕ ಎ.ಸಿ. ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಉಪಾಧ್ಯಕ್ಷ ರವೀಂದ್ರ ರೈ ಗೋಸಾಡ, ವೈದ್ಯಾಧಿಕಾರಿ ಡಾ. ಸೈಯದ್‌ಹಮೀದ್ ಶುಹೈಬ್ ಕ್ರಿಯಾ ಯೋಜನೆ ಮಂಡಿಸಿದರು. ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷೆ ನಯನಾ, ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಅಬೂಬಕ್ಕರ್, ಸದಸ್ಯರಾದ ಮಹೇಶ್ ಎ., ಬಿ.ಟಿ.ಅಬ್ದುಲ್ಲ ಕುಂಞಿ, ಕೊರಗಪ್ಪ ಬೆಳ್ಳಿಗೆ, ಗೀತಾ ಡಿ., ಬಬಿತಾ ರೇಷ್ಮಾ, ಆಯಿಷತ್ ಮಸೀದಾ ಪಿ., ಸೌಭಾಗ್ಯಲಕ್ಷ್ಮಿ, ಎಸ್. ಮುಹಮ್ಮದ್, ಗ್ರಾ.ಪಂ. ಕಾರ್ಯದರ್ಶಿ ವಿಪಿನ್, ಡಾ.ಐಶ್ವರ್ಯ ಕೆ., ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿ ಅಧ್ಯಕ್ಷ ಶ್ರೀಧರನ್, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಶಶಿಧರ ತೆಕ್ಕೆಮೂಲೆ, ಜಾನ್, ಮ್ಯಾಥ್ಯೂ ಮಾತನಾಡಿದರು.


ಆರೋಗ್ಯ ನಿರೀಕ್ಷಕ ಸುರೇಶ್ ಕುಮಾರ್ ವಿಷನ್ 2026 ಚಟುವಟಿಕೆಗಳ ಬಗ್ಗೆ ವಿವರಿಸಿದರು. ಪಂ.ಕಾರ್ಯದರ್ಶಿ ವಿಪಿನ್ ಸ್ವಾಗತಿಸಿ, ಜೆಎಚ್‌ಐ ಅಬ್ದುಲ್ ರಹಿಮಾನ್ ವಂದಿಸಿದರು.




ಕ್ಯಾಂಪ್ಕೋ ಬದಿಯಡ್ಕ ಶಾಖೆಯ ಸಕ್ರಿಯ ಸದಸ್ಯರಾಗಿದ್ದ ಸುಬ್ಬಣ್ಣ ಆಳ್ವ ಅವರು ಆಕಸ್ಮಿಕವಾಗಿ ನಿಧನರಾಗಿರುವ ಹಿನ್ನೆಲೆಯಲ್ಲಿ ಅವರ ಪತ್ನಿ ವಸಂತಿ ಆಳ್ವ ಅವರಿಗೆ 50,000 ರೂಪಾಯಿ ಸಹಾಯಧನದ ಚೆಕ್‌ನ್ನು ಕ್ಯಾಂಪ್ಕೋ ಸಂಸ್ಥೆಯ ಸಾಂತ್ವನ ಯೋಜನೆಯಡಿ ಸಂಸ್ಥೆಯ ಉಪಾಧ್ಯಕ್ಷ ಪದ್ಮರಾಜ ಪಟ್ಟಾಜೆ ಅವರು ಮೃತರ ಪುತ್ರ ಮನೋಜ್ ಆಳ್ವ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಬದಿಯಡ್ಕ ಪ್ರಾಂತೀಯ ವ್ಯವಸ್ಥಾಪಕ ಚಂದ್ರ ಎಂ. ಹಾಗೂ ಬದಿಯಡ್ಕ ಶಾಖೆಯ ವ್ಯವಸ್ಥಾಪಕ ಶ್ಯಾಮ ಪ್ರಶಾಂತ ಬಿ. ಉಪಸ್ಥಿತರಿದ್ದರು.

ಬಡಗು ಶಬರಿಮಲೆ ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಳ | ರೂ.45 ಲಕ್ಷ ವೆಚ್ಚದಲ್ಲಿ ನಿರ್ಮಾಣ

ಮೇ 11ರಂದು ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ, ಮಹೋತ್ಸವ





ಕಾಸರಗೋಡು: ಜಿಲ್ಲೆಯ ಕುಂಬಳೆ ಸೀಮೆಯ ಕುಂಬ್ಡಾಜೆ ಗ್ರಾಮ ಪಂಚಾಯತ್‌ನ ಉಬ್ರಂಗಳ ಗ್ರಾಮದ ಪ್ರಕೃತಿ ರಮಣೀಯ ಪ್ರದೇಶದಲ್ಲಿ ನೆಲೆಯಾಗಿರುವ ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಸ್ಥಾನವು ಬಡಗು ಶಬರಿಮಲೆ ಎಂದೇ ಇತಿಹಾಸ ಪ್ರಸಿದ್ಧವಾಗಿದೆ.

ಪ್ರಸ್ತುತ ಕ್ಷೇತ್ರದಲ್ಲಿ ಮೇ 11ರಂದು ಸಂಜೆ 5 ಗಂಟೆಗೆ 101 ಚೆಂಡೆವಾದ್ಯಗಳೊಂದಿಗೆ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ ಹಾಗೂ ಶ್ರೀ ದೇವರ ಭವ್ಯ ಮಹೋತ್ಸವ ಜರಗಲಿದೆ ಎಂದು ಉತ್ಸವ ಆಚರಣಾ ಸಮಿತಿ ಅಧ್ಯಕ್ಷ ಹರಿನಾರಾಯಣ ಮಾಸ್ತರ್ ಶಿರಂತಡ್ಕ ಗುರುವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕಲಾಮಂಡಲ ರತೀಶ್ ನೇತೃತ್ವದಲ್ಲಿ 101 ಚೆಂಡೆವಾದ್ಯ ನಡೆಯಲಿದೆ. ಹಿತ್ತಾಳೆ ಕವಚದ ಮೆಟ್ಟಿಲು ಹಾಗೂ ಇನ್ನಿತರವುಗಳಿಗಾಗಿ ಸುಮಾರು 45 ಲಕ್ಷ ರೂ. ವೆಚ್ಚ ತಗುಲಿದೆ. ದಾನಿಗಳ ರೂಪದಲ್ಲಿ ಲಭಿಸಿದ ಮೊತ್ತದಿಂದ ಹಿತ್ತಾಳೆ ಕವಚದ ಮೆಟ್ಟಿಲನ್ನು ನಿರ್ಮಿಸಲಾಗಿದೆ. ಈ ಕ್ಷೇತ್ರಕ್ಕೆ ಸುಮಾರು 2 ಸಾವಿರ ವರ್ಷಗಳ ಐತಿಹ್ಯವಿದೆ.

ಮೇ 11ರಂದು ಸಂಜೆ 5 ಗಂಟೆಗೆ ನಡೆಯುವ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶರಾದ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನದ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಕರಕಮಲ ಸಂಜಾತರಾದ ಜಗದ್ಗುರು ಶಂಕರಾಚಾರ್ಯ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು, ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಉದ್ಘಾಟಿಸಿ ಆಶೀರ್ವಚನ ನೀಡುವರು.

ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿ, ಶ್ರೀ ಕ್ಷೇತ್ರದ ಗೌರವ ಸಲಹೆಗಾರರಾದ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ, ಶಬರಿಮಲೆ ಪಂದಳಂ ಅರಮನೆಯ ಶ್ರೀ ನಾರಾಯಣ ವರ್ಮ, ಶ್ರೀ ಕ್ಷೇತ್ರದ ದೈವಜ್ಞರಾದ ಕೆ.ಸಿ.ನಾಗೇಂದ್ರ ಭಾರಧ್ವಾಜ್ ಸುರತ್ಕಲ್, ಹಿರಿಯ ಗುರುಸ್ವಾಮಿಗಳಾದ ರಾಮ ಗುರುಸ್ವಾಮಿ ಉದಯಗಿರಿ, ದಾನಿಗಳಾದ ತಾಳಿಪ್ಪಾಡಿ ಜಾಹ್ನವಿ ಶಾಸ್ತ್ರಿ ಬೆಂಗಳೂರು, ದಾರವಾಡದ ಹೆಸ್ಕಾಂನ ತಾಂತ್ರಿಕ ನಿರ್ದೇಶಕ ಎಸ್.ಜಗದೀಶ್, ಶ್ರೀಕ್ಷೇತ್ರದ ಆಡಳಿತ ಮೊಕ್ತೇಸರರಾದ ಡಾ.ಕಿಶೋರ್‌ಕುಮಾರ್ ಕುಣಿಕುಳ್ಳಾಯ ಸಹಿತ ಹಲವಾರು ಗಣ್ಯರು ಉಪಸ್ಥಿತರಿರುವರು.

ಶ್ರೀ ದೇವರ ಮಹೋತ್ಸವ

ಸಂಜೆ 6.30ರ ಶುಭ ಮುಹೂರ್ತದಲ್ಲಿ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ದ್ವಾರಪೂಜೆ, ಲೋಕಾರ್ಪಣೆ ಹಾಗೂ ರಾತ್ರಿ 8 ಗಂಟೆಗೆ ಶ್ರೀ ದೇವರ ಮಹೋತ್ಸವ ಮತ್ತು ಭೋಜನ ಪ್ರಸಾದ ವಿತರಣೆ ನಡೆಯಲಿದೆ ಎಂದು ಅವರು ತಿಳಿಸಿದರು.

ಗೋಷ್ಠಿಯಲ್ಲಿ ಶ್ರೀ ಕ್ಷೇತ್ರದ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ಕಿರಣ್ ಕುಮಾರ್ ಕುಣಿಕುಳ್ಳಾಯ, ಪ್ರಚಾರ ಸಮಿತಿ ಅಧ್ಯಕ್ಷ ರಾಜೇಶ್ ಮಾಸ್ಟರ್ ಅಗಲ್ಪಾಡಿ, ಗೋವಿಂದರಾಜ್ ಮೈಲ್ತೊಟ್ಟಿ ಉಪಸ್ಥಿತರಿದ್ದರು.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಶುಕ್ರವಾರ 08, ಮೇ 2026

ಸುತ್ತ ಮುತ್ತ

ಉಡುಪಿ ಯುವ ಕಾಂಗ್ರೆಸ್ ಉಪಾಧ್ಯಕ್ಷರಾಗಿ ಅಕ್ಷತ್ ಪೈ ನೇಮಕ



ಉಡುಪಿ: ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ಸಂಘಟನೆಯನ್ನು ಬಲಗೊಳಿಸುವುದು ಹಾಗೂ ರಾಜ್ಯಾದ್ಯಂತ ಸಂಘಟನೆಯನ್ನು ಸಕ್ರಿಯಗೊಳಿಸುವ ಉದ್ದೇಶದಿಂದ ಉಡುಪಿ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಗೆ ಹೊಸ ನೇಮಕಾತಿ ಮಾಡಲಾಗಿದೆ. ಅಖಿಲ ಭಾರತ ಯುವ ಕಾಂಗ್ರೆಸ್ ಅಧ್ಯಕ್ಷರಾದ ಉದಯ್ ಭಾನು ಚಿಬ್ ಅವರ ನಿರ್ದೇಶನದಂತೆ ಹಾಗೂ ಅಖಿಲ ಭಾರತ ಯುವ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ಉಸ್ತುವಾರಿ ನಿಗಮ್ ಭಂಡಾರಿ ಅವರ ಅನುಮೋದನೆಯೊಂದಿಗೆ, ಅಕ್ಷತ್ ಪೈ ಅವರನ್ನು ಉಡುಪಿ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಜಿಲ್ಲಾ ಉಪಾಧ್ಯಕ್ಷರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಹೊಸ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಅಕ್ಷತ್ ಪೈ ಅವರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ರಾಜ್ಯ ಅಧ್ಯಕ್ಷ ಮಂಜುನಾಥ್ ಗೌಡರ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಯುವ ಕಾಂಗ್ರೆಸ್ ಉಸ್ತುವಾರಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಹಿರಿಯ ಮುಖಂಡರ ಮಾರ್ಗದರ್ಶನದಲ್ಲಿ ಸ್ಥಳೀಯ ನಾಯಕರ ಸಹಕಾರದೊಂದಿಗೆ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವುದಾಗಿ ತಿಳಿಸಿದ್ದಾರೆ.

ಮೇ 18ರವರೆಗೆ ಬಾಲಭವನದಲ್ಲಿ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ

ಉಡುಪಿ: ನಗರದ ಬ್ರಹ್ಮಗಿರಿಯ ಜಿಲ್ಲಾ ಬಾಲಭವನದಲ್ಲಿ ಮೇ 18ರವರೆಗೆ ಬೆಳಗ್ಗೆ 9.30 ರಿಂದ ಅಪರಾಹ್ನ 1 ಗಂಟೆಯವರೆಗೆ 5 ರಿಂದ 16 ವರ್ಷದೊಳಗಿನ ಮಕ್ಕಳಿಗೆ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಕಲೆಗಳಾದ ಯೋಗ, ಚಿತ್ರಕಲೆ, ಕರಾಟೆ, ಕರಕುಶಲ, ನೃತ್ಯ ಹಾಗೂ ವ್ಯಕ್ತಿತ್ವ ವಿಕಸನ ಕುರಿತು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಲಾಗುವುದು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಬಾಲಭವನ, ಬ್ರಹ್ಮಗಿರಿ, ಉಡುಪಿ ದೂ.ಸಂಖ್ಯೆ: 0820-2574978 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಮಳೆಯ ಕಳೆ!

ಪ್ರತಿ ಮಳೆಗಾಲದಲ್ಲೂ ಹೆದ್ದಾರಿಯ ಮೇಲ್ಭಾಗದಿಂದ ಹರಿದು ಬರುವ ನೀರು ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ರಸ್ತೆಗಳು ಹಾಗೂ ಮನೆಗಳ ಒಳಭಾಗಕ್ಕೆ ನುಗ್ಗಿ ನಿವಾಸಿಗಳಿಗೆ ತೊಂದರೆ ಉಂಟುಮಾಡುತ್ತಿದೆ. ಪ್ರದೇಶದಲ್ಲಿ ಹಲವು ಬಡಾವಣೆಗಳು ಹಾಗೂ ಅನೇಕ ಮನೆಗಳು ಇದ್ದರೂ ಮಳೆ ನೀರು ಸರಾಗವಾಗಿ ಹರಿದು ಹೋಗಲು ಸಮರ್ಪಕ ವ್ಯವಸ್ಥೆ ಕಲ್ಪಿಸಲಾಗಿಲ್ಲ ಎಂದು ನಿವಾಸಿಗಳು ಆರೋಪಿಸಿದ್ದಾರೆ.

ಇದರ ಕುರಿತು ಹಲವು ಬಾರಿ ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಆಚಿಕಾರ್ಪೊರೇಟರ್ ಬಜೆಟ್ ಇಲ್ಲಬಿಟಿ ಎಂಬ ಉತ್ತರ ಮಾತ್ರ ದೊರಕುತ್ತಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಚುನಾಯಿತ ಆಡಳಿತವೂ ಇಲ್ಲದ ಪರಿಸ್ಥಿತಿಯಲ್ಲಿ ಸಮಸ್ಯೆ ಮತ್ತಷ್ಟು ನಿರ್ಲಕ್ಷ್ಯಕ್ಕೊಳಗಾಗಿದೆ ಎನ್ನಲಾಗಿದೆ.

ಆಶ್ಚರ್ಯದ ಸಂಗತಿಯೇನೆಂದರೆ, ಸಮೀಪದಲ್ಲೇ ರಾಜಕಾಲುವೆ ಇದ್ದರೂ ಮಳೆ ನೀರನ್ನು ಅದಕ್ಕೆ ಸಂಪರ್ಕಿಸುವ ವ್ಯವಸ್ಥೆ ಮಾಡಲಾಗಿಲ್ಲ. ಪರಿಣಾಮವಾಗಿ ಪ್ರತೀ ಬಾರಿ ಭಾರೀ ಮಳೆಯಾದಾಗ ಕೃತಕ ನೆರೆ ಪರಿಸ್ಥಿತಿ ನಿರ್ಮಾಣವಾಗಿ ಮನೆಗಳಿಗೆ ನೀರು ನುಗ್ಗುವ ಭೀತಿ ಎದುರಾಗುತ್ತಿದೆ. ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ, ಸಮರ್ಪಕ ಚರಂಡಿ ನಿರ್ಮಾಣ ಹಾಗೂ ರಾಜಕಾಲುವೆಗೆ ಸಂಪರ್ಕ ಕಲ್ಪಿಸುವ ಮೂಲಕ ಶಾಶ್ವತ ಪರಿಹಾರ ಒದಗಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಸೇತುವೆ

ಆದಾದ ಬಳಿಕ ಕೇವಲ 180 ದಿನಗಳಲ್ಲಿ ಬಹು ಬೇಡಿಕೆಯ 30 ಮೀಟರ್ ಉದ್ದ ಹಾಗೂ 6.4 ಅಗಲದ ಸೇತುವೆ ನಿರ್ಮಾಣ ಕಾಮಗಾರಿಯನ್ನು ಕುಂದಾಪುರ ತಾಲೂಕಿನ ಸೂರ್ಯಕಾಂತ್ ಎಂಬ ಗುತ್ತಿಗೆದಾರ ಸಮಯಕ್ಕೆ ಸರಿಯಾಗಿ ಕಾಮಗಾರಿ ಮುಕ್ತಾಯಗೊಳಿಸಿದ್ದು ಮಳೆಗಾಲ ಪೂರ್ವವೇ ಸುಂದರವಾದ ಸೇತುವೆ ಉದ್ಘಾಟನೆಗೆ ಸಿದ್ದಗೊಂಡಿದೆ.
ಈ ಹಿಂದೆ 2024ರ ಆ.18 ರಂದು ಇಲ್ಲಿನ ಶಿಥಿಲವಾದ ತೂಗು ಸೇತುವೆಯಲ್ಲಿ ಮರ್ಕಂಜದಲ್ಲಿ ಕೆಲಸ ಮುಗಿಸಿ ವಾಪಸ್ಸಾಗುತ್ತಿದ್ದಾಗ ರೂಪ್ ತುಂಡಾಗಿ ಮೂವರು ಕೆಳಕ್ಕೆ ಬಿದ್ದು ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದರು.
ಜನರ ಬಹು ಬೇಡಿಕೆಯ ಸೇತುವೆ ನಿರ್ಮಾಣಕ್ಕೆ ಪ್ರಥಮ ಆದ್ಯತೆಯಾಗಿ ಎರಡು ಗ್ರಾಮಗಳ ಸಂಪರ್ಕಿತ ಅರಮನೆಗಯ ಎಂಬಲ್ಲಿ ಸೇತುವೆ ನಿರ್ಮಿಸಲು ರೂ.175 ಲಕ್ಷ ಮೊತ್ತದಲ್ಲಿ ಉತ್ತಮವಾದ ಸೇತುವೆಯನ್ನು ನಿರ್ಮಿಸಲಾಗಿದ್ದು ಕಾಮಗಾರಿ ಇದೀಗ ಪೂರ್ಣಗೊಂಡಿದೆ.
ತಾಲೂಕಿನಲ್ಲಿ ಸಾರ್ವಜನಿಕರ ಆದ್ಯತೆ ಮೇರೆಗೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುತ್ತಿದ್ದು ಕ್ಷೇತ್ರದ ಅಭಿವೃದ್ಧಿಗೆ ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಅಭಿವೃದ್ಧಿ ಮಾಡಲಾಗುವುದು ಎಂದು ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ತಿಳಿಸಿದ್ದಾರೆ.

ಉಡುಪಿ ಜಿಲ್ಲೆಯಲ್ಲಿ ಕಳ್ಳತನ ಪ್ರಕರಣ ಕಡಿವಾಣಕ್ಕೆ 'ಲಾಕ್ಡ್ ಹೌಸ್ ಬೀಟ್ ಸಿಸ್ಟಮ್' ಯೋಜನೆ ಜಾರಿ

ಬೀಗ ಹಾಕಿದ ಮನೆಯ ಸುರಕ್ಷತೆ ಹೊಣೆ ಪೊಲೀಸ್ ಇಲಾಖೆಗೆ

ಸಾಂದರ್ಭಿಕ ಚಿತ್ರ



ಉಡುಪಿ: ಜಿಲ್ಲೆಯಾದ್ಯಂತ ಕಳವು ಹಾಗೂ ದರೋಡೆ ಪ್ರಕರಣಗಳಿಗೆ ಕಡಿವಾಣ ಹಾಕಲು ಜಿಲ್ಲಾ ಪೊಲೀಸ್ ಇಲಾಖೆಯು ಅತ್ಯಂತ ಸಮಯೋಚಿತ ಹಾಗೂ ವಿನೂತನವಾದ 'ಲಾಕ್ಡ್ ಹೌಸ್ ಬೀಟ್ ಸಿಸ್ಟಮ್' (ಎಲ್‌ಎಚ್‌ಬಿಎಸ್) ಎನ್ನುವ ವಿಶೇಷ ಸುರಕ್ಷತಾ ಯೋಜನೆಯನ್ನು ಜಾರಿಗೆ ತಂದಿದೆ.

ಬೀಗ ಹಾಕಿದ ಮನೆಗಳೇ ಕಳ್ಳರ ಗುರಿ

ಸಾಮಾನ್ಯವಾಗಿ ಹಬ್ಬದ ಸೀಸನ್, ಬೇಸಿಗೆ ರಜೆ ಅಥವಾ ಸುದೀರ್ಘ ಪ್ರವಾಸದ ಸಂದರ್ಭದಲ್ಲಿ ಸಾರ್ವಜನಿಕರು ತಮ್ಮ ಮನೆಗಳಿಗೆ ಬೀಗ ಹಾಕಿ ಹೊರಗಡೆ ಹೋದಾಗ, ಅಂತಹ ಮನೆಗಳನ್ನೇ ಕಳ್ಳರು ಗುರಿಯಾಗಿಸುತ್ತಾರೆ. ಇಂತಹ ಆತಂಕವನ್ನು ದೂರ ಮಾಡಿ ಜನರು ನಿರಾತಂಕವಾಗಿ ಪ್ರವಾಸ ಕೈಗೊಳ್ಳುವಂತೆ ಮಾಡಲು ಉಡುಪಿ ಜಿಲ್ಲಾ ಪೊಲೀಸರು ಈಗ ನಿಮ್ಮ ಮನೆಯ ಕಾವಲುಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ. ಈ ವ್ಯವಸ್ಥೆಯು ಕೇವಲ ತಾಂತ್ರಿಕ ಪ್ರಕ್ರಿಯೆಯಾಗಿ ಉಳಿಯದೆ, ಸಾರ್ವಜನಿಕರು ಮತ್ತು ಪೊಲೀಸ್ ಇಲಾಖೆಯ ನಡುವೆ ನಂಬಿಕೆಯನ್ನು ವೃದ್ಧಿಸುವ ದಟ್ಟವಾದ ಸೇತುವೆಯಾಗಿ ಹೊರಹೊಮ್ಮುತ್ತಿದೆ.

ಹೇಗೆ ಕಾರ್ಯನಿರ್ವಹಿಸಲಿದೆ ಈ ಸಿಸ್ಟಂ

ಈ ಯೋಜನೆಯ ಅಡಿಯಲ್ಲಿ ಸಾರ್ವಜನಿಕರು ಕೆಲಸದ ನಿಮಿತ್ತ ಅಥವಾ ಪ್ರವಾಸಕ್ಕಾಗಿ ಅನಿವಾರ್ಯವಾಗಿ ಮನೆಯನ್ನು ಲಾಕ್ ಮಾಡಿ ಹೊರಗೆ ಹೋದಾಗ, ಇಲಾಖೆಯು ನೀಡಿದ ವಿಶೇಷ ದೂರವಾಣಿ ಸಂಖ್ಯೆ 0820-2526709 ಗೆ ಕರೆ ಮಾಡುವ ಮೂಲಕ ತಮ್ಮ ಮನೆಯ ಮಾಹಿತಿಯನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ ತಕ್ಷಣ, ಸಾರ್ವಜನಿಕರಿಗೆ ಒಂದು ವಿಶೇಷ ವಾಟ್ಸಾಪ್ ಸಂಖ್ಯೆಯನ್ನು ನೀಡಲಾಗುತ್ತದೆ. ಆ ಸಂಖ್ಯೆಗೆ ಮನೆಯ ಮಾಲೀಕರು ತಾವು ಮನೆಯಿಂದ ಹೊರಡುವ ಮತ್ತು ಮರಳಿ ಬರುವ ದಿನಾಂಕ ಹಾಗೂ ಸಮಯದ ಜೊತೆಗೆ ಮನೆಯ ನಿಖರವಾದ ವಿಳಾಸವನ್ನು ಕಳುಹಿಸಬೇಕಾಗುತ್ತದೆ. ಮುಖ್ಯವಾಗಿ, ಗೊಂದಲಗಳಿಲ್ಲದೆ ಮನೆಯನ್ನು ಪತ್ತೆಹಚ್ಚಲು ಮನೆಯ ಮುಂಭಾಗದಲ್ಲಿ ನಿಂತು ತೆಗೆದ ಒಂದು ಸೆಲ್ಫಿ ಫೋಟೋ ಹಂಚಿಕೊಳ್ಳುವುದು ಈ ಯೋಜನೆಯ ವಿಶೇಷ ಹಾಗೂ ಕಡ್ಡಾಯ ಅಂಶವಾಗಿದೆ.

ಯಾರಿಗೆಲ್ಲ ಇದರ ಪ್ರಯೋಜನ?

ಈ ಸೌಲಭ್ಯ ಬಳಸಿಕೊಳ್ಳುವಾಗ ಕೆಲವು ನಿಯಮಗಳನ್ನು ಪಾಲಿಸುವುದು ಅತ್ಯಗತ್ಯವಾಗಿದೆ. ಈ ವಿಶಿಷ್ಟ ಭದ್ರತಾ ವ್ಯವಸ್ಥೆಯು ಕೇವಲ ಸ್ವಂತ ಅಥವಾ ವೈಯಕ್ತಿಕ ಮನೆಗಳಿಗೆ ಮಾತ್ರ ಸೀಮಿತವಾಗಿದ್ದು, ಬಹುಮಹಡಿ ಫ್ಲ್ಯಾಟ್‌ಗಳಿಗೆ ಅಥವಾ ಅಪಾರ್ಟ್‌ಮೆಂಟ್‌ಗಳಿಗೆ ಅನ್ವಯಿಸುವುದಿಲ್ಲ. ಏಕೆಂದರೆ ಅಪಾರ್ಟ್‌ಮೆಂಟ್‌ಗಳಲ್ಲಿ ಸಾಮಾನ್ಯವಾಗಿ ಖಾಸಗಿ ಭದ್ರತಾ ಸಿಬ್ಬಂದಿ ಇರುತ್ತಾರೆ. ಇನ್ನು ಸುರಕ್ಷತೆಯ ದೃಷ್ಟಿಯಿಂದ ಸಾರ್ವಜನಿಕರು ಯಾವುದೇ ಅಧಿಕೃತವಲ್ಲದ ಅಥವಾ ಅಪರಿಚಿತ ಸಂಖ್ಯೆಗಳೊಂದಿಗೆ ತಮ್ಮ ಮನೆಯ ವಿವರಗಳನ್ನು ಹಂಚಿಕೊಳ್ಳಬಾರದು ಎಂದು ಪೊಲೀಸ್ ಇಲಾಖೆ ಎಚ್ಚರಿಸಿದೆ. ಒಟ್ಟಾರೆಯಾಗಿ, ಉಡುಪಿ ಜಿಲ್ಲಾ ಪೊಲೀಸರ ಈ ಲಾಕ್ಡ್ ಹೌಸ್ ಬೀಟ್ ಸಿಸ್ಟಮ್ ತಂತ್ರಜ್ಞಾನ ಮತ್ತು ಸಾಂಪ್ರದಾಯಿಕ ಬೀಟ್ ಪದ್ಧತಿಯನ್ನು ಬೆಸೆದಿದ್ದು, ಜನಸ್ನೇಹಿ ಪೊಲೀಸ್ ವ್ಯವಸ್ಥೆಗೆ ಉತ್ತಮ ಉದಾಹರಣೆಯಾಗಿದೆ. ಪ್ರವಾಸಕ್ಕೆ ತೆರಳುವ ಮುನ್ನ ಪೊಲೀಸರಿಗೆ ಒಂದು ಕರೆ ಮಾಡಿದರೆ, ನಿಮ್ಮ ಮನೆ ಸುರಕ್ಷಿತವಾಗಿರಲಿದೆ ಎನ್ನುವ ಭರವಸೆ ಈಗ ಜಿಲ್ಲೆಯ ಜನರಿಗಿದೆ.

ಮಾಹಿತಿ ಸಿಕ್ಕ ಬಳಿಕ ಮುಂದೇನು?

ಹೀಗೆ ಸ್ವೀಕರಿಸಿದ ಮಾಹಿತಿಯನ್ನು ತಕ್ಷಣವೇ ಆಯಾ ಭಾಗದ ಪೊಲೀಸ್ ಠಾಣೆಗೆ ಹಾಗೂ ಸಂಬಂಧಿತ ಬೀಟ್ ಸಿಬ್ಬಂದಿಗೆ ವರ್ಗಾಯಿಸಲಾಗುತ್ತದೆ. ಮಾಹಿತಿ ಪಡೆದ ಬೀಟ್ ಸಿಬ್ಬಂದಿಯು ಅಂತಹ ಮನೆಗಳ ಮೇಲೆ ವಿಶೇಷ ನಿಗಾ ಇರಿಸುವುದಲ್ಲದೆ, ಹಗಲು ಮತ್ತು ರಾತ್ರಿ ವೇಳೆ ಆ ಮನೆಗೆ ಭೇಟಿ ನೀಡಿ ಭದ್ರತೆ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುತ್ತಾರೆ. ಈ ವ್ಯವಸ್ಥೆಯು ಕಳ್ಳರಿಗೆ ಎಚ್ಚರಿಕೆಯಾಗಿದ್ದು ಪೊಲೀಸರ ನಿರಂತರ ಭೇಟಿಯಿಂದ ಅಪರಾಧ ಚಟುವಟಿಕೆಗಳಿಗೆ ತಡೆಯುಂಟಾಗುತ್ತದೆ. ಜಿಲ್ಲಾ ಪೊಲೀಸ್ ಅಧೀಕ್ಷಕರ ನೇರ ಮಾರ್ಗದರ್ಶನದಲ್ಲಿ ನಡೆಯುವ ಈ ಯೋಜನೆಯು ಜಿಲ್ಲೆಯಾದ್ಯಂತ ಸಾರ್ವಜನಿಕರಲ್ಲಿ ಸುರಕ್ಷತಾ ಭಾವನೆಯನ್ನು ಮೂಡಿಸಿದೆ.

ಬಂಟಕಲ್ಲು ವಿದ್ಯಾರ್ಥಿಗಳಿಂದ ಇ-ತ್ಯಾಜ್ಯ ಸಂಗ್ರಹ ಅಭಿಯಾನ ಯಶಸ್ವಿ



ಶಿರ್ವ: ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ರೆಡ್ ಕ್ರಾಸ್ ಘಟಕವು ನಿರಂತರ ಎರಡನೇ ವರ್ಷದ ವಾರ್ಷಿಕ ಇ- ತ್ಯಾಜ್ಯ ಸಂಗ್ರಹ ಅಭಿಯಾನವನ್ನು ಯಶಸ್ವಿಯಾಗಿ ನಡೆಸಿತು.

500 ಕೆಜಿಗೂ ಅಧಿಕ ಸಂಗ್ರಹ

ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ರೆಡ್‌ಕ್ರಾಸ್ ಘಟಕವು ಈ ಅಭಿಯಾನದಲ್ಲಿ ಸುಮಾರು 500 ಕಿಲೋ ಗ್ರಾಂಗೂ ಹೆಚ್ಚು ಇ-ತ್ಯಾಜ್ಯವನ್ನು ಸಂಗ್ರಹಿಸಿರುವ ಮಹತ್ವದ ಮೈಲಿಗಲ್ಲನ್ನು ತಲುಪಿದೆ. ಸಂಗ್ರಹಿಸಲಾದ ಇ-ತ್ಯಾಜ್ಯವನ್ನು ಮಾನ್ಯತೆ ಪಡೆದ ಮರುಬಳಕೆಯ ಸಂಸ್ಥೆಗೆ ಹಸ್ತಾಂತರಿಸಲಾಗಿದ್ದು ಸುರಕ್ಷತೆ ಮತ್ತು ಪರಿಸರ ಸ್ನೇಹಿ ವಿಲೇವಾರಿ ಕ್ರಮವನ್ನು ಕೈಗೊಂಡಿದೆ. ಅನಿಯಂತ್ರಿತ ಇ- ತ್ಯಾಜ್ಯ ವಿಲೇವಾರಿಯಿಂದ ಉಂಟಾಗುವ ಹಾನಿಕಾರಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಶಾಶ್ವತ ಪರಿಸರ ಸ್ನೇಹಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿ ಸ್ವಯಂಸೇವಕರು ಇ - ತ್ಯಾಜ್ಯ ಮರುಬಳಕೆಯ ವಿಧಾನಗಳು ಮತ್ತು ತ್ಯಾಜ್ಯವನ್ನು ಕಡಿಮೆಮಾಡುವ ಆಗತ್ಯತೆಯ ಕುರಿತು ಜಾಗೃತಿ ಮೂಡಿಸಿದರು.

ಶಿಬಿರದಲ್ಲಿ 74 ಮಂದಿಗೆ ಸುಮಾರು 50 ಸಾವಿರ ರೂ. ಮೌಲ್ಯದ ಕನ್ನಡಕ ವಿತರಣೆ



ಕುಂದಾಪುರ: ನಮ್ಮ ನೆಮ್ಮದಿಯ ಜೀವನಕ್ಕೆ ಆರೋಗ್ಯ ಮುಖ್ಯ. ಆದರಲ್ಲೂ ಕಣ್ಣಿನ ಸುರಕ್ಷತೆಯ ಕಡೆ ನಾವೆಲ್ಲಾ ಆಗತ್ಯ ಗಮನ ಹರಿಸಲೇ ಬೇಕು. ನಾವುಂದದ ಹಿಂದೂ ಅಭ್ಯುದಯ ಸಂಘದವರು, ಕಣ್ಣಿನ ತಪಾಸಣೆಯ ಬಗ್ಗೆ ಒತ್ತು ನೀಡಿ, ಪ್ರತೀ ವರ್ಷ ಉಚಿತ ನೇತ್ರ ಚಿಕಿತ್ಸಾ ಶಿಬಿರ ಏರ್ಪಡಿಸಿ, ನೂರಾರು ಜನರಿಗೆ ತುಂಬಾ ಅನುಕೂಲ ಮಾಡಿ ಕೊಡುತ್ತಿರುವುದು ನಿಜಕ್ಕೂ ಪ್ರಶಂಸನೀಯ. ಎಂದು ಮರವಂತೆ-ಬಡಾಕೆರೆ ವ್ಯವಸಾಯ ಸೇವಾ ಸಹಕಾರಿ ಸಂಘ ನಾವುಂದ ಇದರ ಅಧ್ಯಕ್ಷ ಜಗದೀಶ ಪೂಜಾರಿ ಹಕ್ಲಾಡಿ ಹೇಳಿದರು.

ಹಿಂದೂ ಅಭ್ಯುದಯ ಸಂಘ ನಾವುಂದ, ಮರವಂತೆ- ಬಡಾಕೆರೆ ವ್ಯವಸಾಯ ಸೇವಾ ಸಹಕಾರಿ ಸಂಘ ನಾವುಂದ ಮತ್ತು ಪಾರ್ವತಿ ಮಹಾಬಲ ಶೆಟ್ಟಿ ಸ್ಮಾರಕ ಕಣ್ಣಿನ ಆಸ್ಪತ್ರೆ, ಶಿರೂರು-ಮುದ್ದುಮನೆ ಇವರ ಜಂಟಿ ಆಶ್ರಯದಲ್ಲಿ ನಾವುಂದದ ಶ್ರೀ ಮಹಾಗಣಪತಿ ಮಾಂಗಲ್ಯ ಮಂಟಪದಲ್ಲಿ ನಡೆದ ಉಚಿತ ಕನ್ನಡಕಗಳ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಹಿಂದೂ ಅಭ್ಯುದಯ ಸಂಘದ ಹಿರಿಯ ಸದಸ್ಯ ಎನ್. ಸಂಜೀವ ಗಾಣಿಗ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮರವಂತೆ-ಬಡಾಕೆರೆ ವ್ಯವಸಾಯ ಸಂಘದ ನಿರ್ದೇಶಕ ರಾಮ ಕಂಚಿಕೊಂಡ ಮತ್ತು ಪಾರ್ವತಿ ಮಹಾಬಲ ಶೆಟ್ಟಿ ಸ್ಮಾರಕ ಕಣ್ಣಿನ ಆಸ್ಪತ್ರೆಯ ನೇತ್ರ ತಪಾಸಕ ರವಿ ಇದ್ದರು. ಮರವಂತೆ-ಬಡಾಕೆರೆ ವ್ಯವಸಾಯ ಸೇವಾ ಸಹಕಾರಿ ಸಂಘದ ಸಹಕಾರದಿಂದ 74 ಜನರಿಗೆ ಸುಮಾರು 50 ಸಾವಿರ ರೂಪಾಯಿ ಮೌಲ್ಯದ ಕನ್ನಡಕಗಳನ್ನು ಉಚಿತವಾಗಿ ವಿತರಿಸಲಾಯಿತು. ಕಾರ್ಯದರ್ಶಿ ಎ. ಶಿವರಾಮ ಮಧ್ಯಸ್ಥ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಸಂಘದ ಕಾರ್ಯಕಾರಿ ಮಂಡಳಿಯ ಸದಸ್ಯ ವಿಘ್ನೇಶ್ವರ ಜೋಯಿಸ್ ವಂದಿಸಿದರು. ಸುರೇಶ ಸುವರ್ಣ ಮತ್ತು ಜಿತೇಶ್ ಕೆ. ಪೂಜಾರಿ ಸಹಕರಿಸಿದರು.

ಎಸ್‌ಸಿಡಿಸಿಸಿ ಬ್ಯಾಂಕಿನ ಗಂಗೊಳ್ಳಿ ಶಾಖೆಯ ವ್ಯವಸ್ಥಾಪಕರಿಗೆ ಬೀಳ್ಕೊಡುಗೆ



ಕುಂದಾಪುರ: ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಗಂಗೊಳ್ಳಿ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ, ಇದೀಗ ಪದೋನ್ನತಿಗೊಂಡು ವರ್ಗಾವಣೆಗೊಂಡಿರುವ ಸುಬ್ರಹ್ಮಣ್ಯ ಬಾಯಿರಿ ಅವರಿಗೆ ಶಾಖೆಯ ವತಿಯಿಂದ ಬ್ಯಾಂಕಿನ ಆವರಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಎ.ಜಿ.ಎಂ. ಮೋಹನ್ ದಾಸ್ ಹೆಬ್ಬಾರ್, ಶಾಖಾ ನಿರೀಕ್ಷಕ ರಾಘವೇಂದ್ರ ಉಡುಪ, ತ್ರಾಸಿ ಶಾಖೆಯ ವ್ಯವಸ್ಥಾಪಕ ವೆಂಕಟೇಶ್ ಬಿಲ್ಲವ, ಗಂಗೊಳ್ಳಿ ಶಾಖೆಯ ನೂತನ ವ್ಯವಸ್ಥಾಪಕ ಗಣೇಶ್ ಭಟ್ ಹಾಗೂ ಕಟ್ಟಡದ ಮಾಲೀಕ ವೆಂಕಟೇಶ ಮಲ್ಯ, ಬ್ಯಾಂಕಿನ ಹಿತೈಷಿಗಳು, ಗ್ರಾಹಕರು ಮೊದಲಾದವರು ಉಪಸ್ಥಿತರಿದ್ದರು.

ಬ್ಯಾಂಕಿನ ಸಿಬ್ಬಂದಿ ಸುರೇಂದ್ರ ಸ್ವಾಗತಿಸಿದರು. ಗಣೇಶ್ ಭಟ್ ವಂದಿಸಿದರು. ಬ್ಯಾಂಕಿನ ಸಿಬ್ಬಂದಿ ವಿಕ್ರಮ್ ತಗ್ಗರ್ಸೆ ನಿರೂಪಿಸಿದರು.

ಬಿಎಸ್‌ವೈ ಅಭಿಮಾನೋತ್ಸವ: ಕುಂದಾಪುರ ಬಿಜೆಪಿ ಮಂಡಲದ ಸಭೆ



ಕುಂದಾಪುರ: ಕರ್ನಾಟಕ ರಾಜ್ಯದ ರೈತಾಪಿ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ರಾಜಕೀಯ ಜೀವನದ 50 ವರ್ಷ ಪೂರೈಸಿದ ಹಿನ್ನೆಲೆ ಚಿತ್ರದುರ್ಗದದಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವದ ಕಾರ್ಯಕ್ರಮದ ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪೂರ್ವಭಾವಿ ಸಭೆ ಬಿಜೆಪಿ ಕುಂದಾಪುರ ಮಂಡಲ ಕಚೇರಿಯಲ್ಲಿ ಬುಧವಾರ ನಡೆಯಿತು.

ಕುಂದಾಪುರ ಬಿಜೆಪಿ ಕ್ಷೇತ್ರಾಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಅಧ್ಯಕ್ಷತೆ ವಹಿಸಿದ್ದರು. ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಜಯ ಗಳಿಸಿರುವುದು ದೇಶದ ಕಾರ್ಯಕರ್ತರ ಗೆಲುವಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಬೀಜಾಡಿ ಮೀನುಗಾರಿಕಾ ಸೊಸೈಟಿ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ನಾಗೇಶ್ ಬೀಜಾಡಿ ಅವರನ್ನು ಭಾರತೀಯ ಜನತಾ ಪಾರ್ಟಿಯ ವತಿಯಿಂದ ಸನ್ಮಾನಿಸಲಾಯಿತು. ಮಂಡಲ ನಿಕಟ ಪೂರ್ವ ಅಧ್ಯಕ್ಷ ಶಂಕರ ಅಂಕದಕಟ್ಟೆ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಕಾಡೂರು ಸುರೇಶ್ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಸದಾನಂದ ಬಳ್ಕೂರು, ಮಂಡಲ ಉಪಾಧ್ಯಕ್ಷ ಪ್ರಕಾಶ್ ಜಿ. ಪೂಜಾರಿ, ಮಂಡಲದ ಪದಾಧಿಕಾರಿಗಳು, ವಿವಿಧ ಮೋರ್ಚಾಗಳ ಪದಾಧಿಕಾರಿಗಳು, ತಾಲೂಕು, ಜಿ.ಪಂ., ಪುರಸಭೆ, ಪಟ್ಟಣ ಪಂಚಾಯತ್, ಗ್ರಾಮ ಪಂಚಾಯತ್‌ನ ಮಾಜಿ ಸದಸ್ಯರು, ಪಕ್ಷದ ಮುಖಂಡರು, ಇನ್ನಿತರರು ಉಪಸ್ಥಿತರಿದ್ದರು. ಮಂಡಲ ಪ್ರಧಾನ ಕಾರ್ಯದರ್ಶಿ ಸುರೇಶ್ ಕೆ. ಎಸ್. ಸ್ವಾಗತಿಸಿದರು. ಓಬಿಸಿ ಮೋರ್ಚಾ ಅಧ್ಯಕ್ಷ ಸುರೇಂದ್ರ ಕಾಂಚನ್ ವಂದಿಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಬಗ್ಗೆ ಚರ್ಚೆ

ಚಿತ್ರದುರ್ಗದದಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವದ ಕಾರ್ಯಕ್ರಮದಲ್ಲಿ ಕುಂದಾಪುರ ಮಂಡಲದಿಂದ ಕಾರ್ಯಕರ್ತರು ಭಾಗವಹಿಸುವಿಕೆ ಬಗ್ಗೆ ಸುರೇಶ್ ಶೆಟ್ಟಿ ಗೋಪಾಡಿ ಅಧ್ಯಕ್ಷತೆಯಲ್ಲಿ ಚರ್ಚಿಸಲಾಯಿತು.

ಗಂಗೊಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧೆಡೆ ಸ್ವಚ್ಛತಾ ಕಾರ್ಯ



ಕುಂದಾಪುರ: ಗ್ರಾಮ ಪಂಚಾಯತ್ ಗಂಗೊಳ್ಳಿ ವತಿಯಿಂದ ಗ್ರಾಪಂ. ವ್ಯಾಪ್ತಿಯ ವಿವಿಧೆಡೆಯಲ್ಲಿ ಸ್ವಚ್ಛತಾ ಕಾರ್ಯಕ್ರಮ ಬುಧವಾರ ನಡೆಯಿತು.

ಗ್ರಾಮ ಪಂಚಾಯತ್ ಅಧ್ಯಕ್ಷೆ ಜಯಂತಿ ಖಾರ್ವಿ, ಉಪಾಧ್ಯಕ್ಷ ತಬ್ರೇಜ್, ಪಿಡಿಒ ರವಿ, ಕಾರ್ಯದರ್ಶಿ ಅನುಪ್ ಶೇಟ್, ಗ್ರಾಮ ಪಂಚಾಯತ್ ಸಿಬ್ಬಂದಿಗಳು, ಸಂಜೀವಿನಿ ಸಂಘದ ಸದಸ್ಯರು, ಎಸ್.ಎಲ್.ಆರ್.ಎಂ ಘಟಕದ ಕಾರ್ಯಕರ್ತರು, ಸಿಬ್ಬಂದಿಗಳು ಮೊದಲಾದವರು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ರಸ್ತೆಗಳಲ್ಲಿ ಸ್ವಚ್ಛತಾ ಕಾರ್ಯ

ಗುಜ್ಜಾಡಿಯ ಬೆಣ್ಗೆರೆ ಕ್ರಾಸ್‌ನಿಂದ ಶ್ರೀ ರಾಮ ಮಂದಿರದವರೆಗೆ ಮುಖ್ಯರಸ್ತೆಯ ಇಕ್ಕೆಲಗಳಲ್ಲಿ ಬಿದ್ದಿದ್ದ ತ್ಯಾಜ್ಯಗಳನ್ನು ಸಂಗ್ರಹಿಸಿ ಸ್ವಚ್ಛಗೊಳಿಸಲಾಯಿತು.

5000 ರೂ. ದಂಡದ ಎಚ್ಚರಿಕೆ

ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಕಸ ಹಾಕಿದವರ ವಿರುದ್ಧ ಕಠಿಣ ಕ್ರಮ ವಹಿಸಲಾಗುವುದು ಮತ್ತು ಕಸ ಹಾಕಿದವರಿಗೆ 5000 ರೂ. ದಂಡ ವಿಧಿಸಲಾಗುವುದು ತಪ್ಪಿತಸ್ಥರ ಫೋಟೋ ಅಥವಾ ವೀಡಿಯೋ ಮೂಲಕ ಆಧಾರ ಸಹಿತ ನೀಡಿದ್ದಲ್ಲಿ ಪಂಚಾಯತ್‌ನಿಂದ ಸೂಕ್ತ ಬಹುಮಾನ ನೀಡಲಾಗುವುದು. ಮಾಹಿತಿ ನೀಡಿದವರ ವಿವರ ಗೌಪ್ಯವಿಡಲಾಗುವುದು. ತಪ್ಪದೇ ಪ್ಲಾಸ್ಟಿಕ್ ತ್ಯಾಜ್ಯವನ್ನು ಸ್ವಚ್ಛ ವಾಹಿನಿಗೆ ನೀಡಿ, ಪರಿಸರದ ಸ್ವಚ್ಛತೆ ಕಾಪಾಡಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅವರು ಈ ಸಂದರ್ಭ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಶ್ರಮದಾನ ಮೂಲಕ ನಿರ್ಮಿಸಿದ ದೈವಸ್ಥಾನದಲ್ಲಿ ಪುನರ್ ಪ್ರತಿಷ್ಠಾ ಕಾರ್ಯ



ಶಿರ್ವ: ಬೆಳ್ಳೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಡಂಬೈಲು ಇಲ್ಲಿ ಹಲವು ವರ್ಷಗಳಿಂದ ಸಂಪೂರ್ಣ ಜೀರ್ಣಾವಸ್ಥೆಯಲ್ಲಿದ್ದ ಕಾರಣಿಕ ತಾಣ ಶ್ರೀ ಮರಳು ಧೂಮಾವತಿ ದೈವಸ್ಥಾನವನ್ನು ಊರಿನ ಯುವ ಸಮುದಾಯದ ನೇತೃತ್ವದಲ್ಲಿ ಹತ್ತು ಸಮಸ್ತರು ಸೇರಿ ಬಹುತೇಕ ಕಾಮಗಾರಿಗಳನ್ನು ಶ್ರಮದಾನದ ಮೂಲಕವೇ ಪುನರ್ ನಿರ್ಮಾಣ ಮಾಡಲಾಗಿದೆ.

ಧಾರ್ಮಿಕ ಕಾರ್ಯಕ್ರಮ

ನೂತನ ಆಲಯದಲ್ಲಿ ಬುಧವಾರ ಪೂರ್ವಾಹ್ನ ಬ್ರಹ್ಮಕಲಶ ಅಧಿವಾಸ, ಅಧಿವಾಸ ಹೋಮ, ಚಂಡಿಕಾ ಯಾಗಾರಂಭ, ಶ್ರೀ ಮರಳು ಧೂಮಾವತಿ ದೈವದ ಪುನರ್ ಪ್ರತಿಷ್ಠೆ ಮತ್ತು ಬ್ರಹ್ಮಕಲಶಾಭಿಷೇಕ, ಚಂಡಿಕಾ ಯಾಗದ ಪೂರ್ಣಾಹುತಿ ಸಹಿತ ವಿವಿಧ ಧಾರ್ಮಿಕ ಅನುಷ್ಠಾನಗಳು, ವೇದಮೂರ್ತಿ ಅಂಡಾರು ವಿಶ್ವನಾಥ ತಂತ್ರಿಗಳ ನೇತೃತ್ವ ಹಾಗೂ ಇತರ ವೈದಿಕ ವೃಂದದವರ ಸಹಕಾರದೊಂದಿಗೆ ಜರುಗಿದವು. ನಂತರ ದೈವದ ದರ್ಶನ ಸೇವೆ, ಮಹಾ ಪ್ರಸಾದ, ಅನ್ನ ಸಂತರ್ಪಣೆ ನಡೆಯಿತು. ಸಂಜೆ ದೈವಗಳ ಭಂಡಾರ ಇಳಿದು ರಾತ್ರಿ ನೇಮೋತ್ಸವ ಸಂಪನ್ನಗೊಂಡಿತು.

ಬಸ್‌ಗಳ ಮಾಹಿತಿ ನೀಡಲು ಸೂಚನೆ

ಉಡುಪಿ: ಜಿಲ್ಲೆಯ ವಿವಿಧ ಭಾಗಗಳಿಗೆ ಪರವಾನಿಗೆ ಹೊಂದಿ ಈಗಾಗಲೇ ಸಂಚರಿಸುತ್ತಿದ್ದ ಖಾಸಗಿ ಮತ್ತು ಕೆಎಸ್ಸಾರ್ಟಿಸಿ ಬಸ್ಸುಗಳು ಸಂಚಾರ ಸ್ಥಗಿತಗೊಳಿಸಿದ್ದಲ್ಲಿ ಅಥವಾ ಟ್ರಿಪ್ ಗಳನ್ನು ಕಡಿತಗೊಳಿಸಿದ್ದಲ್ಲಿ, ಸಾರ್ವಜನಿಕರು ಲಭ್ಯವಿದ್ದಲ್ಲಿ ಬಸ್ಸಿನ ನೋಂದಣಿ ಸಂಖ್ಯೆ ಮತ್ತು ಬಸ್ಸಿನ ಹೆಸರು ನಮೂದಿಸಿ ಮೇ 15ರ ಒಳಗಾಗಿ ಉಡುಪಿ ಪ್ರಾದೇಶಿಕ ಸಾರಿಗೆ ಕಚೇರಿಗೆ ಲಿಖಿತವಾಗಿ ಮಾಹಿತಿ ನೀಡುವಂತೆ ಪ್ರಭಾರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಗೋಡಂಬಿ ಉದ್ಯಮದ ಹಿತಾಸಕ್ತಿ ಕಾಪಾಡುವಂತೆ ಒತ್ತಾಯಿಸಿ ಸಂಸದ ಕೋಟ ನಿಯೋಗದಿಂದ ಕೇಂದ್ರ ಸಚಿವರಿಗೆ ಮನವಿ

ಹೊರದೇಶದಿಂದ ಆಮದಾಗುವ ಗೋಡಂಬಿ ಮೇಲಿನ ಸುಂಕ ಕಡಿತಗೊಳಿಸಿ



ಉಡುಪಿ: ಉಡುಪಿ-ಚಿಕ್ಕಮಗಳೂರು ಲೋಕಸಭಾ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಅವರ ನೇತೃತ್ವದಲ್ಲಿ ಅಖಿಲ ಭಾರತ ಗೋಡಂಬಿ ಉದ್ಯಮ ಸಂಘದ ಅಧ್ಯಕ್ಷ ಬೋಳ ರಾಹುಲ್ ಕಾಮತ್ ಮತ್ತು ಕುಂದಾಪುರದ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರನ್ನೊಳಗೊಂಡ ನಿಯೋಗವೊಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರನ್ನು ಹೊಸದಿಲ್ಲಿಯಲ್ಲಿ ಭೇಟಿ ಮಾಡಿ ಗೋಡಂಬಿ ಉದ್ಯಮ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮನವಿ ಸಲ್ಲಿಸಿತು.

ಲಕ್ಷಾಂತರ ಮಂದಿಗೆ ಉದ್ಯೋಗ

ದೇಶದಲ್ಲಿ ಗೋಡಂಬಿ ಉದ್ಯಮದ ಹಿತಾಸಕ್ತಿ ಕಾಪಾಡುವುದರಿಂದ ಗೇರುಬೀಜದ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಲಕ್ಷಾಂತರ ಕಾರ್ಮಿಕರಿಗೆ ಬದುಕು ಕಟ್ಟಿಕೊಡಲು ಸಾಧ್ಯವಿದೆ. ಆರ್ಥಿಕ ಹಾಗೂ ತೋಟಗಾರಿಕಾ ಕ್ಷೇತ್ರ ಅಭಿವೃದ್ಧಿಗೊಳ್ಳಲಿದೆ ಎಂದು ಕೇಂದ್ರ ಸಚಿವರಿಗೆ ನಿಯೋಗ ವಿವರಿಸಿತು.

ಭಾರತದ ಮಾರುಕಟ್ಟೆಗೆ ಹೊರದೇಶಗಳ ಗೋಡಂಬಿ ಆಮದಿನ ಹೆಸರಿನಲ್ಲಿ ಸುಂಕ ಕಡಿತಗೊಳಿಸುವಿಕೆ, ನಿಯಮ ರಹಿತವಾಗಿ ಗೋಡಂಬಿ ಸಾಗಾಟ, ಭಾರತ ಸೇರಿ ಅನ್ಯ ರಾಷ್ಟ್ರಗಳಲ್ಲಿ ತಿರಸ್ಕರಿಸಲ್ಪಟ್ಟ ಕಳಪೆ ಗುಣಮಟ್ಟದ ನುಚ್ಚು ಗೋಡಂಬಿಗಳನ್ನು ಪಶು ಆಹಾರ ಉತ್ಪಾದಿಸುವಿಕೆ ಹೆಸರಲ್ಲಿ ಸುಂಕ ವಿನಾಯಿತಿಯೊಂದಿಗೆ ಖರೀದಿಸಿ ಮಾರುಕಟ್ಟೆಯಲ್ಲಿ ಉತ್ಪಾದಿತ ಗೋಡಂಬಿಗೆ ಸಮನಾಗಿ ಮಾರಾಟ ಮಾಡಿ ನೈಜ ಉದ್ಯಮಕ್ಕೆ ಬೀಳುವ ಹೊಡೆತಗಳ ಬಗ್ಗೆ ನಿಯೋಗವು ಸಚಿವರಿಗೆ ವಿವರವಾಗಿ ವಿವರಿಸಿತು. ಕೆಲವೆಡೆ ನೈಜ ಗೋಡಂಬಿಯನ್ನು ಹುರಿದ ಗೋಡಂಬಿ ಎಂದು ಘೋಷಿಸಿ, ದರದ ವ್ಯತ್ಯಯ ಮತ್ತು ಸಂಶೋಧನಾ ಸಂಸ್ಥೆಗಳ ತಪಾಸಣೆಯಿಂದ ಉದ್ಯಮದಲ್ಲಿ ಅನಗತ್ಯ ಗೊಂದಲ ಉಂಟಾಗುತ್ತಿದ್ದು ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಉದ್ಯಮವನ್ನು ಉಳಿಸಿ ಬೆಳೆಸಲು ಸಹಕರಿಸಬೇಕೆಂದು ನಿಯೋಗ ಸಚಿವರಲ್ಲಿ ವಿನಂತಿಸಿತು.

ಶಾಸಕ ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, ಗೇರುಬೀಜ ಉದ್ಯಮ ಉದ್ಯಮ ಉಳಿದು ಬೆಳೆಯಲು ಸಹಾಯ ಮಾಡುತ್ತಿರುವ ಪ್ರಧಾನಿ ಮೋದಿ ಮತ್ತು ವಾಣಿಜ್ಯ ಕೈಗಾರಿಕಾ ಮಂತ್ರಿಗಳಿಗೆ ಕೃತಜ್ಞತೆ ತಿಳಿಸಿದರು. ಹೊಸದಿಲ್ಲಿಯ ಕೇಂದ್ರ ಸಚಿವರ ಕಚೇರಿ ಯಲ್ಲಿ ನಡೆದ ಸಭೆಯಲ್ಲಿ ಅಖಿಲ ಭಾರತ ಗೋಡಂಬಿ ಉದ್ಯಮ ಸಂಘದ ಕಾರ್ಯದರ್ಶಿ ಎಂ. ರಾಮಕೃಷ್ಣನ್, ಪ್ರಕಾಶ್ ಕಲ್ಕೂ, ತುಕಾರಾಂ ಪ್ರಭು, ಉಪೇಂದ್ರ ಕೆ., ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ನಿತಿನ್ ಯಾದವ್, ಆರ್ಥಿಕ ಸಲಹೆಗಾರ್ತಿ ಪ್ರಿಯಾ ನಾಯರ್, ಹೆಚ್ಚುವರಿ ಡಿಜಿಎಫ್‌ಟಿ ರಾಕೇಶ್ ಕುಮಾರ್ ಉಪಸ್ಥಿತರಿದ್ದರು.

- ಕಳಪೆ ಗುಣಮಟ್ಟದ ನುಚ್ಚು ಗೋಡಂಬಿಯಿಂದ ಉದ್ಯಮಕ್ಕೆ ಆಗುವ ಸಮಸ್ಯೆ ಬಗ್ಗೆ ಸಚಿವರಿಗೆ ನಿಯೋಗದಿಂದ ಮನವರಿಕೆ
- ನಿಯೋಗದ ಮನವಿಗೆ ಸಕರಾತ್ಮಕವಾಗಿ ಸ್ಪಂದಿಸಿದ ಕೇಂದ್ರ ಸಚಿವ ಪಿಯೂಷ್